ಬುಧವಾರ, ಜೂನ್ 22, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 172 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮಧುಮೇಹಿಗಳ ಕಣ್ಣು–ಕಾಲು ಹೆಚ್ಚಿನ ಅಪಾಯಕ್ಕೆ ತುತ್ತಾಗುವ ಅಂಗಗಳು. ಅವರು ಧರಿಸುವ ಚಪ್ಪಲಿಗಳು ಸಹ ಅವರ ಆರೋಗ್ಯದ ಭವಿಷ್ಯವನ್ನು ನಿರ್ಧರಿಸುತ್ತವೆ...

ಸಂಖ್ಯೆ–ಸುದ್ದಿ ಮಹಿಳಾ ಉದ್ಯೋಗಿಗಳ ಪ್ರಮಾಣ ಇಳಿಕೆ

ಯೋಗ ಸಂಭ್ರಮ 3B, 4

ಮೈಸೂರು ಒಡೆಯರ್ ಪಠ್ಯಗಳಿಗೂ ಕತ್ತರಿ! 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,532 ▲	15,638 ▲	₹52,840 (ಬೆಂಗಳೂರು) ▼	₹62,800 (ಬೆಂಗಳೂರು)	78.13 ▼

ನಟ ದಿಗಂತ್‌ಗೆ ಶಸ್ತ್ರಚಿಕಿತ್ಸೆ

ಬೆಂಗಳೂರು: ಗೋವಾದಲ್ಲಿ ಬ್ಯಾಕ್ ಫ್ಲಿಪ್ ಮಾಡುವ ವೇಳೆ ಗಾಯಗೊಂಡಿದ್ದ ನಟ ದಿಗಂತ್ ಅವರಿಗೆ ಇಲ್ಲಿನ ಮಣಿಪಾಲ್ ಆಸ್ಪತ್ರೆಯ ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಅವರನ್ನು ಗೋವಾದಿಂದ ಹೆಲಿಕಾಪ್ಟರ್ ಮೂಲಕ ಇಲ್ಲಿಗೆ ಸಂಜೆ 4.30ರ ವೇಳೆಗೆ ಕರೆತರಲಾಯಿತು. ಕುತ್ತಿಗೆ ಭಾಗದಲ್ಲಿ ಅವರಿಗೆ ಬಲವಾದ ಪೆಟ್ಟು ಬಿದ್ದಿತ್ತು. ಬೆನ್ನುಮೂಳೆ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ.ಎಸ್. ವಿದ್ಯಾಧರ್ ನೇತೃತ್ವದ ವೈದ್ಯರ ತಂಡವು ತಪಾಸಣೆ ನಡೆಸಿ, ಶಸ್ತ್ರಚಿಕಿತ್ಸೆಗೆ ಒಳಪಡಿಸಿತು. 'ದಿಗಂತ್ ಅವರು ಬೇಗ ಚೇತರಿಸಿಕೊಳ್ಳಲು ವೈದ್ಯರು ಕಾಳಜಿ ವಹಿಸಿದ್ದಾರೆ' ಎಂದು ಆಸ್ಪತ್ರೆ ಮೂಲಗಳು ತಿಳಿಸಿದೆ.

ಮಹಾರಾಷ್ಟ್ರ: ಶಿವಸೇನಾದ ಶಿಂಧೆ, ಹಲವು ಶಾಸಕರ ಜತೆ ಗುಜರಾತ್‌ಗೆ

ಉದ್ಧವ್ ಸರ್ಕಾರಕ್ಕೆ ಕುತ್ತು?

ಮುಂಬೈ/ಸೂರತ್ (ಪಿಟಿಐ): ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ನೇತೃತ್ವದ, ಮಹಾರಾಷ್ಟ್ರದ ಮಹಾ ವಿಕಾಸ ಆಘಾಡಿ (ಎಂವಿಎ) ಸರ್ಕಾರವು ಬಿಕ್ಕಟ್ಟಿಗೆ ಸಿಲುಕಿದೆ. ಶಿವಸೇನಾದ ಪ್ರಭಾವಿ ಮುಖಂಡ, ಸಚಿವ ಏಕನಾಥ ಶಿಂಧೆ ಅವರು ಪಕ್ಷದ ಕೆಲವು ಶಾಸಕರೊಂದಿಗೆ ಸೂರತ್‌ನ ಹೋಟೆಲ್‌ನಲ್ಲಿ ತಂಗಿದ್ದು, ಬಂಡಾಯದ ಬಾವುಟ ಹಾರಿಸಿದ್ದಾರೆ. ಎರಡೂವರೆ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದ ಸರ್ಕಾರದ ಉಳಿವಿನ ಬಗ್ಗೆ ಈ ಬಂಡಾಯವು ಪ್ರಶ್ನಾರ್ಥಕ ಚಿಹ್ನೆ ಮೂಡುವಂತೆ ಮಾಡಿದೆ.

ಏಕನಾಥ ಶಿಂಧೆ

ವಿಧಾನಸಭೆಯಿಂದ ವಿಧಾನ ಪರಿಷತ್‌ನ 10 ಸ್ಥಾನಗಳಿಗೆ ಸೋಮವಾರ ನಡೆದ ಚುನಾವಣೆಯಲ್ಲಿ ಎಂವಿಎಗೆ ಹಿನ್ನಡೆಯಾದ ಬಳಿಕ ಮಹಾರಾಷ್ಟ್ರ ರಾಜಕಾರಣದಲ್ಲಿ ತೀವ್ರಗತಿಯಲ್ಲಿ ಬೆಳವಣಿಗೆಗಳು ನಡೆದಿವೆ. ಶಿವಸೇನಾ, ಎನ್‌ಸಿಪಿ ಮತ್ತು ಕಾಂಗ್ರೆಸ್ ಪಕ್ಷಗಳ ಮೈತ್ರಿಕೂಟವಾಗಿರುವ ಎಂವಿಎ, ಪರಿಷತ್‌ನ ಆರು ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿತ್ತು. ಆದರೆ, ಎಂವಿಎ ಅಂಗ ಪಕ್ಷಗಳ ಶಾಸಕರು ಅಡ್ಡ ಮತದಾನ ಮಾಡಿದ ಕಾರಣ ಎಂವಿಎಯ ಆರನೇ ಅಭ್ಯರ್ಥಿಗೆ ಸೋಲಾಗಿದೆ. ಬಿಜೆಪಿ ಐದು ಸ್ಥಾನಗಳನ್ನು ಗೆದ್ದುಕೊಂಡಿದೆ. ಇದರ ಬೆನ್ನಲ್ಲೇ, ಶಿಂಧೆ ಅವರು ಕೆಲವು ಶಾಸಕರ ಜತೆಗೆ ಗುಜರಾತ್‌ಗೆ ತೆರಳಿದ್ದಾರೆ.

ವಿಧಾನಸಭೆಯಿಂದ ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿಯೂ ಎಂವಿಎ ಅಂಗ ಪಕ್ಷಗಳ ಶಾಸಕರು ಬಿಜೆಪಿ ಅಭ್ಯರ್ಥಿ ಪರವಾಗಿ ಅಡ್ಡ ಮತದಾನ ಮಾಡಿದ್ದರು.

11ನೇ ಪುಟ ನೋಡಿ

ಚಟುವಟಿಕೆ ಬಿರುಸು

- ಬಿಜೆಪಿಯೊಂದಿಗೆ ಮೈತ್ರಿ ನವೀಕರಿಸುವಂತೆ ಶಿಂಧೆ ಅವರಿಂದ ಉದ್ಧವ್ ಠಾಕ್ರೆಗೆ ಮಂಗಳವಾರ ರಾತ್ರಿ ಒತ್ತಾಯ
- ಎಂವಿಎ ಮೈತ್ರಿಕೂಟದ ಘಟಕ ಪಕ್ಷಗಳಾದ ಕಾಂಗ್ರೆಸ್ ಮತ್ತು ಎನ್‌ಸಿಪಿಯ ಮುಖಂಡರು ಉದ್ಧವ್ ಠಾಕ್ರೆ ಅವರನ್ನು ಭೇಟಿಯಾಗಿ ಚರ್ಚಿಸಿದ್ದಾರೆ. ಬಾಳಾಸಾಹೇಬ್ ಥೋರಟ್,ಅಶೋಕ್ ಚವಾಣ್ ಅವರಿಂದ ಉದ್ಧವ್ ಭೇಟಿ
- ಉದ್ಧವ್ ಠಾಕ್ರೆ ಅವರು ಪಕ್ಷದ ಶಾಸಕರ ಜತೆಗೆ ಸಭೆ ನಡೆಸಿದ್ದಾರೆ. ಉಳಿದ ಸೇನಾ ಶಾಸಕರು ಮುಂಬೈನ ವಿವಿಧ ಹೋಟೆಲ್‌ಗಳಿಗೆ ತೆರಳಿದ್ದಾರೆ
- ಕಾಂಗ್ರೆಸ್‌ನ ಎಲ್ಲ 44 ಶಾಸಕರು ಸಂಪರ್ಕದಲ್ಲಿದ್ದಾರೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಬಾಳಾಸಾಹೇಬ್ ಥೋರಟ್ ಹೇಳಿದ್ದಾರೆ
- ತಮ್ಮ ಗಂಡ ಕಾಣೆಯಾಗಿದ್ದಾರೆ ಎಂದು ಶಿವಸೇನಾ ಶಾಸಕ ನಿತಿನ್ ದೇಶಮುಖ್ ಅವರ ಹೆಂಡತಿ ಪೊಲೀಸರಿಗೆ ದೂರು ನೀಡಿದ್ದಾರೆ. ಆಸ್ಪತ್ರೆಯಲ್ಲಿ ಇದ್ದ ಅವರು ಡಿಸ್‌ಚಾರ್ಜ್ ಆಗಿ ಶಿಂಧೆ ಜತೆ ಸೂರತ್‌ನಲ್ಲಿರುವುದು ಖಚಿತವಾಗಿದೆ

ಸಣ್ಣ ಪಕ್ಷಗಳೇ ನಿರ್ಣಾಯಕ

ಮಹಾರಾಷ್ಟ್ರ ಸರ್ಕಾರವು ಅಸ್ಥಿರಗೊಳ್ಳುವ ಸಾಧ್ಯತೆ ಇದೆ. ಅಂತಹ ಸಂದರ್ಭದಲ್ಲಿ ಸಣ್ಣ ಪಕ್ಷಗಳ ಶಾಸಕರು ಮತ್ತು ಪಕ್ಷೇತರ ಶಾಸಕರು ನಿರ್ಣಾಯಕ ಎನಿಸಲಿದ್ದಾರೆ. ಒಟ್ಟು 13 ಪಕ್ಷೇತರ ಶಾಸಕರು ಇದ್ದಾರೆ. ಅವರಲ್ಲಿ ಆರು ಶಾಸಕರು ಬಿಜೆಪಿಯನ್ನು ಬೆಂಬಲಿಸುತ್ತಿದ್ದಾರೆ, ಐವರು ಶಿವಸೇನಾ ಜತೆಗಿದ್ದಾರೆ. ಎನ್‌ಸಿಪಿ ಮತ್ತು ಕಾಂಗ್ರೆಸ್‌ಗೆ ತಲಾ ಒಬ್ಬರ ಬೆಂಬಲವಿದೆ.

ಬಹುಜನ ವಿಕಾಸ ಆಘಾಡಿ (3), ಸಮಾಜವಾದಿ ಪಕ್ಷ (2), ಎಐಎಂಐಎಂ (2), ಪ್ರಹಾರ್ ಜನಶಕ್ತಿ ಪಕ್ಷ (2) ಶಾಸಕರನ್ನು ಹೊಂದಿವೆ. ಎಂಎನ್‌ಎಸ್, ಸಿಪಿಎಂ, ಪಿಡಬ್ಲ್ಯುಪಿ, ಸ್ವಾಭಿಮಾನಿ ಪಕ್ಷ, ರಾಷ್ಟ್ರೀಯ ಸಮಾಜ ಪಕ್ಷ, ಜನಸುರಾಜ್ಯ ಶಕ್ತಿ ಪಾರ್ಟಿ ಮತ್ತು ಕ್ರಾಂತಿಕಾರಿ ಶೇತ್ಕರಿ ಪಕ್ಷ ತಲಾ ಒಬ್ಬೊಬ್ಬ ಶಾಸಕರನ್ನು ಹೊಂದಿವೆ.

ಇನ್ನಷ್ಟು ಸುದ್ದಿಗಳು 11

ಚಿನಕುರಳಿ

ಪ್ರಕಾಶ್ ಶೆಟ್ಟಿ

ರಾಷ್ಟ್ರಪತಿ ಹುದ್ದೆ: ಎನ್‌ಡಿಎಯೇತರ ಪಕ್ಷಗಳಿಂದ ಯಶವಂತ ಸಿನ್ಹಾ ಕಣಕ್ಕೆ

ದ್ರೌಪದಿ ಮುರ್ಮು ಎನ್‌ಡಿಎ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರಪತಿ ಚುನಾವಣೆಯ ಅಖಾಡ ಸಜ್ಜಾಗಿದೆ. ಎನ್‌ಡಿಎಯೇತರ ಪಕ್ಷಗಳು ಯಶವಂತ ಸಿನ್ಹಾ ಅವರನ್ನು ಆಯ್ಕೆ ಮಾಡಿ ಕೆಲವು ತಾಸು ಬಳಿಕ ಬಿಜೆಪಿ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗಿದೆ. ಜಾರ್ಖಂಡ್‌ನ ರಾಜ್ಯಪಾಲೆಯಾಗಿದ್ದ ದ್ರೌಪದಿ ಮುರ್ಮು ಅವರು ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯಲಿದ್ದಾರೆ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಮಂಗಳವಾರ ಪ್ರಕಟಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಬಿಜೆಪಿ ಸಂಸದೀಯ ಮಂಡಳಿ ಸಭೆಯಲ್ಲಿ ಮುರ್ಮು ಅವರನ್ನು ಆಯ್ಕೆ ಮಾಡಲಾಯಿತು.

ದ್ರೌಪದಿ



ಯಶವಂತ ಸಿನ್ಹಾ

3ನೇ ಪುಟ ನೋಡಿ

ಬುಡಕಟ್ಟು ಸಮುದಾಯದ ಗಟ್ಟಿ ಧ್ವನಿ

ನವದೆಹಲಿ: ರಾಷ್ಟ್ರಪತಿ ಚುನಾವಣೆಯ ಎನ್‌ಡಿಎ ಅಭ್ಯರ್ಥಿಯಾಗಿ ಆಯ್ಕೆಯಾಗಿರುವ ದ್ರೌಪದಿ ಮುರ್ಮು (65) ಅವರು ಹಲವು ಹುದ್ದೆಗಳನ್ನು ಅಲಂಕರಿಸಿದ ಬುಡಕಟ್ಟು ಸಮುದಾಯದ ಮೊದಲಿಗರಾಗಿದ್ದಾರೆ ಎಂಬುದು ವಿಶೇಷ.

ಅವರು ಜಾರ್ಖಂಡ್‌ನ ಮೊದಲ ಮಹಿಳಾ ರಾಜ್ಯಪಾಲರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಲ್ಲದೆ ಒಡಿಶಾದಿಂದ ರಾಜ್ಯಪಾಲರಾಗಿ ನೇಮಕಗೊಂಡ ಮೊದಲ ಮಹಿಳೆ ಮತ್ತು ಬುಡಕಟ್ಟು ಸಮುದಾಯದವರು ಇವರು. ಜಾರ್ಖಂಡ್‌ನ ರಾಜ್ಯಪಾಲರಾಗಿ ಪೂರ್ಣ ಅವಧಿ ಸೇವೆ ಸಲ್ಲಿಸಿದ ಮೊದಲಿಗರು ಇವರಾಗಿದ್ದಾರೆ.

3ನೇ ಪುಟ ನೋಡಿ

ವಸತಿನಿಲಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘವು 2022–23ನೇ ಶೈಕ್ಷಣಿಕ ಸಾಲಿನ ವಸತಿನಿಲಯಕ್ಕೆ ಅರ್ಜಿ ಆಹ್ವಾನಿಸಿದೆ.

ಮಾಹಿತಿಗಾಗಿ 08023200608ಗೆ ಸಂಪರ್ಕಿಸಬಹುದು.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. SWRCNBNCST_08_2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ವೆಚ್ಚ
1) ಆರ್‌ಡಿಎಸ್‌ಓ ಡಿಆರ್‌ಜಿ ಸಂ. ಟಿ–6930 ಗೆ ಸುಧಾರಿತ ಎಸ್‌ಇಜೆ 52 ಕೆಜಿ 2) ಆರ್‌ಡಿಎಸ್‌ಓ ಡಿಆರ್‌ಜಿ ಸಂ. ಟಿ–6782 ಗೆ ಕಾಂಬಿನೇಶನ್ ಎಸ್‌ಇಜೆ 60 ಕೆಜಿ / 52ಕೆಜಿಗಳ ಉತ್ಪಾದನೆ ಮತ್ತು ಸರಬರಾಜು.	ರೂ. 4,63,03,465/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11-07-2022, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನೀಯರ್/ಸ್ಟೋರ್ಸ್ ನಿರ್ಮಾಣ/ಬೆಂಗಳೂರು ಕಂಟೋನ್ಮೆಂಟ್

PUB/167/AAV/PRB/SWR/2022-23

S.W.Railways SWRRLY SWRRLY

PUBLIC NOTICE

Public are hereby informed that my client has negotiated with Sri. C.A. Amarnath and Smt. C.A. Sunitha site with building bearing No.33, Old BDA No.242, composite Municipal No.33-242, BBMP PID No.62, 34-33, Situated on 3rd Cross Road, in Lakkasandra Extension, Bangalore-560030 formed by CITB, at Bangalore coming within the limits of Ward No.62/Hombegowdanagar, measuring East to West (31+33)/2 feet, North to South 40 feet and bounded on **East by :** Convent Area, **West by :** Road, **North by :** Property No.243, **South by :** Property No.241.

Persons having any claim on the said property are required to lodge their claim in writing with supporting documents with the undersigned within **7 days** from the of publication of this notice, failing which any my client will proceed with the purchase of the said property from him on the premise that there are no claims on the said property and claims if any, made thereafter will not be entertained.

B.N. JAYADEVA, Advocate
Unit No.203, II Floor, Brigade Links, No.54/1, 1st Main Road, Seshadripuram, Bangalore-560020.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. SBC_Yard_Remodelling
ದಿನಾಂಕ: 17.06.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ಸಿಟಿ ಸ್ಟೇಷನ್‌ನಲ್ಲಿ (ಎಸ್‌ಬಿಸಿ) ಯಾರ್ಡ್‌ಗೆ ಮಾರ್ಪಾಡು ಮಾಡುವುದಕ್ಕೆ ಸಂಬಂಧಿಸಿದಂತೆ ಹೊರಾಂಗಣ ಸಿಗ್ನಲಿಂಗ್ ಮತ್ತು ಟೆಲಿಕಾಂ ವ್ಯವಸ್ಥೆಗಳೊಂದಿಗೆ ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ಅನ್ನು ಒದಗಿಸುವುದು ಮತ್ತು ಬೆಂಗಳೂರು ವಿಭಾಗದ ಪಕ್ಕದ ನಿಲ್ದಾಣಗಳಾದ ಬೆಂಗಳೂರು ಕಂಟೋನ್ಮೆಂಟ್, ಯಶವಂತಪುರ ಮತ್ತು ನಾಯಂಡಹಳ್ಳಿ ನಿಲ್ದಾಣಗಳಿಗೆ ಸಂಪರ್ಕಿತ ಬದಲಾವಣೆಗಳನ್ನು ಕೈಗೊಳ್ಳುವುದು.	ರೂ. 12,98,93,343.96

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29-06-2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನೀಯರ್ ನಿರ್ಮಾಣ / ಬೆಂಗಳೂರು ಕಂಟೋನ್ಮೆಂಟ್

PUB/168/AAV/PRB/SWR/2022-23

S.W.Railways SWRRLY SWRRLY

PUBLIC NOTICE

It is hereby notified that, my client has agreed to purchase the Schedule Property from its Owner: Smt. Akkayamma, W/o. Sri. B.S.Anjinappa, residing at Bagaluru Village, Jala Hobli, Bangalore North Taluk, Bangalore.

Apart from the said Owner, if any other person/s have any manner of right, title and or interest or claim or charge or lien over the Schedule property or otherwise have any lawful objection/s for sale of the Schedule Property by the aforesaid Owner, they are hereby called upon to file their objection/s in writing, along with the photocopies of documents on which they rely, with the undersigned, within 10days from the date of publication of this notice. Objection/s received thereafter will not be binding on my client.

SCHEDULE

All that piece and parcel of the agricultural land measuring 04 Acres 00Guntas in Sy.No.19/3 (Old Sy.No.19/1), situated at Kamenahalli Village, Kundana Hobli, Devanahalli Taluk, Bangalore Rural District and bounded on:

East by : Property in Sy.No.20/1
West by : Property belongs to Smt. Shanthamma and Sri. Shivaprakash
North by : Property belongs to Sri. Armugam
South by : Property belongs to Sri. Anjinappa

Sd/- Goutam Chand S.F
Advocate
Goutam Associates
No.60, 2nd Floor, Kanakapura Road, Basavanagudi, Bangalore – 560 004

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 17/MYS/2022
ದಿನಾಂಕ: 16.06.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಚಿಕ್ಕಜಾಜೂರು– ಕರ್‌ಜಗಿ ಸೆಕ್ಷನ್: ಅಸ್ತಿತ್ವದಲ್ಲಿರುವ 52 ಕೆಜಿ/90 ಯುಟಿಎಸ್ ರೈಲ್‌ಗಳನ್ನು ಹೊಸ 60 ಕೆಜಿ ರೈಲ್‌ಗಳೊಂದಿಗೆ ಕಿ.ಮೀ. 281/000 ರಿಂದ 285/270ಕಿಮೀ. (ಡೌನ್) ಕಿಮೀ. 316.6 ರಿಂದ 320.5(ಅಪ್), 322/000 ರಿಂದ 322/500 (ಡೌನ್), 326 ರಿಂದ 328(ಅಪ್), 332 ರಿಂದ 336.7(ಅಪ್), 347 ರಿಂದ 349), 350.7 ರಿಂದ 356.4(ಅಪ್), 362.1 ರಿಂದ 363(ಅಪ್), 366/000 ರಿಂದ 367/000(ಅಪ್), 357/800 ರಿಂದ 360/500(ಅಪ್) ವರೆಗೆ ಒಟ್ಟು 27.77 ಕಿಮೀ ಉದ್ದಕ್ಕೆ ಟಿಆರ್ ಆರ್ (ಪಿ)	ರೂ. 2,73,79,110/-
2	(ಉಪ ಕಾಮಗಾರಿ–I): ಚಿಕ್ಕಜಾಜೂರು–ಕರ್‌ಜಗಿ ಸೆಕ್ಷನ್: ಚಿಕ್ಕಜಾಜೂರು – ಮಾಯಕೊಂಡ ನಿಲ್ದಾಣಗಳ ನಡುವೆ ಕಿಮೀ 289.8 ರಿಂದ 294 (ಅಪ್) ವರೆಗೆ 4.2 ಕಿಮೀ ಉದ್ದಕ್ಕೆ 1660 ಡೆನ್ಸಿಟಿ ಪಿಎಸ್‌ಸಿ ಸ್ಲೀಪರ್‌ಗಳ ಮೇಲೆ ಅಸ್ತಿತ್ವದಲ್ಲಿರುವ 52 ಕೆಜಿ 90/72 ಯುಟಿಎಸ್ ರೈಲ್‌ಗಳನ್ನು 1660 ಸಂ. ಪ್ರತಿ ಕಿಮೀ ಇರುವ 60 ಕೆಜಿ ಪಿಎಸ್‌ಸಿ ಸ್ಲೀಪರ್‌ಗಳ ಮೇಲೆ ಇರುವ ಹೊಸ 60 ಕೆಜಿ / 90ಯುಟಿಎಸ್ ರೈಲ್‌ಗಳೊಂದಿಗೆ ಸಂಪೂರ್ಣ ಟ್ರ್ಯಾಕ್ ನವೀಕರಣ (ಪ್ರಾಥಮಿಕ). (ಉಪ ಕಾಮಗಾರಿ–II): ಚಿಕ್ಕಜಾಜೂರು–ರಾಯದುರ್ಗ ಸೆಕ್ಷನ್: ಕಿಮೀ 0/500 ರಿಂದ 1/000 ವರೆಗೆ 0.5 ಕಿಮೀ ಉದ್ದಕ್ಕೆ ಪಿಎಸ್‌ಸಿ ಸ್ಲೀಪರ್‌ಗಳ ಮೇಲೆ ಅಸ್ತಿತ್ವದಲ್ಲಿರುವ 52 ಕೆಜಿ 90/72 ಯುಟಿಎಸ್ ರೈಲ್‌ಗಳನ್ನು 1660 ಸಂ. ಪ್ರತಿ ಕಿಮೀ ಇರುವ 60 ಕೆಜಿ ಪಿಎಸ್‌ಸಿ ಸ್ಲೀಪರ್‌ಗಳ ಮೇಲೆ ಇರುವ ಹೊಸ 60 ಕೆಜಿ /90ಯುಟಿಎಸ್ ರೈಲ್‌ಗಳೊಂದಿಗೆ ಸಂಪೂರ್ಣ ಟ್ರ್ಯಾಕ್ ನವೀಕರಣ (ಪ್ರಾಥಮಿಕ).	ರೂ. 1,87,35,624/-
3	ಸೇತುವೆ ಸಂಖ್ಯೆ 597 (ನೇತ್ರಾವತಿ) 4x45.72ಮೀ +8x24.40ಮೀ, ಸೇತುವೆ ಸಂಖ್ಯೆ 400 (ಕುಮಾರಧಾರಾ) 4x30.50ಮೀ+ 1x18.30ಮೀ ಮತ್ತು ಸೇತುವೆ ಸಂಖ್ಯೆ 118 (ಹೇಮಾವತಿ) 6x24.40ಮೀ ನದಿಯ ಪಾತ್ರಗಳ 3ಡಿ ಸ್ಕ್ಯಾನಿಂಗ್.	ರೂ. 15,69,487/-
4	ಸಾಗರ ಜಂಬಗಾರು: ಸಾಗರ ಜಂಬಗಾರು ನಿಲ್ದಾಣದಲ್ಲಿ ಎಫ್‌ಒಬಿ ಒದಗಿಸುವುದು.	ರೂ. 1,94,26,991/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08-07-2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನೀಯರ್ / ಕೋ–ಆರ್ಡ್ ಮೈಸೂರು

PUB/164/AAV/PRB/SWR/2022-23

S.W.Railways SWRRLY SWRRLY

ಕೊಮ್ಮಘಟ್ಟ ಮಾದರಿ ಎಲ್ಲಡೆಯೂ ಬರಲಿ

ಸರ್ಕಾರಕ್ಕೆ ಕಾಳಜಿ ಇಲ್ಲ

ಕೇವಲ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರನ್ನು ಸಂತೋಷಪಡಿಸಲು ನೂರಾರು ಕೋಟಿ ಸಾರ್ವಜನಿಕರ ಹಣ ವ್ಯರ್ಥವಾದರೆ, ಸಾರ್ವಜನಿಕರಿಗೆ ಮೂಲಸೌಕರ್ಯ ಕಲ್ಪಿಸುವ ಕಾಳಜಿ ಸರ್ಕಾರಕ್ಕಿಲ್ಲ. ಜೀವಂತ ಶವವಾಗಿರುವ ಸರ್ಕಾರಕ್ಕೆ ದೇಶದ 130 ಕೋಟಿ ಜನ ಕಟ್ಟುವ ಬೆವರಿನ ತೆರಿಗೆ ಪಾವತಿಸುವುದು ಅವಶ್ಯವಾ?

ಜಯರಾಮ್ ಗಾಣಕಲ್ಲು, ಕೆಂಗೇರಿ ಹೋಬಳಿ, ಯಶವಂತಪುರ

ರಾಜ ಮೋರಿ ದುರಸ್ತಿಗೊಳಿಸಿ

ಹೆಬ್ಬಾಳ ಬಳಿ ನಿಲ್ದಾಣದ ಪಕ್ಕದಲ್ಲಿ ಸರ್ಕಾರಿ ಉರ್ದು ಶಾಲೆ ಇದೆ. ಇದರ ಪಕ್ಕದಲ್ಲಿ ರಾಜ ಮೋರಿ ಇದೆ. ಇತ್ತೀಚಿನ ಮಳೆಗೆ ಈ ರಾಜ ಮೋರಿಯ ಚಾವಣಿ ಕುಸಿದು ಬಿದ್ದಿದೆ. ಮತ್ತು ಬಾಯ್ತೆರೆದು ನಿಂತಿದೆ. ಶಾಲೆಯ ಮಕ್ಕಳು ಸಹ ಈ ಜಾಗದಲ್ಲೇ ಓಡಾಡುವುದರಿಂದ ಸಾವಿಗಾಗಿ ಬಾಯಿತೆರೆದು ನಿಂತಿದೆ. ರಾಜ ಮೋರಿಯನ್ನು ಬೇಗ ದುರಸ್ತಿ ಮಾಡಿಸಿ ಅಪಾಯದಿಂದ ಪಾರು ಮಾಡಬೇಕು.

ರಮೇಶ್, ಸ್ಥಳೀಯ ನಿವಾಸಿ

ರಸ್ತೆ ಸರಿಪಡಿಸಿ

ಮೈಸೂರು ಲೇಔಟ್ ಹೊಂಗಸಂದ್ರಕ್ಕೆ ಬೇಗೂರು ರಸ್ತೆ ವಾರ್ಡ್ ಸಂಖ್ಯೆ 192 ಬೊಮ್ಮನಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹಾಳಾಗಿದೆ. ಮಳೆ ಕೆಸರು ಗದ್ದೆಯಾಗಿ ಮಾರ್ಪಟ್ಟಿದೆ. ಇದರಲ್ಲಿ ಮಹಿಳೆಯರು, ವೃದ್ಧರು ಸೇರಿದಂತೆ ಮಕ್ಕಳ ಓಡಾಟಕ್ಕೆ ತೊಂದರೆಯಾಗಿದೆ. ಈ ಕುರಿತು ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಈ ರಸ್ತೆಯಲ್ಲಿ ಹಲವಾರು ಅಪಘಾತಗಳು ಸಂಭವಿಸಿವೆ. ಸಂಬಂಧಪಟ್ಟ ಅಧಿಕಾರಿಗಳು ರಸ್ತೆ ಅಭಿವೃದ್ಧಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ನೀಡಬೇಕು. ಪ್ರಧಾನಿ ಬರುತ್ತಾರೆಂದಾಗ ರಸ್ತೆಗಳು ಸಿದ್ಧವಾಗುವಂತೆ ನಮ್ಮ ಸಮಸ್ಯೆಗಳು ನೀಗಲಿ.



ಬೊಮ್ಮನಹಳ್ಳಿ ವಲಯ ರಸ್ತೆ

ಇರಮಲ್ಲಪ್ಪ, ಸ್ಥಳೀಯ ನಿವಾಸಿ

ನಿಮ್ಮ ಪ್ರದೇಶದ ಸಮಸ್ಯೆ ತಿಳಿಸಿ

40 ವರ್ಷಗಳಿಂದ ಆಗದ ಅಭಿವೃದ್ಧಿಯನ್ನು 40 ತಿಂಗಳಲ್ಲಿ ಮಾಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ. ಬೆಂಗಳೂರಿನಲ್ಲಿ ನಿಮ್ಮ ಪ್ರದೇಶದ ಏನೆಲ್ಲಾ ಅಭಿವೃದ್ಧಿ ಬಾಕಿ ಇವೆ, ಸ್ಥಳೀಯ ಸಮಸ್ಯೆಗಳು ಏನೇನಿವೆ ಎಂಬುದನ್ನು ಸಾರ್ವಜನಿಕರು 'ಪ್ರಜಾವಾಣಿ' ಜತೆ ಹಂಚಿಕೊಳ್ಳಿ. ವಾಟ್ಸ್‌ಆ್ಯಪ್ ಮೂಲಕ ಸಂಕ್ಷಿಪ್ತವಾಗಿ ವಿವರ ಕಳುಹಿಸಿ. ಸಮಸ್ಯೆ ಬರೆಯುವುದರ ಜತೆಗೆ ನಿಮ್ಮದೊಂದು ಪಾಸ್‌ಪೋರ್ಟ್ ಅಳತೆಯ ಫೋಟೊ ಕೂಡ 'ಅಟ್ಯಾಚ್' ಮಾಡಿ ಕಳುಹಿಸಿ.

9606038256

ಸುದ್ದಿ 2 ನಿಮಿಷ

ನಾಗಸಂದ್ರದಲ್ಲಿ ಐಕಿಯ ಮಳಿಗೆ ಇಂದು ಆರಂಭ

ಬೆಂಗಳೂರು: ಸ್ವೀಡನ್ ಮೂಲದ ಗೃಹ ಪೀಠೋಪಕರಣಗಳ ಮಾರಾಟ ಕಂಪನಿ 'ಐಕಿಯ' ಭಾರತದಲ್ಲಿನ ತನ್ನ ಅತಿದೊಡ್ಡ ಮಳಿಗೆಯನ್ನು ನಗರದ ನಾಗಸಂದ್ರದಲ್ಲಿ ಬುಧವಾರ ಉದ್ಘಾಟಿಸಲಿದೆ. ಐಕಿಯ ಪಾಲಿಗೆ ಇದು ಭಾರತದಲ್ಲಿನ ನಾಲ್ಕನೇ ಮಳಿಗೆ. ನಾಗಸಂದ್ರ ಮೆಟ್ರೊ ರೈಲು ನಿಲ್ದಾಣಕ್ಕೆ ಹೊಂದಿಕೊಂಡಂತೆ ಈ ಮಳಿಗೆ ಇದೆ. ಇಲ್ಲಿ ₹ 3,000 ಕೋಟಿ ಹೂಡಿಕೆ ಮಾಡುವ ಉದ್ದೇಶವನ್ನು ಐಕಿಯ ಹೊಂದಿದ್ದು, ಈ ವರ್ಷ ಇಲ್ಲಿಗೆ ಒಟ್ಟು 50 ಲಕ್ಷ ಗ್ರಾಹಕರು ಭೇಟಿ ನೀಡಲಿದ್ದಾರೆ ಎಂಬ ನಿರೀಕ್ಷೆ ಹೊಂದಿದೆ.

12.2 ಎಕರೆ ಪ್ರದೇಶದಲ್ಲಿ, 4.60 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಇರುವ ಈ ಮಳಿಗೆಯಲ್ಲಿ ಏಳು ಸಾವಿರಕ್ಕೂ ಹೆಚ್ಚಿನ ಗೃಹ ಪೀಠೋಪಕರಣಗಳು ಲಭ್ಯವಾಗಲಿವೆ. 'ಐಕಿಯ ಮಳಿಗೆಯಲ್ಲಿ ಒಟ್ಟು ಒಂದು ಸಾವಿರ ಜನರಿಗೆ ಉದ್ಯೋಗ ನೀಡಲಾಗಿದ್ದು, ಅವರ ಪೈಕಿ ಸರಿಸುಮಾರು ಶೇಕಡ 50ರಷ್ಟು ಮಂದಿ ಮಹಿಳೆಯರು' ಎಂದು ಐಕಿಯ ಇಂಡಿಯಾದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸೂಸನ್ ಪುಲ್ವೆರರ್ ತಿಳಿಸಿದರು. ಒಂದು ಸಾವಿರ ಮಂದಿಯ ಪೈಕಿ ಶೇ 72ರಷ್ಟು ಮಂದಿ ಸ್ಥಳೀಯರು ಎಂದೂ ಅವರು ತಿಳಿಸಿದರು. ಐಕಿಯದಲ್ಲಿ ದೊರೆಯುವ ಶೇ27ರಷ್ಟು ವಸ್ತುಗಳು ಸ್ಥಳೀಯ ಮೂಲಗಳಿಂದ ತರಿಸಿಕೊಳ್ಳುವಂಥವು. ಕಂಪನಿಯು ಬೆಂಗಳೂರಿನಲ್ಲಿ ಆನ್‌ಲೈನ್ ಮಾರುಕಟ್ಟೆಯನ್ನು ವರ್ಷದ ಹಿಂದೆಯೇ ಆರಂಭಿಸಿತ್ತು. ಈಗ ಆಫ್‌ಲೈನ್ ಮೂಲಕವೂ ಉತ್ಪನ್ನಗಳ ಮಾರಾಟ ಶುರುಮಾಡಿದೆ.

ಪೀಣ್ಯ: ₹100 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯ

ಬೆಂಗಳೂರು: ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿಗೆ ₹100 ಕೋಟಿ ವೆಚ್ಚದಲ್ಲಿ ಕಾಮಗಾರಿ ನಡೆಸಲು ಪೌರಾಡಳಿತ ಮತ್ತು ಸಣ್ಣ ಕೈಗಾರಿಕಾ ಸಚಿವ ಎಂ.ಟಿ.ಬಿ.ನಾಗರಾಜು ಅಧ್ಯಕ್ಷತೆಯ ಉನ್ನತಮಟ್ಟದ ಸಮಿತಿ ಅನುಮೋದನೆ ನೀಡಿದೆ.

ಮಂಗಳವಾರ ನಡೆದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ 12 ಸಾವಿರ ಉದ್ಯಮಗಳಿದ್ದು, ವಾರ್ಷಿಕ ₹5,000 ಕೋಟಿ ತೆರಿಗೆ ಸಂಗ್ರಹವಾಗುತ್ತಿದೆ. ಇಲ್ಲಿ ಮೂಲಸೌಕರ್ಯ ಕಲ್ಪಿಸುವುದು ಆದ್ಯತೆಯ ಕೆಲಸವಾಗಿದೆ. ₹100 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯ ಕಲ್ಪಿಸಲು ಟೆಂಡರ್ ಕರೆಯಲು ಸಿದ್ಧತೆ ನಡೆಸುವಂತೆ ನಾಗರಾಜು ಸೂಚಿಸಿದರು.

ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಮೂಲಸೌಕರ್ಯ ಕಲ್ಪಿಸುವ ಕೆಲಸವನ್ನು ಸಮರೋಪಾದಿಯಲ್ಲಿ ನಡೆಸಬೇಕು. ಗುಣಮಟ್ಟ ಮತ್ತು ಪ್ರಮಾಣದ ವಿಷಯದಲ್ಲಿ ಕಟ್ಟೆಚ್ಚರ ವಹಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಕಾರ್ಯದರ್ಶಿ ಪಂಕಜ್‌ಕುಮಾರ್ ಪಾಂಡೆ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಇಲಾಖೆ ನಿರ್ದೇಶಕಿ ಸತ್ಯಭಾಮ, ಕೆಎಸ್‌ಎಸ್‌ಐಡಿಸಿ ವ್ಯವಸ್ಥಾಪಕ ನಿರ್ದೇಶಕ ಎಸ್.ಜೆ.ಸೋಮಶೇಖರ್ ಸೇರಿ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಶೇ 5ಕ್ಕಿಂತ ಹೆಚ್ಚಿದ್ದರೆ ಮರು ಟೆಂಡರ್ ನಡೆಸಬೇಕು ಎಂಬ ಸುತ್ತೋಲೆ ಉಲ್ಲಂಘನೆ

ಟೆಂಡರ್ ಮೊತ್ತ ಶೇ 21.59ರಷ್ಟು ಹೆಚ್ಚಳ!

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಟೆಂಡರ್ ಮೊತ್ತಕ್ಕಿಂತ ಶೇ 5ಕ್ಕಿಂತ ಹೆಚ್ಚಿನ ಮೊತ್ತವನ್ನು ಅಂಗೀಕರಿಸದಂತೆ ಆರ್ಥಿಕ ಇಲಾಖೆ ಹೊರಡಿಸಿದ್ದ ಸುತ್ತೋಲೆಯನ್ನು ಒಂದೇ ತಿಂಗಳಲ್ಲಿ ಸರ್ಕಾರವೇ ಉಲ್ಲಂಘಿಸಿ, ಶೇ 21.59ರಷ್ಟು ಹೆಚ್ಚಿನ ಮೊತ್ತಕ್ಕೆ ಅನುಮೋದನೆ ನೀಡಿದೆ.

ಪಶ್ಚಿಮ ಕಾರ್ಡ್ ರಸ್ತೆಯ ಬಸವೇಶ್ವರನಗರ ಜಂಕ್ಷನ್‌ನಲ್ಲಿ ಹೆಚ್ಚುವರಿ ಮೇಲ್ಸೇತುವೆ ನಿರ್ಮಾಣ ಕಾಮಗಾರಿಗೆ ಬಿಬಿಎಂಪಿ ಟೆಂಡರ್ ಆಹ್ವಾನಿಸಿತ್ತು. 2018–19ರ ಎಸ್‌ಆರ್ ದರದಂತೆ ₹17.21 ಕೋಟಿ ಅಂದಾಜಿಸಿ ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕ ಬಿಡ್ ತೆರೆದಾಗ ಎರಡು ಸಂಸ್ಥೆಗಳು ಮಾತ್ರ ಅರ್ಹವಾಗಿದ್ದವು.

ಟೆಂಡರ್ ತೆರೆದಾಗ ಆರ್‌ಪಿಪಿ ಇನ್‌ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ₹20.92 ಕೋಟಿ ಮತ್ತು ಎಂ.ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್ ಕಂಪನಿ ₹20.97 ಕೋಟಿ ನಮೂದಿಸಿರುವುದು ಬಹಿರಂಗವಾಯಿತು. ಟೆಂಡರ್ ಪ್ರೀಮಿಯಂ ಮೊತ್ತಕ್ಕೆ ಹೋಲಿಸಿದರೆ ಬಿಡ್ಡುದಾರರು ಸಲ್ಲಿಸಿರುವ ಮೊತ್ತಗಳು ಕ್ರಮವಾಗಿ ಶೇ 21.59 ಮತ್ತು ಶೇ 21.85ರಷ್ಟು ಹೆಚ್ಚಿದೆ. ಈ ಎರಡು ಕಂಪನಿಗಳಲ್ಲಿ ಕಡಿಮೆ ಮೊತ್ತ ದಾಖಲಿಸಿದ್ದ ಆರ್‌ಪಿಪಿ ಇನ್‌ಫ್ರಾ ಪ್ರಾಜೆಕ್ಟ್ಸ್ ಕಂಪನಿಗೆ ಗುತ್ತಿಗೆ ವಹಿಸಲು ನಿರ್ಧರಿಸಲಾಗಿದ್ದು, ಈ ಸಂಬಂಧ ಆದೇಶವವೂ ಜೂನ್ 14ರಂದು ಹೊರಬಿದ್ದಿದೆ.

ಪ್ರಜಾವಾಣಿ ವಿಶೇಷ

ಮೇ 10ರಂದು ಆರ್ಥಿಕ ಇಲಾಖೆ ಹೊರಡಿಸಿದ್ದ ಸುತ್ತೋಲೆ ಪ್ರಕಾರ ಟೆಂಡರ್ ಮೊತ್ತದಲ್ಲಿ ಶೇ 5ಕ್ಕಿಂತ ಜಾಸ್ತಿ ಮೊತ್ತವನ್ನು ಹೆಚ್ಚಿಸಿಕೊಳ್ಳಲು ಅವಕಾಶ ಇಲ್ಲ. ಒಂದು ವೇಳೆ ಅನಿವಾರ್ಯ ಸಂದರ್ಭವಾರೆ ಸಮರ್ಥನೀಯ ಕಾರಣಗಳನ್ನು ಲಿಖಿತ ರೂಪದಲ್ಲಿ ದಾಖಲಿಸಿ ಉನ್ನತ ಪ್ರಾಧಿಕಾರದ ಅನುಮೋದನೆ ಪಡೆಯಬೇಕು ಎಂದು ತಿಳಿಸಿತ್ತು.

ಕಾರ್ಡ್ ರಸ್ತೆಯ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದ ನಡಾವಳಿಗಳನ್ನು ಗಮನಿಸಿದರೆ ಸಮಿತಿ ಇದಕ್ಕೆ ಒಪ್ಪಿಗೆ ಸೂಚಿಸಿಲ್ಲ. ಮೇ 4ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಈ ವಿಷಯ ಚರ್ಚೆಯಾಗಿದ್ದು, ಹೆಚ್ಚುವರಿ ಮೊತ್ತ ನಿಗದಿ ಮಾಡುವ ವಿಷಯದಲ್ಲಿ ಒಮ್ಮತದ ನಿರ್ಣಯಕ್ಕೆ ಬಂದಿಲ್ಲ. ಆದರೆ, ಲೋಕೋಪಯೋಗಿ ಇಲಾಖೆಯ ಹೊಸ ಎಸ್‌ಆರ್ ದರಕ್ಕೆ ಹೋಲಿಸಿದರೆ ಶೇ 2ರಷ್ಟು ಮಾತ್ರ ಹೆಚ್ಚುವರಿ ಆಗಲಿದೆ ಎಂಬ ಅಭಿಪ್ರಾಯವನ್ನು ನಗರಾಭಿವೃದ್ಧಿ ಇಲಾಖೆಯ ತಾಂತ್ರಿಕ ಕೋಶದ ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

ಶೇ 21.59ರಷ್ಟು ಹೆಚ್ಚುವರಿ ಮೊತ್ತದ ಪ್ರಸ್ತಾವನೆ ತಿರಸ್ಕರಿಸಿ ಮರು ಟೆಂಡರ್ ಕರೆಯಬಹುದು ಅಥವಾ ಈ ವಿಷಯದಲ್ಲಿ ಅಂತಿಮ ನಿರ್ಣಯ ಕೈಗೊಳ್ಳುವ ವಿಷಯವನ್ನು ಮುಖ್ಯಮಂತ್ರಿ ಅವರ ವಿವೇಚನೆಗೆ ಬಿಡಲು ಸಮಿತಿ ತೀರ್ಮಾನಿಸಿತ್ತು. ಜೂ.10ರಂದು ಆದೇಶ ಹೊರಬಿದ್ದಿದ್ದು, ಅದರಲ್ಲಿ ಮುಖ್ಯಮಂತ್ರಿ ಅವರ ಅನುಮೋದನೆ ಪಡೆಯಲಾಗಿದೆ ಎಂದು ತಿಳಿಸಲಾಗಿದೆ. ಒಟ್ಟಾರೆ ಶೇ 21.59ರಷ್ಟು ಹೆಚ್ಚುವರಿ ಮೊತ್ತಕ್ಕೆ ಟೆಂಡರ್ ಅಂತಿಮಗೊಳಿಸಲಾಗಿದೆ.

ಕಾರ್ಡ್ ರಸ್ತೆಯ ಬಸವೇಶ್ವರನಗರ ಜಂಕ್ಷನ್‌ನಲ್ಲಿ ಮೇಲ್ಸೇತುವೆ ನಿರ್ಮಾಣಕ್ಕೆ ಕಂಬಗಳನ್ನು ಅಳವಡಿಸಿರುವುದು —ಪ್ರಜಾವಾಣಿ ಚಿತ್ರ

ಅರ್ಧದಷ್ಟು ಕಾಮಗಾರಿ ಪೂರ್ಣ

ಒಂದೆಡೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದರೆ, ಇನ್ನೊಂದೆಡೆ ಈ ಮೇಲ್ಸೇತುವೆಯ ಕಾಮಗಾರಿ ಅರ್ಧದಷ್ಟು ಪೂರ್ಣಗೊಂಡಿದೆ. ಈ ರಸ್ತೆಯಲ್ಲಿ ಬೇರೆ ಮೇಲ್ಸೇತುವೆ ನಿರ್ಮಿಸಿದ್ದ ಕಂಪನಿಯೇ ಈ ಕಾಮಗಾರಿಯನ್ನೂ ನಿರ್ವಹಿಸಿದ್ದು, ಟೆಂಡರ್ ಮಾತ್ರ ಬೇರೆ ಕಂಪನಿಯ ಪಾಲಾಗಿದೆ.

ಐದು ಕಂಬಗಳನ್ನು ನಿರ್ಮಿಸಲಾಗಿದ್ದು, ಕಾಮಗಾರಿ ಈಗಲೂ ಮುಂದುವರಿದಿದೆ. ಕಾರ್ಯಾದೇಶ ಪಡೆಯದೆ ನಿರ್ವಹಿಸಿರುವ ಕಾಮಗಾರಿಗೆ ಬಿಬಿಎಂಪಿ ಬಿಲ್ ಪಾವತಿಸುವುದೇ ಎಂಬ ಪ್ರಶ್ನೆಗೆ ಅಧಿಕಾರಿಗಳ ಬಳಿ ಉತ್ತರವಿಲ್ಲ.

ಅನುಮತಿಯೇ ಇಲ್ಲದೆ ನಿರ್ವಹಿಸಿರುವ ಕಾಮಗಾರಿಗೆ ಗುಣಮಟ್ಟಕ್ಕೆ ಯಾರ ಹೊಣೆ, ಈ ಕಂಪನಿ ಬಿಲ್ ಸಲ್ಲಿಸಿದರೆ ಪಾವತಿಸಲು ಬಿಬಿಎಂಪಿಗೆ ಸಾಧ್ಯವಿದೆಯೇ? ಗುತ್ತಿಗೆ ಬೇರೆಯವರ ಪಾಲಾಗಿದ್ದರೂ ಕಾಮಗಾರಿ ನಿರ್ವಹಿಸಲು ಧೈರ್ಯ ನೀಡುತ್ತಿರುವ ಶಕ್ತಿಗಳು ಯಾವುವು ಎಂಬ ಹತ್ತು ಹಲವು ಪ್ರಶ್ನೆಗಳು ಎದ್ದಿವೆ.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಬಿಬಿಎಂಪಿ ಮುಖ್ಯ ಎಂಜಿನಿಯರ್(ಯೋಜನೆ) ಎಂ.ಲೋಕೇಶ್ ಅವರನ್ನು 'ಪ್ರಜಾವಾಣಿ' ಸಂಪರ್ಕಿಸಲು ಪ್ರಯತ್ನಿಸಿತು. ಅವರು ಕರೆ ಸ್ವೀಕರಿಸಲಿಲ್ಲ.

ಮೈಸೂರು ರೇಸ್

ಏಂಜೆಲಿಕೊ ಗೆಲ್ಲುವ ನಿರೀಕ್ಷೆ

ಡಾ.ಎನ್.ಎಂ.ಶ್ರೀನಿವಾಸ್ ಮೆಮೋರಿಯಲ್ ಕಪ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಏಂಜೆಲಿಕೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಗ್ರೇಟ್ ಹೋಪ್ 4, ಕೊಯೊಟೊ ಗರ್ಲ್ 5, ಆರೆಲ್ 2
2ನೇ ರೇಸ್: ಕಂಟ್ರೇಸ್ ಫ್ಲಾಶ್ 4, ಡಿ ಅಡ್ಮಿರಲ್ 10, ರೈನ್ ಕ್ಲೌಡ್ 6
3ನೇ ರೇಸ್: ಕಲಹಾರಿ ಗೋಲ್ಡ್ 7, ಮೇ ಬ್ಯೂರಿ 9, ಮಿಸ್ಟಿಕ್ ಡಿವೈನ್ 11
4ನೇ ರೇಸ್: ಗುಡ್ ಅರ್ಥ್ 2, ಆಲ್ ಗ್ರೇಟ್ ಫ್ರೆಂಡ್ಸ್ 5, ಲೀಪ್ ಆಫ್ ಫೈತ್ 4
5ನೇ ರೇಸ್: ಏಂಜೆಲಿಕೊ 1, ಡಿ ಗೋಲ್ಡ್ 2, ಲೇಕ್ ಟಾಹೊ 5
6ನೇ ರೇಸ್: ಬ್ರನ್‌ಹಿಲ್ಡ್ 6, ಮ್ಯುಟಾಂಟ್ 5, ಒಕ್ರೆ 12
7ನೇ ರೇಸ್: ಮೊರ್ಗಾನೈಟ್ 3, ಲವ್ಲಿ ಥಾಟ್ಸ್ 13, ಲಕ್ಕಿ ಪಾಯಿಂಟ್ 7

ಉತ್ತಮ ಬೆಟ್: ಮೊರ್ಗಾನೈಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಶ್ರೀರಾಮ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಪ್ರಧಾನ ಕಛೇರಿ : ನಂ. 146, 7ನೇ ಅಡ್ಡ ರಸ್ತೆ, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003.
ದೂರವಾಣಿ : ಪ್ರಧಾನ ಕಛೇರಿ : 080–23364609, 23464713, ಶಾಖೆ : 23481556

ಪ್ರಕಟಣೆ

ಬ್ಯಾಂಕಿನ ಮಾನ್ಯ ಸದಸ್ಯರು, ಠೇವಣಿದಾರರು ಹಾಗೂ ಗ್ರಾಹಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಹಾಲಿ ಕಾರ್ಯನಿರ್ವಹಿಸುತ್ತಿರುವ ಬಸವೇಶ್ವರನಗರದಲ್ಲಿರುವ ಶಾಖೆಯ ಕಟ್ಟಡ ನಂ. 9, 60 ಅಡಿ ರಸ್ತೆ, ಕೆ.ಹೆಚ್.ಬಿ. ಕಾಲೋನಿ, (ಪವಿತ್ರ ಪ್ಯಾರಾಡೈಸ್ ಹೋಟೆಲ್ ಹತ್ತಿರ) 2ನೇ ಸ್ಟೇಜ್, ಬಸವೇಶ್ವರನಗರ, ಬೆಂಗಳೂರು – 560 079 ರಿಂದ ಬ್ಯಾಂಕಿನ ಸ್ವಂತ ಕಟಡ ಸಂಖ್ಯೆ: 26, 2ನೇ ಮುಖ್ಯರಸ್ತೆ, ಮಧುರನಗರ, ಮೂಡಲಪಾಳ್ಯ ಸರ್ಕಲ್ ಹತ್ತಿರ, ಬೆಂಗಳೂರು –560 072 ಇಲ್ಲಿಗೆ ಸ್ಥಳಾಂತರಿಸುತ್ತಿದ್ದು, ಸದರಿ ಸ್ಥಳದಲ್ಲಿ ದಿನಾಂಕ : **24–06–2022** ರ ಶುಕ್ರವಾರ ಬೆಳಿಗ್ಗೆ **9.30** ಗಂಟೆಗೆ ನೂತನ ವಿಳಾಸದಲ್ಲಿ ಶಾಖಾ ಪ್ರಾರಂಭೋತ್ಸವ ಕಾರ್ಯಕ್ರಮವಿದ್ದು, ಸದರಿ ಕಾರ್ಯಕ್ರಮದಲ್ಲಿ ಮಾನ್ಯ ಬೆಂಗಳೂರು ದಕ್ಷಿಣ ಲೋಕಸಭಾ ಸದಸ್ಯರಾದ ಶ್ರೀ. ತೇಜಸ್ವಿಸೂರ್ಯ ರವರಿಂದ ಉದ್ಘಾಟನೆ ಮತ್ತು ಮುಖ್ಯ ಅತಿಥಿಗಳಾಗಿ ಮಾನ್ಯ ಕರ್ನಾಟಕ ಸರ್ಕಾರದ ವಸತಿ ಸಚಿವರಾದ ಶ್ರೀ. ವಿ. ಸೋಮಣ್ಣ ರವರು ಮತ್ತು ಮಾನ್ಯ ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಶ್ರೀ. ದಾಸೇಗೌಡ ರವರು ಭಾಗವಹಿಸಲಿದ್ದಾರೆ. ಮಾನ್ಯ ಸದಸ್ಯರು / ಠೇವಣಿದಾರರು / ಗ್ರಾಹಕರು / ಈ ಸಮಾರಂಭದಲ್ಲಿ ಭಾಗವಹಿಸಲು ಕೋರಲಾಗಿದೆ.

ದಿನಾಂಕ : 24.06.2022 ರ ಶುಕ್ರವಾರದಿಂದ ನೂತನ ಸ್ಥಳದಲ್ಲಿ ಬ್ಯಾಂಕಿನ ಶಾಖೆಯ ವ್ಯವಹಾರವನ್ನು ನಡೆಸಲಾಗುವುದು. ಮಾನ್ಯ ಸದಸ್ಯರು / ಠೇವಣಿದಾರರು / ಗ್ರಾಹಕರು ಸಹಕರಿಸಲು ಕೋರಲಾಗಿದೆ.

ಶ್ರೀರಾಮ ಕೋ–ಆಪರೇಟಿವ್ ಬ್ಯಾಂಕ್ ಲಿ., ಪರವಾಗಿ

ಶ್ರೀ ಎಸ್.ಕೆ. ಕರಿಯಪ್ಪಗೌಡ, ಅಧ್ಯಕ್ಷರು, | ಶ್ರೀ ಟಿ.ಎಸ್. ಗಂಗನರಸಿಂಹಯ್ಯ, ಉಪಾಧ್ಯಕ್ಷರು, | ಶ್ರೀ. ಜಿ. ಶ್ರೀನಿವಾಸ್, CEO

STATE BANK OF INDIA
SMEC, BANASAWADI (21014)

E-AUCTION OF CARS Parked at Lakshmi Recovery Agency, Udaya Layout, Manganahalli, Bangalore-560060. E-auction Date- 30.06.2022.
Contact: Mr. Paramesh Reddy - 8618048183

SI No	AGREEMENT NO.	NAME	MODEL	REG NO.	MFG. YEAR	RESERVE PRICE (in Rs.)
1	64143619668 (Gangenahalli-40276)	M/s. Castle Rent a Car, Prop-Kuber Naik L.B.	NISSAN SUNNY (XL DCI BS IV) Silver	KA-04-D-8747	2014	167000

E- auction of vehicles is being held on **"AS IS WHERE IS BASIS", "AS IS WHAT IS BASIS"** and **"WHATEVER THERE IS BASIS"** and the auction will be conducted **"ONLINE"**. The auction will be conducted through the Bank's approved service provider **M/s. C1 INDIA,** at their web portal is **https://www.bankeauctions.com.** E-auction tender document containing online-Auction Bid application. Decalration, general terms and conditions of online auction sale are available in **https://www.bankeauctions.com. Contact: Sri Gangadhar Naik Gonkar. (M) +91-9900711744-**, the service provider (C1 INDIA).

It shall be the responsibilities of the interested bidders to inspect and satisfy themselves about the vehicles before submission of the bid(s). It shall be deemed that the intending bidders have done their own due diligence before submitting the tender. No conditional bid will be accepted. The intending purchaser/bidders are required to deposit EMD amount 10% of the reserve price on or before **29.06.2022** either through NEFT/RTGS Transfer or online transfer into the **account no. 4897932210142** in favour of 'Subsidy Inward Remittance Account' at **State Bank of India, SMEC Banaswadi, Bengaluru, Branch Code: 21014, IFS Code : SBIN0021014.** Copy of the supportive documents like challan/ receipt, KYC copies (Adhar-PAN) should be attached to the Bid Application. **E-AUCTION TIMINGS WILL BE BETWEEN 11.30 AM TO 12.30 PM ON 30TH JUNE 2022. BID AMOUNT IS INCLUSIVE WITH GST.** Vehicle should be got released within 8 days from the date of E-Auction by making full payment, otherwise EMD amount will be forfeited by the Bank. Bank reserves the right to reject/cancel any bid at any stage without assigning any reason.

Sd/- Assistant General Manager

ಮೇಕೆದಾಟು: ಜುಲೈ 6ಕ್ಕೆ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ ಅಧೀನದಲ್ಲಿರುವ 'ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ'ದ (ಸಿಡಬ್ಲ್ಯುಎಂಎ) ಸಭೆ ಜುಲೈ 6ಕ್ಕೆ ಮುಂದೂಡಿಕೆಯಾಗಿದೆ.

ಮೇಕೆದಾಟು ಬಳಿ ಸಮಾನಾಂತರ ಜಲಾಶಯ ನಿರ್ಮಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಸಲ್ಲಿಸಿರುವ ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಸಿಡಬ್ಲ್ಯುಎಂಎ ಈವರೆಗೆ ಒಪ್ಪಿಗೆ ನೀಡಿಲ್ಲ. ಆರಂಭದಲ್ಲಿ ಜೂನ್ 17ರಂದು ಸಭೆ ನಿಗದಿಯಾಗಿತ್ತು. ಬಳಿಕ ಜೂನ್ 23ಕ್ಕೆ ಮುಂದೂಡಿಕೆಯಾಗಿತ್ತು. ಅಂದಿನ ಸಭೆಯಲ್ಲಿ ಮೇಕೆದಾಟು ಡಿಪಿಆರ್ ಚರ್ಚೆಗೆ ಬರಬೇಕಿತ್ತು.

ಸಭೆಯ ಕಾರ್ಯಸೂಚಿ ಪಟ್ಟಿಯಲ್ಲಿ ಈ ವಿಚಾರವನ್ನು ಇಟ್ಟಿದ್ದಕ್ಕೆ ತಮಿಳುನಾಡು ಸರ್ಕಾರ ಆಕ್ಷೇಪ ವ್ಯಕ್ತಪಡಿಸಿತ್ತು. ಈ ಸಂಬಂಧ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುವುದಾಗಿ ಹೇಳಿತ್ತು.

'ಮೇಕೆದಾಟು ವಿವಾದ ಸುಪ್ರೀಂ ಕೋರ್ಟ್‌ನಲ್ಲಿ ಇತ್ಯರ್ಥವಾಗಿದ್ದು, ತಮಿಳುನಾಡು ಸರ್ಕಾರ ಅನಗತ್ಯ ವಿವಾದ ಸೃಷ್ಟಿಸುತ್ತಿದೆ' ಎಂದು ಕರ್ನಾಟಕ ಸರ್ಕಾರ ತಿರುಗೇಟು ನೀಡಿತ್ತು. ಡಿಪಿಆರ್‌ಗೆ ಒಪ್ಪಿಗೆ ನೀಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಗೋವಿಂದ ಕಾರಜೋಳ ಅವರು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರಿಗೆ ಕಳೆದ ವಾರ ಮನವಿ ಸಲ್ಲಿಸಿದ್ದರು.

₹1 ಲಕ್ಷಕ್ಕೊಂದು ಬಿಎಂಟಿಸಿ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಳು ಲಕ್ಷಕ್ಕಿಂತ ಹೆಚ್ಚು ಕಿಲೋ ಮೀಟರ್ ಸಂಚರಿಸಿರುವ 100 ಬಸ್‌ಗಳನ್ನು ತಲಾ ₹1 ಲಕ್ಷಕ್ಕೆ ಬಿಎಂಟಿಸಿ ಮಾರಾಟಕ್ಕಿಟ್ಟಿದೆ.

ವಾಯವ್ಯ ಕರ್ನಾಟಕ ಸಾರಿಗೆ ನಿಗಮಕ್ಕೆ (ಎನ್‌ಡಬ್ಲ್ಯುಕೆಆರ್‌ಟಿಸಿ) ನೀಡಲು ಉದ್ದೇಶಿಸಿರುವ ಬಸ್‌ಗಳಿಗೆ ಈ ದರ ನಿಗದಿ ಮಾಡಿದೆ. ಈ ಸಂಬಂಧ ಪ್ರಸ್ತಾವನೆಯನ್ನೂ ಸಲ್ಲಿಸಿದೆ.

'ಕಾರ್ಯಾಚರಣೆಯಾಗದೆ ನಿಂತಿರುವ ಬಸ್‌ಗಳನ್ನು ಉಚಿತವಾಗಿ ನೀಡದೆ ಕನಿಷ್ಠ ದರಕ್ಕೆ ನೀಡಲು ನಿರ್ಧರಿಸಲಾಗಿದೆ. ಆದರೆ, ಎನ್‌ಡಬ್ಲ್ಯುಕೆಆರ್‌ಟಿಸಿಯಿಂದ ಸ್ಪಂದನ ದೊರೆತಿಲ್ಲ' ಎಂದು ಬಿಎಂಟಿಸಿ ಅಧಿಕಾರಿಯೊಬ್ಬರು ಸ್ಪಷ್ಟಪಡಿಸಿದರು.

ನಗರದಲ್ಲಿ ಇಂದು

ರಾಜ್ಯಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶ: ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಹಿಳಾ ಉದ್ಯಮಿಗಳ ಸಂತೆ ಉದ್ಘಾಟನೆ: ಶೋಭಾ ಕರಂದ್ಲಾಜೆ, ಉಪಸ್ಥಿತಿ: ಬಿ.ಸಿ. ಪಾಟೀಲ್, ಡಾ.ಸಿ. ಸೋಮಶೇಖರ್, ಡಾ.ಎಸ್.ಜಿ. ಸುಶೀಲಮ್ಮ, ಡಾ.ವೂಡೇ. ಪಿ. ಕೃಷ್ಣ, ಅಧ್ಯಕ್ಷತೆ: ವಿ.ಎಸ್. ಕುಬೇರ, ಆಯೋಜಕರು: ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸುಮಂಗಲಿ ಸೇವ ಆಶ್ರಮ, ಸ್ಥಳ: ಗಾಂಧಿಭವನ ಸಭಾಂಗಣ, ಕುಮಾರಕೃಪಾ ರಸ್ತೆ, ಬೆಳಿಗ್ಗೆ: 11

ಎನ್.ಪದ್ಮನಾಭರಾವ್ ಅವರ 'ನುಡಿಮುತ್ತುಗಳಲ್ಲಿ ಜೀವನ ಮೌಲ್ಯಗಳು' ಪುಸ್ತಕ ಬಿಡುಗಡೆ ಸಮಾರಂಭ: ಪುಸ್ತಕ ಬಿಡುಗಡೆ: ಎನ್.ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಶಿವರಾಜ್.ವಿ. ಪಾಟೀಲ್, ಉಪಸ್ಥಿತಿ: ಡಾ.ಸಿ.ಎನ್. ಮಂಜುನಾಥ್, ಎ.ಟಿ. ರಾಮಸ್ವಾಮಿ, ಬಿ.ಟಿ. ಲಲಿತಾ ನಾಯಕ್, ಎಸ್.ಎಸ್. ಪಡಶೆಟ್ಟಿ, ಆಯೋಜಕರು: ಪದ್ಮಾಲಯ ಪ್ರಕಾಶನ, ಸ್ಥಳ: ಶಾಸಕರ ಭವನ–2, ಸಮ್ಮೇಳನ ಸಭಾಂಗಣ, ವಿಧಾನಸೌಧ ಹಿಂಭಾಗ, ಬೆಳಿಗ್ಗೆ: 11

ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ: ಉಪಸ್ಥಿತಿ: ಡಾ.ಶೇಖರ್. ಪಿ. ಶೇಷಾದ್ರಿ, ಪ್ರೊ.ಶೀಲಾ ಮೆನನ್, ಆಯೋಜಕರು: ಎಂಇಎಸ್ ಕಿಶೋರ ಕೇಂದ್ರ ಪಿಯು ಕಾಲೇಜು, ಸ್ಥಳ: 10ನೇ ಮುಖ್ಯ ರಸ್ತೆ 15ನೇ ಕ್ರಾಸ್ ಮಲ್ಲೇಶ್ವರ, ಬೆಳಿಗ್ಗೆ: 10.30

'ಮಾಳವಿಕಾಗ್ನಿಮಿತ್ರ' ನಾಟಕ ಪ್ರದರ್ಶನ: ನಿರ್ದೇಶನ: ಆಸಿಫ್ ಕ್ಷತ್ರಿಯ ಮತ್ತು ಶ್ವೇತಾ ಶ್ರೀನಿವಾಸ್, ರಂಗಪಠ್ಯ ಗೀತ ಸಾಹಿತ್ಯ: ಆಸಿಫ್ ಕ್ಷತ್ರಿಯ, ಸಂಗೀತ ಸಂಯೋಜನೆ: ಭಿನ್ನಷಡ್ಜ, ಹಿನ್ನೆಲೆ ಗಾಯನ: ಶ್ರೀಹರ್ಷ, ವಸ್ತ್ರ ವಿನ್ಯಾಸ: ಶ್ವೇತ ಶ್ರೀನಿವಾಸ್, ನೃತ್ಯ: ಸಹನಾ ಮತ್ತು ಶ್ವೇತ, ಆಯೋಜಕರು: ರಂಗರಥ, ಸ್ಥಳ: ರಂಶಂಕರ, ಜೆ.ಪಿ. ನಗರ ಸಂಜೆ: 7.30

ಮಾಳವಿಕಾಗ್ನಿಮಿತ್ರ

'ಮೃತಸಂಜೀವಿನಿ' ಯಕ್ಷಗಾನ ತಾಳಮದ್ದಳೆ ಪರ್ವ: ಮುಮ್ಮೇಳ: ಕಾವ್ಯಶ್ರೀ ನಾಯಕ್ ಆಜೇರು, ಶ್ರೀಶ ರಾವ್ ನಿಡ್ಲೆ, ಅಕ್ಷಯ ರಾವ್ ವಿಟ್ಲ, ಹಿಮ್ಮೇಳ: ಉಜಿರೆ ಅಶೋಕ ಭಟ್, ಹರೀಶ್ ಬಳಂತಿಮೊಗರು, ಶೇಣಿ ವೇಣುಗೋಪಾಲ ಭಟ್, ಶಶಾಂಕ್ ಅರ್ನಾಡಿ, ಸುಧಾಕರ್ ಜೈನ್, ಸುಬ್ರಹ್ಮಣ್ಯ ಮಠ ಬಸವನಗುಡಿ, ಸಂಜೆ: 4.45

'ನಿರ್ಮಾಣ ವೇಳೆ ಅವಘಡ: ಎಂಜಿನಿಯರ್ ಹೊಣೆಯಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಟ್ಟಡ ನಿರ್ಮಾಣ ವೇಳೆ ಅವಘಡ ಸಂಭವಿಸಿ ಕಾರ್ಮಿಕ ಮೃತಪಟ್ಟರೆ ಅಂತಹ ಘಟನೆಗೆ ಕಟ್ಟಡ ವಿನ್ಯಾಸ ಮಾಡಿದ ಎಂಜಿನಿಯರ್ ಹೊಣೆಗಾರ ಆಗುವುದಿಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

'ನನ್ನ ವಿರುದ್ಧ ದಾಖಲಿಸಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ನಗರದ ಎಂಜಿನಿಯರ್ ವಿ.ವಿಶ್ವಾಸ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಅರ್ಜಿದಾರರ ವಿರುದ್ಧ ಐಪಿಸಿ 304 (ಎ)-ನಿರ್ಲಕ್ಷ್ಯದಿಂದ ಸಾವಿಗೆ ಕಾರಣವಾದ ಆರೋಪವನ್ನು ಹೊರಿಸಲಾಗದು' ಎಂಬ ಅಭಿಪ್ರಾಯ ವ್ಯಕ್ತಪಡಿಸಿ, ಅರ್ಜಿದಾರರ ವಿರುದ್ಧ ನಂದಿನಿ ಲೇಔಟ್ ಠಾಣೆ ಪೊಲೀಸರು ದಾಖಲಿಸಿದ್ದ ದೂರು ನ್ಯಾಯಾಲಯದ ವಿಚಾರಣೆಯನ್ನು ರದ್ದುಪಡಿಸಿದೆ.

'ಗುತ್ತಿಗೆದಾರರ ಅಧೀನದಲ್ಲಿ ಕೆಲಸ ಮಾಡುವ ಕಾರ್ಮಿಕ ಮೃತಪಟ್ಟರೆ ಅದಕ್ಕೆ ಕಟ್ಟಡ ನಿರ್ಮಾಣಕ್ಕೆ ವಿನ್ಯಾಸ ಮಾಡಿದ ಎಂಜಿನಿಯರ್ ಯಾವುದೇ ರೀತಿಯಲ್ಲೂ ಹೊಣೆಯಾಗುವುದಿಲ್ಲ. ಘಟನೆಯಲ್ಲಿ ಅರ್ಜಿದಾರರ ನಿರ್ಲಕ್ಷ್ಯ ಕಂಡುಬರುವುದಿಲ್ಲ' ಎಂದು ನ್ಯಾಯಪೀಠ ಆದೇಶದಲ್ಲಿ ತಿಳಿಸಿದೆ.

ಏನಿದು ಪ್ರಕರಣ?

ನಂದಿನಿ ಲೇಔಟ್ ಪ್ರದೇಶದ ನಿವೇಶನವೊಂದರಲ್ಲಿ 2020ರ ಅಕ್ಟೋಬರ್ 10ರಂದು ಕೆಲಸ ಮಾಡುತ್ತಿದ್ದ ಮುಖೇಶ್ ಎಂಬ ಕಾರ್ಮಿಕ ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿದ್ದರು. ಪ್ರಕರಣದ ತನಿಖೆ ನಡೆಸಿದ್ದ ಪೊಲೀಸರು ನಿವೇಶನದ ಮಾಲೀಕ ಚಂದ್ರಶೇಖರ್ ಅವರನ್ನು ಕೈಬಿಟ್ಟು, ಎಂಜಿನಿಯರ್ ವಿಶ್ವಾಸ್ ಮತ್ತು ಕಟ್ಟಡ ನಿರ್ಮಾಣ ಕಾಮಗಾರಿ ನಡೆಸಿಕೊಟ್ಟ ಗುತ್ತಿಗೆದಾರರ ವಿರುದ್ಧ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣ ರದ್ದು ಕೋರಿ ವಿಶ್ವಾಸ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಶಾಮನೂರು ಶಿವಶಂಕರಪ್ಪ ಹಾಜರಿಗೆ ಆದೇಶ

ಬೆಂಗಳೂರು: ಪದಾಧಿಕಾರಿಯೊಬ್ಬರ ಸದಸ್ಯತ್ವ ರದ್ದುಗೊಳಿಸಿದ ಆರೋಪಕ್ಕೆ ಸಂಬಂಧಿಸಿದ ಸಿವಿಲ್ ದಾವೆಯಲ್ಲಿ, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರು ವಿಚಾರಣೆಗೆ ಖುದ್ದು ಹಾಜರಾಗುವಂತೆ ಸಿಟಿ ಸಿವಿಲ್ ಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬೆಂಗಳೂರು ಸಂಪಿಗೆ ಲೇಔಟ್‌ನ ಅಮರಜ್ಯೋತಿ ನಗರದ ನಿವಾಸಿ ಶಿವಕುಮಾರಸ್ವಾಮಿ (ಮಾಗಡಿ ಶಿವಕುಮಾರ್) ಸಲ್ಲಿಸಿದ್ದ ಅಸಲು ದಾವೆಯನ್ನು ಮಂಗಳವಾರ ವಿಚಾರಣೆ ನಡೆಸಿದ ನ್ಯಾಯಾಧೀಶ ಗೆರಾಲ್ಡ್ ರುಡಾಲ್ಫ್ ಮೆಂಡೋಂನ್ಸಾ ಅವರು ಶಿವಶಂಕರಪ್ಪನವರ ಖುದ್ದು ಹಾಜರಿಗೆ ಆದೇಶಿಸಿ, ವಿಚಾರಣೆಯನ್ನು ಜುಲೈ 11ಕ್ಕೆ ಮುಂದೂಡಿದ್ದಾರೆ.

ಪ್ರಕರಣವೇನು?: 'ವೀರಶೈವ ಮಹಾಸಭಾದ ಅಧ್ಯಕ್ಷರ ವಿರುದ್ಧ ಅಸಭ್ಯ ಪತ್ರವೊಂದನ್ನು ಶಿವಣ್ಣ ಮಲ್ಲೇಗೌಡ ಎಂಬುವವರ ಹೆಸರಿನಲ್ಲಿ ಬರೆಯಲಾಗಿತ್ತು ಮತ್ತು ಎಲ್ಲರಿಗೂ ಈ ಪತ್ರವನ್ನು ಕಳುಹಿಸಲಾಗಿತ್ತು' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಮಹಾಸಭಾ, ಶಿವಕುಮಾರ್ ಸ್ವಾಮಿ ಅವರಿಗೆ 2014ರ ಆಗಸ್ಟ್ 2ರಂದು ಕಾರಣ ಕೇಳಿ ನೋಟಿಸ್ ನೀಡಿತ್ತು.

'ಮಹಾಸಭಾದ ಸದಸ್ಯತ್ವದಿಂದ ನನ್ನನ್ನು ಕಿತ್ತುಹಾಕಲು ಕಾರ್ಯಕಾರಿ ಸಮಿತಿಯು 2014ರ ಆಗಸ್ಟ್ 28ರಂದು ಕೈಗೊಂಡಿರುವ ನಿರ್ಣಯವನ್ನು ರದ್ದುಗೊಳಿಸಬೇಕು ಮತ್ತು ನನ್ನ ಸದಸ್ಯತ್ವ ಪುನರ್ ಸ್ಥಾಪನೆಗೆ ಆದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ. ಅರ್ಜಿದಾರ ಶಿವಕುಮಾರಸ್ವಾಮಿ ಪರ ವಕೀಲ ಎಸ್.ಟಿ.ಪ್ರಸಾದ್ ವಾದ ಮಂಡಿಸಿದರು.

ಕೆರೆಗಳಿಗೆ ಜೀವಕಳೆ, ಅಂತರ್ಜಲ ವೃದ್ಧಿ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಸೋಂಪುರ ಹೋಬಳಿಯಾದ್ಯಂತ ಬೀಳುತ್ತಿರುವ ಉತ್ತಮ ಮಳೆಯಿಂದ ಇಲ್ಲಿನ ಕೆರೆ ಕುಂಟೆ, ಹೊಂಡಗಳಲ್ಲಿ ನೀರು ಸಂಗ್ರಹಗೊಳ್ಳುತ್ತಿದೆ. ಇದು ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ. ಜಾನುವಾರುಗಳಿಗೆ ನೀರಿನ ಕೊರತೆ ನಿವಾರಣೆಯಾಗಿದೆ. ಅಂತರ್ಜಲ ವೃದ್ಧಿಯಾಗಿ ಕೊಳವೆಬಾವಿಗಳಲ್ಲಿ ಹೆಚ್ಚಿನ ನೀರು ತುಂಬಿಕೊಳ್ಳುವ ಆಶಾಭಾವನೆ ಮೂಡಿಸಿದೆ.

ದೇವರಹೊಸಹಳ್ಳಿ, ಹಳೇನಿಜಗಲ್ಲು ಕೆರೆಗಳು ಕೊಡಿಯಾಗಿವೆ. ಚನ್ನೋಹಳ್ಳಿ, ರಾಯರ ಪಾಳ್ಯ, ಬಿಲ್ಲಿನ ಕೋಟೆ, ಕಂಬಾಳು, ನಿಡವಂದ, ಲಕ್ಕೂರು, ಹೊನ್ನೇನಹಳ್ಳಿ ಕೆರೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಸಂಗ್ರಹವಾಗಿದೆ. ಮುಂಗಾರು ಮಳೆ ಬಿರುಸುಗೊಂಡಿರುವುದರಿಂದ ಇನ್ನಷ್ಟು ನೀರು ಸಂಗ್ರಹವಾಗುವ ಮುನ್ಸೂಚನೆ ಇದೆ.

ಕೃಷಿ ಇಲಾಖೆ ವತಿಯಿಂದ ನಿರ್ಮಿಸಿದ ಹೊಂಡ ತುಂಬಿ ನಳನಳಿಸುತ್ತಿದೆ

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯವರು ಅಭಿವೃದ್ಧಿಪಡಿಸಿರುವ ಬುಗಡಿಹಳ್ಳಿ ಹಾಗೂ ಮಾದೇನಹಳ್ಳಿ ಕೆರೆಗಳಲ್ಲಿಯೂ ಸಮೃದ್ಧವಾದ ನೀರು ನಿಂತಿದೆ. ಈ ಬಾರಿಯ ಮಳೆಯಿಂದ ಜಲಮೂಲಕ್ಕೆ ನೀರು ಬಂದಿದೆ. ಅಂತರ್ಜಲ ಮಟ್ಟ ವೃದ್ಧಿಸುವ ಮೂಲಕ ಬತ್ತಿರುವ ಕೊಳವೆಬಾವಿಗಳಿಗೆ ಮರುಜೀವ ಸಿಕ್ಕಿದೆ. ನೂರಾರು ಎಕರೆಗೆ ನೀರು ಒದಗಿಸಬಹುದು ಎನ್ನುತ್ತಾರೆ ಗ್ರಾಮ ಪಂಚಾಯಿತಿ ಸದಸ್ಯ ಎಂ.ಜಿ. ಗಂಗಾಧರ್.

ಜಾನುವಾರಗಳಿಗೆ ಕುಡಿಯುವುದಕ್ಕೆ ನೀರು ಸಿಗದೇ ಅಂತರ್ಜಲ ಮಟ್ಟವು ಸಾವಿರ ಅಡಿಗಳಿಗೂ ಆಳಕ್ಕೆ ಕುಸಿದಿದೆ. ನೀರು ಬಂದಿರುವುದರಿಂದ ಸ್ವಲ್ಪ ನೆಮ್ಮದಿ ತಂದಿದೆ ಎಂದು ಹೊನ್ನೇನಹಳ್ಳಿ ರುದ್ರೇಶ್ ಹೇಳಿದರು.

ರಾಜ್ಯ ಅಂಗಾಂಗ ಕಸಿ ಯೋಜನೆಯಡಿ ಶಸ್ತ್ರಚಿಕಿತ್ಸೆಗೆ ಸಿಗದ ಆರ್ಥಿಕ ನೆರವು

ಅಸ್ಥಿಮಜ್ಜೆ: ಚಿಕಿತ್ಸೆಗೆ ಅನುದಾನದ ಕೊರತೆ

• ವರುಣ ಹೆಗಡೆ

ಬೆಂಗಳೂರು: ಕ್ಯಾನ್ಸರ್ ಪೀಡಿತರಿಗೆ ದುಬಾರಿ ವೆಚ್ಚದ ಅಸ್ಥಿಮಜ್ಜೆ ಕಸಿಯನ್ನು ಉಚಿತವಾಗಿ ಒದಗಿಸುವ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಕಾರ್ಯಕ್ಕೆ ಆರ್ಥಿಕ ಸಂಕಷ್ಟ ಎದುರಾಗಿದೆ. ಸರ್ಕಾರದಿಂದ ಈವರೆಗೂ ಅನುದಾನ ದೊರೆಯದಿದ್ದರಿಂದ ಸಂಸ್ಥೆಗೆ ಕಸಿ ಹೊರೆಯಾಗಿ ಪರಿಣಮಿಸಿದ್ದು, ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿರುವವರು ಚಿಕಿತ್ಸೆಗೆ ಎದುರು ನೋಡುತ್ತಿದ್ದಾರೆ.

ಕಸಿ ಚಿಕಿತ್ಸೆಗಾಗಿ ಸಂಸ್ಥೆಯ ಆವರಣದಲ್ಲಿ ಅಸ್ಥಿಮಜ್ಜೆ ಘಟಕಕ್ಕೆ ಕಳೆದ ಫೆಬ್ರುವರಿಯಲ್ಲಿ ಚಾಲನೆ ನೀಡಲಾಗಿತ್ತು. ಇಲ್ಲಿ ನಡೆಸುವ ಕಸಿ ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗಳಲ್ಲಿ ₹ 30 ಲಕ್ಷದಿಂದ ₹ 50 ಲಕ್ಷ ವೆಚ್ಚವಾಗಲಿದೆ. ಇದರಿಂದಾಗಿ ಕಸಿ ಚಿಕಿತ್ಸೆಗೆ ಸಂಸ್ಥೆಯಲ್ಲಿ ಬೇಡಿಕೆ ಹೆಚ್ಚಳವಾಗಿದೆ. ಆದ್ಯತೆ ಅನುಸಾರ ಈಗಾಗಲೇ 20ಕ್ಕೂ ಅಧಿಕ ಮಂದಿಯನ್ನು ಕಸಿ ಚಿಕಿತ್ಸೆಗೆ ಹೆಸರು ನೋಂದಾಯಿಸಿಕೊಳ್ಳಲಾಗಿದೆ. ಈ ಚಿಕಿತ್ಸೆಗೆ ರಾಜ್ಯ ಅಂಗಾಂಗ ಕಸಿ ಯೋಜನೆಯಡಿ ಅನುದಾನ ಒದಗಿಸುವಂತೆ ಸಂಸ್ಥೆ ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಆದರೆ, ಈವರೆಗೂ ಅನುಮೋದನೆ ದೊರೆತಿಲ್ಲ.

ಅಸ್ಥಿಮಜ್ಜೆ ಕಸಿಗೆ ಬೇಡಿಕೆ ಹೆಚ್ಚಾಗಿದೆ. ಅನುದಾನವಿದ್ದಲ್ಲಿ ವರ್ಷಕ್ಕೆ ನೂರಕ್ಕೂ ಅಧಿಕ ಮಂದಿಗೆ ಕಸಿ ಮಾಡಬಹುದು.
ಡಾ.ಸಿ. ರಾಮಚಂದ್ರ,
ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಅಂಕಿ– ಅಂಶಗಳು

1,500 ಸಂಸ್ಥೆಯಲ್ಲಿ ಪ್ರತಿನಿತ್ಯ ಚಿಕಿತ್ಸೆ ಪಡೆಯುವ ಹೊರರೋಗಿಗಳು

1,200 ಸಂಸ್ಥೆಯಲ್ಲಿ ಪ್ರತಿನಿತ್ಯ ಚಿಕಿತ್ಸೆ ಪಡೆಯುವ ಒಳರೋಗಿಗಳು

ನೋಂದಾಯಿತ ರೋಗಿಗಳ ಕಸಿಗೆ ಸಂಸ್ಥೆಯು ಸ್ವಯಂ ಕ್ರೋಢೀಕೃತ ಅನುದಾನ ಹಾಗೂ ದಾನಿಗಳಿಂದ ಸಂಗ್ರಹಿಸುವ ಹಣ ಬಳಸುತ್ತಿದೆ. ರೋಗಿಯೊಬ್ಬರಿಗೆ ಅವರದೇ ದೇಹದ ಆರೋಗ್ಯವಂತ ಅಂಗದ ಒಂದಿಷ್ಟು ಮಜ್ಜೆಯನ್ನು ತೆಗೆದು ನಡೆಸುವ ಕಸಿಗೆ ₹ 7 ಲಕ್ಷ ವೆಚ್ಚವಾಗುತ್ತಿದೆ. ಕ್ಯಾನ್ಸರ್ ಪೀಡಿತ ವ್ಯಕ್ತಿಯ ದೇಹಕ್ಕೆ ಹೊಂದಿಕೊಳ್ಳುವ ಮಜ್ಜೆಯನ್ನು ಬೇರೆಯವರಿಂದ ಪಡೆದು, ಕಸಿ ಮಾಡಿದಲ್ಲಿ ₹21 ಲಕ್ಷದ ವರೆಗೆ ಚಿಕಿತ್ಸಾ ವೆಚ್ಚವಾಗಲಿದೆ. ಇಷ್ಟು ಹಣಕ್ಕೆ ರಾಜ್ಯ ಅಂಗಾಂಗ ಕಸಿ ಯೋಜನೆಯಡಿ ಅನುಮೋದನೆ ಸಿಕ್ಕಿಲ್ಲ.

ಪ್ರಜಾವಾಣಿ ವಿಶೇಷ

17 ಹಾಸಿಗೆ: ಅಸ್ಥಿ ಮಜ್ಜೆ ಚಿಕಿತ್ಸಾ ಘಟಕವನ್ನು ಸಂಸ್ಥೆಯಲ್ಲಿ ₹ 10 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದು, 13 ಸಾವಿರ ಚದರ ಅಡಿ ವಿಸ್ತೀರ್ಣ ಹೊಂದಿದೆ. ರಾಜ್ಯದ ಮೊದಲ ಸರ್ಕಾರಿ ಅಸ್ಥಿಮಜ್ಜೆ ಘಟಕ ಎಂಬ ಗೌರವಕ್ಕೆ ಕೂಡ ಇದು ಭಾಜನವಾಗಿದೆ. ಈ ಘಟಕವು 17 ಹಾಸಿಗೆಗಳನ್ನು ಒಳಗೊಂಡಿದೆ.

'ಕ್ಯಾನ್ಸರ್ ರೋಗಿಗಳಿಗೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ಅಗತ್ಯ. ಬಡತನ ರೇಖೆಗಿಂತ ಕೆಳಗಿನ (ಬಿಪಿಎಲ್) ಕುಟುಂಬದವರಿಗೆ ಸಂಸ್ಥೆಯಲ್ಲಿನ ಘಟಕದ ಮೂಲಕ ಅಸ್ಥಿಮಜ್ಜೆ ಕಸಿ ಶಸ್ತ್ರ-ಚಿಕಿತ್ಸೆಯನ್ನು ಉಚಿತವಾಗಿ ಒದಗಿಸಲಾಗುತ್ತಿದೆ. ಅನುದಾನಕ್ಕಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದ್ದು, ರಾಜ್ಯ ಅಂಗಾಂಗ ಕಸಿ ಯೋಜನೆಯಡಿ ಶೀಘ್ರದಲ್ಲೆ ಅನುಮೋದನೆ ದೊರೆಯುವ ನಿರೀಕ್ಷೆಯಿದೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದರು.

ಎರಡು ವಿಧದಲ್ಲಿ ಅಸ್ಥಿಮಜ್ಜೆ

'ಅಸ್ಥಿಮಜ್ಜೆ ಕಸಿ ಘಟಕದಲ್ಲಿ ವ್ಯಕ್ತಿಯ ದೇಹದ ಭಾಗದಲ್ಲಿ ಸಕ್ರಿಯವಾಗಿರುವ ಕ್ಯಾನ್ಸರ್ ಕಣಗಳನ್ನು ನಾಶಮಾಡಲಾಗುತ್ತದೆ. ಎರಡು ವಿಧಗಳಲ್ಲಿ ಈ ಕಸಿ ನಡೆಸಲಾಗುತ್ತದೆ. ಅವರದೇ ದೇಹದ ಆರೋಗ್ಯವಂತ ಅಂಗದ ಒಂದಿಷ್ಟು ಮಜ್ಜೆಯನ್ನು ತೆಗೆದು, ಕ್ಯಾನ್ಸರ್ ಕಣಗಳು ನಾಶವಾದ ಜಾಗದಲ್ಲಿ ನಡೆಸುವ ಕಸಿಗೆ ಚಿಕಿತ್ಸಾ ವೆಚ್ಚ ಕಡಿಮೆಯಾಗಲಿದೆ. ಕ್ಯಾನ್ಸರ್ ಪೀಡಿತ ವ್ಯಕ್ತಿಯ ದೇಹಕ್ಕೆ ಹೊಂದಿಕೊಳ್ಳುವ ಮಜ್ಜೆಯನ್ನು ಬೇರೆಯವರಿಂದ ಪಡೆದು, ಕಸಿ ಮಾಡಿದಲ್ಲಿ ವೆಚ್ಚ ಅಧಿಕವಾಗುತ್ತದೆ' ಎಂದು ಸಂಸ್ಥೆಯ ವೈದ್ಯರು ತಿಳಿಸಿದ್ದಾರೆ.

ರಾಜ್ಯ ಸರ್ಕಾರವು 2018ರಲ್ಲಿ ಬಿಪಿಎಲ್ ಕುಟುಂಬಗಳಿಗಾಗಿ 'ರಾಜ್ಯ ಅಂಗಾಂಗ ಕಸಿ ಯೋಜನೆ' ಆರಂಭಿಸಿದೆ. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಈ ಯೋಜನೆಯನ್ನು ನಿರ್ವಹಣೆ ಮಾಡುತ್ತಿದೆ. ಯೋಜನೆಯಡಿ ಹೃದಯ ಕಸಿಗೆ ಪ್ರತಿ ರೋಗಿಗೆ ₹ 11 ಲಕ್ಷ, ಮೂತ್ರಪಿಂಡ ಕಸಿಗೆ ₹ 3 ಲಕ್ಷ, ಯಕೃತ್ತು ಕಸಿಗೆ ₹ 12 ಲಕ್ಷ ಧನಸಹಾಯ ನೀಡಲು ಅವಕಾಶವಿದೆ. 2019 ರಲ್ಲಿ ಅಸ್ಥಿಮಜ್ಜೆ ಕಸಿಯನ್ನೂ ಸೇರ್ಪಡೆ ಮಾಡಲಾಗಿತ್ತು.

ಮಗುವಿನ ಚಿಕಿತ್ಸೆಗೆ ವ್ಯವಸ್ಥೆ ಮಾಡಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೃಷ್ಟಿ ದೋಷ, ಮಿದುಳು ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ ಬೆಳಗಾವಿ ಜಿಲ್ಲೆಯ ಕೇಳಿಗ್ರಾಮದ ಶಂಕ್ರಮ್ಮ ಎಂಬುವರ ಪುಟ್ಟ ಮಗಳು ಕೃಷ್ಣವೇಣಿಯ ಸಂಪೂರ್ಣ ಚಿಕಿತ್ಸೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವ್ಯವಸ್ಥೆ ಮಾಡಿದ್ದಾರೆ.

ಮುಖ್ಯಮಂತ್ರಿಯವರು ಮೈಸೂರಿನಲ್ಲಿ ಯೋಗ ದಿನಾಚರಣೆ ಮುಗಿಸಿ ಬೆಂಗಳೂರಿನ ತಮ್ಮ ನಿವಾಸಕ್ಕೆ ಹಿಂದಿರುಗಿದಾಗ ಹಸುಗೂಸು ಎತ್ತಿಕೊಂಡ ಶಂಕ್ರಮ್ಮ ಗಮನ ಸೆಳೆದರು. ಆಕೆಯ ಬಳಿ ಸಮಸ್ಯೆಯನ್ನು ವಿಚಾರಿಸಿದಾಗ, ಮಗುವಿನ ಕಾಯಿಲೆ ಬಗ್ಗೆ ವಿವರಿಸಿ ಚಿಕಿತ್ಸೆಗೆ ಲಕ್ಷಾಂತರ ರೂಪಾಯಿ ವೆಚ್ಚವಾಗಲಿದ್ದು, ನೆರವು ನೀಡಬೇಕು ಎಂದು ಮನವಿ ಮಾಡಿದರು.

ಇದಕ್ಕೆ ತಕ್ಷಣವೇ ಸ್ಪಂದಿಸಿದ ಬೊಮ್ಮಾಯಿ, ಕೃಷ್ಣವೇಣಿಯ ಚಿಕಿತ್ಸೆಗೆ ನೆರವು ನೀಡುವ ಭರವಸೆ ನೀಡಿದ್ದು ಮಾತ್ರವಲ್ಲದೆ, ಎರಡು ತಾಸಿನ ಒಳಗೆ ಮುಖ್ಯಮಂತ್ರಿ ಪರಿಹಾರ ನಿಧಿ ಶಾಖೆಯಿಂದ ಧಾರವಾಡ ಎಸ್‌ಡಿಎಂ ಆಸ್ಪತ್ರೆಗೆ ಪತ್ರ ಬರೆದು, ಉಚಿತ ಚಿಕಿತ್ಸೆಗೆ ವ್ಯವಸ್ಥೆ ಮಾಡಿಸಿದರು.

ಮಗುವಿನ ಚಿಕಿತ್ಸೆ ಸಂಪೂರ್ಣಗೊಂಡ ಬಳಿಕ ಸರ್ಕಾರಕ್ಕೆ ಬಿಲ್‌ಗಳನ್ನು ಸಲ್ಲಿಸುವಂತೆಯೂ ಪತ್ರದಲ್ಲಿ ಎಸ್‌ಡಿಎಂ ಆಸ್ಪತ್ರೆಗೆ ಸೂಚಿಸಲಾಗಿದೆ. ಮುಖ್ಯಮಂತ್ರಿಯವರು ತ್ವರಿತಗತಿ ಸ್ಪಂದಿಸಿದ ಬಗ್ಗೆ ಮಗುವಿನ ತಾಯಿ ಹರ್ಷ ವ್ಯಕ್ತಪಡಿಸಿದರು.

ರಾಹುಲ್: ಇ.ಡಿ ವಿಚಾರಣೆ ಅಂತ್ಯ

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಅಕ್ರಮ ಹಣ ವರ್ಗಾವಣೆ ಪ್ರಕರಣ ಸಂಬಂಧ ಮಂಗಳವಾರ 11 ಗಂಟೆಗಳ ಕಾಲ ವಿಚಾರಣೆ ಎದುರಿಸಿದ ರಾಹುಲ್ ಗಾಂಧಿ ಅವರಿಗೆ ಮತ್ತೆ ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ (ಇ.ಡಿ) ಹೊಸ ಸಮನ್ಸ್ ನೀಡಿಲ್ಲ. ಹೀಗಾಗಿ ರಾಹುಲ್ ಅವರ ವಿಚಾರಣೆ ಮುಕ್ತಾಯವಾದಂತಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿ ರಾಹುಲ್ ಅವರು ಒಟ್ಟಾರೆ ಐದು ದಿನಗಳಲ್ಲಿ 54 ಗಂಟೆಗಳ ವಿಚಾರಣೆ ಎದುರಿಸಿದ್ದಾರೆ.

'ಕ್ಯಾನ್ಸರ್: ಆರಂಭಿಕ ಚಿಕಿತ್ಸೆಯಿಂದ ರೋಗ ವಾಸಿ'

ಬೆಂಗಳೂರು: 'ಶ್ವಾಸಕೋಶದ ಕ್ಯಾನ್ಸರ್ ಅನ್ನು ಮುಂಚಿತವಾಗಿ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ಜೀವಕ್ಕೆ ಅಪಾಯ ತಡೆಯಲು ಸಾಧ್ಯ' ಎಂದು ಆಸ್ಟರ್ ಆಸ್ಪತ್ರೆಯ ಶ್ವಾಸಕೋಶ ತಜ್ಞ ಡಾ. ಸುನೀಲ್ ಕುಮಾರ್ ಅವರು ತಿಳಿಸಿದರು.

ಶ್ವಾಸಕೋಶ ಕ್ಯಾನ್ಸರ್ ಪತ್ತೆ ಸಂಬಂಧ ಆಸ್ಪತ್ರೆಯು ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಭಾಗವಹಿಸಿ, 'ಶೇ 60ರಿಂದ 70 ರಷ್ಟು ಕ್ಯಾನ್ಸರ್ ಪ್ರಕರಣಗಳಲ್ಲಿ ರೋಗವು ಮೂರು ಅಥವಾ ನಾಲ್ಕನೇ ಹಂತದಲ್ಲಿ ಇರಲಿದೆ. ವಿವಿಧ ಕಾಯಿಲೆಗಳಿಂದ ವರದಿಯಾಗುತ್ತಿರುವ ಮರಣ ಪ್ರಕರಣಗಳಲ್ಲಿ ಶೇ 25ರಷ್ಟು ಮಂದಿ ಶ್ವಾಸಕೋಶ ಸಂಬಂಧಿ ಕ್ಯಾನ್ಸರ್‌ನಿಂದ ಮೃತಪಡುತ್ತಿದ್ದಾರೆ. ಪ್ರಾರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ಉತ್ತಮ ಫಲಿತಾಂಶ ನಿರೀಕ್ಷಿಸಲು ಸಾಧ್ಯ' ಎಂದರು.

ಆಸ್ಪತ್ರೆಯ ವೈದ್ಯ ಡಾ. ಶ್ರೀವತ್ಸ ಲೋಕೇಶ್ವರನ್, 'ಸಮಯಕ್ಕೆ ಸರಿಯಾಗಿ ರೋಗ ನಿರ್ಣಯ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ಕಾಯಿಲೆ ವಾಸಿಯಾಗುತ್ತದೆ' ಎಂದರು.

ಕಸಾಪ: ನ್ಯಾ.ಬಿ.ಎಸ್. ಪಾಟೀಲಗೆ ಸದಸ್ಯತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಆಜೀವ ಸದಸ್ಯತ್ವ ಪಡೆದುಕೊಂಡಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಸದಸ್ಯತ್ವ ಪ್ರತಿಯನ್ನು ಪಾಟೀಲ ಅವರಿಗೆ ಹಸ್ತಾಂತರಿಸಿ, 'ಪರಿಷತ್ತನ್ನು ಜನಸಾಮಾನ್ಯರ ಪರಿಷತ್ತನ್ನಾಗಿ ರೂಪಿಸುವ ಉದ್ದೇಶದಿಂದ 'ಮನೆ ಮನೆಗೆ ಕನ್ನಡ ಸಾಹಿತ್ಯ ಪರಿಷತ್ತು' ಅಭಿಯಾನ ಪ್ರಾರಂಭಿಸಲಾಗಿದೆ. ಇದರ ಭಾಗವಾಗಿ ರಾಜ್ಯದಾದ್ಯಂತ ಜನಸಾಮಾನ್ಯರು, ಗಣ್ಯರು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನ ಮಾಡಿದ ಮಹನೀಯರುಗಳ ಮನೆ ಹಾಗೂ ಕಚೇರಿಗೆ ಭೇಟಿ ನೀಡಲಾಗುತ್ತಿದೆ' ಎಂದರು.

ನ್ಯಾ.ಬಿ.ಎಸ್ ಪಾಟೀಲ ಅವರಿಗೆ ಮಹೇಶ ಜೋಶಿ ಅವರು ಸದಸ್ಯತ್ವ ಪ್ರತಿ ಹಸ್ತಾಂತರಿಸಿದರು.ಪರಿಷ್ತಿನ ಕೋಶಾಧ್ಯಕ್ಷ ಬಿ.ಎಂ. ಪಟೇಲ್‌ಪಾಂಡು ಇದ್ದರು

'ಲೋಕಾಯುಕ್ತದಲ್ಲಿರುವ ಎಲ್ಲ ಸಿಬ್ಬಂದಿ ಪರಿಷತ್ತಿನ ಸದಸ್ಯತ್ವ ಪಡೆದುಕೊಳ್ಳಬೇಕು' ಎಂದು ಆಶಯ ವ್ಯಕ್ತಪಡಿಸಿದರು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಬಿ.ಎಸ್. ಪಾಟೀಲ, 'ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಅಸ್ಮಿತೆಯ ಪ್ರತೀಕವಾಗಿದೆ. ಇದು ಜನಸಾಮಾನ್ಯರ ಪರಿಷತ್ತಾಗುವ ವಿಶ್ವಾಸವಿದೆ' ಎಂದು ಹೇಳಿದರು.

'ಎಂಜಿನಿಯರಿಂಗ್: ವಿಪುಲ ಅವಕಾಶ'

ಬೆಂಗಳೂರು: 'ಎಂಜಿನಿಯರಿಂಗ್ ಪದವೀಧರರಿಗೆ ದೇಶದಾದ್ಯಂತ ವಿಪುಲ ಉದ್ಯೋಗಾವಕಾಶವಿದೆ' ಎಂದು ಅಮೃತ ವಿಶ್ವ ವಿದ್ಯಾಪೀಠದ ದಾಖಲಾತಿ ನಿರ್ದೇಶಕ ಮಹೇಶ್ವರ ಚೈತನ್ಯ ತಿಳಿಸಿದರು.

ಅಮೃತ ಎಂಜಿನಿಯರಿಂಗ್ ಕಾಲೇಜು ಇತ್ತೀಚೆಗೆ ಹಮ್ಮಿಕೊಂಡ 'ಕ್ಯಾಂಪಸ್ ಮೀಟ್'ನಲ್ಲಿ ಭಾಗವಹಿಸಿ, ಮಾತನಾಡಿದರು. 'ಎಂಜಿನಿಯರಿಂಗ್‌ನ ಎಲ್ಲ ವಿಭಾಗಗಳಲ್ಲೂ ಉದ್ಯೋಗ ಸೃಷ್ಟಿಯಾಗುತ್ತಿದೆ' ಎಂದರು. ಎಂಜಿನಿಯರಿಂಗ್ ಪ್ರವೇಶಕ್ಕೆ ಹಾಜರಾದ ಅಭ್ಯರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಶ್ರೀರಾಮ್ ದೇವನಾಥನ್ ಉಪನ್ಯಾಸ ನೀಡಿದರು. ಎಂಜಿನಿಯರಿಂಗ್‌ನ ವಿವಿಧ ವಿಭಾಗಗಳ ವಿದ್ಯಾರ್ಥಿಗಳ ಪ್ರಾಜೆಕ್ಟ್‌ಗಳನ್ನು ಪ್ರಾತ್ಯಕ್ಷಿಕೆಗೆ ಇಡಲಾಗಿತ್ತು.

ಮಹೇಶ್ವರ ಚೈತನ್ಯ

ಬೈಕ್‌ಗೆ ಲಾರಿ ಡಿಕ್ಕಿ: ಸವಾರ ಸಾವು

ಬೆಂಗಳೂರು: ಪೀಣ್ಯ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಲಾರಿಯೊಂದು ಬೈಕ್‌ಗೆ ಡಿಕ್ಕಿ ಹೊಡೆದಿದ್ದು, ಸವಾರ ಶಿಜು (48) ಎಂಬುವರು ಮೃತಪಟ್ಟಿದ್ದಾರೆ.

'ಎನ್‌ಟಿಟಿಎಫ್ 14ನೇ ಅಡ್ಡರಸ್ತೆಯಲ್ಲಿ ಸೋಮವಾರ ರಾತ್ರಿ ಅಪಘಾತ ಸಂಭವಿಸಿದೆ. ಬೈಕ್‌ನ ಹಿಂಬದಿ ಸವಾರ ಪ್ರಶಾಂತ್ ಅವರಿಗೂ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೇರಳದ ಶಿಜು ಜಾಲಹಳ್ಳಿಯಲ್ಲಿ ವಾಸವಿದ್ದರು. ಕೆಲಸ ಮುಗಿಸಿ ಸಹೋದ್ಯೋಗಿ ಜೊತೆ ಮನೆಗೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮಾತಿನಿಂದಲೂ ಹರಡುತ್ತೆ ವೈರಾಣುಗಳು

ಸೋಂಕಿನ ಕುರಿತು ಜಂಟಿ ಅಧ್ಯಯನ • ಫ್ಲೋ ಜರ್ನಲ್‌ನಲ್ಲಿ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ತಾರಕಕ್ಕೇರಿದ ಸಂದರ್ಭದಲ್ಲಿ ಕೆಮ್ಮುವುದು ಮತ್ತು ಸೀನುವುದರಿಂದ ಸಿಡಿಯುವ ಹನಿಗಳಿಂದಾಗಿ ವೈರಾಣುಗಳು ಹರಡುತ್ತವೆ ಎಂದು ತಜ್ಞರು ಬಲವಾಗಿ ನಂಬಿದ್ದರು. ಆದರೆ, ವಿಜ್ಞಾನಿಗಳು ಇತ್ತೀಚೆಗೆ ನಡೆಸಿದ ಅಧ್ಯಯನದ ಪ್ರಕಾರ, ವ್ಯಕ್ತಿಗಳು ಪರಸ್ಪರ ಮಾತನಾಡುವುದರಿಂದಲೂ ವೈರಾಣುಗಳು ಹರಡುತ್ತವೆ.

ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್) ಏರೋಸ್ಪೇಸ್ ಎಂಜಿನಿಯರಿಂಗ್ ವಿಭಾಗ, ಸ್ಟಾಕ್‌ಹೋಮ್‌ನ ನಾರ್ಡಿಕ್ ಇನ್‌ಸ್ಟಿಟ್ಯೂಟ್ ಆಫ್ ಥಿಯರಿಟಿಕಲ್ ಫಿಸಿಕ್ಸ್ (ಎನ್‌ಒಆರ್‌ಡಿಐಟಿಎ) ಮತ್ತು ಬೆಂಗಳೂರಿನ ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಥಿಯರಿಟಿಕಲ್ ಸೈನ್ಸಸ್ (ಐಸಿಟಿಎಸ್) ಈ ಕುರಿತು ಜಂಟಿ ಅಧ್ಯಯನ ನಡೆಸಿವೆ. ಇದರ ಫಲಿತಾಂಶ 'ಫ್ಲೋ' ಜರ್ನಲ್‌ನಲ್ಲಿ ಪ್ರಕಟವಾಗಿದೆ.

ವ್ಯಕ್ತಿಗಳು ಪರಸ್ಪರ ಮಾತನಾಡುವಾಗಲೂ ಉಗುಳಿನ ಮೂಲಕ ಕಣ್ಣಿಗೆ ಕಾಣದಷ್ಟು ಸೂಕ್ಷ್ಮರೂಪದ ಹನಿಗಳು ಚಿಮ್ಮಿ ವಾತಾವರಣದಲ್ಲಿ ಸೇರುತ್ತವೆ. ಮೋಡ ದೋಪಾದಿಯಲ್ಲಿ ದಟ್ಟಣೆಯಿಂದ ಕೂಡಿರುವ ಈ ಸೂಕ್ಷ್ಮ ಹನಿಗಳು ವೈರಾಣುಗಳನ್ನು ಒಯ್ಯಬಲ್ಲವೇ ಎಂಬ ಕುತೂಹಲ ವಿಜ್ಞಾನಿಗಳನ್ನು ಕಾಡಿತ್ತು. ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಮಾತನಾಡುವಾಗ ಸಿಡಿಯುವ ಹನಿಗಳ ಚಲನವಲನದ ಬಗ್ಗೆ ಮೂರೂ ಸಂಸ್ಥೆಗಳು ಸೇರಿ ಕಂಪ್ಯೂಟರ್ ಸಿಮ್ಯುಲೇಷನ್ ಮೂಲಕ ವಿಶ್ಲೇಷಣೆ ನಡೆಸಿವೆ.

ಭಾರತೀಯ ವಿಜ್ಞಾನ ಸಂಸ್ಥೆಯ ಏರೋಸ್ಪೇಸ್ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರೊಫೆಸರ್ ಸೌರಭ್ ದಿವಾನ್ ಅವರು ಅಧ್ಯಯನದ ಕುರಿತು ಪ್ರತಿಕ್ರಿಯಿಸಿ, ಮಾತನಾಡುವುದು ಅತ್ಯಂತ ಸಂಕೀರ್ಣ ಚಟುವಟಿಕೆ. ವ್ಯಕ್ತಿಗಳು ಮಾತನಾಡುವಾಗ ತಾವು ವೈರಾಣುವನ್ನು ಹರಡಿಸುತ್ತಿದ್ದೇವೆ ಎಂಬ ಅರಿವೂ ಇರುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕೋವಿಡ್ ಸಾಂಕ್ರಾಮಿಕದ ಆರಂಭದಲ್ಲಿ ತಜ್ಞರು ಸೀನುವುದು ಮತ್ತು ಕೆಮ್ಮುವುದರಿಂದಲೇ ವೈರಾಣು ಹರಡುತ್ತದೆ ಎಂದು ನಂಬಿದ್ದರು. ಬಳಿಕ ರೋಗ ಲಕ್ಷಣವಿಲ್ಲದೇ ವೈರಾಣು ಹರಡುವಿಕೆಯಿಂದಲೂ ಕೋವಿಡ್ ಹರಡುತ್ತದೆ ಎಂಬುದು ಸ್ಪಷ್ಟವಾಯಿತು. ಆದರೆ ಮಾತನಾಡುವಾಗ ಹೊಮ್ಮುವ ಉಗುಳಿನ ಹನಿಗಳಿಂದಲೂ ವೈರಾಣು ಹರಡುತ್ತವೆ ಎಂಬ ಬಗ್ಗೆ ವಿಶ್ವದಲ್ಲಿ ನಡೆದಿರುವ ಅಧ್ಯಯನಗಳು ಅತ್ಯಂತ ಕಡಿಮೆ ಎಂದು ಅವರು ಹೇಳಿದ್ದಾರೆ.

ದೃಶ್ಯದಿಂದ ಸಾಬೀತಾದ ಅಧ್ಯಯನ

ಮಾಸ್ಕ್ ಇಲ್ಲದೇ ಎರಡು, ನಾಲ್ಕು ಮತ್ತು ಆರು ಅಡಿಗಳ ಅಂತರದಲ್ಲಿ ನಿಂತು ಪರಸ್ಪರ ಇಬ್ಬರು ವ್ಯಕ್ತಿಗಳು ಸುಮಾರು ಒಂದು ನಿಮಿಷ ಮಾತನಾಡುವ ದೃಶ್ಯವನ್ನು ಸೆರೆ ಹಿಡಿಯಲಾಯಿತು. ಮಾತಿನ ಸಂದರ್ಭದಲ್ಲಿ ಇಬ್ಬರೂ ವ್ಯಕ್ತಿಗಳಿಂದ ಚಿಮ್ಮುವ ಹನಿಗಳ ಹರಡುವಿಕೆಯ ಪ್ರಮಾಣವನ್ನು ಅಂದಾಜು ಮಾಡಲಾಯಿತು. ಇದರಿಂದ ಗೊತ್ತಾದ ಅಂಶವೆಂದರೆ, ಇಂತಹ ಮಾತುಕತೆಯಿಂದ ಸೋಂಕಿಗೆ ಒಳಗಾಗುವ ಸಾಧ್ಯತೆ ಅತ್ಯಧಿಕ. ಇಬ್ಬರು ವ್ಯಕ್ತಿಗಳ ಬಾಯಿಯಿಂದ ಎಷ್ಟು ಪ್ರಮಾಣದಲ್ಲಿ ಎಂಜಲಿನ ಹನಿಗಳು ಚಿಮ್ಮುತ್ತವೆ ಎಂಬುದರ ಆಧಾರದಲ್ಲಿ ವೈರಾಣು ಹರಡುವಿಕೆಯೂ ನಿರ್ಧಾರವಾಗುತ್ತದೆ.

ಮುಖ್ಯಾಂಶಗಳು

- ಕಂಪ್ಯೂಟರ್ ಸಿಮ್ಯುಲೇಷನ್ ಮೂಲಕ ವಿಶ್ಲೇಷಣೆ
- ಐಐಎಸ್, ಎನ್‌ಒಆರ್‌ಡಿಐಟಿಎ, ಐಸಿಟಿಎಸ್ ಸಹಭಾಗಿತ್ವ

ಬಿಎಸ್‌ವೈ ಯುರೋಪ್ ಪ್ರವಾಸ

ಬೆಂಗಳೂರು: ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಅವರು ತಮ್ಮ ಕುಟುಂಬದ ಸದಸ್ಯರ ಜತೆ ಯುರೋಪ್ ಪ್ರವಾಸಕ್ಕೆ ತೆರಳಿದ್ದಾರೆ.

ಮೊದಲಿಗೆ ಬ್ರಿಟನ್ ಭೇಟಿ ನೀಡಲಿರುವ ಅವರು, ಆ ಬಳಿಕ ಯುರೋಪಿನ ಇತರ ದೇಶಗಳಿಗೂ ಹೋಗಲಿದ್ದಾರೆ. ಬಿ.ವೈ.ವಿಜಯೇಂದ್ರ ಮತ್ತು ಕುಟುಂಬದ ಇತರ ಸದಸ್ಯರೂ ಬಿ.ಎಸ್.ವೈ ಜತೆಗಿದ್ದಾರೆ. ರಾಘವೇಂದ್ರ ಅವರು ಪ್ರವಾಸಕ್ಕೆ ಹೋಗಿಲ್ಲ. ಒಟ್ಟು 10 ದಿನಗಳ ಪ್ರವಾಸ ಇದಾಗಿದೆ ಎಂದು ಮೂಲಗಳು ಹೇಳಿವೆ.

ಪಿಯು: ಉತ್ತಮ ಅಂಕ

ನಿಧಿ

ಬೆಂಗಳೂರು: ಮಲ್ಲೇಶ್ವರದ ಎಂಇಎಸ್ ಕಿಶೋರ ಕೇಂದ್ರ ಪಿಯು ಕಾಲೇಜಿನ ವಿದ್ಯಾರ್ಥಿನಿ ನಿಧಿ ಎಸ್. ನಾಡಿಗ ಅವರು ದ್ವಿತೀಯ ಪಿಯುನ ವಿಜ್ಞಾನ ವಿಭಾಗದಲ್ಲಿ ಶೇ 97 ಅಂಕ ಗಳಿಸಿದ್ದಾರೆ.

ಫ್ಲೆಕ್ಸ್: ಶೋಕಾಸ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಯಮ ಉಲ್ಲಂಘಿಸಿ ರಸ್ತೆಗಳಲ್ಲಿ ಫ್ಲೆಕ್ಸ್ ಹಾಕಲು ಅವಕಾಶ ನೀಡಿದ್ದರೆ ಅಂತಹ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ನೀಡಲಾಗುವುದು' ಎಂದು ಬಿಬಿಎಂಪಿ ವಿಶೇಷ ಆಯುಕ್ತ(ಯೋಜನೆ) ಎನ್.ಬಿ. ರವೀಂದ್ರ ಹೇಳಿದರು.

'ಫ್ಲೆಕ್ಸ್ ಹಾಕಲು ಅನುಮತಿ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಎಲ್ಲೆಲ್ಲಿ ಈ ರೀತಿ ಫ್ಲೆಕ್ಸ್ ಹಾಕಲಾಗಿದೆ ಅವುಗಳನ್ನು ಗುರುತಿಸಿ ಜಂಟಿ ಆಯುಕ್ತರಿಗೆ ನೋಟಿಸ್ ನೀಡಲಾಗುತ್ತದೆ' ಎಂದರು.

ಮೂಲಸೌಕರ್ಯ: ಅರಸು ಟ್ರಕ್ ಟರ್ಮಿನಲ್ ವ್ಯಾಪ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆದ್ದಾರಿಗಳ ಅಕ್ಕಪಕ್ಕದಲ್ಲಿ ಪ್ರಯಾಣಿಕರಿಗೆ ಮೂಲಸೌಕರ್ಯ ಒದಗಿಸುವ ಯೋಜನೆಯ ಅನುಷ್ಠಾನವನ್ನು ಸಾರಿಗೆ ಇಲಾಖೆ ಅಧೀನದ ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್ ಲಿಮಿಟೆಡ್ ಸಂಸ್ಥೆ ವತಿಯಿಂದ ಅನುಷ್ಠಾನಗೊಳಿಸಲು ಜೂನ್ 17ರಂದು ರಾಜ್ಯ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆ.

ಈ ಯೋಜನೆಯಡಿ, ಹೆದ್ದಾರಿಗಳ ಅಕ್ಕಪಕ್ಕದಲ್ಲಿ ಪ್ರಯಾಣಿಕರಿಗೆ ಶೌಚಾಲಯ, ಸ್ನಾನಗೃಹ, ವಿಶ್ರಾಂತಿ ಕೊಠಡಿ, ವಿದ್ಯುತ್ ಚಾರ್ಜಿಂಗ್ ಸ್ಟೇಷನ್, ಪೆಟ್ರೋಲ್ ಬಂಕ್, ಆರೋಗ್ಯ ಕೇಂದ್ರ, ಚಿಕ್ಕ ಗ್ಯಾರೇಜ್, ಕ್ಯಾಂಟೀನ್ ಮತ್ತಿತರ ಸೌಲಭ್ಯಗಳ ಮೂಲಸೌಕರ್ಯ ಕೇಂದ್ರವನ್ನು ನಿರ್ಮಿಸಲಾಗುತ್ತಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಈ ಯೋಜನೆ ಜಾರಿಗೊಳಿಸುವುದಾಗಿ ಮುಖ್ಯಮಂತ್ರಿ ಅವರು ಬಸವರಾಜ ಬೊಮ್ಮಾಯಿ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಪ್ರಕಟಿಸಿದ್ದರು.

ರಾಜ್ಯದ ಹೆದ್ದಾರಿಗಳು ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಬರುವುದರಿಂದ, ಅದೇ ಇಲಾಖೆ ಮೂಲಕ ಈ ಯೋಜನೆತನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸೂಚನೆಯಂತೆ ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ಮೂಲಕ ಯೋಜನೆ ಅನುಷ್ಠಾನಗೊಳಿಸಲು ಈಗ ಆದೇಶ ಹೊರಡಿಸಲಾಗಿದೆ.

ದ್ರೌಪದಿ ಮುರ್ಮು ಎನ್‌ಡಿಎ ಅಭ್ಯರ್ಥಿ

ಒಂದನೇ ಪುಟದಿಂದ

ಬುಡಕಟ್ಟು ಸಮುದಾಯದ ಮುರ್ಮು ಅವರು ಒಡಿಶಾದವರು. ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರನ್ನೇ ರಾಷ್ಟ್ರಪತಿ ಅಭ್ಯರ್ಥಿ ಮಾಡಲಾಗುವುದು ಎಂಬ ಸುದ್ದಿ ಈ ಹಿಂದೆ ಹರಿದಾಡಿತ್ತು. ಮುರ್ಮು ಅವರ ಆಯ್ಕೆಯಿಂದಾಗಿ ಎಲ್ಲ ಊಹಾಪೋಹಗಳಿಗೆ ತೆರೆ ಬಿದ್ದಿದೆ.

ರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎಯೇತರ ಪಕ್ಷಗಳ ಸಹಮತದ ಅಭ್ಯರ್ಥಿಯಾಗಿ ಕೇಂದ್ರದ ಮಾಜಿ ಸಚಿವ ಸಿನ್ಹಾ ಅವರನ್ನು ಮಂಗಳವಾರ ಆಯ್ಕೆ ಮಾಡಲಾಗಿದೆ. ಜುಲೈ 18ರಂದು ರಾಷ್ಟ್ರಪತಿ ಚುನಾವಣೆ ನಡೆಯಲಿದೆ.

ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಅವರ ಅಧ್ಯಕ್ಷತೆಯಲ್ಲಿ ಸಂಸತ್ ಭವನದಲ್ಲಿ ನಡೆದ ಸಭೆಯಲ್ಲಿ ಸಿನ್ಹಾ ಅವರನ್ನು ಆಯ್ಕೆ ಮಾಡಲು ನಿರ್ಧರಿಸಲಾಯಿತು. 15 ಪಕ್ಷಗಳ ಮುಖಂಡರು ಸಭೆಯಲ್ಲಿ ಹಾಜರಿದ್ದರು. ಸಿನ್ಹಾ ಅವರು ಪಕ್ಷಾತೀತ ಅಭ್ಯರ್ಥಿಯಾಗಬೇಕು ಎಂಬ ಕಾರಣಕ್ಕೆ ಅವರು ತೃಣಮೂಲ ಕಾಂಗ್ರೆಸ್ ತೊರೆಯಬೇಕು ಎಂದು ಕಾಂಗ್ರೆಸ್, ಸಿಪಿಎಂ, ಸಿಪಿಐ ಒತ್ತಾಯಿಸಿದವು. ಹೀಗಾಗಿ, ಸಿನ್ಹಾ ಅವರು ತೃಣಮೂಲ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದಾರೆ.

ಶರದ್ ಪವಾರ್, ನ್ಯಾಷನಲ್ ಕಾನ್ಫರೆನ್ಸ್‌ನ ಫಾರೂಕ್ ಅಬ್ದುಲ್ಲಾ ಮತ್ತು ಮಹಾತ್ಮ ಗಾಂಧಿ ಅವರ ಮೊಮ್ಮಗ ಗೋಪಾಲಕೃಷ್ಣ ಗಾಂಧಿ ಅವರು ಅಭ್ಯರ್ಥಿಯಾಗಲು ಒಪ್ಪದ ಕಾರಣ ಸಿನ್ಹಾ ಹೆಸರು ಮುನ್ನೆಲೆಗೆ ಬಂದಿತ್ತು.

ದೀರ್ಘ ಕಾಲ ಬಿಜೆಪಿಯಲ್ಲಿದ್ದು, ಕಳೆದ ವರ್ಷ ತೃಣಮೂಲ ಕಾಂಗ್ರೆಸ್ ಸೇರಿದ್ದ ಸಿನ್ಹಾ ಅವರ ಹೆಸರನ್ನು ಎರಡು ಸುತ್ತಿನ ಸಮಾಲೋಚನೆ ಬಳಿಕ ಅಂತಿಮಗೊಳಿಸಲಾಯಿತು. ಆಡಳಿತಾರೂಢ ಎನ್‌ಡಿಎ ಬಹುಮತದ ಸನಿಹದಲ್ಲಿದೆ. ಹಾಗಾಗಿ, ವಿರೋಧ ಪಕ್ಷಗಳ ಸಹಮತದ ಅಭ್ಯರ್ಥಿಯ ಗೆಲುವು ಸುಲಭವಲ್ಲ.

ಬುಡಕಟ್ಟು ಸಮುದಾಯದ ಗಟ್ಟಿ ಧ್ವನಿ

ಒಂದನೇ ಪುಟದಿಂದ

'ದ್ರೌಪದಿ ಮುರ್ಮು ಅವರ ಜೀವನದಿಂದ ಲಕ್ಷಾಂತರ ಜನರು, ವಿಶೇಷವಾಗಿ ಬಡತನ ಮತ್ತು ಕಷ್ಟಗಳನ್ನು ಎದುರಿಸಿದವರು ಹೆಚ್ಚಿನ ಶಕ್ತಿ ಪಡೆಯುತ್ತಾರೆ. ಮುರ್ಮು ಅವರು ಸಮಾಜ ಸೇವೆಗೆ ತನ್ನ ಜೀವನವನ್ನೇ ಮುಡಿಪಾಗಿಟ್ಟಿದ್ದಾರೆ. ಬಡವರು, ದೀನದಲಿತರನ್ನು ಸಬಲೀಕರಿಸಲು ದುಡಿದಿದ್ದಾರೆ. ರಾಜ್ಯಪಾಲರಾಗಿ ಸೇವೆ ಸಲ್ಲಿಸಿರುವ ಅವರಿಗೆ ಆಡಳಿತದ ಅನುಭವವೂ ಇದೆ' ಎಂದು ಪ್ರಧಾನಿ ಮೋದಿ ಅವರು ಮೆಚ್ಚುಗೆ ವ್ಯಕ್ತಪಡಿಸಿ ಟ್ವೀಟ್ ಮಾಡಿದ್ದಾರೆ.

2017ರ ರಾಷ್ಟ್ರಪತಿ ಚುನಾವಣೆ ಸಂದರ್ಭದಲ್ಲಿಯೂ ಮುರ್ಮು ಅವರ ಹೆಸರು ಕೇಳಿಬಂದಿತ್ತು. ಒಡಿಶಾದ ಮಯೂರ್ಭಂಜ್ ಜಿಲ್ಲೆಯವರಾದ ಅವರು ಬಿ.ಎ ಪದವೀಧರೆ. ಶಿಕ್ಷಕಿಯಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದವರು. ಒಡಿಶಾದ ರಾಯರಂಗ್‌ಪುರ ಜಿಲ್ಲೆಯಲ್ಲಿ 1997ರಲ್ಲಿ ಕೌನ್ಸಿಲರ್ ಆಗಿ ಆಯ್ಕೆಯಾಗುವ ಮೂಲಕ ಅವರು ರಾಜಕೀಯ ಪಯಣ ಆರಂಭವಾಯಿತು.

ಅವರು 2000ರಲ್ಲಿ ರಾಯರಂಗ್‌ಪುರದಲ್ಲಿ ಬಿಜೆಪಿ ಶಾಸಕಿಯಾಗಿ ಆಯ್ಕೆಯಾದರು. ಬಳಿಕ 2009ರಲ್ಲಿ ಮತ್ತೊಮ್ಮೆ ಚುನಾಯಿತರಾದರು. 2000ರಿಂದ 2002ರ ಅವಧಿಯಲ್ಲಿ ಬಿಜೆಪಿ ಮತ್ತು ಬಿಜೆಡಿ ಸಮ್ಮಿಶ್ರ ಸರ್ಕಾರದಲ್ಲಿ ವಾಣಿಜ್ಯ ಮತ್ತು ಸಾರಿಗೆ ಸಚಿವರಾಗಿ, 2002ರಿಂದ 2004 ಅವಧಿಯಲ್ಲಿ ಮೀನುಗಾರಿಕೆ ಮತ್ತು ಪ್ರಾಣಿ ಸಂಪನ್ಮೂಲ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಒಡಿಶಾ ಬಿಜೆಪಿಯ ಎಸ್‌ಟಿ ಮೋರ್ಚಾ ಉಪಾಧ್ಯಕ್ಷೆಯಾಗಿದ್ದ ಅವರು, ಹಲವು ಬಾರಿ ಮಯೂರ್ಭಂಜ್ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಮುರ್ಮು ಅವರ ಪತಿ ಮತ್ತು ಪುತ್ರರು ನಿಧನರಾಗಿದ್ದಾರೆ. ಅವರಿಗೆ ಒಬ್ಬ ಮಗಳಿದ್ದಾರೆ.

ಝೂಮ್ ಕಾರ್ ರೆಂಟಲ್ ಪರವಾನಗಿ ರದ್ದುಪಡಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಝೂಮ್ ಕಾರ್ ರೆಂಟಲ್ ಪರವಾನಗಿ ರದ್ದುಪಡಿಸಬೇಕು ಮತ್ತು ಅಗ್ರಿಗೇಟರ್ ಆ್ಯಪ್‌ಗಳಿಗೆ ಮೀಟರ್ ಅಳವಡಿಸಲು ಕ್ರಮ ಕೈಗೊಳ್ಳಬೇಕು' ಎಂದು ಕೋರಿ ರಾಜ್ಯ ಸಾರಿಗೆ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ಎನ್. ಪಿ.ಅಮೃತೇಶ್ ಮತ್ತು ಭಾರತ ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್ ಗ್ರೂಪ್ ರಾಜ್ಯ ಘಟಕದ ಸಂಸ್ಥಾಪಕ ಅಧ್ಯಕ್ಷ ಜಯಣ್ಣ ಅವರು, 'ಸರ್ಕಾರ ನಿಗದಿಪಡಿಸಿದ ದರಗಳು ಏರಿಳಿತವಾಗದಂತೆ ಬಿಗಿಯಾದ ಕಾಯ್ದೆ ತರಬೇಕು, ಅನಧಿಕೃತವಾಗಿ ತಲೆ ಎತ್ತಿರುವ ಆ್ಯಪ್‌ಗಳನ್ನು ರದ್ದುಪಡಿಸಬೇಕು ಮತ್ತು 2020ರ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿ ಸ್ಕೀಮ್ ಹಿಂತೆಗೆದುಕೊಳ್ಳಲು ಕ್ರಮ ಕೈಗೊಳ್ಳಬೇಕು' ಎಂದು ಸಾರಿಗೆ ಇಲಾಖೆಗೆ ಆಗ್ರಹಿಸಿದ್ದಾರೆ.

'ಝೂಮ್ ಕಾರ್ ರೆಂಟಲ್ ಎನ್ನುವ ಕಂಪನಿಗೆ ಸಾರಿಗೆ ಇಲಾಖೆ ನೀಡಿರುವ ಸೆಲ್ಫ್ ಡ್ರೈವ್ ಲೈಸೆನ್ಸ್ ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಸಾರ್ವಜನಿಕರಿಂದ ವೈಟ್ ಬೋರ್ಡ್ ಕಾರುಗಳನ್ನು ತೆಗೆದುಕೊಂಡು, ಬಾಡಿಗೆಗೆ ನೀಡಲಾಗುತ್ತಿದೆ. ಇದನ್ನು ಸಾಕ್ಷಿ ಸಮೇತ ಹಲವು ಬಾರಿ ಆಯುಕ್ತರ ಗಮನಕ್ಕೆ ತಂದಾಗ್ಯೂ ಕಂಪನಿಯ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ' ಎಂದು ಆರೋಪಿಸಲಾಗಿದೆ.

'ಝೂಮ್ ಕಾರ್ ರೆಂಟಲ್ ಕಂಪನಿ ವಾಹನಗಳು ಹಾಗೂ ರ್‍ಯಾಪಿಡೊ ಬೈಕ್ ಟ್ಯಾಕ್ಸಿಗಳು, ವೈಟ್ ಬೋರ್ಡ್ ಹಾಕಿಕೊಂಡು ಪ್ರಯಾಣಿಕರಿಗೆ ಬಾಡಿಗೆ ನೀಡುತ್ತಿರುವುದು ಕಾನೂನುಬಾಹಿರ. ಇವರು ಸರ್ಕಾರಕ್ಕೆ ಯಾವುದೇ ರೀತಿಯಲ್ಲೂ ತೆರಿಗೆ ಪಾವತಿ ಮಾಡುವುದಿಲ್ಲ, ಅಂತೆಯೇ ಪರವಾನಗಿಯನ್ನೂ ಪಡೆದಿರುವುದಿಲ್ಲ ಹಾಗೂ ಅಪಘಾತದಲ್ಲಿ ಹಿಂಬದಿಯ ಸವಾರ ಮೃತಪಟ್ಟರೆ ಅವರಿಗೆ ಯಾವುದೇ ರೀತಿಯ ಪರಿಹಾರ ಸಿಗುವುದಿಲ್ಲ' ಎಂದು ಮನವಿಯಲ್ಲಿ ದೂರಲಾಗಿದೆ.

'ಬೈಕ್ ಟ್ಯಾಕ್ಸಿಗಳಿಂದ ಆಟೊ ರಿಕ್ಷಾ ಹಾಗೂ ಕ್ಯಾಬ್ ಚಾಲಕರಿಗೆ ತುಂಬಲಾರದ ನಷ್ಟವಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಆನ್‌ಲೈನ್‌ನಲ್ಲಿ ವೆಬ್‌ಸೈಟ್ ರಚಿಸಿ ಮನಬಂದಂತೆ ದರ ನಿಗದಿಪಡಿಸುತ್ತಾ ಚಾಲಕರಿಗೆ ಮೋಸ ಮಾಡಲಾಗುತ್ತಿದೆ. ಆದ್ದರಿಂದ, ಸರ್ಕಾರ ನಿಗದಿಪಡಿಸಿದ ದರವನ್ನೇ ಎಲ್ಲರೂ ಪಾಲಿಸುವಂತೆ ಕ್ರಮ ಕೈಗೊಳ್ಳಬೇಕು' ಎಂದು ಮನವಿಯಲ್ಲಿ ಎನ್. ಪಿ.ಅಮೃತೇಶ್ ಮತ್ತು ಜಯಣ್ಣ ವಿವರಿಸಿದ್ದಾರೆ.

ಅಂತರರಾಷ್ಟ್ರೀಯ ಯೋಗ ದಿನಾಚರಣೆ, ಗಮನ ಸೆಳೆದ ಯೋಗಪಟುಗಳು

ಸಿಲಿಕಾನ್ ಸಿಟಿಯಲ್ಲಿ ಯೋಗ ವೈಭವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿಲಿಕಾನ್ ಸಿಟಿ' ಬೆಂಗಳೂರಿನಲ್ಲಿ ಮಂಗಳವಾರ ಎಲ್ಲೆಡೆ ಯೋಗದ ವೈಭವ ಕಂಡುಬಂತು. ಬೆಳ್ಳಂ ಬೆಳಿಗ್ಗೆಯೇ ಯೋಗಪಟುಗಳು ಯೋಗ ಮ್ಯಾಟ್ ಹಿಡಿದು ಮೈದಾನದತ್ತ ಹೆಜ್ಜೆ ಹಾಕಿದರು.

ಆಹ್ಲಾದಕರ ವಾತಾವರಣದಲ್ಲಿ ಸಾವಿರಾರು ಯೋಗಪಟುಗಳು ಸೂರ್ಯ ನಮಸ್ಕಾರ, ಪ್ರಾಣಾಯಾಮ ಪ್ರದರ್ಶಿಸಿ ಗಮನ ಸೆಳೆದರು. ರಾಜಧಾನಿಗೆ ಯೋಗವು ಮೆರುಗು ನೀಡಿತು.

8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ನಗರದ ಯೋಗ ತರಬೇತಿ ಕೇಂದ್ರಗಳು, ಶಾಲಾ– ಕಾಲೇಜು ಹಾಗೂ ಸಂಘ– ಸಂಸ್ಥೆಗಳಲ್ಲಿ ನಡೆಯಿತು.

ಹೈಕೋರ್ಟ್ ಆವರಣದಲ್ಲಿ ನಡೆದ ದಿನಾಚರಣೆಯಲ್ಲಿ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ಕಾನೂನು ಸೇವಾ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷ ಬಿ.ವೀರಪ್ಪ ಹಾಗೂ ವಕೀಲರು ಪಾಲ್ಗೊಂಡಿದ್ದರು.

ಹೊಂಬೇಗೌಡ ನಗರ ವಾರ್ಡ್‌ನಲ್ಲಿ 2,500 ಯೋಗಪಟುಗಳಿಂದ ಯೋಗ ಪ್ರದರ್ಶನ ನಡೆಯಿತು.

ಚಿಕ್ಕಪೇಟೆ ಶಾಸಕ ಉದಯ ಗರುಡಾಚಾರ್ ಮಾತನಾಡಿ, 'ಯೋಗ ಬಲ್ಲವನಿಗೆ ರೋಗವಿಲ್ಲ ಎಂಬ ಮಾತಿದೆ. ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಪ್ರತಿ ವಾರ್ಡ್‌ನಲ್ಲೂ ಯೋಗ ಕೇಂದ್ರ ಆರಂಭಿಸಲಾಗುವುದು. ರೋಗ ಮುಕ್ತ ಸಮಾಜಕ್ಕೆ ಎಲ್ಲರೂ ಶ್ರಮಿಸೋಣ' ಎಂದರು.

ಅರಣ್ಯ ಅಭಿವೃದ್ಧಿ ನಿಗಮ ನಿರ್ದೇಶಕಿ ಭಾಗ್ಯವತಿ ಅಮರೇಶ್, 'ಪ್ರಧಾನಿ ನರೇಂದ್ರ ಮೋದಿ ಅವರು ಯೋಗಕ್ಕೆ ವಿಶ್ವ ಮಾನ್ಯತೆ ತಂದು ಕೊಟ್ಟವರು. ಹೊಂಬೇಗೌಡ ನಗರ ವಾರ್ಡ್‌ನಲ್ಲಿ ಮಹಿಳೆಯರಿಗೆ ಉಚಿತ ಯೋಗ ತರಬೇತಿ ಕೇಂದ್ರ ಆರಂಭಿಸಲಾಗುವುದು' ಎಂದರು.

ಬಾಲಗಂಗಾಧರನಾಥ ಸ್ವಾಮೀಜಿ ಕ್ರೀಡಾಂಗಣದಲ್ಲಿ ವಿ.ಸೋಮಣ್ಣ ಪ್ರತಿಷ್ಠಾನದಿಂದ ಯೋಗ ದಿನಾಚರಣೆ ನಡೆಯಿತು.

ಸಚಿವ ವಿ.ಸೋಮಣ್ಣ, ನಟಿ ಪ್ರಿಯಾಂಕಾ ಉಪೇಂದ್ರ, ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ, ಯೋಗಪಟು ಭಾಗೀರಥಿ ಕನ್ನಡತಿ ಯೋಗ ಪ್ರದರ್ಶನಕ್ಕೆ ಚಾಲನೆ ನೀಡಿದರು. ಸೋಮಣ್ಣ ಮಾತನಾಡಿ, ಸುಖ, ಶಾಂತಿ ನೆಮ್ಮದಿ ಜೀವನಕ್ಕೆ ಯೋಗ ಮುಖ್ಯ ಎಂದರು.

> **ಜಾತಿ, ಧರ್ಮ, ಭಾಷೆ ಮೀರಿ ಎಲ್ಲರನ್ನೂ ಒಗ್ಗೂಡಿಸುವ ಶಕ್ತಿ ಯೋಗಕ್ಕಿದೆ. ಪ್ರತಿನಿತ್ಯ ಯೋಗ ಅಭ್ಯಾಸ ನಡೆಸುವ ಸಂಕಲ್ಪ ಮಾಡೋಣ**
> **ಕೆ.ಗೋಪಾಲಯ್ಯ,** ಸಚಿವ

ಗೋವಿಂದರಾಜನಗರ ಮಂಡಲ ಬಿಜೆಪಿ ಅಧ್ಯಕ್ಷ ವಿಶ್ವನಾಥಗೌಡ, ಹೋರಾಟಗಾರ ಫಾಲನೇತ್ರ, ಬಿಬಿಎಂಪಿ ಮಾಜಿ ಸದಸ್ಯರಾದ ಕೆ. ಉಮೇಶ್ ಶೆಟ್ಟಿ, ಮೋಹನ್ ಕುಮಾರ್, ವಾಗೇಶ್, ದಾಸೇಗೌಡ ಹಾಜರಿದ್ದರು.

ಬೆಂಗಳೂರು ವಿ.ವಿಯ ಯೋಗ ವಿಜ್ಞಾನ ವಿಭಾಗದಲ್ಲಿ ನಡೆದ ದಿನಾಚರಣೆಯಲ್ಲಿ ಪತಂಜಲಿ ಯೋಗ ಕೇಂದ್ರದ ಪ್ರಕಾಶ್ ಯೋಗಿ ಸ್ವಾಮೀಜಿ, ಯೋಗದಿಂದ ಮಾನಸಿಕ ಮತ್ತು ದೈಹಿಕ ಒತ್ತಡ ಕಡಿಮೆ ಆಗಲಿದೆ ಎಂದರು.

ಪ್ರಭಾರ ಕುಲಪತಿ ಪ್ರೊ.ಸಿಂಥಿಯಾ ಪ್ರಭು, ಭಾರತೀಯ ಪರಂಪರೆ ವಿಶ್ವಕ್ಕೆ ಅತ್ಯುತ್ತಮ ಕಾಣಿಕೆಗಳನ್ನು ಹಲವಾರು ಆಯಾಮಗಳ ಮೂಲಕ ನೀಡಿದೆ ಎಂದರು.

'ಯೋಗ ಶಿಕ್ಷಣ ಪಠ್ಯದ ಕಡ್ಡಾಯ ಭಾಗ'

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಯೋಗ ದಿನಾಚರಣೆಯನ್ನು ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಉದ್ಘಾಟಿಸಿದರು.

'ಹಿಂದೆ ಯೋಗವನ್ನು ಆಸಕ್ತರು ಮಾತ್ರ ಕಲಿತು ಅಭ್ಯಾಸ ನಡೆಸುತ್ತಿದ್ದರು. ಹೊಸ ಶಿಕ್ಷಣ ನೀತಿಯಂತೆ ಪ್ರತಿ ವಿದ್ಯಾರ್ಥಿಯೂ ಯೋಗಾಭ್ಯಾಸ ಮಾಡುವುದು ಕಡ್ಡಾಯ. ಯೋಗದಿಂದ ಹಲವು ರೀತಿಯಲ್ಲಿ ಪ್ರಯೋಜನವಿದೆ. ಮಾನಸಿಕ ಸ್ಥಿರತೆ ಹಾಗೂ ದೈಹಿಕ ಸದೃಢತೆ ಹೆಚ್ಚಿಸಲು ಯೋಗ ನೆರವಾಗಲಿದೆ. ಯೋಗ ಶಿಕ್ಷಣವು ಪಠ್ಯಕ್ರಮದ ಕಡ್ಡಾಯ ಭಾಗವಾಗಿದೆ' ಎಂದು ಲಿಂಗರಾಜ ಹೇಳಿದರು.

ಪತಂಜಲಿ ಯೋಗಾಶ್ರಮದ ಪ್ರಕಾಶ್ ಯೋಗಿ ಗುರೂಜಿ, ಕುಲಸಚಿವ (ಮೌಲ್ಯಮಾಪನ) ಪ್ರೊ.ವಿ.ಲೋಕೇಶ್, ಜಿ.ಪಿ.ರಘು ಹಾಜರಿದ್ದರು.

ಕುಲಸಚಿವ ಡಾ.ಕೊಟ್ರೇಶ್ ಹಾಜರಿದ್ದರು.

ಯೋಗಕ್ಕೆ ಒಗ್ಗೂಡಿಸುವ ಶಕ್ತಿ: ಯೋಗದ ಮೂಲಕ ಭಾರತಕ್ಕೆ ದೊಡ್ಡ ಶಕ್ತಿಯನ್ನು ನೀಡಿರುವ ಕೀರ್ತಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಸಲ್ಲುತ್ತದೆ ಎಂದು ಸಚಿವ ಕೆ.ಗೋಪಾಲಯ್ಯ ಬಣ್ಣಿಸಿದರು.

ಮಹಾಲಕ್ಷ್ಮಿ ಎಜುಕೇಶನ್ ಟ್ರಸ್ಟ್, ನೆಮ್ಮದಿ ಯೋಗ ಶಾಲೆ ಮತ್ತು ಪ್ರಣವ ಯೋಗ ಪ್ರತಿಷ್ಠಾನದ ಆಶ್ರಯದಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಮಾತನಾಡಿದರು.

ಬಿಬಿಎಂಪಿ ಮಾಜಿ ಉಪ ಮೇಯರ್ ಹೇಮಲತಾ ಕೆ. ಗೋಪಾಲಯ್ಯ, ಎಸ್. ಹರೀಶ್, ನೆ.ಲ.ನರೇಂದ್ರ ಬಾಬು, ವೆಂಕಟೇಶಮೂರ್ತಿ, ಜಯರಾಮಯ್ಯ, ವೆಂಕಟೇಶ್, ನಿಸರ್ಗ ಜಗದೀಶ್ ಉಪಸ್ಥಿತರಿದ್ದರು.

ಪಿಇಎಸ್ ವಿ.ವಿಯಲ್ಲಿ ನಡೆದ ದಿನಾಚರಣೆಯಲ್ಲಿ 'ಎಸ್ ವ್ಯಾಸ' ವಿಶ್ವವಿದ್ಯಾಲಯದ ಶೈಕ್ಷಣಿಕ ವಿಭಾಗದ ಡೀನ್ ಡಾ.ಆರ್.ನಾಗರತ್ನ ರಘುರಾಮ್ ಪಾಲ್ಗೊಂಡಿದ್ದರು. ಯೋಗ ಚಿಕಿತ್ಸಕ ರಘುರಾಮ್ ಮಾತನಾಡಿ, ಯಾವುದೇ ತಾರತಮ್ಯ ಇಲ್ಲದೆ ಪ್ರಪಂಚದಾದ್ಯಂತ ಯೋಗವನ್ನು ಅಭ್ಯಾಸ ಮಾಡಲಾಗುತ್ತಿದೆ ಎಂದರು.

ವಿ.ವಿಯ ಕುಲಾಧಿಪತಿ ಡಾ.ಎಂ. ಆರ್.ದೊರೆಸ್ವಾಮಿ ಮಾತನಾಡಿ, ಯೋಗವನ್ನು ವಿಶ್ವ ವೇದಿಕೆಗೆ ತಂದ ಕೀರ್ತಿ ಮೋದಿ ಅವರಿಗೆ ಸಲ್ಲುತ್ತದೆ ಎಂದರು. ಕುಲಸಚಿವ ಡಾ.ಕೆ. ಎಸ್.ಶ್ರೀಧರ್, ಡಾ.ಅನುಪಲ್ಲವಿ ಹಾಜರಿದ್ದರು.

ಸರ್ಕಾರಿ ಶಾಲಾ ಮಕ್ಕಳಿಂದ ಯೋಗ ಪ್ರದರ್ಶನ: ಮಲ್ಲೇಶ್ವರ ಕ್ಷೇತ್ರ ವ್ಯಾಪ್ತಿಯ 7 ಸರ್ಕಾರಿ ಪ್ರೌಢಶಾಲೆಗಳ 900ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮಂಗಳವಾರ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಅವರ ನೇತೃತ್ವದಲ್ಲಿ ಯೋಗ ಪ್ರದರ್ಶಿಸಿದರು.

ಅಶ್ವತ್ಥನಾರಾಯಣ ಪ್ರತಿಷ್ಠಾನ ಮತ್ತು ಶ್ರೀಕೃಷ್ಣ ವೆಲ್ನೆಸ್ ಯೋಗ, ಸಾಂಸ್ಕೃತಿಕ ಕೇಂದ್ರದ ಆಶ್ರಯದಲ್ಲಿ ಮಲ್ಲೇಶ್ವರ ಆಟದ ಮೈದಾನದಲ್ಲಿ ಯೋಗ ದಿನಾಚರಣೆ ನಡೆಯಿತು.

ಅಶ್ವತ್ಥನಾರಾಯಣ ಅವರು ಮಕ್ಕಳ ನಡುವೆ ಕುಳಿತು ಯೋಗಾಭ್ಯಾಸ ನಡೆಸಿದರು.

ಮಲ್ಲೇಶ್ವರ ಬಿಜೆಪಿ ಮಂಡಲ ಅಧ್ಯಕ್ಷೆ ಕಾವೇರಿ ಕೇದಾರನಾಥ್, ಶ್ರೀಕೃಷ್ಣ ವೆಲ್‌ನೆಸ್ ಯೋಗ ಕೇಂದ್ರದ | ಸಂಸ್ಥಾಪಕಿ ಮಿಮಿ ಪಾರ್ಥಸಾರಥಿ ಹಾಜರಿದ್ದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸೋಮವಾರ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಕನ್ನಡ ಚಲನಚಿತ್ರ ನಟಿ ಅದಿತಿ ಪ್ರಭುದೇವ್ ಭಾಗವಹಿಸಿದ್ದರು

ನಗರದ ಹೆಬ್ಬಾಳದ ಕೇಂದ್ರೀಯ ವಿದ್ಯಾಲಯದಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಶಾಲಾ ಮಕ್ಕಳು ಯೋಗ ನಡೆಸಿದರು

ನಗರದಲ್ಲಿ ಮಂಗಳವಾರ ಕರ್ನಾಟಕ ವಿಧಾನಸಭೆ ಆಯೋಜಿಸಿದ್ದ 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನಸಭೆ ಸಚಿವಾಲಯದ ಅಧಿಕಾರಿ ನೌಕರರು ಯೋಗ ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ/ ರಂಜು ಪಿ.

ಬಾಲಗಂಗಾಧರನಾಥ ಸ್ವಾಮೀಜಿ ಕ್ರೀಡಾಂಗಣದಲ್ಲಿ ಸಚಿವ ವಿ.ಸೋಮಣ್ಣ ಯೋಗಾಭ್ಯಾಸ ನಡೆಸಿ ಗಮನ ಸೆಳೆದರು

ಪಿಇಎಸ್ ವಿವಿಯಲ್ಲಿ ಯೋಗ ದಿನಾಚರಣೆ ನಡೆಯಿತು

ಕೆಂಗೇರಿಯ ಬಿಜಿಎಸ್ ಹೆಲ್ತ್ ಸಿಟಿಯಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಯೋಗ ಅಭ್ಯಾಸ ನಡೆಸಿದರು

ಕೇಂದ್ರ ಕಾರಾಗೃಹದಲ್ಲಿ ಯೋಗ ದಿನಾಚರಣೆ

ಬೊಮ್ಮನಹಳ್ಳಿ: ಕೇಂದ್ರ ಕಾರಾಗೃಹದಲ್ಲಿ ಆರ್ಟ್ ಆಫ್ ಲಿವಿಂಗ್ ಸಹಯೋಗದಲ್ಲಿ 500 ವಿಚಾರಣಾ ಬಂದಿಗಳು, ಸತ್ಸಂಗ ಸಂಸ್ಥೆಯ ಸಹಯೋಗದಲ್ಲಿ 100 ಸಜಾ ಬಂದಿಗಳು ಹಾಗೂ ಮಹಿಳಾ ವಿಭಾಗದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಸಂಸ್ಥೆಯ ಸಹಯೋಗದಲ್ಲಿ 100 ಮಹಿಳಾ ಬಂದಿಗಳು ಯೋಗ ದಿನಾಚರಣೆಯಲ್ಲಿ ಭಾಗವಹಿಸಿದ್ದರು. ಜೈಲು ಅಧಿಕಾರಿ ರಂಗನಾಥ್ ಹಾಜರಿದ್ದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥೆ 52 ವಾರಗಳಿಂದ ಜೈಲಿನ ಬಂದಿಗಳಿಗೆ ಹಾಗೂ ಸಿಬ್ಬಂದಿಗೆ ಯೋಗಾಭ್ಯಾಸ ತರಗತಿ ನಡೆಸುತ್ತಿದೆ.

ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಕೈದಿಗಳು ಯೋಗ ಮಾಡಿ, ಅಂತರರಾಷ್ಟ್ರೀಯ ಯೋಗ ದಿನ ಆಚರಿಸಿದರು

ಮಲ್ಲೇಶ್ವರಂ ಆಟದ ಮೈದಾನದಲ್ಲಿ ಅಶ್ವತ್ಥನಾರಾಯಣ ಪ್ರತಿಷ್ಠಾನ ಮತ್ತು ಶ್ರೀಕೃಷ್ಣ ವೆಲ್ನೆಸ್ ಯೋಗ ಮತ್ತು ಸಾಂಸ್ಕೃತಿಕ ಕೇಂದ್ರದಿಂದ ಮಂಗಳವಾರ ನಡೆದ ಯೋಗ ದಿನಾಚರಣೆಯಲ್ಲಿ ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣ ಯೋಗಾಭ್ಯಾಸ ಮಾಡಿದರು

ಭಾರತೀಯ ಸೇನೆ ಮತ್ತು ಸಿಸಿಬಿ ಜಂಟಿ ಕಾರ್ಯಾಚರಣೆ • ನಾಲ್ಕು ಕಡೆ ದಾಳಿ

ಕರೆ ಮಾರ್ಪಾಡು: ಐಎಸ್‌ಐ ಬೇಹುಗಾರಿಕೆ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಕಿಸ್ತಾನದಿಂದ ಬರುವ ಅಂತರರಾಷ್ಟ್ರೀಯ ಕರೆಗಳನ್ನು (ಐಎಸ್‌ಡಿ) ಸ್ಥಳೀಯ ಕರೆಗಳನ್ನಾಗಿ ಮಾರ್ಪಾಡು ಮಾಡುತ್ತಿದ್ದ ಜಾಲ ಪತ್ತೆಯಾಗಿದ್ದು, ಇದರ ರೂವಾರಿ ಶರ್ಫುದ್ದೀನ್ ಎಂಬಾತನನ್ನು ಬಂಧಿಸಲಾಗಿದೆ.

'ಕೇರಳದ ವಯನಾಡಿನ ಶರ್ಫುದ್ದೀನ್, ಕೆಲ ವರ್ಷಗಳ ಹಿಂದೆ ಯಷ್ಟೇ ನಗರಕ್ಕೆ ಬಂದು ಸಣ್ಣಪುಟ್ಟ ಕೆಲಸ ಮಾಡಲಾರಂಭಿಸಿದ್ದ. ಕೆಲವರ ಜೊತೆ ಸೇರಿ ಅಂತರರಾಷ್ಟ್ರೀಯ ಕರೆಗಳನ್ನು ಸ್ಥಳೀಯ ಕರೆಗಳನ್ನಾಗಿ ಮಾರ್ಪಾಡು ಮಾಡುವ ಕೃತ್ಯದಲ್ಲಿ ತೊಡಗಿಸಿಕೊಂಡಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಆರೋಪಿ ಬಳಸುತ್ತಿದ್ದ ಎಫ್‌ಸಿಟಿ ಬಾಕ್ಸ್

'ಆರೋಪಿ ಕೃತ್ಯವನ್ನು ಪತ್ತೆ ಮಾಡಿದ್ದ ಭಾರತೀಯ ಸೇನೆಯ ಇಂಟೆಲಿಜೆನ್ಸ್ ಅಧಿಕಾರಿಗಳು, ಬೆಂಗಳೂರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಸೇನೆ ಅಧಿಕಾರಿಗಳು ಹಾಗೂ ಸಿಸಿಬಿ ಪೊಲೀಸರು, ಜಂಟಿಯಾಗಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ' ಎಂದೂ ತಿಳಿಸಿವೆ.

'ಆರೋಪಿ ಕೃತ್ಯಕ್ಕಾಗಿ ಬಳಸುತ್ತಿದ್ದ ಎಫ್‌ಸಿಟಿ (ಫಿಕ್ಸ್‌ಡ್ ಸೆಲ್ಯುಲರ್ ಟರ್ಮಿನಲ್) ಬಾಕ್ಸ್, 2,144 ಸಿಮ್ ಕಾರ್ಡ್ ಹಾಗೂ ಇತರೆ ಉಪಕರಣಗಳನ್ನು ಜಪ್ತಿ ಮಾಡಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

ಬೇಹುಗಾರಿಕೆ ಶಂಕೆ: 'ಆರೋಪಿ ಶರ್ಫುದ್ದೀನ್‌ನನ್ನು ಬಳಸಿ ಕೊಂಡು ಪಾಕಿಸ್ತಾನ್ ಐಎಸ್‌ಐ, ದೇಶ ದಲ್ಲಿ ಬೇಹುಗಾರಿಕೆ ನಡೆಸುತ್ತಿದ್ದ ಮಾಹಿತಿ ಇದೆ. ಈ ಬಗ್ಗೆ ತನಿಖೆ ಮುಂದುವರಿದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಯು ಅನಿಯಮಿತ ಕರೆ ಸೌಲಭ್ಯವಿರುವ (ಅನ್‌ಲಿಮಿಟೆಡ್) ಸಿಮ್ ಕಾರ್ಡ್‌ಗಳನ್ನು ಎಫ್‌ಟಿಸಿ ಬಾಕ್ಸ್, ಮೋಡೆಮ್ ಹಾಗೂ ರೂಟರ್‌ಗೆ ಜೋಡಿಸಿದ್ದ. ಇದೇ ಉಪಕರಣದ ಮೂಲಕ ಐಎಸ್‌ಡಿ ಕರೆಗಳನ್ನು ಎಸ್‌ಟಿಡಿ ಕರೆಗಳಿಗೆ ಪರಿವರ್ತಿಸುತ್ತಿದ್ದ. ಇದರಿಂದ ವಿದೇಶಿ ಕರೆಗಳಿಗೂ ಎಸ್‌ಟಿಡಿ ದರವೇ ಅನ್ವಯವಾಗುತ್ತಿತ್ತು. ಕೇಂದ್ರ ಸರ್ಕಾರಕ್ಕೂ ನಷ್ಟವಾಗುತ್ತಿತ್ತು' ಎಂದು ಮಾಹಿತಿ ನೀಡಿವೆ.

'ಪಾಕಿಸ್ತಾನದಿಂದ ಬರುತ್ತಿದ್ದ ಕರೆಗಳನ್ನು ಆರೋಪಿ ಮಾರ್ಪಾಡು ಮಾಡುತ್ತಿದ್ದ. ಐಎಸ್‌ಐ ಪ್ರತಿನಿಧಿಗಳು, ದೇಶದ ಕೆಲವರ ಜೊತೆ ಮಾತನಾಡುತ್ತಿದ್ದರು. ಭಾರತೀಯ ಸೇನೆ ಹಾಗೂ ಇತರೆ ಮಾಹಿತಿಗಳನ್ನು ತಿಳಿದುಕೊಳ್ಳುತ್ತಿದ್ದರೆಂಬ ಶಂಕೆ ಇದೆ. ಆರೋಪಿಯನ್ನು ಕಸ್ಟಡಿಗೆ ಪಡೆದು ಹೆಚ್ಚಿನ ವಿಚಾರಣೆ ನಡೆಸಬೇಕಿದೆ' ಎಂದೂ ಮೂಲಗಳು ಹೇಳಿವೆ.

'ಬಾಡಿಗೆ ಮನೆಯಲ್ಲಿ ಎಫ್‌ಸಿಟಿ ಬಾಕ್ಸ್'

'ಬಂಧಿತ ಶರ್ಫುದ್ದೀನ್ ಹಾಗೂ ಈತನ ಸಹಚರರು, ಕೃತ್ಯಕ್ಕೆಂದು ಬಾಡಿಗೆ ಮನೆ ಮಾಡಿದ್ದರು. ಅಲ್ಲಿಯೇ ಎಫ್‌ಸಿಟಿ ಬಾಕ್ಸ್ ಜೋಡಿಸಿ ಕೃತ್ಯ ಎಸಗುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಗರದ ಭುವನೇಶ್ವರಿನಗರ, ಚಿಕ್ಕಸಂದ್ರ ಹಾಗೂ ಸಿದ್ದೇಶ್ವರ ಬಡಾವಣೆಯ ಮನೆಯಲ್ಲಿ ಎಫ್‌ಸಿಟಿ ಬಾಕ್ಸ್‌ಗಳು ಸಿಕ್ಕಿವೆ' ಎಂದೂ ತಿಳಿಸಿವೆ.

ವಿಶ್ವ ಯೋಗ ದಿನದ ಅಂಗವಾಗಿ ರಾಜರಾಜೇಶ್ವರಿ ನಗರದಲ್ಲಿ ಶ್ರೀಯೋಗ ಮತ್ತು ಸಾಂಸ್ಕೃತಿಕ ಅಕಾಡೆಮಿ ವತಿಯಿಂದ ಯೋಗ ಸಾಧಕರಾದ ಗೀತಾ ಚಕ್ರಧರ್, ಅಪರ್ಣಾ ಶರ್ಮಾ ಮತ್ತು ಹರ್ಷದಾ ಅನಂತನಾರಾಯಣ ಅವರಿಗೆ ಯೋಗಶ್ರೀ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಎಂ. ರಾಜಕುಮಾರ್, ವಿ.ಸಿ. ಚಂದ್ರು, ಶಿವಣ್ಣ, ಸುಧೀಂದ್ರ ರಾವ್ ಇದ್ದಾರೆ

ಸಂಕ್ಷಿಪ್ತ ಸುದ್ದಿ

ಹಿಂಬಾಲಿಸಿ ಸರಗಳವು ಆರೋಪಿಗಳ ಸೆರೆ

ಬೆಂಗಳೂರು: ಕಾಲೇಜಿನಿಂದ ಮನೆಗೆ ಹೊರಟಿದ್ದ ವಿದ್ಯಾರ್ಥಿಯನ್ನು ಹಿಂಬಾಲಿಸಿ ಚಿನ್ನದ ಸರ ಕಿತ್ತೊಯ್ದಿದ್ದ ಇಬ್ಬರು ಆರೋಪಿಗಳನ್ನು ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮನೋಜ್ ಹಾಗೂ ದರ್ಶನ್ ಬಂಧಿತರು. ಇವರಿಂದ ₹ 50 ಸಾವಿರ ಮೌಲ್ಯದ ಚಿನ್ನದ ಸರ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ. 'ದೂರುದಾರ ವಿದ್ಯಾರ್ಥಿಯು ಅನ್ನಪೂರ್ಣೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲಿ ಜೂನ್ 10ರಂದು ನಡೆದುಕೊಂಡು ಹೊರಟಿದ್ದಾಗ ಬೈಕ್‌ನಲ್ಲಿ ಬಂದಿದ್ದ ಆರೋಪಿಗಳು, ಸರ ಕಿತ್ತುಕೊಂಡು ಪರಾರಿಯಾಗಿದ್ದರು' ಎಂದೂ ತಿಳಿಸಿದ್ದಾರೆ.

ಡ್ರಗ್ಸ್ ಪಾರ್ಟಿ: ರೂಪದರ್ಶಿಗಳಿಗೆ ನೋಟಿಸ್

ಬೆಂಗಳೂರು: ಟ್ರಿನಿಟಿ ವೃತ್ತದಲ್ಲಿರುವ ದಿ ಪಾರ್ಕ್ ಹೋಟೆಲ್‌ನಲ್ಲಿ ಇತ್ತೀಚೆಗೆ ನಡೆದಿದ್ದ ಡ್ರಗ್ಸ್ ಪಾರ್ಟಿ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಹಲಸೂರು ಠಾಣೆ ಪೊಲೀಸರು, ಕೆಲ ರೂಪದರ್ಶಿಗಳಿಗೆ ನೋಟಿಸ್ ನೀಡಿದ್ದಾರೆ.

ಜೂನ್ 12ರಂದು ರಾತ್ರಿ ಹೋಟೆಲ್‌ನ ಬಾರ್ ಮೇಲೆ ದಾಳಿ ಮಾಡಿದ್ದ ಪೊಲೀಸರು, ಬಾಲಿವುಡ್ ನಟ ಸಿದ್ಧಾಂತ್ ಕಪೂರ್ ಸೇರಿದಂತೆ ಐವರನ್ನು ಬಂಧಿಸಿದ್ದರು. ಅವರ ಹೇಳಿಕೆ ಪಡೆದು, ಠಾಣೆ ಜಾಮೀನು ಮೇಲೆ ಬಿಡುಗಡೆ ಮಾಡಿದ್ದರು.

ದೇಶೀಯ ಹಾಗೂ ಅಂತರರಾಷ್ಟ್ರೀಯ ರೂಪದರ್ಶಿಗಳು ಸಹ ಪಾರ್ಟಿಯಲ್ಲಿ ಭಾಗವಹಿಸಿದ್ದ ಮಾಹಿತಿ ಸಂಗ್ರಹಿಸಿರುವ ಪೊಲೀಸರು, ವಾರದೊಳಗೆ ವಿಚಾರಣೆಗೆ ಹಾಜರಾಗುವಂತೆ ಅವರೆಲ್ಲರಿಗೂ ಇತ್ತೀಚೆಗೆ ನೋಟಿಸ್ ನೀಡಿದ್ದಾರೆ.

'ಪಾರ್ಟಿಯಲ್ಲಿ ಡ್ರಗ್ಸ್ ಮಾತ್ರವಲ್ಲದೇ ಇತರೆ ಅಕ್ರಮ ಚಟುವಟಿಕೆ ನಡೆದಿದ್ದ ಮಾಹಿತಿ ಇದೆ. ಪೊಲೀಸರ ದಾಳಿ ವೇಳೆಯೇ ಕೆಲವರು ತಪ್ಪಿಸಿಕೊಂಡು ಹೋಗಿದ್ದಾರೆ. ಅವರಲ್ಲಿ ಬಹುತೇಕರು ರೂಪದರ್ಶಿಗಳು. ಅಂಥವರ ಪಟ್ಟಿ ಸಿದ್ಧಪಡಿಸಲಾಗಿದ್ದು, ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಜೈಲಿನಲ್ಲಿ ಅಕ್ರಮ: 7 ಸಿಬ್ಬಂದಿ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ತನಿಖೆ ನಡೆಸಿರುವ ಎಡಿಜಿಪಿ ಎಸ್. ಮುರುಗನ್ ನೇತೃತ್ವದ ತಂಡ, ಅಧಿಕಾರಿ, ಸಿಬ್ಬಂದಿ ಸೇರಿ ಒಟ್ಟು 18 ಮಂದಿಯ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಿದೆ.

ಅದರನ್ವಯ ಕಾರಾಗೃಹದ ಏಳು ಸಿಬ್ಬಂದಿಯನ್ನು (ಮುಖ್ಯ ವೀಕ್ಷಕರು) ವರ್ಗಾವಣೆ ಮಾಡಲಾಗಿದೆ.

ಅಶೋಕ್ ಎನ್, ಎಸ್.ಎನ್. ರಮೇಶ್, ಶಿವಾನಂದ ಕೆ. ಗಾಣಿಗೇರ್, ಉಮೇಶ್ ಆರ್. ದೊಡ್ಡಮನಿ, ಲೋಕೇಶ್ ಪಿ, ಭೀಮಣ್ಣ ದೇವಪ್ಪ ನೇದಲಗಿ (ನಿಲಂಬನದಲ್ಲಿ) ಮತ್ತು ಮಹೇಶ್ ಸಿದ್ದನಗೌಡ ಪಾಟೀಲ್ ಅವರನ್ನು ಕ್ರಮವಾಗಿ ವಿಜಯಪುರ, ಬಳ್ಳಾರಿ, ಬೆಳಗಾವಿ, ಮೈಸೂರು, ಧಾರವಾಡ, ಶಿವಮೊಗ್ಗ, ಕಲಬುರಗಿ ಕೇಂದ್ರ ಕಾರಾಗೃಹಕ್ಕೆ ವರ್ಗಾವಣೆ ಮಾಡಲಾಗಿದೆ.

ಈ ವರದಿಯಲ್ಲಿ ಶಿವಮೊಗ್ಗ ಕೇಂದ್ರ ಕಾರಾಗೃಹದ ಅಧೀಕ್ಷಕ ಪಿ. ಮಹಾದೇವನಾಯ್ಕ ಅವರ ಮೇಲೆ ಅತಿ ಕಠಿಣ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಲಾಗಿದೆ.

ಅವರನ್ನು ಆ ಹುದ್ದೆಯಿಂದ ಮೈಸೂರಿನಲ್ಲಿರುವ ಕಾರಾಗೃಹ ಸಿಬ್ಬಂದಿ ತರಬೇತಿ ಸಂಸ್ಥೆಯ ಪ್ರಾಚಾರ್ಯ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಮೈಸೂರಿನಲ್ಲಿರುವ ಕಾರಾಗೃಹ ಸಿಬ್ಬಂದಿ ತರಬೇತಿ ಸಂಸ್ಥೆಯ ಪ್ರಾಚಾರ್ಯ ಹುದ್ದೆಯಲ್ಲಿ ಪ್ರಭಾರಿಯಾಗಿದ್ದ ಆರ್. ಅನಿತಾ ಅವರನ್ನು ಶಿವಮೊಗ್ಗ ಕೇಂದ್ರ ಕಾರಾಗೃಹಕ್ಕೆ ವರ್ಗಾವಣೆ ಮಾಡಲಾಗಿದೆ.

ವಂಚನೆ: ಚಿಟ್‌ಫಂಡ್ ಸಂಸ್ಥಾಪಕಿ ಕಲ್ಯಾಣಮಂಟಪದಲ್ಲಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಟ್ ಫಂಡ್ ಹೆಸರಿನಲ್ಲಿ ಜನರಿಂದ ಲಕ್ಷಾಂತರ ರೂಪಾಯಿ ಸಂಗ್ರಹಿಸಿ ವಂಚಿಸಿದ್ದ ಆರೋಪದಡಿ 'ವಾರಿಧಿ ಚಿಟ್ ಫಂಡ್' ಕಂಪನಿ ಸಂಸ್ಥಾಪಕಿ ಲಕ್ಷ್ಮಿ ಅಲಿಯಾಸ್ ವಾಣಿ (36) ಅವರನ್ನು ರಾಜಾಜಿನಗರ ಪೊಲೀಸರು ಬಂಧಿಸಿದ್ದಾರೆ.

'ರಾಜಾಜಿನಗರ ನಿವಾಸಿ ಲಕ್ಷ್ಮಿ 2018ರಲ್ಲಿ ವಾರಿಧಿ ಚಿಟ್ ಫಂಡ್ ಕಂಪನಿ ಸ್ಥಾಪಿಸಿದ್ದರು. ನೂರಾರು ಜನರಿಂದ ಹಣ ಕಟ್ಟಿಸಿಕೊಂಡು ವಂಚಿಸಿ ತಲೆಮರೆಸಿಕೊಂಡಿದ್ದರು. ಅವರ ವಿರುದ್ಧ ಗ್ರಾಹಕರೊಬ್ಬರು ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಲಕ್ಷ್ಮಿ ಎರಡು ಮದುವೆಯಾಗಿದ್ದರು. ಇಬ್ಬರಿಂದಲೂ ದೂರವಾಗಿ ಪ್ರತ್ಯೇಕವಾಗಿ ವಾಸವಿದ್ದರೆಂದು ಗೊತ್ತಾಗಿದೆ. ಕಂಪನಿ ಸ್ಥಾಪನೆಗೂ ಮುನ್ನ ಖಾಸಗಿ ಕಂಪನಿಯೊಂದರಲ್ಲಿ ಆರೋಪಿ ಲಾಭದ ಆಮಿಷವೊಡ್ಡಿ ಜನರಿಂದ ಕಂಪನಿಗೆ ಹಣ ಕಟ್ಟಿಸುತ್ತಿದ್ದರು. ಕೆಲಸದ ಸ್ಥಳದಲ್ಲೇ ಅವರಿಗೆ ಸುದರ್ಶನ್ ಎಂಬುವವರ ಪರಿಚಯವಾಗಿ, ಸಲುಗೆ ಬೆಳೆದಿತ್ತು.'

'ಸುದರ್ಶನ್ ಅವರನ್ನು ಮೂರನೇ ಮದುವೆಯಾಗಿದ್ದ ಆರೋಪಿ, ಅವರ ಜೊತೆ ಸೇರಿ ರಾಜಾಜಿನಗರದಲ್ಲಿ ವಾರಿಧಿ ಚಿಟ್ ಫಂಡ್ ಕಂಪನಿ ತೆರೆದಿದ್ದರು. ಉದ್ಯೋಗಿಗಳನ್ನೇ ನಿರ್ದೇಶಕರನ್ನಾಗಿ ಮಾಡಿಕೊಂಡು ಕಂಪನಿ ನೋಂದಣಿ ಮಾಡಿಸಿದ್ದರು. ಹೆಚ್ಚಿನ ಲಾಭ ನೀಡುವುದಾಗಿ ಜಾಹೀರಾತು ನೀಡಿ ಜನರಿಂದ ಹಣ ಕಟ್ಟಿಸಿಕೊಂಡಿದ್ದರು' ಎಂದೂ ತಿಳಿಸಿವೆ.

ಕೋವಿಡ್‌ನಿಂದ ನಷ್ಟ: 'ಆರಂಭದಲ್ಲಿ ಉತ್ತಮ ವಹಿವಾಟು ನಡೆಸುತ್ತಿದ್ದ ಕಂಪನಿ, ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿತ್ತು. ಚಿಟ್ ಫಂಡ್ ಹಣ ಪಡೆದಿದ್ದವರು, ವಾಪಸು ನೀಡಿರಲಿಲ್ಲ. ಇದೇ ಕಾರಣಕ್ಕೆ ಆರೋಪಿಗಳು, ಕಂಪನಿ ಕಚೇರಿ ಬಂದ್ ಮಾಡಿ ತಲೆಮರೆಸಿಕೊಂಡಿದ್ದರು' ಎಂದೂ ಪೊಲೀಸ್ ಮೂಲಗಳು ಹೇಳಿವೆ.

'ಮನೆ ಬಾಡಿಗೆ ಪಾವತಿ ಹಾಗೂ ಜೀವನ ನಿರ್ವಹಣೆಗೂ ಹಣವಿಲ್ಲದೆ ಪರದಾಡುತ್ತಿದ್ದ ಲಕ್ಷ್ಮಿ, ಕೆಂಗೇರಿಯ ಕಲ್ಯಾಣ ಮಂಟಪವೊಂದರಲ್ಲಿ ಅಡುಗೆ ಕೆಲಸಕ್ಕೆ ಸೇರಿದ್ದರು. ಅದರಿಂದ ದಿನಕ್ಕೆ ₹ 800 ಸಿಗುತ್ತಿತ್ತು. ಅದೇ ಹಣದಲ್ಲೇ ಜೀವನ ಸಾಗಿಸುತ್ತಿದ್ದರು. ಕಲ್ಯಾಣ ಮಂಟಪದಲ್ಲಿರುವಾಗಲೇ ಅವರನ್ನು ಬಂಧಿಸಲಾಗಿದೆ. ಸುದರ್ಶನ್ ತಲೆಮರೆಸಿ ಕೊಂಡಿದ್ದಾರೆ' ಎಂದೂ ತಿಳಿಸಿವೆ.

ಮೈಸೂರು ಅರಮನೆ ಆವರಣದಲ್ಲಿ ಐತಿಹಾಸಿಕ ಯೋಗ ದಿನಾಚರಣೆ

ಪ್ರಧಾನಿ ಮೋದಿ ಜೊತೆ ಯೋಗಾಭ್ಯಾಸಿಗಳ ಯೋಗ!

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ಅರಮನೆ ಆವರಣವು ಮಂಗಳವಾರ ಮುಂಜಾನೆ ಐತಿಹಾಸಿಕ ಯೋಗಾಭ್ಯಾಸಕ್ಕೆ ಸಾಕ್ಷಿ ಯಾಯಿತು. ಅಪರೂಪದ ಕಾರ್ಯಕ್ರಮಕ್ಕೆ ಹತ್ತು ಸಾವಿರಕ್ಕೂ ಹೆಚ್ಚು ಯೋಗಪಟುಗಳು ಸಾಕ್ಷಿಯಾದರು.

‘ಮಾನವೀಯತೆಗಾಗಿ ಯೋಗ’ ಘೋಷ ವಾಕ್ಯದಡಿ ನಡೆದ 8ನೇ ಅಂತರ ರಾಷ್ಟ್ರೀಯ ಯೋಗ ದಿನಾಚರಣೆಗೆ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಸ್ವತಃ ಯೋಗಾಭ್ಯಾಸ ಮಾಡಿ ಇಡೀ ವಿಶ್ವವೇ ಮೈಸೂರಿನತ್ತ ನೋಡುವಂತೆ ಮಾಡಿದರು.

ಬೆಳಗಿನ ಜಾವ 4 ಗಂಟೆಯಿಂದಲೇ ಯೋಗಾಭ್ಯಾಸಿಗಳು ಅರಮನೆಯತ್ತ ನಡೆದು ಬಂದಿದ್ದು ವಿಶೇಷವಾಗಿತ್ತು. ಬೆಳಿಗ್ಗೆ 6.34 ರ ವೇಳೆಗೆ ವೇದಿಕೆಗೆ ಬಂದ ಪ್ರಧಾನಿ ಅಭ್ಯಾಸಿಗಳಲ್ಲಿ ರೋಮಾಂಚನ ಮೂಡಿಸಿದರು.

‘ಸಂಪ್ರದಾಯಸ್ಥ ಮನೆಗಳಲ್ಲಿ, ಅಧ್ಯಾತ್ಮ ಕೇಂದ್ರಗಳಲ್ಲಷ್ಟೇ ಇದ್ದ ಯೋಗ ಈಗ ವಿಶ್ವದ ಮನೆ ಮನೆಗೂ ತಲುಪಿದೆ. ಸಹಜ, ಸ್ವಾಭಾವಿಕ, ಮಾನವೀಯ ಚೈತನ್ಯದ ಸಂಕೇತ. ಕೊರೊನಾ ಆತಂಕದ ಬಳಿಕ ಯೋಗದ ವೈಶ್ವಿಕ ಪರ್ವ ಆರಂಭವಾಗಿದೆ’ ಎಂದು ಪ್ರಧಾನಿ ಹೇಳಿದರು.

‘ಸ್ವಾತಂತ್ರ್ಯದ ಅಮೃತ ಮಹೋತ್ಸವ ನಿಮಿತ್ತ 75 ಚಾರಿತ್ರಿಕ ಸ್ಥಳಗಳಲ್ಲಿ ಸಾಮೂಹಿಕ ಯೋಗ ನಡೆದಿದೆ. ಇತಿಹಾಸದಲ್ಲಿ ವಿಶೇಷ ಸ್ಥಾನವುಳ್ಳ ಮೈಸೂರು ಅರಮನೆ ಆವರಣದಲ್ಲಿ ನಡೆದಿರುವ ಅಭ್ಯಾಸವು ದೇಶದ ವೈವಿಧ್ಯತೆಯನ್ನು ಯೋಗದ ಒಂದೇ ಸೂತ್ರದಲ್ಲಿ ಕೂಡಿಸುತ್ತದೆ’ ಎಂದರು.

ನಂತರ 45 ನಿಮಿಷಕ್ಕೂ ಹೆಚ್ಚು ಕಾಲ ಯೋಗ ಮಾಡಿದರು.

ಹಲವು ಕಷ್ಟಕರ ಆಸನಗಳನ್ನು ಹಾಗೂ ಪ್ರಾಣಾಯಾಮವನ್ನು ನಿರಾಯಾಸವಾಗಿ ಮಾಡಿದ್ದು ವಿಶೇಷವಾಗಿತ್ತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಸರ್ಬಾನಂದ್ ಸೋನಾವಲ್, ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಂಸದ ಪ್ರತಾಪಸಿಂಹ, ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣ ದತ್ತ ಚಾಮರಾಜ ಒಡೆಯರ್ ಅವರೂ ಪಾಲ್ಗೊಂಡರು.

ಮೈಸೂರಿನ ಅಂಬಾವಿಲಾಸ ಅರಮನೆ ಆವರಣದಲ್ಲಿ ಮಂಗಳವಾರ ನಡೆದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಜನರೊಂದಿಗೆ ಯೋಗಾಸನಗಳನ್ನು ಮಾಡಿದರು. ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ವಿಜಯಪುರ ನಗರದ ಗೋಳಗುಮ್ಮಟದ ಆವರಣದಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಅಂಜುಮನ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿಯರು ಯೋಗ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ: ಸಂಜೀವ ಅಕ್ಕಿ (ಮೊದಲ ಚಿತ್ರ), ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಯೋಗಾಸಕ್ತರು ಯೋಗ ಪ್ರದರ್ಶಿಸಿದರು (ಮಧ್ಯದ ಚಿತ್ರ), ವಿಜಯನಗರ ಜಿಲ್ಲೆಯ ಹಂಪಿ ರಥಬೀದಿಯಲ್ಲಿ ನೂರಾರು ಜನ ಯೋಗ ಮಾಡಿದರು ಚಿತ್ರ: ರಾಚಯ್ಯ ಎಸ್. ಸ್ಥಾವರಿಮಠ

ಕುಷ್ಟಗಿ ತಾಲ್ಲೂಕಿನ ಹಸಿರು ಪರಿಸರದಲ್ಲಿ ನರೇಗಾ ಕೂಲಿಕಾರರು ಯೋಗ ದಿನಾಚರಣೆಯಲ್ಲಿ ತೊಡಗಿದ್ದರು (ಮೊದಲ ಚಿತ್ರ), ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಸಂತೆಬೆನ್ನೂರಿನ ಐತಿಹಾಸಿಕ ಪುಷ್ಕರಣಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹಿಳಾ ಯೋಗಪಟುಗಳು ಯೋಗಾಭ್ಯಾಸ ನಡೆಸಿದರು –ಪ್ರಜಾವಾಣಿ ಚಿತ್ರ/ಸತೀಶ್ ಬಡಿಗೇರ

ಬೆಂಗಳೂರಿನ ಹೈಕೋರ್ಟ್ ಆವರಣದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಬೆಂಗಳೂರು ವಕೀಲರ ಸಂಘ ಆಯೋಜಿಸಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯ ನಿರ್ವಾಹಕ ಅಧ್ಯಕ್ಷರೂ ಆದ ನ್ಯಾಯಮೂರ್ತಿ ಬಿ.ವೀರಪ್ಪ ಮತ್ತು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ (ಬಲಬದಿ ವೇದಿಕೆಯ ಮೇಲೆ ಯೋಗ ಭಂಗಿಯಲ್ಲಿರುವವರು) ಸೇರಿದಂತೆ ನ್ಯಾಯಮೂರ್ತಿಗಳು ಯೋಗಾಭ್ಯಾಸ ನಡೆಸಿದರು.
ಪ್ರಜಾವಾಣಿ ಚಿತ್ರ– ರಂಜು ಪಿ.

14 ಕಿ.ಮೀ. ರಸ್ತೆ ಅಭಿವೃದ್ಧಿಗೆ ಹಗಲು–ರಾತ್ರಿ ಕಾರ್ಯನಿರ್ವಹಿಸಿದ ಬಿಬಿಎಂಪಿ

ಪ್ರಧಾನಿ ‘ಸುಮಾರ್ಗ’ಕ್ಕೆ ₹24 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ನಗರದಲ್ಲಿ ಹಾದು ಹೋದ 14 ಕಿಲೋ ಮೀಟರ್ ರಸ್ತೆ ಅಭಿವೃದ್ಧಿಗೆ ಬಿಬಿಎಂಪಿ ₹23.50 ಕೋಟಿ ಖರ್ಚು ಮಾಡಿದೆ. ಆರು ಹೆಲಿ ಪ್ಯಾಡ್ ನಿರ್ಮಿಸಲು ತಲಾ ಒಂದಕ್ಕೆ ₹8 ಲಕ್ಷದಂತೆ ಒಟ್ಟು ₹48 ಲಕ್ಷ ವೆಚ್ಚವಾಗಿದೆ.

‘ಪ್ರಧಾನಿ ಅವರು ಬರುವ ಕಾರ್ಯಕ್ರಮ 15 ದಿನಗಳ ಮುಂಚೆಯೇ ನಿಗದಿಯಾಗಿತ್ತು. ಅವರು ಬಂದು ಹೋಗುವ ದಾರಿಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವುದು ಶಿಷ್ಟಾಚಾರ. ಮುಖ್ಯ ಆಯುಕ್ತರ ವಿವೇಚನೆಗೆ ಮೀಸಲಿಟ್ಟಿದ್ದ ಅನುದಾನ ಬಳಸಿ ಈ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಬಿಬಿಎಂಪಿ ಆಡಳಿತಾಧಿಕಾರಿ ಮತ್ತು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಂದ ಅನುಮೋದನೆ ಪಡೆಯಲಾಗಿದೆ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಯೋಜನೆ) ಎನ್‌.ಬಿ. ರವೀಂದ್ರ ತಿಳಿಸಿದರು.

ಅಭಿವೃದ್ಧಿಗೊಂಡಿರುವ ಕೊಮ್ಮಘಟ್ಟ ರಸ್ತೆ

‘ಬಳ್ಳಾರಿ ರಸ್ತೆಯಲ್ಲಿ 2.4 ಕಿಲೋ ಮೀಟರ್ ಅಭಿವೃದ್ಧಿಗೆ ₹4.06 ಕೋಟಿ, ತುಮಕೂರು ರಸ್ತೆಯಲ್ಲಿ 900 ಮೀಟರ್‌ಗೆ ₹1.55 ಕೋಟಿ, ಜ್ಞಾನಭಾರತಿ ಆವರಣದಲ್ಲಿ 3.60 ಕಿ.ಮೀಗೆ ₹6.05 ಕೋಟಿ, ಮೈಸೂರು ರಸ್ತೆಯಲ್ಲಿ 150 ಮೀಟರ್‌ಗೆ ₹35 ಲಕ್ಷ ಮತ್ತು ಕೊಮ್ಮಘಟ್ಟ ರಸ್ತೆಯಲ್ಲಿ 7 ಕಿ.ಮೀಗೆ ₹11.50 ಕೋಟಿ ವೆಚ್ಚ ಮಾಡಲಾಗಿದೆ’ ಎಂದು ವಿವರಿಸಿದರು.

‘ಸರ್ವೀಸ್ ರಸ್ತೆಗಳು, ಪಾದಚಾರಿ ಮಾರ್ಗಗಳು, ಬೀದಿ ದೀಪಗಳ ಅಳವಡಿಕೆ, ರಸ್ತೆ ವಿಭಜಕ, ಅಕ್ಕ-ಪಕ್ಕದ ತಿರುವುಗಳೂ ಅಭಿವೃದ್ಧಿಗೊಂಡಿವೆ. ವಾರದಿಂದ ಹಗಲು-ರಾತ್ರಿ ಕಾಮಗಾರಿ ನಿರ್ವಹಿಸಲಾಯಿತು’ ಎಂದರು.

‘ಈಗ ಅಭಿವೃದ್ಧಿಪಡಿಸಿರುವ ರಸ್ತೆಗಳಲ್ಲೇ ವೈಟ್ ಟಾಪಿಂಗ್ ರಸ್ತೆ ನಿರ್ಮಿಸುವ ಉದ್ದೇಶವಿದ್ದರೆ ಪರಿಶೀಲಿಸುತ್ತೇವೆ. ಯಾವುದೇ ಕಾರಣಕ್ಕೂ ಕಾಮಗಾರಿ ಪುನರಾವರ್ತನೆಗೆ ಅವಕಾಶ ನೀಡುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ರಸ್ತೆ ಗುಂಡಿಗಳನ್ನು ಮುಚ್ಚಲು ಮಳೆಯ ಕಾರಣ ನೀಡಲಾಗುತ್ತದೆ. ಈ ರಸ್ತೆಗಳ ಅಭಿವೃದ್ಧಿಗೆ ಮಳೆ ಅಡ್ಡಿಯಾಗಲಿಲ್ಲವೇ’ ಎಂಬ ಪ್ರಶ್ನೆಗೆ, ‘ಸಾಮಾನ್ಯ ಜನ ಓಡಾಡುವ ರಸ್ತೆಗಳನ್ನು ನಿರಂತರವಾಗಿ ಅಭಿವೃದ್ಧಿಪಡಿಸಲಾಗಿದೆ. ಪ್ರಧಾನಿ ಬಂದು ಹೋದ ರಸ್ತೆಗಳನ್ನು ಆದ್ಯತೆ ಮೇರೆಗೆ ಅಭಿವೃದ್ಧಿಪಡಿಸಲಾಗಿದೆ’ ಎಂದು ಉತ್ತರಿಸಿದರು.

ದ್ವಿತೀಯ ಪಿಯುಸಿ ಅವಧಿ ವಿಸ್ತರಣೆ

ಬೆಂಗಳೂರು: ದ್ವಿತೀಯ ಪಿಯುಸಿ ದಾಖಲಾತಿ ದಿನಾಂಕವನ್ನು ದಂಡ ಶುಲ್ಕ ಇಲ್ಲದೆ ಬುಧವಾರದವರೆಗೆ (ಜೂನ್ 22) ವಿಸ್ತರಿಸಲಾಗಿದೆ.

ಅಲ್ಲದೆ, ₹ 670 ದಂಡ ಶುಲ್ಕ ಸಹಿತ ಇದೇ 30ರವರೆಗೆ ಹಾಗೂ ₹ 2,890 ದಂಡ ಶುಲ್ಕ ಸಹಿತ ಜುಲೈ 8ರವರೆಗೆ ದಾಖಲಾತಿಗೆ ಅವಕಾಶ ನೀಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪೂರಕ ಪರೀಕ್ಷೆ: ಉಚಿತ ಪ್ರಯಾಣಕ್ಕೆ ಅವಕಾಶ

ಬೆಂಗಳೂರು: ಜೂನ್ 27ರಿಂದ ಜುಲೈ4 ರವರೆಗೆ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಉಚಿತ ಪ್ರಯಾಣಕ್ಕೆ ಕೆಎಸ್‌ಆರ್‌ಟಿಸಿ ಅವಕಾಶ ಕಲ್ಪಿಸಿದೆ.

ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರಕ್ಕೆ ಹೋಗಲು ಮತ್ತು ಹಿಂದಿರುಗಲು ಅವಕಾಶ ಇದೆ. ವಿದ್ಯಾರ್ಥಿಗಳು ಪರೀಕ್ಷೆ ಪ್ರವೇಶ ಪತ್ರ ತೋರಿಸಿ ಸಾಮಾನ್ಯ ಮತ್ತು ವೇಗದೂತ ಬಸ್‌ಗಳಲ್ಲಿ ಪ್ರಯಾಣ ಮಾಡಬಹುದು ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

‘ಪುಕ್ಕಟೆ ಪ್ರಚಾರ ಪಡೆಯುತ್ತಿರುವ ಮೋದಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಸರ್ಕಾರಗಳ ಅವಧಿಯಲ್ಲಿ ಆಗಿರುವ ಕೆಲಸಗಳನ್ನು ತಾವೇ ಮಾಡಿದ್ದು ಎಂಬಂತೆ ಬಿಂಬಿಸಿ ಕೊಂಡು ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ನಾಯಕರು ಪುಕ್ಕಟೆ ಪ್ರಚಾರ ಪಡೆಯುತ್ತಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಟೀಕಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಪ್ರಧಾನಿ ₹ 33,000 ಕೋಟಿ ಮೊತ್ತದ ಕಾಮಗಾರಿಗಳಿಗೆ ಚಾಲನೆ ನೀಡಿರುವುದಾಗಿ ಹೇಳಿಕೊಂಡಿದ್ದಾರೆ. ಈ ಯೋಜನೆಗಳು ಆರಂಭವಾಗಿದ್ದು ಬಿಜೆಪಿ ಸರ್ಕಾರದಿಂದ ಅಲ್ಲ. ಆದರೆ, ನಾನೇ ಆರಂಭ ಮಾಡುತ್ತಿದ್ದೇನೆ ಎಂದು ಮೋದಿ ಹೇಳಿದ್ದಾರೆ. ಇದು ಅವರ ಚಾಳಿ’ ಎಂದು ದೂರಿದರು.

40 ವರ್ಷದಿಂದ ಚರ್ಚೆಯಲ್ಲಿದ್ದ ಉಪನಗರ ರೈಲು ಯೋಜನೆಯನ್ನು 40 ತಿಂಗಳಲ್ಲಿ ಪೂರ್ಣಗೊಳಿಸುವುದಾಗಿ ಪ್ರಧಾನಿ ಹೇಳಿದ್ದಾರೆ. ಹಿಂದೆ ಅರುಣ್ ಜೇಟ್ಲಿ ಹಣಕಾಸು ಸಚಿವರಾಗಿದ್ದಾಗ ಕೇವಲ ₹ 1 ಕೋಟಿ ಅನುದಾನ ಒದಗಿಸಿದ್ದರು. ಈಗ ₹ 415 ಕೋಟಿ ಮಾತ್ರ ಒದಗಿಸಿದ್ದಾರೆ ಎಂದರು.

ಉಪನಗರ ವರ್ತುಲ ರಸ್ತೆ ಕೂಡ ಮೈತ್ರಿ ಸರ್ಕಾರದ ಅವಧಿಯಲ್ಲಿ ರೂಪಿಸಿದ್ದ ಯೋಜನೆ. ಮೋದಿ ತಾವೇ ರೂಪಿಸಿದ ಯೋಜನೆಗಳಿಗೆ ಚಾಲನೆ ನೀಡಿದರೋ ಅಥವಾ ಹಿಂದಿನ ಸರ್ಕಾರಗಳು ರೂಪಿಸಿದ್ದ ಯೋಜನೆಗಳಿಗೆ ಚಾಲನೆ ನೀಡಿದರೋ ಎಂಬುದನ್ನು ಬಿಜೆಪಿ ನಾಯಕರು ಜನರಿಗೆ ತಿಳಿಸಲಿ ಎಂದು ಸವಾಲು ಹಾಕಿದರು.

‘ನಾನು 2108ರಲ್ಲಿ ಮುಖ್ಯಮಂತ್ರಿ ಆಗುವವರೆಗೂ ಉಪನಗರ ರೈಲು ಯೋಜನೆ ದೂಳು ಕುಡಿಯುತ್ತಿತ್ತು. 14 ತಿಂಗಳ ಕಾಲ ಮುಖ್ಯಮಂತ್ರಿಯಾಗಿದ್ದ ನಾನು, ಕೇಂದ್ರ ರೈಲ್ವೆ ಸಚಿವರನ್ನು ಭೇಟಿಮಾಡಿ ಚರ್ಚಿಸಿದ್ದೆ. ಎರಡೇ ತಿಂಗಳಲ್ಲಿ ₹ 23,000 ಕೋಟಿ ವೆಚ್ಚದ ಯೋಜನಾ ಪ್ರಸ್ತಾವ ಸಿದ್ಧಪಡಿಸಿ, ಸಲ್ಲಿಸಿದ್ದೆ. ತಕ್ಷಣ ಶಂಕುಸ್ಥಾಪನೆಗೆ ಮನವಿ ಮಾಡಿದ್ದೆ. 2019ರ ಲೋಕಸಭಾ ಚುನಾವಣೆಗೂ ಮೊದಲು ಅಡಿಗಲ್ಲು ಹಾಕಲು ನಿರ್ಧರಿಸಿದ್ದೆ. ಆದರೆ, ಬಿಜೆಪಿ ಸರ್ಕಾರ ದುರುದ್ದೇಶದಿಂದ ಯೋಜನೆಗೆ ಒಪ್ಪಿಗೆ ನೀಡಿರಲಿಲ್ಲ ಈಗ ಚುನಾವಣೆ ಸಮೀಪಿಸುತ್ತಿದೆ ಎಂಬ ಕಾರಣಕ್ಕೆ ಯೋಜನೆಗೆ ಚಾಲನೆ ನೀಡ ಲಾಗಿದೆ. ಇದೊಂದು ಚುನಾವಣಾ ಗಿಮಿಕ್’ ಎಂದು ವಾಗ್ದಾಳಿ ನಡೆಸಿದರು.

‘ಆಪರೇಷನ್ ಕಮಲದ ರಾಷ್ಟ್ರೀಕರಣ’

‘ಬಿಜೆಪಿಯು ಕರ್ನಾಟಕದಲ್ಲಿ ಹುಟ್ಟುಹಾಕಿದ್ದ ‘ಆಪರೇಷನ್ ಕಮಲ’ ಎಂಬ ಅನೈತಿಕ ರಾಜಕಾರಣದ ರಾಷ್ಟ್ರೀಕರಣ ಮಾಡಲು ಆ ಪಕ್ಷದ ನಾಯಕರು ಹೊರಟಿದ್ದಾರೆ’ ಎಂದು ಎಚ್‌.ಡಿ. ಕುಮಾರಸ್ವಾಮಿ ಟೀಕಿಸಿದರು.

ಮಹಾರಾಷ್ಟ್ರದಲ್ಲಿ ಶಿವಸೇನೆಯ ಶಾಸಕರನ್ನು ಸೆಳೆಯಲು ಬಿಜೆಪಿ ಯತ್ನಿಸುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, ‘ಮಧ್ಯಪ್ರದೇಶದಲ್ಲಿ ಇದೇ ರೀತಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. ರಾಜಸ್ತಾನದಲ್ಲಿ ಅಂತಹ ಪ್ರಯತ್ನದಲ್ಲಿ ಸಫಲವಾಗಿಲ್ಲ. ಈಗ ಮಹಾರಾಷ್ಟ್ರದಲ್ಲಿ ಅದೇ ಯತ್ನ ಮಾಡುತ್ತಿದೆ. ಕರ್ನಾಟಕದಲ್ಲಿ ನಾವು ಯಾವುದೇ ಗಲಭೆಗೆ ಅವಕಾಶ ನೀಡಲಿಲ್ಲ. ಮಹಾರಾಷ್ಟ್ರದಲ್ಲಿ ಶಿವಸೇನೆ ಕಾರ್ಯಕರ್ತರು ಸುಮ್ಮನೆ ಇರಲಾರರು’ ಎಂದರು.

ಮುಂಗಾರು ಚುರುಕು, ವಿವಿಧೆಡೆ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ರಾಜ್ಯದ ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಮಂಗಳವಾರ ಬಿರುಸಿನ ಮಳೆಯಾಗಿದ್ದು, ಮುಂಗಾರು ಚುರುಕುಗೊಂಡಿದೆ. ಕರಾವಳಿ ಜಿಲ್ಲೆಗಳಲ್ಲಿ ಜೂನ್ 25ರವರೆಗೆ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

‘ಗಂಟೆಗೆ 45 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ. ಮೀನುಗಾರರು ಸಮುದ್ರಕ್ಕೆ ಇಳಿಯಬಾರದು’ ಎಂದು ಎಚ್ಚರಿಕೆ ನೀಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳವಾರ ಮಳೆಯ ಆರ್ಭಟ ಜೋರಾಗಿತ್ತು. ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಸುಮಾರು ಎರಡು ತಾಸು ಧಾರಾಕಾರ ಮಳೆ ಸುರಿಯಿತು. ಮಂಗಳೂರು ನಗರದ ತಗ್ಗು ಪ್ರದೇಶಗಳಲ್ಲಿ ರಸ್ತೆಗಳಲ್ಲಿ ಹೊಳೆಯಂತೆ ನೀರು ಹರಿಯಿತು. ಮೂಲ್ಕಿ ಬಳಿ ರಸ್ತೆಗೆ ಮರ ಉರುಳಿ ಬಿದ್ದಿದ್ದು, ಬಳಿಕ ತೆರವುಗೊಳಿಸಲಾಯಿತು.

ಉಡುಪಿ ಜಿಲ್ಲೆಯಾದ್ಯಂತ ಎರಡು ದಿನಗಳಿಂದ ಬಿರುಸಿನ ಮಳೆ ಸುರಿಯುತ್ತಿದೆ. ಮಳೆಗೆ ಹಲವು ಮನೆಗಳಿಗೆ ಹಾನಿಯಾಗಿದೆ.

ಕಾರವಾರದಲ್ಲಿ ಮಂಗಳವಾರ ಧಾರಾಕಾರ ಮಳೆಯಿಂದ ಹಬ್ಬುವಾಡ ಬಳಿ ರಾಜ್ಯ ಹೆದ್ದಾರಿ ಜಲಾವೃತವಾಗಿತ್ತು –ಪ್ರಜಾವಾಣಿ ಚಿತ್ರ

ಕಾರವಾರ ವರದಿ: ಜಿಲ್ಲೆಯಲ್ಲಿ ಮಧ್ಯಾಹ್ನದವರೆಗೆ ಧಾರಾಕಾರ ಮಳೆಯಾಯಿತು. ಕಾರವಾರ ನಗರದಲ್ಲಿ ಹಲವೆಡೆ ರಸ್ತೆಗಳು ಜಲಾವೃತವಾದವು. ರವೀಂದ್ರನಾಥ ಟ್ಯಾಗೋರ್ ಕಡಲತೀರದಲ್ಲಿ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಮಳೆ ನೀರು ನಿಂತು, ಅರ್ಧ ಕಿಲೋಮೀಟರ್ ಹೊಳೆಯಂತಾಗಿತ್ತು. ಜಿಲ್ಲೆಯ ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟ್ಕಳದಲ್ಲೂ ಧಾರಾಕಾರ ಮಳೆಯಾಗಿದೆ.

ಅರೆ ಮಲೆನಾಡಿನ ಹಳಿಯಾಳ, ಮುಂಡಗೋಡದಲ್ಲಿ ಉತ್ತಮ ಮಳೆಯಾಗಿದ್ದು, ಕೃಷಿಗೆ ಅನುಕೂಲವಾಗಿದೆ. ಸಿದ್ದಾಪುರದಲ್ಲಿ ಜೋರಾಗಿ, ಶಿರಸಿಯಲ್ಲಿ ಸಾಧಾರಣ ಮಳೆಯಾಗಿದೆ.

ಬೆಳಗಾವಿ ವರದಿ: ನಗರ ಹಾಗೂ ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆ ಸುರಿಯಿತು.

ಜಿಲ್ಲೆಯ ಹಿಡಕಲ್ ಡ್ಯಾಮ್, ಖಾನಾಪುರ, ಕಿತ್ತೂರು ಸುತ್ತಮುತ್ತಲಿನ ಪ್ರದೇಶಗಳಲ್ಲೂ ತುಂತುರು ಮಳೆಯಾಗಿದೆ. ಹುಬ್ಬಳ್ಳಿಯಲ್ಲೂ ಕೆಲಹೊತ್ತು ಮಳೆಯಾಗಿದೆ.

ಗದಗ ವರದಿ: ಜಿಲ್ಲೆಯ ಮುಂಡರಗಿ ಪಟ್ಟಣ ಸೇರಿದಂತೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಒಂದು ತಾಸು ಬಿರುಸಿನ ಮಳೆ ಸುರಿಯಿತು. ಅದೇ ರೀತಿ, ಲಕ್ಷ್ಮೇಶ್ವರ ತಾಲ್ಲೂಕಿನಲ್ಲೂ ಉತ್ತಮ ಮಳೆಯಾಗಿದೆ. ಹೊಸಪೇಟೆಯಲ್ಲಿಯೂ ಬಿರುಸಿನ ಮಳೆಯಾಗಿದೆ.

ಮಡಿಕೇರಿ ವರದಿ: ಕೊಡಗು ಜಿಲ್ಲಾ ಕೇಂದ್ರದಲ್ಲಿ ಬಿರುಸಿನ ಮಳೆ ಸುರಿಯಿತು. ಶನಿವಾರಸಂತೆ, ಸಿದ್ದಾಪುರ, ಸೋಮವಾರಪೇಟೆ, ಸುಂಟಿಕೊಪ್ಪ, ಗೋಣಿಕೊಪ್ಪಲು ಭಾಗದಲ್ಲಿ ತುಂತುರು ಮಳೆಯಾಗಿದೆ. ಮೈಸೂರಿನಲ್ಲಿ ಕೆಲ ಹೊತ್ತು ಸಾಧಾರಣ ಮಳೆಯಾಯಿತು.

ಅಧಿಕ ಮಳೆ: ಎಲ್ಲಿ, ಎಷ್ಟು?
(ಸೆಂ.ಮೀ.ಗಳಲ್ಲಿ)

ಉಪ್ಪೂರು	10.1
ಹೊನ್ನಾವರ	8.2
ಕಾರವಾರ	7.1
ಕುಮಟಾ	5.9
ಮಂಗಳೂರು	5.28
ಮೂಡುಬಿದಿರೆ	5.21

ಸಮುದ್ರದಲ್ಲಿ ಸಿಲುಕಿದ್ದ ಸಿರಿಯಾದ 15 ನಾವಿಕರ ರಕ್ಷಣೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಅರಬ್ಬೀಸಮುದ್ರದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಸಿರಿಯಾ ದೇಶದ 15 ನಾವಿಕರನ್ನು ಭಾರತೀಯ ಕರಾವಳಿ ರಕ್ಷಣಾ ಪಡೆಯು (ಐಸಿಜಿ) ಮಂಗಳವಾರ ರಕ್ಷಣೆ ಮಾಡಿದೆ.

ಎಂ.ವಿ.ಪ್ರಿನ್ಸಸ್ ಮಿರಾಲ್ ಎಂಬ ವಿದೇಶಿ ಹಡಗು 8 ಸಾವಿರ ಟನ್ ಉಕ್ಕಿನ ಕಾಯಿಲ್‌ಗಳನ್ನು ಚೀನಾದ ಟಿಯಾಂಜಿನ್‌ನಿಂದ ಲೆಬನಾನ್‌ಗೆ ಸಾಗಿಸುತ್ತಿತ್ತು. ಸಿರಿಯಾ ದೇಶದ 15 ನಾವಿಕರು ಅದರಲ್ಲಿದ್ದರು. ಪ್ರಯಾಣದ ವೇಳೆ ಹಡಗಿಗೆ ಸಣ್ಣ ರಂಧ್ರದ ಮೂಲಕ ನೀರು ನುಗ್ಗಿತ್ತು. ಅದರ ದುರಸ್ತಿಗೆ ಹಡಗನ್ನು ನವಮಂಗಳೂರು ಬಂದರಿ ತರಲು ಅನುಮತಿಗಾಗಿ ಕ್ಯಾಪ್ಟನ್ ದಕ್ಷಿಣ ಕನ್ನಡ ಜಿಲ್ಲಾಡಳಿತಕ್ಕೆ ಇ–ಮೇಲ್ ಕಳುಹಿಸಿದ್ದರು.

ಪ್ರತಿಕೂಲ ಹವಾಮಾನದಿಂದಾಗಿ ಕರಾವಳಿ ತೀರದಿಂದ 5.2 ಮೈಲಿ ದೂರದಲ್ಲಿ ಹಡಗು ಲಂಗರು ಹಾಕಿತ್ತು. ಭಾರತೀಯ ಕರಾವಳಿ ರಕ್ಷಣಾ ಪಡೆಯ ಸಿಬ್ಬಂದಿ ವಿಕ್ರಮ್, ಅಮರ್ಥ್ಯ ಹಡಗುಗಳಲ್ಲಿ ಸ್ಥಳಕ್ಕೆ ಧಾವಿಸಿ, ಸಿರಿಯಾ ಪ್ರಜೆಗಳನ್ನು ರಕ್ಷಿಸಿ ದಡಕ್ಕೆ ಕರೆತಂದರು.

13 ಕುರಿಗಳು ಸಾವು

ಕಲಬುರಗಿ: ಕಲಬುರಗಿ ನಗರ ಸೇರಿ ಜಿಲ್ಲೆಯ ಯಡ್ರಾಮಿ, ಕಾಳಗಿಯಲ್ಲಿ ಕೊಪ್ಪಳ ಜಿಲ್ಲೆಯ ಹನುಮಸಾಗರದಲ್ಲಿ ಉತ್ತಮ ಮಳೆಯಾಯಿತು.

ಯಡ್ರಾಮಿ ತಾಲ್ಲೂಕಿನ ಸುಂಬಡ ಬಳಿ ಸಿಡಿಲು ಬಡಿದು 13 ಕುರಿಗಳು ಮೃತಪಟ್ಟಿವೆ.

‘ಸಮುದ್ರಕ್ಕೆ ಇಳಿಯದಿರಿ’

ಬೆಂಗಳೂರು: ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಕೊಡಗು, ಹಾಸನ, ಶಿವಮೊಗ್ಗ ಹಾಗೂ ಕೋಲಾರ ಜಿಲ್ಲೆಗಳಲ್ಲಿ ಮುಂದಿನ 48 ಗಂಟೆಯಲ್ಲಿ ಭಾರಿ ಮಳೆ ಸುರಿಯುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆ ಯೆಲ್ಲೊ ಅಲರ್ಟ್ ಘೋಷಿಸಿದೆ.

ಕರಾವಳಿ ಭಾಗದಲ್ಲಿ ಪ್ರತಿ ಗಂಟೆಗೆ 40–50 ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದ್ದು, ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ.

‘ಎನ್‌ಡಿಆರ್‌ಎಫ್ ನಿಯಮ ತಿದ್ದುಪಡಿ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ನಿಯಮಗಳನ್ನು ತಕ್ಷಣ ತಿದ್ದುಪಡಿ ಮಾಡಿ ಪ್ರಕೃತಿ ವಿಕೋಪದಿಂದ ಆಗಿರುವ ಹಾನಿಗೆ ಸೂಕ್ತ ಪರಿಹಾರ ನೀಡಬೇಕು’ ಎಂದು ರಾಜ್ಯ ಸರ್ಕಾರವನ್ನು ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

‘5 ವರ್ಷಗಳಿಗೊಮ್ಮೆ ಎನ್‌ಡಿಆರ್‌ಎಫ್ ನಿಯಮ ತಿದ್ದುಪಡಿ ಮಾಡಿ, ಬೆಳೆಗಳಿಗೆ ಇನ್‌ಪುಟ್ ಸಬ್ಸಿಡಿಯ ಮೊತ್ತ, ಮೀನುಗಾರರ ದೋಣಿಗಳಿಗೆ ಆದ ಹಾನಿ, ಜನ ಜಾನು ವಾರುಗಳಿಗೆ ಉಂಟಾದ ತೊಂದರೆ, ಮನೆಹಾನಿ, ಸಾರ್ವಜನಿಕ ಆಸ್ತಿ ಪಾಸ್ತಿಗಳಿಗೆ ಆದ ನಷ್ಟಗಳಿಗೆ ನೀಡುವ ಪರಿಹಾರದ ಮೊತ್ತವನ್ನು ಪರಿಷ್ಕರಿಸಲಾಗುತ್ತದೆ. ಆದರೆ, 2015-20ಕ್ಕೆ ಅನ್ವಯವಾಗುವಂತೆ ರೂಪಿಸಿದ ನಿಯಮಗಳನ್ನು 2015ರಲ್ಲಿ ಪರಿಷ್ಕರಿಸಲಾಗಿತ್ತು. 2020ರಲ್ಲಿ ಮತ್ತೆ ಪರಿಷ್ಕರಿಸಬೇಕಾಗಿತ್ತು. ಇದುವರೆಗೂ ಪರಿಷ್ಕರಿಸಿಲ್ಲ’ ಎಂದಿದ್ದಾರೆ.

‘2 ವರ್ಷಗಳಿಂದ ಎಲ್ಲ ಉತ್ಪನ್ನಗಳ ಬೆಲೆ ದುಪ್ಪಟ್ಟಾಗಿವೆ. ಹಣದುಬ್ಬರ ದಾಖಲೆ ಮಟ್ಟಕ್ಕೆ ತಲುಪಿದೆ. ಇಷ್ಟಾದರೂ ಕೇಂದ್ರ ನಿಯಮಗಳನ್ನು ಪರಿಷ್ಕರಿಸಿಲ್ಲ. ಪ್ರಸ್ತುತ ಒಂದು ಎಕರೆ ಮಳೆಯಾಶ್ರಿತ ಪ್ರದೇಶದಲ್ಲಿ ರೈತರು ಬೆಳೆದ ಬೆಳೆ ಶೇ 33ಕ್ಕಿಂತ ಹೆಚ್ಚು ಹಾನಿಯಾದರೆ ಸಿಗುವ ಪರಿಹಾರ ಕೇವಲ ₹ 2,720. ಅದರಲ್ಲೂ ಗರಿಷ್ಠ 2.5 ಹೆಕ್ಟೇರ್‌ಗೆ ಅಂದರೆ ₹ 6,800 ಮಾತ್ರ. ಪ್ರತಿ ಗುಂಟೆಗೆ ಕೇವಲ ₹ 68. ಈ ಮೊತ್ತ ಪರಿಷ್ಕರಣೆ ಆಗಲೇಬೇಕಾಗಿದೆ’ ಎಂದು ಆಗ್ರಹಿಸಿದ್ದಾರೆ.

‘ರಾಜ್ಯದಲ್ಲಿ ಮೇ ತಿಂಗಳಿಂದ ನವೆಂಬರ್‌ವರೆಗೆ ಸಂಭವಿಸಿದ ಪ್ರವಾಹದ ಹಾನಿಗೆ ಸಂಬಂಧಿಸಿದಂತೆ ಕೇಂದ್ರ ಇದೇ ಮಾರ್ಚ್‌ನಲ್ಲಿ ಕೇವಲ ₹ 492 ಕೋಟಿ ಬಿಡುಗಡೆ ಮಾಡಿದೆ. ಪರಿಹಾರಕ್ಕೆ ಒತ್ತಡ ತಂದಾಗ ರಾಜ್ಯ ಸರ್ಕಾರ ₹ 2,391 ಕೋಟಿ ಪರಿಹಾರ ನೀಡಿದೆ. ಕರ್ನಾಟಕಕ್ಕೆ ಕೊಡ ಬೇಕಾದಷ್ಟು ಪರಿಹಾರ ನೀಡದೆ ಕೇಂದ್ರ ಅನ್ಯಾಯ ಮಾಡಿದೆ’ ಎಂದು ಆರೋಪಿಸಿದ್ದಾರೆ.

ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಸೇರಿದಂತೆ ಆರು ಪುಟ ಕೈಬಿಟ್ಟ ಚಕ್ರತೀರ್ಥ ಸಮಿತಿ

ಮೈಸೂರು ಒಡೆಯರ್ ಪಠ್ಯಗಳಿಗೂ ಕತ್ತರಿ!

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪುಸ್ತಕ ಪರಿಷ್ಕರಣ ಸಮಿತಿ 7ನೇ ತರಗತಿಯ ಸಮಾಜ ವಿಜ್ಞಾನ ಭಾಗ-1ರಲ್ಲಿರುವ 'ಮೈಸೂರು ಒಡೆಯರ್' ಪಾಠದಿಂದ ಮುಮ್ಮಡಿ ಕೃಷ್ಣರಾಜ ಒಡೆಯರ್, 10ನೇ ಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಆಗ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯ, ಸರ್. ಮಿರ್ಜಾ ಇಸ್ಮಾಯಿಲ್ ಹಾಗೂ ಕಮಿಷನರ್‌ಗಳಾದ ಮಾರ್ಕ್ ಕಬ್ಬನ್, ಎಲ್.ಬಿ. ಬೌರಿಂಗ್ ಅವರ ಪಠ್ಯಗಳನ್ನೂ ಕೈಬಿಟ್ಟಿದೆ!

ಟಿಪ್ಪು ವ್ಯಕ್ತಿತ್ವ ಮತ್ತು ಸಾಧನೆಯಿಂದ ಮಿರ್ಜಾ ಇಸ್ಮಾಯಿಲ್‌ವರೆಗಿನ ಸುಮಾರು ಆರು ಪುಟಗಳ ಪಠ್ಯವನ್ನು ಚಕ್ರತೀರ್ಥ ಸಮಿತಿ ಕೈಬಿಟ್ಟಿದೆ. ಆ ಪಾಠದಲ್ಲಿ ಮೈಸೂರಿನ ಇತಿಹಾಸದಲ್ಲಿ 19ನೇ ಶತಮಾನದ ಆರಂಭದಿಂದ 20ನೇ ಶತಮಾನದ ಮಧ್ಯಂತರದವರೆಗೆ ಪ್ರಮುಖ ಪಾತ್ರ ವಹಿಸಿದ ಪ್ರಮುಖರ ಪರಿಚಯ ನೀಡಲಾಗಿತ್ತು. ಜೊತೆಗೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಜೀವನ ಮತ್ತು ಸಾಧನೆಗಳನ್ನೂ ಪರಿಚಯಿಸಲಾಗಿತ್ತು. ಅಷ್ಟೂ ಭಾಗಕ್ಕೆ ಕತ್ತರಿ ಹಾಕಲಾಗಿದೆ. ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿಯು ಪರಿಷ್ಕರಿಸಿದ್ದ ಪಠ್ಯದಲ್ಲಿ ಈ ಭಾಗ ಇತ್ತು.

'ಬರಗೂರು ನೇತೃತ್ವದ ಸಮಿತಿ ಮೈಸೂರು ಒಡೆಯರ್ ಕುರಿತು ಹೆಚ್ಚಿನ ಸ್ಥಳಾವಕಾಶ ನೀಡದೆ, ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಚರಿತ್ರೆಗೆ ಆದ್ಯತೆ ನೀಡಿತ್ತು' ಎಂದು ಈ ಹಿಂದೆ ಶಿಕ್ಷಣ ಸಚಿವರು ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ, ಪಠ್ಯದಲ್ಲಿ ಟಿಪ್ಪು ಸುಲ್ತಾನ್ ಕುರಿತ ವೈಭವೀಕರಣವಿದೆ ಎಂದು ಕತ್ತರಿ ಪ್ರಯೋಗಿಸಲು ಹೋಗಿರುವ ಚಕ್ರತೀರ್ಥ ಸಮಿತಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರಮುಖ ಸಾಧನೆಗಳನ್ನು ಕುರಿತು ಸುಮಾರು ಎರಡು ಪುಟಗಳ ವಿವರಗಳೂ ಸೇರಿದಂತೆ ಮೈಸೂರು ಒಡೆಯರ್ ಕಾಲಘಟ್ಟದ ಇತಿಹಾಸವನ್ನು ತೆಗೆದುಹಾಕಿದೆ.

ಮಹಾತ್ಮ ಗಾಂಧಿಯವರಿಂದ 'ರಾಜರ್ಷಿ' ಎಂದು ಕರೆಸಿಕೊಂಡ ನಾಲ್ವಡಿಯವರು ಕೃಷ್ಣರಾಜ ಸಾಗರ ಅಣೆಕಟ್ಟು ನಿರ್ಮಾಣ ಮಾಡಿದ್ದನ್ನು, ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿದ್ದನ್ನು, ಮೊದಲ ಬಾರಿಗೆ ಮಹಿಳೆಯರಿಗೆ ಮತದಾನದ ಹಕ್ಕು ನೀಡಿದ್ದನ್ನೂ ಒಳಗೊಂಡಂತೆ ಶಿಕ್ಷಣ, ಸಾಹಿತ್ಯ, ಕೈಗಾರಿಕೆ, ಬ್ಯಾಂಕ್ ಮುಂತಾದ ಕ್ಷೇತ್ರಗಳ ಪ್ರಗತಿಗೆ ಕಾರಣವಾದದ್ದನ್ನು ಬರಗೂರು ನೇತೃತ್ವದ ಪಠ್ಯಪುಸ್ತಕದಲ್ಲಿ ವಿವರಿಸಲಾಗಿತ್ತು. ಚಕ್ರತೀರ್ಥ ಸಮಿತಿಯು ಈ ಎಲ್ಲ ವಿವರಗಳನ್ನೂ ಕೈಬಿಟ್ಟಿದೆ. ಅಷ್ಟೇ ಅಲ್ಲದೆ, ವಿಶ್ವೇಶ್ವರಯ್ಯನವರನ್ನು ಕುರಿತ ವಿವರಗಳಿಗೂ ಕತ್ತರಿ ಹಾಕಿದೆ. ಇದೇ ಗತಿ ಮಿರ್ಜಾ ಇಸ್ಮಾಯಿಲ್ ಅವರ ಪಠ್ಯಕ್ಕೂ ಒದಗಿದೆ.

7ನೇ ತರಗತಿಯ ಸಮಾಜ ವಿಜ್ಞಾನ ಭಾಗ-1ರಲ್ಲಿದ್ದ 'ಭಕ್ತಿ ಪಂಥ ಮತ್ತು ಸೂಫಿ ಪರಂಪರೆ 'ಎಂಬ ಪಾಠದಿಂದ ಅಕ್ಕಮಹಾದೇವಿ, ಶಿಶುನಾಳ ಶರೀಫರು, ಕನಕದಾಸರು ಮತ್ತು ಪುರಂದರದಾಸರನ್ನು ಕುರಿತ ಎಲ್ಲ ವಿವರಗಳನ್ನೂ ತೆಗೆದುಹಾಕಲಾಗಿದೆ. ಉತ್ತರ ಭಾರತದವರನ್ನು ಮಾತ್ರ ಉಳಿಸಿಕೊಂಡು ಕರ್ನಾಟಕದ ಅಸ್ಮಿತೆಗೆ ಧಕ್ಕೆ ತರಲಾಗಿದೆ ಎಂಬ ಆಕ್ಷೇಪ ವ್ಯಕ್ತವಾಗಿದೆ. ಆರನೇ ತರಗತಿಯ ಸಮಾಜ ವಿಜ್ಞಾನ ಭಾಗ-1ರಲ್ಲಿ ಬರಗೂರು ಸಮಿತಿಯು ಚಂದ್ರಗುಪ್ತ ಮೌರ್ಯನನ್ನು ಕುರಿತು ನೀಡಿದ್ದ ಅಂಶಗಳನ್ನು ತಿರುಚಿ, ಚಕ್ರತೀರ್ಥ ಸಮಿತಿ ಚಾಣಕ್ಯನನ್ನು ವೈಭವೀಕರಿಸಿದೆ ಎಂಬ ಟೀಕೆ ವ್ಯಕ್ತವಾಗಿದೆ.

ಕಯ್ಯಾರರ ಬದಲು 'ಪೈ'!

7ನೇ ತರಗತಿಯ ಸಮಾಜ ವಿಜ್ಞಾನ ಭಾಗ– 2ರಲ್ಲಿ 'ಕರ್ನಾಟಕ ಏಕೀಕರಣ ಹಾಗೂ ಗಡಿ ವಿವಾದಗಳು' ಪಾಠದಲ್ಲಿ 'ಕಯ್ಯಾರ ಕಿಞ್ಞಣ್ಣ ರೈ ಅವರು ಕರ್ನಾಟಕದಲ್ಲಿ ಕಾಸರಗೋಡು ವಿಲೀನಗೊಳ್ಳಬೇಕೆಂದು ಕೊನೆಯವರೆಗೂ ಹೋರಾಡಿದರು' ಎಂದಿತ್ತು. ಚಕ್ರತೀರ್ಥ ಸಮಿತಿಯು ಈ ವಾಕ್ಯವನ್ನು 'ಕನ್ನಡದ ಮೊದಲ 'ರಾಷ್ಟ್ರಕವಿ' ಮಂಜೇಶ್ವರ ಗೋವಿಂದ ಪೈ ಅವರು ಕರ್ನಾಟಕದಲ್ಲಿ ಕಾಸರಗೋಡು ವಿಲೀನಗೊಳ್ಳಬೇಕೆಂದು ಕೊನೆಯವರೆಗೂ ಹೋರಾಡಿದರು' ಎಂದು ಬದಲಿಸಿದೆ.

ಕರ್ನಾಟಕ ಏಕೀಕರಣಕ್ಕೆ ಪೈ ಅವರ ಪ್ರಯತ್ನ ಇದ್ದರೂ, ರೈ ಅವರ ವಿಷಯ ತೆಗೆದು ಪೈ ಅವರ ವಿಷಯ ಸೇರಿಸುವ ಅಗತ್ಯವಿರಲಿಲ್ಲ. ಏಕೆಂದರೆ, ಏಕೀಕರಣದ ಹೋರಾಟದಲ್ಲಿ ಕಯ್ಯಾರ ಕಿಞ್ಞಣ್ಣ ರೈ ಅವರ ಪಾತ್ರ ಹಿರಿದಾಗಿದ್ದು, ಅವರ ಹೆಸರನ್ನು ಕೈಬಿಟ್ಟಿರುವುದಕ್ಕೆ ಆಕ್ಷೇಪಗಳು ಕೇಳಿಬಂದಿವೆ.

ಟಿಪ್ಪು ಕುರಿತು ತಿರುಚಿದ ಮಾಹಿತಿ

ಬರಗೂರು ಸಮಿತಿ ಪರಿಷ್ಕರಿಸಿದ್ದ ಪಠ್ಯದಲ್ಲಿ 'ಟಿಪ್ಪು ಸಹಾಯಕ್ಕೆ ಯಾರೂ ಬರಲಿಲ್ಲವಾದರೂ ಏಕಾಂಗಿಯಾಗಿ ಬ್ರಿಟಿಷರನ್ನು ಎದುರಿಸಿದನು. ಅಂತಿಮವಾಗಿ ಬ್ರಿಟಿಷರು ಮಂಗಳೂರು ಒಪ್ಪಂದ ಮಾಡಿಕೊಂಡರು' ಎಂದು ಇದೆ. ಆದರೆ, ಚಕ್ರತೀರ್ಥ ಸಮಿತಿ 'ಟಿಪ್ಪು ಏಕಾಂಗಿಯಾಗಿ ಬ್ರಿಟಿಷರನ್ನು ಎದುರಿಸಲಾಗದೆ ಮಂಗಳೂರು ಒಪ್ಪಂದ ಮಾಡಿಕೊಂಡನು' ಎಂದು ಇತಿಹಾಸವನ್ನೇ ತಿರುಚಿದೆ ಎಂಬ ಆರೋಪ ವ್ಯಕ್ತವಾಗಿದೆ.

ಪರಿಷ್ಕೃತ ಪಠ್ಯಪುಸ್ತಕ ಕೈಬಿಡಿ: ದೇವೇಗೌಡ

ನಾಡಗೀತೆ ತಿರುಚಿದ್ದ ಚಕ್ರತೀರ್ಥಗೆ ಪರಿಷ್ಕರಣೆ ವಹಿಸಿದ್ದೇ ತಪ್ಪು: ಮುಖ್ಯಮಂತ್ರಿ ಬೊಮ್ಮಾಯಿಗೆ ಪತ್ರ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ನಾಡಗೀತೆಯನ್ನು ತಿರುಚಿ ಅವಮಾನ ಮಾಡಿದ್ದ ರೋಹಿತ್ ಚಕ್ರತೀರ್ಥ ಅವರನ್ನು ಪಠ್ಯ ಪರಿಷ್ಕರಣೆಗೆ ನೇಮಿಸಿದ್ದೇ ತಪ್ಪು. ಈ ಸಮಿತಿ ಸಿದ್ಧಪಡಿಸಿರುವ ಪರಿಷ್ಕೃತ ಪಠ್ಯಪುಸ್ತಕಗಳನ್ನು ಹಿಂಪಡೆಯಬೇಕು' ಎಂದು ಆಗ್ರಹಿಸಿ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

ಪರಿಷ್ಕೃತ ಪಠ್ಯಪುಸ್ತಕಗಳನ್ನು ವಿರೋಧಿಸಿ ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ ನೇತೃತ್ವದಲ್ಲಿ ಶನಿವಾರ ನಡೆದ ಪ್ರತಿಭಟನಾ ಸಭೆಯ ಹಕ್ಕೊತ್ತಾಯದ ನಿರ್ಣಯದೊಂದಿಗೆ ಮುಖ್ಯಮಂತ್ರಿಯವರಿಗೆ ಸೋಮವಾರ ಪತ್ರ ಬರೆದಿರುವ ಅವರು, 'ಪ್ರೊ.ಬರಗೂರು ರಾಮಚಂದ್ರಪ್ಪ ನೇತೃತ್ವದ 27 ಸಮಿತಿಗಳು ರೂಪಿಸಿರುವ ಹಳೆಯ ಪಠ್ಯಪುಸ್ತಕಗಳನ್ನೇ ಈ ವರ್ಷವೂ ಮುಂದುವರಿಸುವುದು ಸೂಕ್ತ ಎಂಬುದು ನನ್ನ ಅಭಿಪ್ರಾಯ' ಎಂದು ತಿಳಿಸಿದ್ದಾರೆ.

'ಪಠ್ಯಪುಸ್ತಕಗಳಲ್ಲಿನ ಅಸಂಖ್ಯಾತ ದೋಷ ಮತ್ತು ಅನ್ಯಾಯಗಳನ್ನು ಕೇವಲ ತಪ್ಪೋಲೆ ಅಥವಾ ಪ್ರತ್ಯೇಕ ಪುಟಗಳ ಮುದ್ರಣದಿಂದ ಸರಿಪಡಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಹಳೆಯ ಪಠ್ಯಪುಸ್ತಕಗಳನ್ನೇ ಮುಂದುವರಿಸಿ' ಎಂದಿದ್ದಾರೆ. 'ಪಠ್ಯಪುಸ್ತಕಗಳ ಮರು ಪರಿಷ್ಕರಣೆಗೆ ನೇಮಿಸಿದ ಸಮಿತಿಯ ಅಧ್ಯಕ್ಷರು ರಾಷ್ಟ್ರಕವಿ ಕುವೆಂಪು ವಿರಚಿತ ನಾಡಗೀತೆಗೆ ಅವಮಾನ ಮಾಡಿರುತ್ತಾರೆ. ನಾಡಗೀತೆಯನ್ನು ಅಸಭ್ಯವಾಗಿ ತಿರುಚಿದವರಿಗೆ ಬಹುಮಾನ ನೀಡುತ್ತೇನೆ ಎಂದು ಹೇಳಿದ್ದು ಕೂಡ ಕುವೆಂಪು ಅವರಿಗೆ ಮಾಡಿದ ದೊಡ್ಡ ಅವಮಾನವೇ ಆಗಿದೆ. ನಾಡ ಧ್ವಜವನ್ನು ಒಳ ಉಡುಪಿಗೆ ಹೋಲಿಸಿದ್ದೂ ನಾಡ ಅಸ್ಮಿತೆಗೆ ಮಾಡಿದ ಅವಮಾನ. ಜತೆಗೆ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನೂ ಹಂಗಿಸಿದ್ದಾರೆ. ಇಂಥ ವ್ಯಕ್ತಿಯ ಅಧ್ಯಕ್ಷತೆಯಲ್ಲಿ ಪಠ್ಯಪುಸ್ತಕ ಪರಿಷ್ಕರಣೆ ಮಾಡಲು ಸರ್ಕಾರ ನಿರ್ಧರಿಸಿದ್ದು ಮೊದಲ ತಪ್ಪು' ಎಂದು ಹೇಳಿದ್ದಾರೆ.

'ಪಠ್ಯಪುಸ್ತಕಗಳ ಪರಿಷ್ಕರಣೆಯಲ್ಲಿ ಅಸಂಖ್ಯಾತ ತಪ್ಪುಗಳಾಗಿವೆ. ಸಮಾಜ ವಿಜ್ಞಾನ ಪಠ್ಯಪುಸ್ತಕದ ಏಕೀಕರಣ ಪಾಠದಿಂದ ಕುವೆಂಪು ಅವರ ಭಾವಚಿತ್ರವನ್ನು ತೆಗೆದು ಹಾಕಲಾಗಿದೆ. ಬಸವಣ್ಣನವರ ಚಳವಳಿಯ ಆಶಯವುಳ್ಳ ಭಾಗಗಳನ್ನು ಕೈಬಿಡಲಾಗಿದೆ. ಸಿದ್ಧಗಂಗೆ ಮತ್ತು ಆದಿಚುಂಚನಗಿರಿ ಶ್ರೀಗಳ ಸೇವೆಯ ವಿವರಗಳನ್ನು ತೆಗೆಯಲಾಗಿದೆ. ಅಂಬೇಡ್ಕರ್ ಅವರಿಗೆ 'ಸಂವಿಧಾನ ಶಿಲ್ಪಿ' ಎಂದಿದ್ದ ವಿಶೇಷಣವನ್ನು ತೆಗೆಯಲಾಗಿದೆ' ಎಂದು ದೇವೇಗೌಡ ಪತ್ರದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಅಕ್ಕ, ಕನಕ, ಪುರಂದರ, ಷರೀಫರಂತಹ ಮಹಾನ್ ದಾರ್ಶನಿಕ ಸಂತರ ಪಠ್ಯಗಳನ್ನೇ ತೆಗೆಯಲಾಗಿದೆ. ಕೆಂಪೇಗೌಡ, ಸುರಪುರ ನಾಯಕರ ವಿಷಯಗಳನ್ನು ಕಡಿತಗೊಳಿಸಲಾಗಿದೆ. ಡಾ. ಅಂಬೇಡ್ಕರ್ ಮತ್ತು ಕುವೆಂಪು ಅವರು ಸಾರಿದ ಸಾಮಾಜಿಕ ನ್ಯಾಯ, ಸಮಾನತೆ, ಜಾತ್ಯತೀತತೆ ಮತ್ತು ವಿಶ್ವಮಾನವತ್ವದ ಪರಿಕಲ್ಪನೆಗಳನ್ನು ಕಡೆಗಣಿಸಿರುವುದು ಪುನರ್ ಪರಿಷ್ಕರಣೆಯಲ್ಲಿ ಎದ್ದು ಕಾಣುತ್ತದೆ' ಎಂದು ಹೇಳಿದ್ದಾರೆ.

ಪಠ್ಯ ವಿವಾದ: ಸಿ.ಎಂ ಸಭೆ ಇಂದು

ಬೆಂಗಳೂರು: ಪಠ್ಯಪುಸ್ತಕ ಪರಿಷ್ಕರಣೆ ವಿವಾದಕ್ಕೆ ಸಂಬಂಧಿಸಿದಂತೆ ಬುಧವಾರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮತ್ತು ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳ ಸಭೆ ನಡೆಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಬರೆದಿರುವ ಪತ್ರ ಸಿಕ್ಕಿದೆ. ಆ ಪತ್ರದ ಸಾರಾಂಶವನ್ನು ಅವಲೋಕಿಸಿದ್ದೇನೆ. ಅವರು ನೀಡಿರುವ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಿ ಏನೆಲ್ಲ ಮಾಡಲು ಸಾಧ್ಯವೋ ಆ ಸಂಬಂಧ ತೀರ್ಮಾನ ತೆಗೆದುಕೊಳ್ಳುತ್ತೇನೆ ಮತ್ತು ಗೌರವಪೂರ್ವಕವಾಗಿ ಉತ್ತರ ಕೊಡುತ್ತೇನೆ' ಎಂದು ತಿಳಿಸಿದರು.

'ಕೋವಿಡ್ ಸಂದರ್ಭದಲ್ಲಿ ರಾಜ್ಯಕ್ಕೆ ಏನೂ ಮಾಡದೇ ಈಗ ಯೋಗ ಮಾಡಲು ಬಂದಿದ್ದಾರೆ' ಎಂಬ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ಟೀಕೆಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ಮೋದಿಯವರು ಇಡೀ ದೇಶದಲ್ಲಿ ಕೋವಿಡ್ ಯಾವ ರೀತಿ ನಿರ್ವಹಿಸಿದ್ದಾರೆ ಎಂಬುದು ಜಗತ್ತಿಗೇ ಗೊತ್ತಿದೆ. ಭಾರತದಲ್ಲಿ ಕೋವಿಡ್ ನಿರ್ವಹಣೆಗೆ ಜಗತ್ತೇ ಕೊಂಡಾಡಿದೆ. ಕರ್ನಾಟಕಕ್ಕೆ ಸಾವಿರಾರು ಕೋಟಿ ಹಣ ನೀಡಿದ್ದೂ ಅಲ್ಲದೇ, ಔಷಧ, ಲಸಿಕೆ, ವೈದ್ಯಕೀಯ ಉಪಕರಣಗಳು, ಆಮ್ಲಜನಕವನ್ನು ಕೊರತೆ ಆಗದಂತೆ ಪೂರೈಸಿದ್ದಾರೆ. ಮೋದಿಯವರ ಜನಪ್ರಿಯತೆ ಸಹಿಸದೇ ಸಿದ್ದರಾಮಯ್ಯ ಏನೇನೋ ಮಾತನಾಡುತ್ತಾರೆ ಎಂದರು.

ರಾಜ್ಯದಲ್ಲಿ ನಡೆಯುತ್ತಿರುವ ದೊಡ್ಡ ಪ್ರಮಾಣದ ಅಭಿವೃದ್ಧಿ, ಜನಪರ ಕಾರ್ಯಕ್ರಮಗಳು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದ ಯೋಜನೆಗಳ ಅನುಷ್ಠಾನದ ಬಗ್ಗೆ ಪ್ರಧಾನಿ ನರೇಂದ್ರ ಮೋದಿಯವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಬೊಮ್ಮಾಯಿ ಹೇಳಿದರು.

ಬಸವಣ್ಣನವರ ಹೊಸ ಪಠ್ಯ ಬರೆಯಿಸಿ–ಸಾಣೇಹಳ್ಳಿ ಶ್ರೀ ಪತ್ರ

ಬೆಂಗಳೂರು: 'ಪಠ್ಯ ಪುಸ್ತಕದಲ್ಲಿ ಬಸವಣ್ಣನವರ ಕುರಿತ ಹಿಂದಿನ ಎಲ್ಲ ಸಮಿತಿಗಳ ಪಠ್ಯವನ್ನು ಕೈಬಿಟ್ಟು ಹೊಸದಾಗಿ ಬರೆಸಿ ವಿದ್ಯಾರ್ಥಿಗಳಿಗೆ ಕೊಡುವುದು ಉತ್ತಮ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಲಹೆ ನೀಡಿದ್ದಾರೆ. ಈ ಕುರಿತು ಮುಖ್ಯಮಂತ್ರಿಗೆ ಪತ್ರ ಬರೆದಿರುವ ಅವರು, 'ಈ ನೆಲೆಯಲ್ಲೇ ಎರಡು ಪಠ್ಯಗಳನ್ನು ಕಳುಹಿಸಿದ್ದು, ಅವುಗಳನ್ನು ಗಮನಿಸಿ ಆದಷ್ಟು ಬೇಗ ಸೂಕ್ತ ಕ್ರಮ ತೆಗೆದುಕೊಂಡರೆ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿದೆ. ಶಾಲೆ ಆರಂಭವಾಗಿ ತಿಂಗಳಾದರೂ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳೇ ದೊರೆಯುತ್ತಿಲ್ಲ' ಎಂದಿದ್ದಾರೆ.

ಪತ್ರದಲ್ಲಿ ಏನಿದೆ: ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯ ಪರಿಷ್ಕರಣಾ ಸಮಿತಿಯವರು ಹೊರತಂದಿರುವ 9ನೇ ತರಗತಿಯ 'ಸಮಾಜ ವಿಜ್ಞಾನ ಭಾಗ 1' ಪಠ್ಯದಲ್ಲಿ ಬಸವಣ್ಣನವರ ಬಗೆಗಿನ ಪಾಠದಲ್ಲಿ ಸಾಕಷ್ಟು ದೋಷಗಳಿವೆ. ಇವರಿಗಿಂತ ಹಿಂದೆ ಪ್ರೊ. ಬರಗೂರು ರಾಮಚಂದ್ರಪ್ಪನವರು ಮತ್ತು ಪ್ರೊ. ಜಿ.ಎಸ್. ಮುಡಂಬಡಿತ್ತಾಯ ಅವರು ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಯ ಅಧ್ಯಕ್ಷರಾಗಿದ್ದರು. ಮುಡಂಬಡಿತ್ತಾಯ ಅವರ ಅಧ್ಯಕ್ಷತೆಯ ಪಠ್ಯ ರಚನಾ ಸಮಿತಿಯವರು ಬಸವೇಶ್ವರ ಎನ್ನುವ ಪಾಠದಲ್ಲಿ ಇತಿಹಾಸಕ್ಕೆ ಪೂರಕವಲ್ಲದ ಬಸವ ತತ್ವಕ್ಕೆ ಅಪಚಾರ ಮಾಡುವ ವಿಷಯಗಳನ್ನೇ ಸೇರಿಸಿದ್ದರು. ಬರಗೂರು ರಾಮಚಂದ್ರಪ್ಪನವರ ಸಮಿತಿಯವರು ಈ ಪಠ್ಯ ದಲ್ಲಿ ಸಾಕಷ್ಟು ಪರಿಷ್ಕಾರ ಮಾಡಿದ್ದರು. ಅವರ ಪಠ್ಯದಲ್ಲೂ 'ವೀರಶೈವ ಸಿದ್ಧಾಂತವನ್ನು ಪ್ರಚುರಪಡಿಸಿದರು'; 'ಶೈವ ಗುರುಗಳ ಸಾನಿಧ್ಯದಲ್ಲಿ ಲಿಂಗ ದೀಕ್ಷೆಯನ್ನು ಪಡೆದು' ಎನ್ನುವ ದೋಷಗಳಿವೆ. ಆದುದರಿಂದ ಹಿಂದಿನ ಪಠ್ಯಗಳನ್ನು ಬಿಟ್ಟು ಹೊಸದಾಗಿ ಬರೆಸಿ ವಿದ್ಯಾರ್ಥಿಗಳಿಗೆ ಕೊಡುವುದು ಉತ್ತಮ.

ರಸ್ತೆಯಲ್ಲೇ ಕುಳಿತರು, ಬ್ಯಾರಿಕೇಡ್ ಕಿತ್ತೆಸೆದರು

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಜಾರಿ ನಿರ್ದೇಶನಾಲಯದ (ಇ.ಡಿ.)ವಿಚಾರಣೆಗೆ ಮಂಗಳವಾರ ಹಾಜರಾದರು.

ಕಳೆದ ನಾಲ್ಕು ದಿನಗಳಲ್ಲಿ ಇ.ಡಿ. ಅಧಿಕಾರಿಗಳು ರಾಹುಲ್ ಅವರನ್ನು 42 ಗಂಟೆ ವಿಚಾರಣೆ ನಡೆಸಿದ್ದರು. ಮಂಗಳವಾರ ಬೆಳಿಗ್ಗೆ 11.15ಕ್ಕೆ ಇ.ಡಿ. ಕಚೇರಿಗೆ ಬಂದ ಕಾಂಗ್ರೆಸ್ ನಾಯಕನ ವಿಚಾರಣೆ ರಾತ್ರಿ 8 ಗಂಟೆಯವರೆಗೆ ಮುಂದುವರಿಯಿತು. ಸುಮಾರು 9 ತಾಸು ವಿಚಾರಣೆ ನಡೆಯಿತು.

ತನಿಖಾ ಸಂಸ್ಥೆಗಳನ್ನು ಕೇಂದ್ರ ಸರ್ಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ನಾಯಕರು ಹಾಗೂ ಕಾರ್ಯಕರ್ತರು ಎಐಸಿಸಿ ಕಚೇರಿ ಎದುರು ಸತ್ಯಾಗ್ರಹ ನಡೆಸಿದರು. ಈ ವೇಳೆ ಪೊಲೀಸರು ಹಾಗೂ ಕಾರ್ಯಕರ್ತರ ನಡುವೆ ಜಟಾಪಟಿ ನಡೆಯಿತು. ಕಾರ್ಯಕರ್ತರನ್ನು ತಡೆಯಲು ಪೊಲೀಸರು ಬ್ಯಾರಿಕೇಡ್‌ಗಳನ್ನು ಹಾಕಿದರು. ಕೆಲವು ಬ್ಯಾರಿಕೇಡ್‌ಗಳ ಮೇಲೆ ಕಾರ್ಯಕರ್ತರು ಹತ್ತಿದರು. ಕೆಲವನ್ನು ಕಿತ್ತು ಎಸೆದರು. ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಸೇರಿದಂತೆ ಹಲವು ಮುಖಂಡರು, ಕಾರ್ಯಕರ್ತರು ರಸ್ತೆಯಲ್ಲಿ ಕುಳಿತು ಆಕ್ರೋಶ ವ್ಯಕ್ತಪಡಿಸಿದರು. ಹಲವರನ್ನು ಪೊಲೀಸರು ವಶಕ್ಕೆ ಪಡೆದರು.

ಕಾಂಗ್ರೆಸ್ ಕಚೇರಿಯಿಂದ ಜಂತರ್ ಮಂತರ್‌ವರೆಗೆ ಪಾದಯಾತ್ರೆ ನಡೆಸಲು ಅನುಮತಿ ಪಡೆದಿಲ್ಲ ಎಂಬ ಕಾರಣಕ್ಕೆ ಪೊಲೀಸರು ಅವಕಾಶ ನಿರಾಕರಿಸಿದರು.

ರಾಜಸ್ಥಾನದ ಮುಖ್ಯಮಂತ್ರಿ ಅಶೋಕ ಗೆಹಲೋತ್, 'ಆದಾಯ ತೆರಿಗೆ ಇಲಾಖೆ ಹಾಗೂ ಸಿಬಿಐ ಅನ್ನು ಕೇಂದ್ರ ಸರ್ಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ' ಎಂದು ಟೀಕಿಸಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಸಂವಾದ
ಅಗ್ನಿಪಥ್: ಪರ–ವಿರೋಧದ ವಾದವೇನು?
ಪಾಲ್ಗೊಳ್ಳುವವರು:

ಮಂಜುನಾಥ ಅದ್ದೆ, ರಾಜ್ಯ ವಕ್ತಾರ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ
ಮೋಹನ್ ವಿಶ್ವ, ರಾಜ್ಯ ವಕ್ತಾರ, ಭಾರತೀಯ ಜನತಾ ಪಕ್ಷ
ಜ್ಯೋತಿ ಎ., ಕರ್ನಾಟಕ ರಾಜ್ಯ ಮಂಡಳಿ ಸದಸ್ಯೆ, ಭಾರತ ಕಮ್ಯುನಿಸ್ಟ್ ಪಕ್ಷ
ಮಲ್ಲಿಕಾರ್ಜುನ ಬಾಳಿಕಾಯಿ, ರಾಜ್ಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ ಯುವ ಮೋರ್ಚಾ
ಮಧ್ಯಾಹ್ನ 12 ರಿಂದ 1ರವರೆಗೆ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಪ್ರಜಾವಾಣಿ ಕನ್ನಡ ಧ್ವನಿ

ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಮಂಗಳವಾರ ನವದೆಹಲಿಯಲ್ಲಿ ಪ್ರತಿಭಟನೆ ನಡೆಸಿದರು

'ಕಾಂಗ್ರೆಸ್ ಯಾತ್ರೆ ತಡೆಗೆ ಇ.ಡಿ. ವಿಚಾರಣೆ'

ನವದೆಹಲಿ: 'ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೆ ಭಾರತ್ ಜೋಡೋ ಯಾತ್ರೆ (ಭಾರತ ಒಗ್ಗೂಡಿಸಿ ಯಾತ್ರೆ) ನಡೆಸಲು ಪಕ್ಷವು ಸಿದ್ಧತೆ ನಡೆಸಿದ್ದು, ಇದನ್ನು ತಡೆಯಲು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ನಾಯಕ ರಾಹುಲ್ ಗಾಂಧಿ ಅವರಿಗೆ ಜಾರಿ ನಿರ್ದೇಶನಾಲಯದ (ಇ.ಡಿ) ಮೂಲಕ ಕೇಂದ್ರ ಸರ್ಕಾರ ಕಿರುಕುಳ ನೀಡುತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಎಐಸಿಸಿ ಕಚೇರಿ ಬಳಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

'ರಾಹುಲ್ ಗಾಂಧಿ ಅವರನ್ನು 40 ತಾಸು ವಿಚಾರಣೆ ಮಾಡುವ ಅಗತ್ಯ ಏನಿದೆ. ಇದರಲ್ಲಿ ಷಡ್ಯಂತ್ರವಿದೆ. ಇದರಿಂದ ಒಳ್ಳೆಯದಾಗುವುದಿಲ್ಲ. ನಮ್ಮ ನಾಯಕರು ಎಲ್ಲವನ್ನೂ ಎದುರಿಸಲು ಸಜ್ಜಾಗಿದ್ದಾರೆ' ಎಂದು ಅವರು ಹೇಳಿದರು.

'ನ್ಯಾಷನಲ್ ಹೆರಾಲ್ಡ್ ಪ್ರಕರಣ ಮುಗಿದ ಅಧ್ಯಾಯ. ಹೀಗಾಗಿ ಈಗ ವಿಚಾರಣೆಗೆ ಕರೆದಿರುವುದೇ ತಪ್ಪು. ಕಾಂಗ್ರೆಸ್ ನಾಯಕರ ವಿರುದ್ಧದ ಪ್ರಕರಣದ ವಿಚಾರಣೆ ಮಾತ್ರ ಯಾಕೆ ಮಾಡುತ್ತಿದ್ದಾರೆ. ಬಿಜೆಪಿ ನಾಯಕರು ಅಕ್ರಮಗಳನ್ನು ಎಸಗಿಲ್ಲವೇ. ಅವರ ಪ್ರಕರಣಗಳ ವಿಚಾರಣೆಯನ್ನು ಯಾಕೆ ಮಾಡುತ್ತಿಲ್ಲ' ಎಂದು ಪ್ರಶ್ನಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮ್ಮದ್, ಸಂಸದ ಡಿ.ಕೆ. ಸುರೇಶ್, ರಾಜ್ಯಸಭೆ ಸದಸ್ಯರಾದ ಜಿ.ಸಿ. ಚಂದ್ರಶೇಖರ್, ಎಲ್. ಹನುಮಂತಯ್ಯ, ಮುಖಂಡರಾದ ನಾಗರಾಜ ಛಬ್ಬಿ, ವಿನಯ್ ಕಾರ್ತಿಕ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಬುಧವಾರವೂ ಪ್ರತಿಭಟನೆ: ನವದೆಹಲಿಯಲ್ಲಿ ಬುಧವಾರ ನಡೆಯುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವಂತೆ ಕರ್ನಾಟಕದ ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರಿಗೆ ಎಐಸಿಸಿ ಸೂಚನೆ ನೀಡಿದೆ. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಸೇರಿದಂತೆ ಹಲವು ಶಾಸಕರು ಮಂಗಳವಾರವೇ ದೆಹಲಿಗೆ ಬಂದಿದ್ದಾರೆ.

ಬಾಲಕಿ ಮೇಲೆ ಅತ್ಯಾಚಾರ; ವೃದ್ಧನಿಗೆ 81 ವರ್ಷ ಜೈಲು ಶಿಕ್ಷೆ

ಇಡುಕ್ಕಿ (ಪಿಟಿಐ): ಬಾಲಕಿಯ ಮೇಲೆ ಪದೇ ಪದೇ ಅತ್ಯಾಚಾರ ಎಸಗಿ, ಆಕೆಯನ್ನು ಗರ್ಭಿಣಿಯನ್ನಾಗಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇರಳದ ತ್ವರಿತಗತಿ ನ್ಯಾಯಾಲಯವು 66 ವರ್ಷದ ವ್ಯಕ್ತಿಯೊಬ್ಬರಿಗೆ 81 ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಿ ಆದೇಶಿಸಿದೆ.

ಇದರ ಜತೆಗೆ ಅಪರಾಧಿಗೆ ₹ 2.2 ಲಕ್ಷ ದಂಡವನ್ನೂ ವಿಧಿಸಿ ಪೋಕ್ಸೊ ಪ್ರಕರಣಗಳ ವಿಶೇಷ ನ್ಯಾಯಾಧೀಶ ಟಿ.ಜಿ. ವರ್ಗೀಸ್ ಆದೇಶಿಸಿದ್ದಾರೆ. ಶಿಕ್ಷೆಯನ್ನು ಅಪರಾಧಿ ಏಕಕಾಲದಲ್ಲಿ ಅನುಭವಿಸಬೇಕಾಗಿದೆ. 2020ರ ಅಕ್ಟೋಬರ್‌ನಲ್ಲಿ ಬಾಲಕಿ ಆಸ್ಪತ್ರೆಗೆ ದಾಖಲಾದಾಗ, ಆಕೆ ಗರ್ಭಿಣಿಯಾಗಿರುವ ವಿಷಯ ಗೊತ್ತಾಗಿದೆ. ಆಗ ಬಾಲಕಿಗೆ 15 ವರ್ಷವಾಗಿತ್ತು ಎಂದು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಹೇಳಿದರು.

ಸಂತ್ರಸ್ತೆಯ ಹೇಳಿಕೆ ಮತ್ತು ಗರ್ಭಪಾತದ ಬಳಿಕ ಭ್ರೂಣದಿಂದ ಸಂಗ್ರಹಿಸಿದ ಡಿಎನ್‌ಎ ಪುರಾವೆಗಳ ಆಧಾರದ ಮೇಲೆ ವ್ಯಕ್ತಿಯನ್ನು ಅಪರಾಧಿ ಎಂದು ಘೋಷಿಸಲಾಗಿದೆ. ಈ ಪುರಾವೆಗಳು ಆ ವ್ಯಕ್ತಿಯು ಬಾಲಕಿಯ ಮೇಲೆ ಅತ್ಯಾಚಾರವೆಸಗಿದ್ದಾನೆ ಎಂಬುದನ್ನು ದೃಢಪಡಿಸಿವೆ ಎಂದು ಅವರು ತಿಳಿಸಿದರು.

ಪ್ರತಿಭಾ ಪುರಸ್ಕಾರ: ಅರ್ಜಿ ಆಹ್ವಾನ

ಬೆಂಗಳೂರು: ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದ ಕನಕ ಗುರುಪೀಠವು ಕುರುಬ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ತೀರ್ಮಾನಿಸಿದ್ದು ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

2021-22ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ಪಿಯು ಪರೀಕ್ಷೆಯಲ್ಲಿ ಶೇ 90 ಕ್ಕಿಂತ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳು ನ.2ರ ಒಳಗೆ ಅರ್ಜಿ ಸಲ್ಲಿಸಬಹುದು. ಅಂಚೆಯ ಮೂಲಕ ಕಾಗಿನೆಲೆ ಕನಕ ಗುರುಪೀಠ, ಶಾಖಾಮಠ, ಕನಕಧಾಮ, ಹೊಸದುರ್ಗ ತಾಲ್ಲೂಕು 577527 ಇಲ್ಲಿಗೆ ಅರ್ಜಿಗಳನ್ನು ಕಳುಹಿಸಬಹುದು. ಮಾಹಿತಿಗೆ ಮಹೇಶ್ ಗೌಡ ಮೊಬೈಲ್ 94801 11933 ಹಾಗೂ ಯೋಗೀಶ್ ಸಾವಂತ್ 97430 01066 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಮದ್ರಾಸ್ ಐಐಟಿ: ಎಂ.ಎ ಕೋರ್ಸ್

ಚೆನ್ನೈ: ಪ್ರತಿಷ್ಠಿತ ಮದ್ರಾಸ್ ಭಾರತೀಯ ತಾಂತ್ರಿಕ ಸಂಸ್ಥೆಯು (ಐಐಟಿ–ಎಂ) 2023ನೇ ಶೈಕ್ಷಣಿಕ ಸಾಲಿನಿಂದ ವಿವಿಧ ವಿಷಯಗಳಲ್ಲಿ ಎರಡು ವರ್ಷಗಳ ಎಂ.ಎ ಕೋರ್ಸ್ ಆರಂಭಿಸಲಿದೆ.

ಮಾನವಿಕ ಮತ್ತು ಸಮಾಜ ವಿಜ್ಞಾನ ವಿಭಾಗದಡಿಯಲ್ಲಿ ಎಂ.ಎ ಕೋರ್ಸ್‌ಗಳು ಆರಂಭವಾಗಲಿದ್ದು, 2023ರ ಮಾರ್ಚ್/ ಏಪ್ರಿಲ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಗೆ ಚಾಲನೆ ದೊರೆಯಲಿದೆ. 2023ರ ಜುಲೈನಲ್ಲಿ ತರಗತಿಗಳು ಆರಂಭವಾಗಲಿವೆ. ಪ್ರವೇಶ ಪರೀಕ್ಷೆಯ ದಿನಾಂಕ ಶೀಘ್ರದಲ್ಲಿಯೇ ಪ್ರಕಟವಾಗಲಿದೆ.

ಮಾನವಿಕ ವಿಷಯಗಳು, ವಿಜ್ಞಾನ, ವಾಣಿಜ್ಯ ಮತ್ತು ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿರುವ ವಿದ್ಯಾರ್ಥಿಗಳು ಎಂ.ಎ ಕೋರ್ಸ್ ಪ್ರವೇಶ ಪಡೆಯಬಹುದು.

ಸಮಕಾಲೀನ ವಿಷಯಗಳಾದ ಅರ್ಥಶಾಸ್ತ್ರ, ನಗರ ಯೋಜನೆ ಮತ್ತು ಅಭಿವೃದ್ಧಿ, ಆರೋಗ್ಯ ನೀತಿ, ಪರಿಸರ, ಹವಾಮಾನ ಅರ್ಥಶಾಸ್ತ್ರ, ತಂತ್ರಜ್ಞಾನ ಮತ್ತು ನೀತಿ, ಹಾಗೂ 'ಕಂಪ್ಯುಟೇಷನಲ್ ಲಿಂಗ್ವಿಸ್ಟಿಕ್ಸ್' ವಿಷಯಗಳು ಹೊಸ ಎಂ.ಎ ಕೋರ್ಸ್‌ಗಳ ಪಠ್ಯಗಳಲ್ಲಿ ಇರುತ್ತವೆ ಎಂದು ಐಐಟಿ–ಎಂ ತಿಳಿಸಿದೆ.

ನಕ್ಸಲ್ ದಾಳಿ: ಮೂವರ ಹತ್ಯೆ

ನವದೆಹಲಿ (ಪಿಟಿಐ): ನಕ್ಸಲರು ನಡೆಸಿದ ದಾಳಿಯಲ್ಲಿ ಒಡಿಶಾದ ನೌಪಾಡಾ ಜಿಲ್ಲೆಯಲ್ಲಿ ಮಂಗಳವಾರ ಮೂವರು ಸಿಆರ್‌ಪಿಎಫ್ ಸಿಬ್ಬಂದಿ ಹುತಾತ್ಮರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಭೇದೆನ್ ವಲಯದ ಪಟಧಾರ ಮೀಸಲು ಅರಣ್ಯದಲ್ಲಿ ಏಳು ಮಂದಿ ಸಿಆರ್‌ಪಿಎಫ್ ಸಿಬ್ಬಂದಿ ಒಂದು ಶಿಬಿರದಿಂದ ಮತ್ತೊಂದು ಶಿಬಿರಕ್ಕೆ ಹೋಗುತ್ತಿದ್ದಾಗ ಈ ದಾಳಿ ನಡೆದಿದೆ. ದುರದೃಷ್ಟವಶಾತ್ ಮೂವರು ಹುತಾತ್ಮರಾಗಿದ್ದಾರೆ.

EXAM DH ಪ್ರಜಾವಾಣಿ MASTERMIND™
PSI ಆಕಾಂಕ್ಷಿಗಳಿಗೆ
ಆನ್‌ಲೈನ್ ಮಾಕ್ ಟೆಸ್ಟ್

PSI ಪರೀಕ್ಷೆಯ ನಿಮ್ಮ ಸಿದ್ಧತೆಯನ್ನು
ಉಚಿತ ಮಾಸ್ಟರ್‌ಮೈಂಡ್ ಮಾಕ್ ಟೆಸ್ಟ್ ತೆಗೆದುಕೊಳ್ಳುವ ಮೂಲಕ ಪರೀಕ್ಷಿಸಿ.
ಪರೀಕ್ಷೆ ತೆಗೆದುಕೊಳ್ಳಲು QR ಕೋಡ್ ಸ್ಕ್ಯಾನ್ ಮಾಡಿ
ಅಥವಾ bit.ly/EMMMPSI ಗೆ ಭೇಟಿ ನೀಡಿ
ಸೂಚನೆಗಳು:
- ಈ ಮಾಕ್ ಟೆಸ್ಟ್ PSI (civil) ಪತ್ರಿಕೆ – 2ಅನ್ನು ಉದ್ದೇಶಿಸಿರುತ್ತದೆ
- 90 ನಿಮಿಷಗಳಲ್ಲಿ 100 ಪ್ರಶ್ನೆಗಳಿಗೆ ಉತ್ತರಿಸಬೇಕು
- ಒಮ್ಮೆ ನೀವು ಮಾಕ್ ಟೆಸ್ಟ್ ಪ್ರಾರಂಭಿಸಿದರೆ, ನೀವು 90 ನಿಮಿಷಗಳ ಒಳಗೆ ಪರೀಕ್ಷೆಯನ್ನು ಮುಗಿಸಬೇಕಾಗುತ್ತದೆ
- ನೀವು ಯಾವುದೇ ಪ್ರಶ್ನೆಯನ್ನು ಬಿಟ್ಟುಬಿಡಬಹುದು, ನಿಮ್ಮ ಉತ್ತರವನ್ನು ಬದಲಾಯಿಸಲು ಹಿಂದಿನ ಪ್ರಶ್ನೆಗೆ ಹಿಂತಿರುಗಿ ಅಥವಾ ಪ್ರಶ್ನೆಯನ್ನು ಪ್ರಯತ್ನಿಸದಿರಲು ನಿರ್ಧರಿಸಬಹುದು
- ಪ್ರತಿ ಸರಿಯಾದ ಉತ್ತರಕ್ಕೆ ನೀವು 1.5 ಅಂಕಗಳನ್ನು ಪಡೆಯುತ್ತೀರಿ ಮತ್ತು ಪ್ರತಿ ತಪ್ಪು ಉತ್ತರಕ್ಕೆ 25% (0.375) ಅಂಕಗಳು ಕಡಿತಗೊಳ್ಳುತ್ತದೆ.
- ಒಮ್ಮೆ ನೀವು ಮಾಕ್ ಟೆಸ್ಟ್ ಪೂರ್ಣಗೊಳಿಸಿದರೆ, ನಿಮ್ಮ ಸ್ಕೋರ್, ಭಾಗವಹಿಸುವಿಕೆ ಪ್ರಮಾಣಪತ್ರ ಮತ್ತು ಎಲ್ಲಾ ಸರಿಯಾದ ಉತ್ತರಗಳು ದೊರೆಯುತ್ತದೆ
www.exammastermind.com

ಉದ್ಯೋಗ ವಾಣಿ

MALNAD COLLEGE OF ENGINEERING: HASSAN

Advertisement Notification No. MCE/EST(1)2022-23 dated 17.06.2022

Applications are invited from qualified candidates for the posts mentioned below. Typed applications along with detailed resume and attested copies of the Certificates, marks cards along with a recent Passport size Photograph and a crossed D.D. for **Rs. 1000/- (Teaching) and Rs. 500/- (Non-Teaching)** drawn in favour of the **Principal, Malnad College of Engineering, Hassan** should reach the undersigned on or before **30.06.2022.** Applicants shall fill the details in the Google form through the link displayed in the College Website: **www.mcehassan.ac.in.**

Teaching posts (Un-aided)

Sl.No	Branch	Designation
1.	Electrical & Electronics Engineering	Assistant Professor
2.	Computer Science & Engineering	Associate Professor
3.	Electronics & Instrumentation Engg.	Assistant Professor
4.	Information Science & Engineering	Assistant Professor
5.	Chemistry	Assistant Professor
6.	Mathematics	Assistant Professor

Eligibility: Qualifications, experience, salary and age limit as per AICTE norms (fixed as per Malnad Technical Education Society® norms).

Assistant Professor		M.E./M.Tech. in relevant branch with First Class, Candidates with Ph.D. are preferred.
Assistant Professor (Chemistry & Maths)		M.Sc. in relevant branch with First Class. Candidates with SLET or NET or Ph.D. in relevant field are preferred.
Associate Professor	a.	Ph.D. degree in the relevant field and First Class or equivalent at either Bachelor's or Master's level in the relevant branch.
	b.	At least total 6 research publications in SCI journals/UGC/AICTE approved list of journals.
	c.	Minimum of 8 years of experience in teaching / research / industry out of which at least 2 years shall be Post Ph.D. experience.

Non-Teaching posts (Un-aided) ON CONTRACT BASIS

Sl.No	Branch	Designation
1.	Civil Engineering	Mechanic
2.	E & E Engineering	Instructor

Eligibility: Qualifications, experience, salary and age limit as per State scale norms (fixed as per Malnad Technical Education Society ® norms).

Instructor	1) Must be holder of a first class B.E/Diploma with Supervisor license in respective branch of Engineering / Technology granted by an Institution recognized by the Government. 2) Must have an experience of not less than three years in the field from an institution recognized by the State Government.
Mechanic	Must be holder of a first class Diploma in respective branch of Engineering

NOTE:- 1. Candidates who are already in service should forward their application through proper channel.
2. Right of filling up the vacancy is left to the discretion of the Institution authorities.

Sd/- Principal

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
ಆಗು ನೀ ಅನಿಕೇತನ BE BOUNDLESS
ರಿಜಿಸ್ಟ್ರಾರ್ ಕಛೇರಿ: ಸೆಂಟ್ರಲ್ ಕಾಲೇಜು ಆವರಣ, ಡಾ॥. ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560001. ದೂರವಾಣಿ ಸಂ: 08–22961016/22131385,
ಇ–ಮೇಲ್: registrarbcu@gmail.com
ಸಂಖ್ಯೆ: ಬಿಸಿಯು/ಎಸಿಎ/ಸ್ನಾತಕ/615/2022–23 ದಿನಾಂಕ: 21.06.2022

ಅಧಿಸೂಚನೆ

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜು ಆವರಣದ ಮತ್ತು ಮಲ್ಲೇಶ್ವರಂನಲ್ಲಿರುವ ಮಹಿಳಾ ಘಟಕ ಮಹಾವಿದ್ಯಾಲಯದಲ್ಲಿ 2022–23 ಸಾಲಿನ ಪ್ರವೇಶಗಳಿಗೆ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜು ಆವರಣದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಪದವಿ ಹಂತದ ವ್ಯಾಸಂಗಕ್ಕಾಗಿ ಮತ್ತು ಬೆಂಗಳೂರು ನಗರದ ಮಲ್ಲೇಶ್ವರಂ ಬಡಾವಣೆಯ 13ನೇ ಕ್ರಾಸ್‌ನಲ್ಲಿರುವ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಕಳೆದ ವರ್ಷದಿಂದ ಪ್ರಾರಂಭಿಸಲಾದ ವಿಶ್ವವಿದ್ಯಾನಿಲಯದ ಮಹಿಳಾ ಕಾಲೇಜಿನ ವಿವಿಧ ಸ್ನಾತಕ ವ್ಯಾಸಂಗಗಳಿಗೆ ಪ್ರವೇಶಕ್ಕಾಗಿ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ–2020 ರ ಆಶಯದಂತೆ, ವಿದ್ಯಾರ್ಥಿ ಕೇಂದ್ರಿಕೃತ ಶಿಕ್ಷಣ ನೀಡುವುದರ ಜೊತೆಗೆ ವಿವಿಧ ಶೈಕ್ಷಣಿಕ ಹಂತಗಳಲ್ಲಿ ಪ್ರವೇಶ ಪಡೆಯುವುದು ಮತ್ತು ನಿರ್ಗಮಿಸುವುದಕ್ಕೆ ಅವಕಾಶ ನೀಡುವ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳ ವ್ಯಾಸಂಗವನ್ನು ಪ್ರಾರಂಭಿಸಲಾಗುವುದು. ವಿದ್ಯಾರ್ಥಿ ಪ್ರಥಮ ವರ್ಷ ಪೂರೈಸಿದಲ್ಲಿ ಸರ್ಟಿಫಿಕೇಟ್ ಕೋರ್ಸ್, ದ್ವಿತೀಯ ವರ್ಷ ಮುಗಿಸಿದಲ್ಲಿ ಡಿಪ್ಲೋಮ ಪ್ರಮಾಣ ಪತ್ರ, ತೃತೀಯ ವರ್ಷಕ್ಕೆ ಪದವಿ, ನಾಲ್ಕನೇ ವರ್ಷಕ್ಕೆ ಆನರ್ಸ್ ಪದವಿ ಹಾಗೂ ಐದನೇ ವರ್ಷ ಮುಗಿಸಿ ಸ್ನಾತಕೋತ್ತರ ಪದವಿ ಪಡೆಯಲು ಅವಕಾಶವಿರುತ್ತದೆ.

I. ಸೆಂಟ್ರಲ್ ಕಾಲೇಜು ಆವರಣದಲ್ಲಿ ಲಭ್ಯವಿರುವ ವ್ಯಾಸಂಗ/ವಿಷಯಗಳು.
ಭಾಷೆಗಳು: • ಕನ್ನಡ • ಆಂಗ್ಲ • ಹಿಂದಿ • ಸಂಸ್ಕೃತ • ಫ್ರೆಂಚ್ • ಜರ್ಮನ್

1. B.A. Basic/Honors
ಆಯ್ಕೆ ವಿಷಯಗಳು: • ಕನ್ನಡ • ಆಂಗ್ಲ • ಫ್ರೆಂಚ್ • ಇತಿಹಾಸ • ಅರ್ಥಶಾಸ್ತ್ರ • ಸಮಾಜಶಾಸ್ತ್ರ • ರಾಜ್ಯಶಾಸ್ತ್ರ • ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ
2. ಬಿ.ಎಸ್.ಡಬ್ಲ್ಯೂ. Basic/Honors
3. ಬಿ.ಎಸ್‌ಸಿ. Basic/Honors
ವಿಷಯಗಳು: • ಜೀವರಸಾಯನಶಾಸ್ತ್ರ • ಸಸ್ಯಶಾಸ್ತ್ರ • ರಸಾಯನಶಾಸ್ತ್ರ • ಗಣಿತಶಾಸ್ತ್ರ • ಕಂಪ್ಯೂಟರ್ ವಿಜ್ಞಾನ • ಪರಿಸರ ವಿಜ್ಞಾನ • ಪ್ರಾಣಿಶಾಸ್ತ್ರ • ಭೌತಶಾಸ್ತ್ರ
4. ಬಿ.ಎಸ್‌ಸಿ. (FAD) & (IDD) Basic/Honors
5. ಬಿ.ಸಿ.ಎ. Basic/Honors
6. ಬಿ.ಕಾಂ. Basic/Honors
7. ಬಿ.ಕಾಂ. (ಫೈನಾನ್ಸ್ & ಅಕೌಂಟಿಂಗ್) Basic/Honors
8. ಬಿ.ಕಾಂ. (ಬಿಸಿನೆಸ್ ಡೆಟಾ ಅನಾಲಿಟಿಕ್ಸ್) Basic/Honors
9. ಬಿ.ಬಿ.ಎ. Basic/Honors

II. ಮಲ್ಲೇಶ್ವರಂ 13ನೇ ಕ್ರಾಸ್‌ನಲ್ಲಿರುವ ವಿಶ್ವವಿದ್ಯಾನಿಲಯದ ಮಹಿಳಾ ಕಾಲೇಜಿನ ಕೋರ್ಸುಗಳು:

Sl.No	Courses	Subject
	Languages	Kannada, English, French, German, Sanskrit and Hindi.
1.	B.Com - Basic/Honors	Compulsory Subjects.
2.	B.Sc - Basic/Honors	Computer Science, Physics, Mathematics, Statistics, Geography.
3.	BVA - Basic/Honors	Animation, Graphic Design.
4.	B.A. - Basic/Honors	Kannada, English, Communicative English, French, History, Economics, Political Science, Sociology.
5.	B.C.A. - Basic/Honors	Compulsory Subjects.

ಆಸಕ್ತ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ **website:www.bcu.ac.in** ಮತ್ತು ಆನ್‌ಲೈನ್ ನೊಂದಣಿ ಮತ್ತು ಅರ್ಜಿಸಲ್ಲಿಕೆಗಾಗಿ ಕರ್ನಾಟಕ ಸರ್ಕಾರದ ಯು.ಯು.ಸಿ.ಎಂ.ಎಸ್. ಪೋರ್ಟಲ್ **https://uucms.karnataka.gov.in** ಭೇಟಿ ನೀಡಲು ತಿಳಿಸಲಾಗಿದೆ.

ಪ್ರವೇಶಾತಿ **ದಿನಾಂಕ 24.06.2022** ರಿಂದ ಪ್ರಾರಂಭ. ಹೆಚ್ಚಿನ ವಿವರಗಳಿಗಾಗಿ ವಿಶ್ವವಿದ್ಯಾನಿಲಯದ ಜಾಲತಾಣ **www.bcu.ac.in** ಭೇಟಿ ನೀಡುವುದು.

ಅಗತ್ಯ ಸಂಖ್ಯೆಯ ಪ್ರವೇಶ ಅರ್ಜಿಗಳು ಸಲ್ಲಿಸದಿದ್ದಲ್ಲಿ ಅಂತಹ ಕೋರ್ಸುಗಳನ್ನು ಪ್ರಸ್ತುತ ವರ್ಷ ಪ್ರಾರಂಭಿಸಲಾಗುವುದಿಲ್ಲ.

DIPR/CP/AAPL/RO1002/22-23 ಸಹಿ/–, ಕುಲಸಚಿವರು

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಮಧುಮೇಹಿಗಳಿಗೆ ಹಿತವಾದ ಪಾದುಕೆ

ಕೊಳ್ಳೇಗಾಲ ಶರ್ಮ

> ಮಧುಮೇಹಿಗಳ ಕಣ್ಣು–ಕಾಲು ಹೆಚ್ಚಿನ ಅಪಾಯಕ್ಕೆ ತುತ್ತಾಗುವ ಅಂಗಗಳು. ಅವರು ಧರಿಸುವ ಚಪ್ಪಲಿಗಳು ಸಹ ಅವರ ಆರೋಗ್ಯದ ಭವಿಷ್ಯವನ್ನು ನಿರ್ಧರಿಸುತ್ತವೆ

ಡಯಾಬಿಟೀಸಿನಿಂದ ನರಳುವ ರೋಗಿಗಳ ಕಾಲಿಗೆ ಹಿತಕರವಾಗಿರುವಂತಹ ಚಪ್ಪಲಿಯನ್ನು ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್'ನ ಮೆಕ್ಯಾನಿಕಲ್ ಎಂಜಿನಿಯರುಗಳು ರೂಪಿಸಿದ್ದಾರೆ.

ಡಯಾಬಿಟೀಸ್ ರೋಗಿಗಳಿಗೆ ಕಣ್ಣು ಮತ್ತು ಕಾಲಿಗೇ ಅಪಾಯ ಹೆಚ್ಚು. ಇದು ನರಮಂಡಲಕ್ಕೆ ಸಂವೇದನೆಗಳನ್ನು ಸಾಗಿಸುವ ಪೆರಿಫೆರಲ್ ನರಗಳಿಗೆ ಹಾನಿ ಆಗುವುದರಿಂದ ಉಂಟಾಗುವ ತೊಂದರೆ. ಈ ನರಗಳು ಸಂವೇದನೆಯನ್ನು ಕಳೆದುಕೊಂಡಾಗ, ಎಲ್ಲಿ ಎಷ್ಟು ಭಾರ ಬೀಳುತ್ತಿದೆ, ಬಿಸಿ ಆಗುತ್ತಿದೆ, ಶೀತ ತಗುಲುತ್ತಿದೆ ಎನ್ನುವುದು ತಿಳಿಯುವುದಿಲ್ಲ. ಹೀಗಾಗಿ ಸಾಮಾನ್ಯವಾಗಿ ಎಚ್ಚರವಾಗಿರುವ ನಮ್ಮ ಸಂವೇದನೆಗಳು ಮರಗಟ್ಟಿ, ಅಂಗಗಳಿಗೆ ಅಪಾಯವಾಗಿದ್ದೂ ತಿಳಿಯದಂತಾಗುತ್ತದೆ; ಗಾಯಗಳೂ ಆಗಬಹುದು. ಈ ಗಾಯಗಳು ರಕ್ತದಲ್ಲಿರುವ ಸಕ್ಕರೆಯಿಂದಾಗಿ ಮಾಯುವುದೂ ನಿಧಾನ. ಕೆಲವೊಮ್ಮೆ ಕೊಳೆಯುವುದೂ ಉಂಟು; ರಕ್ತನಾಳಗಳಿಗೆ ತೊಂದರೆ ಆಗುವುದೂ ಉಂಟು. ಇವೆಲ್ಲದರ ಪರಿಣಾಮ ಕಾಲನ್ನೋ ಬೆರಳನ್ನೋ ತುಂಡರಿಸಬೇಕಾಗುವುದು ಸಾಮಾನ್ಯ.

ಮಧುಮೇಹಿಗಳ ಸಮಸ್ಯೆಗೆ ಪರಿಹಾರ ಚಪ್ಪಲಿಯಲ್ಲಿದೆ – ಎನ್ನುತ್ತಾರೆ ವೈದ್ಯರು. ಹೊಸದಾದ, ಸ್ವಲ್ಪ ಬಿಗುವಾದ ಚಪ್ಪಲಿಗಳು ಕಾಲನ್ನು 'ಕಚ್ಚಿ' ಗಾಯವಾಗದವರು ಉಂಟೇ? ಎಷ್ಟೋ ಬಾರಿ ರಾತ್ರಿ ಮಲಗಿದಾಗ ಕಾಣುವ ಕಾಲುನೋವಿಗೆ ವಯಸ್ಸಾಗಿದ್ದರಿಂದ ಇರಬೇಕು ಎಂದುಕೊಳ್ಳುತ್ತೇವಲ್ಲ; ಅದು ಕೂಡ ಚಪ್ಪಲಿ, ಶೂವಿನ ಮಹಿಮೆ ಎನ್ನುವುದು ಬಹುತೇಕರಿಗೆ ಗೊತ್ತಿಲ್ಲ. ಚಪ್ಪಲಿ ಸವೆದು ದೇಹದ ಭಾರ ಪಾದದ ಎಲ್ಲ ಕಡೆಯೂ ಒಂದೇ ತೆರನಾಗಿ ಬೀಳದೇ ಹೋದಾಗ ಕಾಲು ನೋಯುತ್ತದೆ. ಮಧುಮೇಹಿಗಳಿಗೆ ಚಪ್ಪಲಿಯ ಈ ಮಹಿಮೆ ಬಲವಾಗಿಯೇ ತಟ್ಟುತ್ತದೆ.

ನಮ್ಮ ಪಾದದ ರಚನೆ ಸಪಾಟಾಗಿಲ್ಲ. ಆದರೆ ಚಪ್ಪಲಿಯ ಅಟ್ಟೆ ಸಪಾಟಾಗಿರುತ್ತದೆ. ಮಧುಮೇಹಿಗಳ ಪಾದದಲ್ಲಿ ಎಲ್ಲಿಯಾದರೂ ಗಾಯವಾದಾಗ, ಅವರ ನಡಿಗೆಯ ರೀತಿ ಬದಲಾಗುತ್ತದೆ. ನೋವು ಇಲ್ಲದ ಕಡೆಗೆ ಒತ್ತು ಹೆಚ್ಚು ಕೊಡುವಂತೆ ನಡಿಗೆಯನ್ನು ಬದಲಿಸಿಕೊಳ್ಳುವುದರಿಂದ, ಅಲ್ಲಿಗೆ ಭಾರ ಹೆಚ್ಚು ಬೀಳುತ್ತದೆ. ಪರಿಣಾಮ ಅಂತಹ ಕಡೆಯಲ್ಲಿ ಗಾಯವಾಗುತ್ತದೆ. ಹೀಗಾಗಿ ಮಧುಮೇಹಿಗಳ ಪಾದಗಳನ್ನು ರಕ್ಷಿಸಲು ವಿಶೇಷ ರೀತಿಯ ಪಾದರಕ್ಷೆಗಳ ಅವಶ್ಯಕತೆ ಇದೆ. ಅಂತಹ ಹಲವು ಉಪಾಯಗಳು ಈಗಾಗಲೇ ಪರಿಚಿತ. ಪಾದದ ರಚನೆಯನ್ನು ಅನುಸರಿಸಿ ರೂಪಿಸಲಾದವುಗಳು ಬಹಳ ಜನಪ್ರಿಯ. ಸ್ವಲ್ಪ ಅಗ್ಗವೂ ಕೂಡ. ಆದರೆ ಇವುಗಳನ್ನು ಆಯಾಯಾ ವ್ಯಕ್ತಿಗಳ ಪಾದಗಳ ಅಚ್ಚನ್ನು ತೆಗೆದು, ವಿಶೇಷವಾಗಿ ತಯಾರಿಸಬೇಕು. 'ಮೆಮರಿ ಫೋಮ್' ಎನ್ನುವ ವಸ್ತುಗಳಿಂದ ಹೀಗೆ ಅಟ್ಟೆ ಮಾಡುವುದೂ ಉಂಟು. ಇಂತಹ ಅಟ್ಟೆಗಳಲ್ಲಿ ಬಳಸುವ ವಸ್ತುವು ಒತ್ತಡ ಹೆಚ್ಚು ಬಿದ್ದೆಡೆ ತಗ್ಗುತ್ತದೆ. ಪಾದದ ಆಕಾರಕ್ಕೆ ಹೊಂದಿಕೊಳ್ಳುತ್ತದೆಯಾದ್ದರಿಂದ ತುಸು ಒತ್ತಡ ಕಡಿಮೆಯಾದಂತೆ ಅನಿಸುತ್ತದೆ. ಇದೇ ರೀತಿಯಲ್ಲಿ ಅಟ್ಟೆಯಲ್ಲಿ ಗುಬುಟುಗಳಿರುವಂತೆ ಮಾಡಿರುವ ಪ್ರೆಶರ್ ಸೋಲ್ ಡಯಾಬೆಟಿಕ್ ಚಪ್ಪಲಿಗಳು ದೊರೆಯುತ್ತವೆ. ಪಾದದ ಮೇಲೆ ಬೀಳುವ ಒತ್ತಡವನ್ನು ಇವು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಬಲ್ಲುವು. ಆದರೆ ಇವುಗಳ ಆಕಾರದಲ್ಲಿ ಅಲ್ಪ ಸ್ವಲ್ಪ ಹೆಚ್ಚು ಕಡಿಮೆ ಆದರೂ ಫಲ ಕೆಡುತ್ತದೆ. ಹಾಗೆಯೇ ಪಾದದ ಆಕಾರದಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾದರೂ ಫಲಿತಾಂಶ ನಿರೀಕ್ಷಿಸಿದಂತೆ ಇರುವುದಿಲ್ಲ. ಹೀಗಾಗಿ ಇಂತಹ ಚಪ್ಪಲಿಗಳನ್ನು ಆಗಾಗ್ಗೆ ಬದಲಿಸುತ್ತಲೇ ಇರಬೇಕು. ಇವನ್ನು ಸ್ಟೇಟಿಕ್ ಆಫ್‌ಲೋಡಿಂಗ್ ಅಟ್ಟೆಗಳು ಎನ್ನುತ್ತಾರೆ.

ಇನ್ನೂ ಒಂದು ಬಗೆ ಇದೆ. ಇವನ್ನು 'ಆಕ್ಚುಯೇಟೆಡ್ ಪಾದರಕ್ಷೆ'ಗಳು ಎನ್ನಬಹುದು. ಇವುಗಳಲ್ಲಿ ಪಾದಗಳ ವಿವಿಧ ಭಾಗಗಳ ಮೇಲೆ ಬೀಳುವ ಒತ್ತಡವನ್ನೋ ಉಷ್ಣತೆಯನ್ನೋ ಅಳೆಯುವ ಎಲೆಕ್ಟ್ರಾನಿಕ್ ಸಾಧನಗಳಿರುತ್ತವೆ. ಹಾಗೆಯೇ ಅದಕ್ಕೆ ತಕ್ಕಂತೆ ಅಟ್ಟೆಯ ಆಕಾರವನ್ನು ಗಾಳಿ ತುಂಬಿಯೋ, ಬೇರೆ ದ್ರವಗಳನ್ನು ತುಂಬಿಯೋ ಬದಲಿಸುವ ಪಂಪಿನಂತಹ ಆಕ್ಚುವೇಟರುಗಳು ಇರುತ್ತವೆ. ಇವನ್ನು ಧರಿಸಿ ನಡೆಯುವಾಗ, ನಡಿಗೆಗೆ ತಕ್ಕಂತೆ ಪಾದದ ಮೇಲೆ ಬೀಳುವ ಒತ್ತಡವನ್ನು ಸೆನ್ಸಾರುಗಳು ಗ್ರಹಿಸಿ, ಆಕ್ಚುವೇಟರಿಗೆ ಮಾಹಿತಿಯನ್ನು ನೀಡುತ್ತವೆ. ಆ ಕ್ಷಣವೇ ಪಂಪು ಆ ಜಾಗಕ್ಕೆ ಮಾತ್ರ ಗಾಳಿಯನ್ನು ಒತ್ತಿ ಅಟ್ಟೆಯನ್ನು ದಪ್ಪವಾಗಿಸಿಯೋ, ಅಥವಾ ಗಾಳಿಯನ್ನು ಹೀರಿ ಅಟ್ಟೆಯನ್ನು ತೆಳ್ಳಗಾಗಿಸುವುದೋ ಮಾಡುತ್ತದೆ. ಇಂತಹ ವ್ಯವಸ್ಥೆಯನ್ನು 'ಡೈನಾಮಿಕ್ ಆಫ್‌ಲೋಡಿಂಗ್' ಎನ್ನುತ್ತಾರೆ. ಆದರೆ ಇವು ದುಬಾರಿ ಎಲೆಕ್ಟ್ರಾನಿಕ್ ವಸ್ತುಗಳು; ತಯಾರಿಕೆಯೂ ಕಷ್ಟ. ಇಂಗ್ಲೆಂಡಿನ ಬ್ರಿಸ್ಟಲ್ ವಿಶ್ವವಿದ್ಯಾನಿಲಯದ ತಜ್ಞರು ಐದು ವರ್ಷಗಳ ಹಿಂದೆ ರೂಪಿಸಿದ್ದ 'ಇನ್‌ಫ್ಲಾಸೋಲ್' ಇದಕ್ಕೆ ಉದಾಹರಣೆ. ಮೊಳಕಾಲಿಗೆ ಕಟ್ಟಿದ ಬ್ಯಾಟರಿ ಹಾಗೂ ಪಂಪು, ಪಾದದ ಅಡಿಯಲ್ಲಿ ಇಟ್ಟ ಗಾಳಿ ಮತ್ತು ಹಿಟ್ಟು ತುಂಬಿದ ಚೀಲಗಳನ್ನು ಅಗತ್ಯಕ್ಕೆ ತಕ್ಕಂತೆ ಒತ್ತಿ ದಪ್ಪಗೆ, ತೆಳ್ಳಗೆ ಮಾಡುತ್ತಿದ್ದುವು. ಆದರೆ ಈ ಇನ್‌ಫ್ಲಾಸೋಲ್ ಮಾರುಕಟ್ಟೆಗೆ ಬಂದಿತೋ ಇಲ್ಲವೋ ಇನ್ನೂ ಗೊತ್ತಿಲ್ಲ.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸಸಿನ ಮೆಕ್ಯಾನಿಕಲ್ ಎಂಜಿನೀಯರ್ ಕೊಂಡಯ್ಯ ಅನಂತಸುರೇಶ್ ಮತ್ತು ತಂಡದವರು ರೂಪಿಸಿರುವ ಪಾದರಕ್ಷೆ ಕೂಡ ಡೈನಾಮಿಕ್ ಆಫ್‌ಲೋಡಿಂಗ್ ಬಗೆಯದು. ಅಂದರೆ ಒತ್ತಡ ಬದಲಾದಂತೆ ತಾನೂ ಅದಕ್ಕೆ ಹೊಂದಿಕೊಂಡು ಒತ್ತಡವನ್ನು ಕಡಿಮೆ ಮಾಡಬಲ್ಲುದು. ಆದರೆ ಇದು ಎಲೆಕ್ಟ್ರಾನಿಕ್ ಸಾಧನವಲ್ಲ. ತ್ರೀ-ಡಿ ಮುದ್ರಣ ತಂತ್ರಜ್ಞಾನವನ್ನು ಬಳಸಿಕೊಂಡು ಸುಲಭವಾಗಿ ರಚಿಸಬಹುದಾದ ವಿನ್ಯಾಸದ ಪಾದರಕ್ಷೆ. ಮೃದುವಾದ 'ಪಾಲಿಯುರಿಥೇನ್' ಎನ್ನುವ ವಸ್ತುವಿನಿಂದ ಇದನ್ನು ತಯಾರಿಸಲಾಗಿದೆ. ಇದು ತನ್ನಂತಾನೇ ಧರಿಸಿದವರ ಪಾದದ ಆಕಾರಕ್ಕೆ ಅನುಗುಣವಾಗಿ ಹೊಂದಿಕೊಳ್ಳುತ್ತದೆ. ಈ ಅಟ್ಟೆಯ ವಿಶೇಷವೆಂದರೆ, ಅದು ಒಂದು ಹಾಳೆಯದಲ್ಲ. ಪಾದವನ್ನು ನೆಲಕ್ಕೆ ಊರಿದಾಗ ಎಲ್ಲೆಲ್ಲಿ ಭಾರ ಬೀಳುತ್ತದೆ ಎನ್ನುವುದನ್ನು ವಿಶೇಷವಾಗಿ ಗಮನಿಸಿ ಕೆಳಗಿನ ಹಾಳೆಯನ್ನು ರಚಿಸಿದ್ದಾರೆ. ಒತ್ತಡ ಹೆಚ್ಚು ಬೀಳುವ ಜಾಗಗಳಲ್ಲಿ ಮಾತ್ರವೇ ಪುಟ್ಟ, ಪುಟ್ಟ ಕಮಾನಿನಂತಹ ರಚನೆಗಳನ್ನು ರೂಪಿಸಿದ್ದಾರೆ. ಕಮಾನಿನ ಕೆಳಗೆ ಪೊಳ್ಳು ಇರುವುದರಿಂದ ಅದು ಒತ್ತಡ ಬಿದ್ದಾಗ ಕುಸಿದು, ಒತ್ತಡವಿಲ್ಲದಿದ್ದಾಗ ಪಟ್ಟನೆ ಪುಟಿದು ಮೊದಲಿನ ಆಕಾರಕ್ಕೆ ಮರಳುತ್ತದೆ. ಪುಟಿಯಲು ಸುಲಭವಾಗುವಂತೆ ಅವುಗಳ ಉದ್ದ ಮತ್ತು ಅಗಲಗಳನ್ನು ಲೆಕ್ಕ ಹಾಕಿ ರೂಪಿಸಲಾಗಿದೆ.

ಈ ಕಮಾನುಗಳ ಮೇಲೆ ಸಪಾಟಾದ ಪಾದರಕ್ಷೆಯ ಅಟ್ಟೆಯನ್ನು ಅಳವಡಿಸಲಾಗಿದೆ. ಹೀಗಾಗಿ, ನೋಡಲು ಸಾಮಾನ್ಯ ಪಾದರಕ್ಷೆಯಂತೆಯೇ ಕಂಡರೂ, ಅವರವರ ಪಾದದ ಆಕಾರಕ್ಕೆ ತಕ್ಕಂತೆ ಹೊಂದಿಕೊಳ್ಳಬಲ್ಲುದು. ನೂರು ಮಂದಿ ನಡೆಯುವಾಗ ಅವರ ಪಾದದ ಮೇಲೆ ಎಲ್ಲೆಲ್ಲಿ ಒತ್ತಡಗಳು ಹೆಚ್ಚಿರುತ್ತವೆ ಎಂದು ಅಳತೆ ಮಾಡಿ ನಂತರ ಈ ಅಟ್ಟೆಯನ್ನು ರಚಿಸಲಾಗಿದೆ. ಏಕೆಂದರೆ ಹಿಮ್ಮಡಿಯ ಮೇಲೆ ನಡೆಯುವಾಗ ಒತ್ತಡ ಬೀಳುವ ಜಾಗಗಳೇ ಬೇರೆ, ಬೆರಳುಗಳ ಮೇಲೆ ನಡೆಯುವಾಗ ಒತ್ತಡಕ್ಕೆ ಒಳಗಾಗುವ ಸ್ಥಾನವೇ ಬೇರೆ. ಅಷ್ಟೇ ಅಲ್ಲ; 'ನಡಿಗೆಯ ರೀತಿ ಬದಲಾದರೂ, ಎಲ್ಲೆಲ್ಲಿ ಭಾರ ಬೀಳುತ್ತದೆಯೋ ಅಲ್ಲಿ ಮಾತ್ರ ಆಕಾರ ಬದಲಾಗುವುದರಿಂದ ಪಾದದ ಮೇಲೆ ಹೆಚ್ಚು ಒತ್ತಡ ಬೀಳುವುದಿಲ್ಲ', ಎನ್ನುತ್ತಾರೆ ಅನಂತಸುರೇಶ್. ಅರವತ್ತೈದರಿಂದ ಎಪ್ಪತ್ತೈದು ಕಿಲೋಗ್ರಾಂ ತೂಕದವರೆಗೂ ಈ ಕಮಾನುಗಳು ಮುರಿಯುವುದಿಲ್ಲವಾದ್ದರಿಂದ, ರೋಗಿಯ ತೂಕ ಹೆಚ್ಚು ಕಡಿಮೆ ಆದರೂ ಪಾದರಕ್ಷೆಯನ್ನು ಬದಲಿಸುವ ಅವಶ್ಯಕತೆ ಇಲ್ಲ.

ಈ ಅಟ್ಟೆಗಳು ಬಳಕೆಗೆ ಬೇಗ ಬರಲಿ ಎಂದು ಆಶಿಸೋಣ. ❖

ಪಾದರಕ್ಷೆಗಳು ಹೇಗಿರಬೇಕು?

ಮಧುಮೇಹಿಗಳಿಗೆ ಹಿತವಾಗಿರುವ ಪಾದರಕ್ಷೆಯ ವಿನ್ಯಾಸ ಹೇಗಿರಬೇಕು?

- ಪಾದವನ್ನು ಬಹಳ ಬಿಗಿಯಾಗಿಯೂ, ಬಹಳ ಸಡಿಲವಾಗಿಯೂ ಇಡದಂತೆ ತಕ್ಕಷ್ಟು ಸ್ಥಳಾವಕಾಶ ಇರುವಷ್ಟು ಉದ್ದಗಳು ಇರಬೇಕು.
- ಅತಿ ಉದ್ದದ ಕಾಲ್ಬೆರಳು ಹಾಗೂ ಶೂವಿನ ಒಳಭಾಗದ ನಡುವೆ ಕನಿಷ್ಠ ಒಂದು ಸೆಂ.ಮೀ. ಜಾಗವಿರಬೇಕು.
- ಕಾಲ್ಬೆರಳ ಬಳಿ ಶೂವಿನ ಒಳಾಂಗಣದ ಎತ್ತರ ತಳ ಗಟ್ಟಿಯಾಗಿ ಬೆರಳು ದಪ್ಪನಾದರೂ ಒತ್ತದಿರುವಷ್ಟು ದೊಡ್ಡದಾಗಿರಬೇಕು.
- ಅಟ್ಟೆಯ ಒಳಗೆ ಅಂಚುಗಳು ಮಡಿಚಿಕೊಂಡಂತೆ ಹೊಲಿಗೆ ಇರಬಾರದು. ಇವು ಕಾಲಿಗೆ ಉಜ್ಜಿ ಗಾಯವನ್ನುಂಟು ಮಾಡಬಹುದು.
- ಶೂವನ್ನು ಬಿಗಿಯಾಗಿ ಕಟ್ಟಲು ದಾರವಿರಬೇಕು. ಇಲ್ಲದಿದ್ದರೆ ವೆಲ್ಕ್ರೋದಿಂದ ಬಿಗಿಯುವಂತೆ ಇರಬೇಕು.
- ಪಾದವು ನೆಲವನ್ನು ಒತ್ತಿದಾಗ ಆ ಭಾರ ಪಾದದ ಮೇಲೆ ಬೀಳದಷ್ಟು ಮೃದುವಾಗಿರಬೇಕು.
- ಬಳಸಲು ಸುಲಭವಾಗುವಂತೆ ಬಹಳ ತೂಕವೂ ಇಲ್ಲದ, ಹಾಗೂ ಬೇಗನೆ ಸವೆಯದ ವಸ್ತುಗಳಿಂದ ಮಾಡಿರಬೇಕು.
- ಕಾಲುಗಳಲ್ಲಿ ಊತ ಹಾಗೂ ಗಾಯಗಳಿರುವ ಸಾಧ್ಯತೆಗಳಿರುವುದರಿಂದ ಆದಷ್ಟೂ ಹಿಮ್ಮಡಿಯನ್ನಷ್ಟೆ ಮುಚ್ಚುವಂತಿರಬೇಕು. ಒಂದು ವೇಳೆ ಹಿಮ್ಮಡಿಯ ಬಳಿ ಹೆಚ್ಚು ಮುಚ್ಚುವಂತಹ ಶೂ ಇದ್ದರೆ, ಆ ಭಾಗದಲ್ಲಿ ಒಳಗಡೆ ಮೃದುವಾದ ಮೆತ್ತೆಯನ್ನು ಅಳವಡಿಸಿರಬೇಕು.
- ಅಟ್ಟೆಯ ತಳಭಾಗದಲ್ಲಿ ಒಂದೂವರೆ ಸೆಂ. ಮೀ.ನಷ್ಟು ದಪ್ಪನೆಯ ಮೃದುವಾದ ಪದರವನ್ನು ಸೇರಿಸುವುದು ಒಳ್ಳೆಯದು. ಇದರಿಂದ ಪಾದ ಸ್ವಲ್ಪ ಊದಿದರೂ ಅದಕ್ಕೆ ಗಾಸಿ ಆಗುವುದಿಲ್ಲ. ಶೂವಿಗೆ ಹೊಂದಿಕೊಳ್ಳಬಹುದು.

ಇವೆಲ್ಲದರ ಜೊತೆಗೆ 'ಆಕ್ಚುವೇಟರ್'ಗಳು ಹಾಗೂ ವಿಶೇಷವಾದ ಅಟ್ಟೆಗಳಿದ್ದರೆ ಇನ್ನೂ ಅನುಕೂಲ.

ಪ್ರೊಫೈಲ್ ಲಾಕ್ ಬೇಕೆ? ಬೇಡವೆ?

ಅವಿನಾಶ್ ಬಿ.

ಫೇಸ್‌ಬುಕ್ ಜಾಲತಾಣದಲ್ಲಿ ಇತ್ತೀಚೆಗೆ ನಾವು ಸಾಕಷ್ಟು ಪೋಸ್ಟ್‌ಗಳನ್ನು ಕಂಡಿರುತ್ತೇವೆ. 'ಪ್ರೊಫೈಲ್ ಲಾಕ್' ಮಾಡಿ 'ಫ್ರೆಂಡ್ ರಿಕ್ವೆಸ್ಟ್' ಕಳುಹಿಸುವವರ ಸ್ನೇಹದ ಕೋರಿಕೆಯನ್ನು ಸ್ವೀಕರಿಸಲಾಗುವುದಿಲ್ಲ ಎಂಬ ಒಕ್ಕಣೆ. ಅಂದರೆ, ಯಾರೋ ಫ್ರೆಂಡ್ ರಿಕ್ವೆಸ್ಟ್ (ಸ್ನೇಹದ ಕೋರಿಕೆ) ಕಳುಹಿಸುತ್ತಾರೆ, ಕೋರಿಕೆ ಸ್ವೀಕರಿಸುವ ಮುನ್ನ ಅವರ ಹಿನ್ನೆಲೆ ಏನು, ಅವರು ಯಾರು ಅಂತೆಲ್ಲ ತಿಳಿದುಕೊಳ್ಳಬೇಕಿದ್ದರೆ, ಪ್ರೊಫೈಲ್ ಲಾಕ್ ಆಗಿರುವುದು ಅಡ್ಡಿಯಾಗುತ್ತದೆ. ಹೀಗಾಗಿ, ಸ್ವೀಕರಿಸಬೇಕೋ, ನಿರಾಕರಿಸಬೇಕೋ ಎಂಬುದು ಸಂದಿಗ್ಧ ಸ್ಥಿತಿ.

ಇದರ ಜೊತೆಗೆ, ಮತ್ತೊಂದು ಸನ್ನಿವೇಶ. ಇತ್ತೀಚೆಗೆ ಸಾಕಷ್ಟು ಸ್ನೇಹಿತರನ್ನು ಹೊಂದಿರುವವರಿಂದ ಮತ್ತು ನಮ್ಮ ಫೇಸ್‌ಬುಕ್ ಸ್ನೇಹಿತರಿಂದಲೇ ಮತ್ತೊಮ್ಮೆ ಫ್ರೆಂಡ್ ರಿಕ್ವೆಸ್ಟ್ ಬರುತ್ತದೆ. ಅರೆ, ಇಷ್ಟು ಪರಿಚಿತರು, ನಾವಿನ್ನೂ ಫೇಸ್‌ಬುಕ್ ಫ್ರೆಂಡ್ಸ್ ಆಗಿಲ್ವೇ? ಅಂತ ನಾವೂ ಕೋರಿಕೆಯನ್ನು ಮನ್ನಿಸುತ್ತೇವೆ. ವಾಸ್ತವವಾಗಿ ಅವರು ಫ್ರೆಂಡ್ಸ್ ಪಟ್ಟಿಯಲ್ಲಿರುವುದು ನಮಗೆ ಮರೆತೇಹೋಗಿರುತ್ತದೆ!

ಮೂರನೇ ಸನ್ನಿವೇಶ. ನಿಮ್ಮ ಸ್ನೇಹಿತರಿಂದಲೇ, 'ಹಾಯ್, ಸ್ವಲ್ಪ ತುರ್ತಾಗಿ ಹಣ ಬೇಕಿತ್ತು. ಸ್ವಲ್ಪ ಗೂಗಲ್ ಪೇ ಅಥವಾ ಫೋನ್‌ಪೇ ಮೂಲಕ ಕಳುಹಿಸುತ್ತೀಯಾ? ನಾಳೆನೇ ವಾಪಸ್ ಮಾಡ್ತೀನಿ' ಅಂತ ಸ್ವಲ್ಪ ಆಚೀಚೆಯ ಪದ ಗುಚ್ಛಗಳೊಡನೆ ನಿಮಗೆ ಮೆಸೆಂಜರ್ ಅಥವಾ ವಾಟ್ಸ್‌ಆ್ಯಪ್ ಮೂಲಕ ಸಂದೇಶ ಬಂದಿರುತ್ತದೆ.



ಇಷ್ಟು ಹೊತ್ತಿಗೆ, 'ಫ್ರೆಂಡ್ಸ್, ನನ್ನ ಹೆಸರಿನ ಫೇಕ್ ಖಾತೆ ಸೃಷ್ಟಿಯಾಗಿದೆ, ಹಣ ಕೇಳಿದರೆ ಕೊಡಬೇಡಿ' ಅಂತಲೋ ಅಥವಾ 'ನನ್ನ ಖಾತೆ ಹ್ಯಾಕ್ ಆಗಿದೆ' ಅಂತಲೋ ಕೆಲವು ಪೋಸ್ಟ್‌ಗಳನ್ನು ಈಗಾಗಲೇ ನೋಡಿರುತ್ತೀರಿ.

ಈ ಎಲ್ಲ ನಾಲ್ಕೂ ಘಟನೆಗಳಿಗೆ ಪಾರಸ್ಪರಿಕ ಸಂಬಂಧವಿದೆ. ಈಗ ಮುನ್ನೆಲೆಗೆ ಬರುವುದೇ ಪ್ರೊಫೈಲ್ ಲಾಕ್ ಎಂಬ ಎರಡು ಪದಗಳು.

ಏನಿದು ಪ್ರೊಫೈಲ್ ಲಾಕ್?

ನೇರವಾಗಿ ಸಮಾಜದಲ್ಲಿ ಬೆರೆಯಲು ಸಮಯವಿಲ್ಲದವರಿಗೆ 'ಆನ್‌ಲೈನ್ ಸಮಾಜ' ಸೃಷ್ಟಿಮಾಡಿಕೊಟ್ಟಿರುವ ಫೇಸ್‌ಬುಕ್ ಜಾಲತಾಣದಲ್ಲಿ ಸಕ್ರಿಯವಾಗಿ ಇರುವವರೆಲ್ಲರೂ ತಮ್ಮ ತಮ್ಮ ಪರಿಚಯದ (ಪ್ರೊಫೈಲ್) ಖಾತೆ ಹೊಂದಿರುತ್ತಾರಲ್ಲವೇ? ಅದರಲ್ಲಿರುವ ಚಿತ್ರ, ನಮ್ಮ ಕುರಿತಾದ ಮಾಹಿತಿ, ಪ್ರೊಫೈಲ್‌ನ ಹಿನ್ನೆಲೆಯಲ್ಲಿರುವ ಕವರ್ ಚಿತ್ರ ಇತ್ಯಾದಿಗಳು ಮೂಲತಃ ಎಲ್ಲರಿಗೂ ಕಾಣಿಸುತ್ತದೆ ಮತ್ತು ಅದನ್ನು ಸುಲಭವಾಗಿ ಡೌನ್‌ಲೋಡ್ ಮಾಡಿಕೊಂಡು, ನಿಮ್ಮ ಪ್ರೊಫೈಲನ್ನೇ ಹೋಲುವ ಮತ್ತೊಂದು ಖಾತೆಯನ್ನು ತೆರೆಯಬಹುದು. ಹೀಗೆ ನಮ್ಮದೇ ಹೆಸರಿನಲ್ಲಿ ಖಾತೆಯೊಂದನ್ನು ಸೃಷ್ಟಿಸಿ, ಅದರಲ್ಲಿರುವ ಸ್ನೇಹಿತರಿಗೆಲ್ಲರಿಗೆ ಪುನಃ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿ, ಹಣ 'ಯಾಚಿಸುವ' ವಂಚಕರ ಹಾವಳಿ ಹೆಚ್ಚಾದಂತೆ, ಜನರು ಫೇಸ್‌ಬುಕ್ ನೀಡಿರುವ ಈ ಆಯ್ಕೆಯನ್ನು ಬಳಸಿಕೊಳ್ಳಲಾರಂಭಿಸಿದ್ದಾರೆ. ಹೀಗೆ ಮಾಡಿದರೆ, ನಮ್ಮ ಪ್ರೊಫೈಲ್ (ಪೂರ್ಣ ಗುಣಮಟ್ಟದ) ಚಿತ್ರ, ನಮ್ಮ ಸ್ನೇಹಿತರ ಪಟ್ಟಿ, ಹಾಗೂ ನಮ್ಮ ಕುರಿತಾಗಿನ ಯಾವುದೇ ಮಾಹಿತಿಯನ್ನು ಫೇಸ್‌ಬುಕ್ ಸ್ನೇಹಿತರಲ್ಲದವರಿಗೆ ನಕಲು ಮಾಡುವುದು, ನೋಡುವುದು ಸಾಧ್ಯವಾಗದು.

ಹೇಗೆ ಲಾಕ್ ಮಾಡುವುದು?

ಮೊಬೈಲ್ ಫೋನ್‌ನಲ್ಲಿ ಫೇಸ್‌ಬುಕ್ ಆ್ಯಪ್ ತೆರೆದು, ಅದರ ಸೆಟ್ಟಿಂಗ್ಸ್‌ಗೆ ಹೋಗಿ, ಪ್ರೊಫೈಲ್ ಸೆಟ್ಟಿಂಗ್ಸ್ ಎಂಬಲ್ಲಿ, ಪ್ರೊಫೈಲ್ ಲಾಕಿಂಗ್ ಮಾಡುವ ಆಯ್ಕೆ ಕಾಣಿಸುತ್ತದೆ. ಲಾಕ್ ಮಾಡಿದ ಬಳಿಕ ಅಲ್ಲೇ, ಅನ್‌ಲಾಕ್ ಮಾಡುವ ಆಯ್ಕೆಯೂ ಕಾಣಿಸುತ್ತದೆ. ವೆಬ್ ಬ್ರೌಸರ್‌ನಲ್ಲಾದರೆ (ಕಂಪ್ಯೂಟರ್), ನಮ್ಮ ಪ್ರೊಫೈಲ್‌ಗೆ ಹೋಗಿ, ಬಲ ಭಾಗದಲ್ಲಿರುವ ಮೂರು ಚುಕ್ಕಿಗಳ ಮೆನು ಕ್ಲಿಕ್ ಮಾಡಿದಾಗ, ಕೆಳಭಾಗದಲ್ಲಿ ಪ್ರೊಫೈಲ್ ಲಾಕ್ ಮಾಡುವ ಆಯ್ಕೆ ಗೋಚರಿಸುತ್ತದೆ.

ಲಾಕ್ ಮಾಡಿದರೆ ಏನಾಗುತ್ತದೆ?

ಲಾಕ್ ಮಾಡಿದರೆ ನಿಮ್ಮ ಸ್ನೇಹಿತರ ಪಟ್ಟಿಯಲ್ಲಿರುವವರು ಮಾತ್ರವೇ ನೀವು ಹಂಚಿಕೊಳ್ಳುವ ವಿಷಯಗಳು, ನಿಮ್ಮ ಕುರಿತಾಗಿನ ವಿವರ (About) ನೋಡಬಹುದು ಮತ್ತು ನಿಮ್ಮ ಪೂರ್ಣ ಗುಣಮಟ್ಟದ ಪ್ರೊಫೈಲ್ ಚಿತ್ರವನ್ನು ಅಥವಾ ಕವರ್ ಫೋಟೊವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಸ್ನೇಹಿತರ ಪಟ್ಟಿಯಲ್ಲಿ ಇಲ್ಲದವರಿಗೆ ಇದು ಸಾಧ್ಯವಾಗದು. ಆದರೆ ಲಾಕ್ ಮಾಡದೇ ಇದ್ದರೆ, ಇದು ಎಲ್ಲರಿಗೂ ಮುಕ್ತವಾಗಿ ಸಿಗುವಂತಾಗುತ್ತದೆ. ಆದರೆ ಸಮಸ್ಯೆಯೆಂದರೆ, ಪ್ರೊಫೈಲ್ ಲಾಕ್ ಮಾಡಿದ್ದರೆ ನೀವು ಹೊಸದಾಗಿ ಫ್ರೆಂಡ್ ರಿಕ್ವೆಸ್ಟ್ ಕಳುಹಿಸುವಾಗ, ನಿಮ್ಮ ವಿವರವು ಅವರಿಗೆ ಗೊತ್ತಾಗುವುದಿಲ್ಲ. ಇದಕ್ಕೆ ಸದ್ಯಕ್ಕೆ ಪರಿಹಾರ ಇಲ್ಲ. ತಾತ್ಕಾಲಿಕ ಪರಿಹಾರವಾಗಿ, ಅವರು ನಿಮ್ಮ ಸ್ನೇಹದ ಕೋರಿಕೆ ಒಪ್ಪಿಕೊಳ್ಳುವವರೆಗೆ ಅನ್-ಲಾಕ್ ಮಾಡಿ, ಸ್ವೀಕರಿಸಿದ ಬಳಿಕ ಪುನಃ ಲಾಕ್ ಮಾಡಬಹುದು.

ಏನೇ ಆದರೂ, ಇವೆಲ್ಲ ನಮ್ಮ ಆನ್‌ಲೈನ್ ಸಾಮಾಜಿಕ ಬದುಕನ್ನು ಮತ್ತಷ್ಟು ಸಂಕೀರ್ಣವಾಗಿಸುವ ಮತ್ತು ನಾವು ಸುರಕ್ಷಿತರು ಎಂಬ ಭಾವನೆ ಮೂಡಿಸುವ ಕಾರ್ಯಗಳಷ್ಟೇ. ಸಾಮಾಜಿಕ ಜಾಲತಾಣ ಪ್ರವೇಶಿಸಿದರೆ, ಅಷ್ಟೇಕೆ, ನಮ್ಮ ಇಮೇಲ್ ವಿಳಾಸವನ್ನು ಸೃಷ್ಟಿಸಿದರೂ ಸಾಕು; ಪ್ರೈವೆಸಿ ಅಥವಾ ಗೋಪ್ಯತೆ ಕುರಿತಾಗಿನ ಕಾಳಜಿಯ ಬಗ್ಗೆ ಆತಂಕ ಪಡುವುದನ್ನು ಬಿಡಬೇಕಾಗುತ್ತದೆ. ಹೀಗಾಗಿ, ಇಮೇಲ್ ವಿಳಾಸ, ಫೋನ್ ನಂಬರ್, ವಿಳಾಸ, ಎಲ್ಲೆಲ್ಲಿ ಹೋದೆವು, ಏನು ಮಾಡಿದೆವು ಎಂಬುದನ್ನೆಲ್ಲ ಹಂಚಿಕೊಳ್ಳುವ ಮುನ್ನ ಮತ್ತೊಮ್ಮೆ ಯೋಚಿಸಬೇಕು. ಎಷ್ಟು ಬೇಕೋ ಅಷ್ಟೇ ಮಾಹಿತಿಯನ್ನು ಸಾಮಾಜಿಕ ಮಾಧ್ಯಮ ಖಾತೆಗಳಿಗೆ ನೀಡುವ ಕುರಿತು ಎಚ್ಚರಿಕೆಯಿಂದಿರುವುದಷ್ಟೇ ನಮ್ಮನ್ನು ಆನ್‌ಲೈನ್‌ನಲ್ಲಿ ಬಹುತೇಕ ಸಮಯದಲ್ಲಿ (ಎಲ್ಲ ಕಾಲದಲ್ಲಿಯೂ ಅಲ್ಲ) ರಕ್ಷಿಸುವ ಏಕಮಾತ್ರ ಸೂತ್ರ. ❖

ಇಂಟರ್ನೆಟ್ ಎಕ್ಸ್‌ಪ್ಲೋರರ್‌ಗೆ ಗುಡ್ ಬೈ

ಕೃಷ್ಣ ಭಟ್



ಒಂದು ಕಾಲದಲ್ಲಿ ಬ್ರೌಸರ್ ಎಂಬುದಕ್ಕೇ ಪರ್ಯಾಯ ಹೆಸರಿನ ಹಾಗೆ ಇದ್ದ 'ಇಂಟರ್ನೆಟ್ ಎಕ್ಸ್‌ಪ್ಲೋರರ್' ಈಗ ಶಾಶ್ವತವಾಗಿ ಕಣ್ಮುಚ್ಚುತ್ತಿದೆ. 27 ವರ್ಷಗಳ ಇಂಟರ್ನೆಟ್ ಎಕ್ಸ್‌ಪ್ಲೋರರ್ ಪಯಣವನ್ನು ಮುಗಿಸುವುದಾಗ ಮೈಕ್ರೋಸಾಫ್ಟ್ ಘೋಷಿಸಿ ಆಗಿದೆ. ಮೈಕ್ರೋಸಾಫ್ಟ್ ತನ್ನದೇ ಇಂಟರ್ನೆಟ್ ಎಕ್ಸ್‌ಪ್ಲೋರರ್‌ಗೆ ಬೆಂಬಲವನ್ನು ನಿಲ್ಲಿಸುವುದಾಗಿ ಹೇಳಿಕೊಂಡಿದೆ. ಹೀಗೆ ಸತ್ತುಹೋದ ಒಂದು ಅಪ್ಲಿಕೇಶನ್ ಯಾರಿಗೂ ಯಾವುದೇ ತೊಂದರೆಯನ್ನೂ ಕೊಡಲಿಲ್ಲ. ಇದು ಯಾವ ಅವಲಂಬಿತರನ್ನೂ ತೊರೆಯಲಿಲ್ಲ!

ಕ್ರೋಮ್ ಹಾಗೂ ಸಫಾರಿ ಬಳಕೆ ಶುರು ಮಾಡುವುದಕ್ಕೂ ಮೊದಲಿಂದಲೇ ಇಂಟರ್ನೆಟ್ ಬಳಸುತ್ತಿದ್ದವರಿಗೆ ಮಾತ್ರ ಇಂಟರ್ನೆಟ್ ಎಕ್ಸ್‌ಪ್ಲೋರರ್ ಎಂಬ ಜೀವಿಯೊಂದಿತ್ತು ಎಂಬುದು ತಿಳಿದಿದೆ. ಕ್ರೋಮ್ ತಲೆಮಾರಿನಲ್ಲಿ ಇಂಟರ್ನೆಟ್ ಬಳಕೆ ಶುರು ಮಾಡಿದವರಿಗೆ ಹಿಂದೆ ಇಂಟರ್ನೆಟ್ ಎಕ್ಸ್‌ಪ್ಲೋರರ್ ಇತ್ತು ಎಂಬುದೂ ತಿಳಿದಿರಲಿಕ್ಕಿಲ್ಲ.

ಈ ಇಂಟರ್ನೆಟ್ ಎಕ್ಸ್‌ಪ್ಲೋರರ್ ಚಾಲ್ತಿಗೆ ಬಂದು ಉತ್ತುಂಗಕ್ಕೇರಿದಷ್ಟೇ ವೇಗದಲ್ಲಿ ಕುಸಿದಿದ್ದು ಒಂದು ವಿಶಿಷ್ಟ ಸಂಗತಿ. 1990ರ ಕಾಲದಲ್ಲಿ 'ಇಂಟರ್ನೆಟ್' ಎಂಬ ಕಲ್ಪನೆಗೆ ಜೀವ ಬರುತ್ತಿತ್ತು. ಆಗ 'ಮೊಸಾಯಿಕ್ ನ್ಯಾವಿಗೇಟರ್', 'ಸ್ಪೈಗ್ಲಾಸ್' ಮತ್ತು 'ಒಪೆರಾ'ದಂತಹ ಬ್ರೌಸರ್‌ಗಳಿದ್ದವು. ಆದರೆ, ಅವೆಲ್ಲವೂ ಒಂದಲ್ಲ ಒಂದು ಸಮಸ್ಯೆಗಳಿಂದ ಬಳಲುತ್ತಿದ್ದವು. ಬಳಕೆಗೆ ಅಷ್ಟೇನೂ ಅನುಕೂಲಕರವಾಗಿರಲಿಲ್ಲ. ಈ ಮಧ್ಯೆ 1994ರಲ್ಲಿ ಜಿಮ್ ಕ್ಲಾರ್ಕ್ ಮತ್ತು ಮಾರ್ಕ್ ಆಂಡರ್ಸನ್ ಸೇರಿ 'ನೆಟ್‌ಸ್ಕೇಪ್' ಎಂಬ ಬ್ರೌಸರ್ ಆರಂಭಿಸಿದರು. ಅದು ಜನಪ್ರಿಯವೂ ಆಯಿತು. ಅದೇ ವೇಳೆಗೆ ಅಂದರೆ, 1995 ಆಗಸ್ಟ್‌ನಲ್ಲಿ 'ಇಂಟರ್ನೆಟ್ ಎಕ್ಸ್‌ಪ್ಲೋರರ್' ಆರಂಭವಾಯಿತು. ಆರಂಭವಾದ ತಕ್ಷಣವೇನೂ ಎಕ್ಸ್‌ಪ್ಲೋರರ್ ಜನಪ್ರಿಯವಾಗಲಿಲ್ಲ. ಇದರಲ್ಲಿ ಆಗ ಹಲವು ಸಮಸ್ಯೆಗಳಿದ್ದವು. 1995ರ ಹೊತ್ತಿಗೆ ವಿಂಡೋಸ್ 95 ಚಾಲ್ತಿಯಲ್ಲಿತ್ತು. 'ವಿಂಡೋಸ್ ಎಕ್ಸ್‌ಪಿ' ಎಂಬ ಜನಪ್ರಿಯ ವಿಂಡೋಸ್ ಆವೃತ್ತಿಯಲ್ಲಿ ಇಂಟರ್ನೆಟ್ ಎಕ್ಸ್‌ಪ್ಲೋರರ್ ಮೊದಲೇ ಇನ್‌ಸ್ಟಾಲ್ ಆಗಿಯೇ ಬರುತ್ತಿತ್ತು.

ಸಹಜವಾಗಿ ಎಲ್ಲರೂ ಇಂಟರ್ನೆಟ್‌ಗಾಗಿ ಎಕ್ಸ್‌ಪ್ಲೋರರ್ ಅನ್ನೇ ಬಳಸಲು ಆರಂಭಿಸಿದರು. ಕೆಲವೇ ವರ್ಷಗಳಲ್ಲಿ ಇಂಟರ್ನೆಟ್ ಎಕ್ಸ್‌ಪ್ಲೋರರ್ ಶೇ. 90ರಷ್ಟು ಬಳಕೆದಾರರನ್ನು ತಲುಪಿತ್ತು. ಎಕ್ಸ್‌ಪ್ಲೋರರ್ ಉಚಿತವಾಗಿ ಸಿಗುತ್ತಿದ್ದುದರಿಂದ, ದುಡ್ಡು ಕೊಟ್ಟು ಕೊಂಡುಕೊಳ್ಳಬೇಕಿದ್ದ ನೆಟ್‌ಸ್ಕೇಪ್ ಕಣ್ಮರೆಯಾಗುವ ಹಂತ ತಲುಪಿತು. ಇದೇ ಕಾರಣಕ್ಕೆ, 1998ರಲ್ಲಿ ನೆಟ್‌ಸ್ಕೇಪ್ ಅನ್ನು ಉಚಿತವಾಗಿ ಲಭ್ಯವಾಗಿಸಲಾಯಿತು. ಅಷ್ಟೇ ಅಲ್ಲ, ಮೈಕ್ರೋಸಾಫ್ಟ್ ಎಕ್ಸ್‌ಪಿ ಜೊತೆಗೆ ಎಕ್ಸ್‌ಪ್ಲೋರರ್ ಅನ್ನು ಇನ್‌ಸ್ಟಾಲ್ ಮಾಡಿಯೇ ಕೊಡುವುದರ ವಿರುದ್ಧ ನೆಟ್‌ಸ್ಕೇಪ್ ಅಮೆರಿಕದಲ್ಲಿ ದಾವೆಯನ್ನೂ ಹೂಡಿತು.

2008ರ ವರೆಗೂ ಇಂಟರ್ನೆಟ್ ಬಳಸುವುದಕ್ಕೆ ಇಂಟರ್ನೆಟ್ ಎಕ್ಸ್‌ಪ್ಲೋರರ್ ಬಿಟ್ಟರೆ ಪರ್ಯಾಯವೇ ಇರಲಿಲ್ಲ ಎಂಬಂತಹ ಸ್ಥಿತಿ ಇತ್ತು. ಆರಂಭದಲ್ಲಿ ಇಂಟರ್ನೆಟ್‌ನ ವೇಗವೂ ಕಡಿಮೆ ಇದ್ದುದರಿಂದ ಎಕ್ಸ್‌ಪ್ಲೋರರ್‌ನ ವೇಗ, ಸಮಸ್ಯೆಗಳು ಗಮನಕ್ಕೆ ಬರುತ್ತಿರಲಿಲ್ಲ. ಆದರೆ 2008 ಸೆಪ್ಟೆಂಬರ್‌ನಲ್ಲಿ ಗೂಗಲ್ ಆರಂಭಿಸಿದ 'ಕ್ರೋಮ್', 2005ರಲ್ಲಿ ಆರಂಭವಾದ 'ಮೊಜಿಲ್ಲಾ ಫೈರ್‌ಫಾಕ್ಸ್', ಇಂಟರ್ನೆಟ್ ಎಕ್ಸ್‌ಪ್ಲೋರರ್‌ನ ಹಳವಂಡಗಳನ್ನೆಲ್ಲಾ ಬಹಿರಂಗಗೊಳಿಸಿದವು. 'ಕ್ರೋಮ್' ಹಾಗೂ 'ಫೈರ್‌ಫಾಕ್ಸ್' ಅತ್ಯಂತ ವೇಗದ್ದಾಗಿದ್ದು, ಬಳಸುವುದಕ್ಕೆ ಅತ್ಯಂತ ಸುಲಭ, ಜೊತೆಗೆ ಆಧುನಿಕ ಲುಕ್ ಕೂಡ ಹೊಂದಿತ್ತು.

ಬಿಡುಗಡೆಯಾದಾಗ ಶೇ. 10ಕ್ಕಿಂತಲೂ ಕಡಿಮೆ ಇದ್ದ ಬಳಕೆದಾರರ ಸಂಖ್ಯೆ 2015ರ ಹೊತ್ತಿಗೆ ಶೇ. 25ರಷ್ಟು ಆಗಿತ್ತು. ಈಗಂತೂ ಶೇ. 65ಕ್ಕಿಂತ ಹೆಚ್ಚು ಜನರು ಇಂಟರ್ನೆಟ್‌ಗೆ ಕ್ರೋಮ್ ಅನ್ನೇ ಬಳಸುತ್ತಿದ್ದಾರೆ. ಇನ್ನೊಂದೆಡೆ, ಎಕ್ಸ್‌ಪ್ಲೋರರ್ ಬಳಕೆದಾರರ ಸಂಖ್ಯೆ ಕಳೆದ ವರ್ಷದವರೆಗೆ ಶೇ.1ರಷ್ಟಿತ್ತು! ಇನ್ನೊಂದೆಡೆ ಎಕ್ಸ್‌ಪ್ಲೋರರ್‌ಗೆ ಪರ್ಯಾಯವಾಗಿ ಆರಂಭಿಸಿದ 'ಎಡ್ಜ್' ಕೂಡ ಶೇ. 4ಕ್ಕಿಂತ ಹೆಚ್ಚು ಬಳಕೆದಾರರನ್ನು ಗಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಎಕ್ಸ್‌ಪ್ಲೋರರ್ ಆರಂಭವಾದಾಗ ಅದು ಹೊಂದಿದ್ದ ಏಕಸ್ವಾಮ್ಯವೇ ಬಳಕೆದಾರರನ್ನು ತನ್ನತ್ತ ಸೆಳೆಯಲು ಸಾಧ್ಯವಾಯಿತು. ಎಕ್ಸ್‌ಪಿ ಹಾಗೂ ಅದರ ನಂತರ ವಿಂಡೋಸ್‌ನಲ್ಲಿ ಮೊದಲೇ ಇನ್‌ಸ್ಟಾಲ್ ಆಗಿಯೇ ಬರುತ್ತಿತ್ತು. ಹೀಗಾಗಿ ಇಂಟರ್ನೆಟ್ ಬಳಸುವುದಕ್ಕೆ ಇನ್ನೊಂದು ಬ್ರೌಸರ್ ಇನ್‌ಸ್ಟಾಲ್ ಮಾಡುವ ಅಗತ್ಯ ಬೀಳಲಿಲ್ಲ. ಆ ಕಾಲಕ್ಕೆ ಇದೊಂದು ಮಹತ್ವದ ಅನುಕೂಲ. ಅದರ ಜೊತೆಗೆ, ಇದಕ್ಕಿಂತ ಉತ್ತಮವಾದ ಇನ್ನೊಂದು ಬ್ರೌಸರ್ ಕೂಡ ಇರಲಿಲ್ಲ. ಆಗ ಇದ್ದ ಬ್ರೌಸರ್‌ಗಳಲ್ಲೂ ಭದ್ರತೆ ಸಮಸ್ಯೆಗಳಿದ್ದವು. ಇತರ ತೊಂದರೆಗಳಿದ್ದವು. ❖

ಭದ್ರತೆಯ ಸಮಸ್ಯೆ

ಇಂಟರ್ನೆಟ್ ಎಕ್ಸ್‌ಪ್ಲೋರರ್ ಅನ್ನು ಸ್ಥಗಿತಗೊಳಿಸುವುದಕ್ಕೆ ಮೊದಲ ಕಾರಣವೇ ಅದರಲ್ಲಿರುವ ಹಲವು ಸಮಸ್ಯೆಗಳು. ವೈರಸ್ ದಾಳಿಗೆ ಸುಲಭವಾಗಿ ತುತ್ತಾಗುವ ಸಾಧ್ಯತೆ ಮತ್ತು ಅದನ್ನು ಸರಿಪಡಿಸಲು ಮೈಕ್ರೋಸಾಫ್ಟ್ ವಿಫಲವಾದದ್ದು ಇದಕ್ಕೆ ಮುಖ್ಯ ಕಾರಣ. ಇದರ ಜೊತೆಗೆ, ಎಕ್ಸ್‌ಪ್ಲೋರರ್‌ನಲ್ಲಿ ಸೌಲಭ್ಯಗಳು ಅತ್ಯಂತ ಸೀಮಿತವಾಗಿದ್ದವು. ಬೇರೆ ಬೇರೆ ವೆಬ್ ಬ್ರೌಸರ್‌ಗಳಲ್ಲಿ ಇದ್ದ ಉತ್ತಮ ಸೌಲಭ್ಯಗಳನ್ನು ಎಕ್ಸ್‌ಪ್ಲೋರರ್ ಅಳವಡಿಸಿಕೊಳ್ಳಲು ವಿಫಲವಾಗಿತ್ತು. ಈಗಲೂ ಕ್ರೋಮ್‌ನಲ್ಲಿ ಇರುವ ಹಾಗೆ ಬೇರೆ ಬೇರೆ ಸಾಧನಗಳಲ್ಲಿ ಸಿಂಕ್ ಮಾಡುವ ಅವಕಾಶ ಎಕ್ಸ್‌ಪ್ಲೋರರ್‌ನಲ್ಲಿ ಇಲ್ಲ.

ಎಕ್ಸ್‌ಪ್ಲೋರರ್‌ನ ಭೂತ ಇನ್ನೂ ಚಾಲ್ತಿಯಲ್ಲಿದೆ!

ಎಕ್ಸ್‌ಪ್ಲೋರರ್ ಅನ್ನು ಒಂದು ಅಪ್ಲಿಕೇಶನ್ ಆಗಿ ಮೈಕ್ರೋಸಾಫ್ಟ್ ಸ್ಥಗಿತಗೊಳಿಸಿದೆ. ಆದರೆ, ಎಡ್ಜ್‌ನಲ್ಲಿ ಐಇ ಮೋಡ್ ಅನ್ನು 2019ರಲ್ಲೇ ಶುರು ಮಾಡಿದೆ. ಇದರಿಂದ, ಇಂಟರ್ನೆಟ್ ಎಕ್ಸ್‌ಪ್ಲೋರರ್ ಬಳಸಲು ಬಯಸುವವರು ಎಡ್ಜ್‌ನಲ್ಲಿ ಇಂಟರ್ನೆಟ್ ಎಕ್ಸ್‌ಪ್ಲೋರರ್ ಮೋಡ್ ಅನ್ನು ಬಳಸಬಹುದು.

‘ಅಗ್ನಿಪಥ’ ಯೋಜನೆ: ಲೆಫ್ಟಿನೆಂಟ್ ಜನರಲ್ ಅನಿಲ್ ಪುರಿ ಸ್ಪಷ್ಟನೆ

‘ಸೇನಾ ನೇಮಕಾತಿ ಬದಲಾಗದು’

ನವದೆಹಲಿ (ಪಿಟಿಐ): ‘ಸೇನಾ ನೇಮಕಾತಿ ಪ್ರಕ್ರಿಯೆಯು ಯಾವುದೇ ಬದಲಾವಣೆ ಇಲ್ಲದೇ ಮುಂದುವರಿಯಲಿದೆ. ಸೇನೆಯಲ್ಲಿನ ಸಾಂಪ್ರದಾಯಿಕ ರೆಜಿಮೆಂಟ್ ವ್ಯವಸ್ಥೆಯೂ ಯಥಾವತ್ ಇರಲಿದೆ’ ಎಂದು ಸೇನಾ ವ್ಯವಹಾರಗಳ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಲೆಫ್ಟಿನೆಂಟ್ ಜನರಲ್ ಅನಿಲ್ ಪುರಿ ಮಂಗಳವಾರ ಸ್ಪಷ್ಟಪಡಿಸಿದ್ದಾರೆ.

ಅನಿಲ್ ಪುರಿ

ಕೇಂದ್ರದ ಹೊಸ ಯೋಜನೆ ‘ಅಗ್ನಿಪಥ’ದಿಂದ ಸೇನಾ ನೇಮಕಾತಿ ಪ್ರಕ್ರಿಯೆ ಬಗ್ಗೆ ಅನುಮಾನಗಳು ಮೂಡಿರುವ ನಡುವೆ, ಅನಿಲ್ ಪುರಿ ಅವರು ಪತ್ರಿಕಾಗೋಷ್ಠಿಯಲ್ಲಿ ಈ ಸ್ಪಷ್ಟನೆ ನೀಡಿದ್ದಾರೆ.

‘ಭಾರತೀಯ ಸೇನೆಯ ಮೂರೂ ಪಡೆಗಳ ಸೇವೆಗೆ ಯುವಜನರನ್ನು ನಾಲ್ಕು ವರ್ಷಗಳ ಅವಧಿಗೆ ನೇಮಕ ಮಾಡಿಕೊಳ್ಳುವ ‘ಅಗ್ನಿಪಥ’ ಯೋಜನೆ ಜಾರಿಗೆ ಬರುವ ಮೊದಲು ಮೂರೂ ಸೇನಾ ಪಡೆಗಳು ಮತ್ತು ರಕ್ಷಣಾ ಸಚಿವಾಲಯದೊಂದಿಗೆ ದೀರ್ಘ ಸಮಾಲೋಚನೆ ನಡೆಸಲಾಗಿದೆ. ಸರ್ಕಾರದ ಹಲವು ಇಲಾಖೆಗಳ ನಡುವೆಯೂ ಚರ್ಚೆಯಾಗಿದೆ. 1989ರಿಂದ ವಿವಿಧ ಸಮಿತಿಗಳು ಈ ಬಗ್ಗೆ ಶಿಫಾರಸುಗಳನ್ನೂ ಮಾಡಿವೆ. ಇದು ಅತ್ಯಂತ ಅಗತ್ಯವಾದ ಸುಧಾರಣೆ’ ಎಂದು ಅವರು ಹೇಳಿದರು.

‘ಬೆಂಕಿ ಹಚ್ಚಲು ಮತ್ತು ಹಿಂಸಾಚಾರಕ್ಕೆ ಸಶಸ್ತ್ರ ಪಡೆಗಳಲ್ಲಿ ಜಾಗವಿಲ್ಲ. ಯೋಜನೆ ವಿರೋಧಿಸಲು ಯುವಕರು ಹಲವು ಸ್ಥಳಗಳಲ್ಲಿ ಹಿಂಸಾಚಾರದಲ್ಲಿ ತೊಡಗಿದ್ದಾರೆ. ಅಗ್ನಿಪಥದಡಿ ನೇಮಕಕ್ಕೆ ಅರ್ಜಿ ಸಲ್ಲಿಸುವವರು ಯಾವುದೇ ಹಿಂಸಾಚಾರದಲ್ಲಿ ಭಾಗವಾಗಿಲ್ಲವೆಂದು ಪ್ರಮಾಣ ಪತ್ರ ಸಲ್ಲಿಸಬೇಕಾಗುತ್ತದೆ. ಪೊಲೀಸ್ ಪರಿಶೀಲನೆಯು ಯಾವಾಗಲೂ ನೇಮಕಾತಿ ಪ್ರಕ್ರಿಯೆಯ ಭಾಗವಾಗಿದೆ’ ಎಂದು ಪುರಿ ಒತ್ತಿಹೇಳಿದರು.

ಈ ಯೋಜನೆಯಡಿ ನೇಮಕವಾದವರಿಗೆ ಸಿಗುವ ‘ಅಗ್ನಿವೀರರು’ ಎಂಬ ಪದನಾಮವು ಶೌರ್ಯ ಪ್ರಶಸ್ತಿಗಳಿಗೆ ಅರ್ಹತೆಯಾಗಲಿದೆ. ಸಶಸ್ತ್ರ ಪಡೆಗಳಿಗೆ ಅತ್ಯುತ್ತಮ ಪ್ರತಿಭೆಗಳನ್ನು ಸೇರಿಸಲು ಈ ಯೋಜನೆ ಪರಿಚಯಿಸಲಾಗುತ್ತಿದೆ. ಸೇನೆಯ ಸಾಮಾರ್ಥ್ಯ ಕ್ಷೀಣಿಸುವುದಿಲ್ಲ. ಬದಲಾಗಿ ಸೇನೆಗೆ ತಾರುಣ್ಯ ತುಂಬಲಿದೆ ಎಂದು ಅಧಿಕಾರಿಗಳು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

‘ಅಗ್ನಿಪಥ ಯೋಜನೆಯು ವಿಶ್ವಾ-ಸಾರ್ಹವಾದ ಉಪಕ್ರಮ. ಇದರ ಬಗ್ಗೆ ಇತ್ತೀಚೆಗೆ ತಪ್ಪು ಮಾಹಿತಿಯನ್ನು ಹರಡಲಾಗುತ್ತಿದೆ. ಆದರೆ, ಸೇನೆ ಸೇರುವ ತಯಾರಿಯಲ್ಲಿರುವ ಯುವಕರು ಹಲವು ಕಡೆ ದೈಹಿಕ ಚಟುವಟಿಕೆಗಳಿಗೆ ಮರಳಿದ್ದಾರೆ’ ಎಂದು ಅಧಿಕಾರಿಗಳು ತಿಳಿಸಿದರು.

ನೈಜತೆ ಸಾಬೀತುಪಡಿಸಿ: ಅಖಿಲೇಶ್

ಲಖನೌ(ಪಿಟಿಐ): ‘ಅಗ್ನಿಪಥ’ ವಿರೋಧಿಸಿ ಪ್ರತಿಭಟಿಸುತ್ತಿರುವ ಯುವಕರ ವಿಶ್ವಾಸ ಗಳಿಸುವ ಮೊದಲು, ಉದ್ಯಮಿಗಳು ತಮ್ಮ ಕಂಪನಿಗಳಲ್ಲಿ ನಿವೃತ್ತ ಸೈನಿಕರಿಗೆ ಉದ್ಯೋಗ ನೀಡಬೇಕು ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಮಂಗಳವಾರ ಒತ್ತಾಯಿಸಿದ್ದಾರೆ.

ಮಹೀಂದ್ರಾ ಗ್ರೂಪ್ ಅಧ್ಯಕ್ಷ ಆನಂದ್ ಮಹೀಂದ್ರಾ, ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್, ಆರ್‌ಪಿಜಿ ಎಂಟರ್‌ಪ್ರೈಸಸ್ ಅಧ್ಯಕ್ಷ ಹರ್ಷ ಗೋಯೆಂಕಾ ಮತ್ತು ಬಯೋಕಾನ್ ಲಿಮಿಟೆಡ್ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ ಅವರಂತಹ ಉದ್ಯಮಿಗಳು ಅಗ್ನಿಪಥ ಬೆಂಬಲಿಸಿದ ನಂತರ ಯಾದವ್ ಈ ಹೇಳಿಕೆ ನೀಡಿದ್ದಾರೆ.

‘ಅಗ್ನಿವೀರರಿಗೆ ಉದ್ಯೋಗ ಖಾತ್ರಿ’

ಚಂಡೀಗಡ(ಪಿಟಿಐ): ಸಶಸ್ತ್ರ ಪಡೆಗಳಲ್ಲಿ ನಾಲ್ಕು ವರ್ಷಗಳ ಅವಧಿಗೆ ಸೇವೆ ಸಲ್ಲಿಸಿದ ನಂತರ ಅಗ್ನಿವೀರರಿಗೆ ಹರಿಯಾಣ ಸರ್ಕಾರವು ‘ಉದ್ಯೋಗ ಖಾತ್ರಿ’ ನೀಡಲಿದೆ ಎಂದು ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಮಂಗಳವಾರ ಘೋಷಿಸಿದ್ದಾರೆ.

‘ಅಗ್ನಿಪಥ’ ವಿಚಾರಣೆ: ಸಿಜೆಐ ವಿವೇಚನೆಗೆ

ನವದೆಹಲಿ (ಪಿಟಿಐ): ‘ಅಗ್ನಿಪಥ’ ವಿರುದ್ಧದ ಪ್ರತಿಭಟನೆಯಿಂದ ಸಾರ್ವಜನಿಕ ಆಸ್ತಿಗೆ ಆದ ನಷ್ಟದ ಕುರಿತ ತನಿಖೆಗೆ ವಿಶೇಷ ತನಿಖಾ ತಂಡ ರಚಿಸುವಂತೆ ಕೋರಿರುವ ಅರ್ಜಿಯನ್ನು ಮುಖ್ಯನ್ಯಾಯಮೂರ್ತಿ ತೀರ್ಮಾನದ ನಂತರ ವಿಚಾರಣೆಗೆ ಪರಿಗಣಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಈ ಮಧ್ಯೆ, ‘ಅಗ್ನಿಪಥ’ ಯೋಜನೆ ಪ್ರಶ್ನಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವನ್ನು ಹೊರಡಿಸುವ ಮೊದಲು ತನ್ನ ವಾದ ಆಲಿಸಬೇಕು ಎಂದು ಕೋರಿ ಕೇಂದ್ರ ಸರ್ಕಾರವು ‘ಸುಪ್ರೀಂ’ಗೆ ಕೇವಿಯಟ್ ಸಲ್ಲಿಸಿದೆ.

ಈ ನಡುವೆ, ಅಗ್ನಿಪಥ ಯೋಜನೆಯನ್ನು ಮರುಪರಿಶೀಲಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಹೊಸದಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಸಲ್ಲಿಸಲಾಗಿದೆ.

ನ್ಯಾಯಮೂರ್ತಿಗಳಾದ ಸಿ.ಟಿ.ರವಿಕುಮಾರ್ ಮತ್ತು ಸುಧಾನ್ಶು ಧುಲಿಯಾ ಅವರಿದ್ದ ವಿಶೇಷ ಪೀಠದ ಎದುರು ಮಂಗಳವಾರ ವಿಷಯ ಪ್ರಸ್ತಾಪಿಸಿದ ವಕೀಲ ವಿಶಾಲ್ ತಿವಾರಿ, ‘ಈ ಕುರಿತ ಅರ್ಜಿಗಳನ್ನು ತುರ್ತಾಗಿ ವಿಚಾರಣೆಗೆ ಪರಿಗಣಿಸಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠವು, ‘ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಅವರ ಎದುರು ಇಡಲಾಗುವುದು. ಅವರೇ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ’ ಎಂದು ಪ್ರತಿಕ್ರಿಯಿಸಿತು.

‘ಅಗ್ನಿಪಥ ಯೋಜನೆ ಹಾಗೂ ರಾಷ್ಟ್ರೀಯ ಭದ್ರತೆ ಮತ್ತು ಒಟ್ಟು ಸೇನೆಯ ಮೇಲೆ ಅದರಿಂದಾಗುವ ಪರಿಣಾಮವನ್ನು ಕುರಿತು ಪರಿಶೀಲಿಸಲು ನಿವೃತ್ತ ನ್ಯಾಯಮೂರ್ತಿ ಅವರ ನೇತೃತ್ವದಲ್ಲಿ ಪರಿಣತರ ಸಮಿತಿ ರಚಿಸಬೇಕು’ ಎಂದು ವಕೀಲರು ಪೀಠಕ್ಕೆ ಮನವಿ ಮಾಡಿದರು.

ಅಗ್ನಿಪಥ ಯೋಜನೆಯನ್ನು ವಿರೋಧಿಸಿ ನಡೆದಿರುವ ಹಿಂಸಾತ್ಮಕ ಪ್ರತಿಭಟನೆ ಕುರಿತಂತೆ ವಸ್ತುಸ್ಥಿತಿ ವರದಿ ಸಲ್ಲಿಸಲು ಕೇಂದ್ರ ಸರ್ಕಾರ, ಉತ್ತರ ಪ್ರದೇಶ, ತೆಲಂಗಾಣ, ಬಿಹಾರ, ಹರಿಯಾಣ, ರಾಜಸ್ಥಾನ ಸರ್ಕಾರಗಳಿಗೆ ನಿರ್ದೇಶಿಸಬೇಕು ಎಂದು ಕೋರಿ ಪಿಐಎಲ್ ಸಲ್ಲಿಕೆಯಾಗಿದೆ.

ಅಗ್ನಿಪಥ ಯೋಜನೆಗೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸುತ್ತಿರುವುದು ರಾಜಕೀಯ ಪ್ರೇರಿತ ಮತ್ತು ಯುವಕರನ್ನು ದಿಕ್ಕುತಪ್ಪಿಸುವುದಾಗಿದೆ

ವಿ.ಕೆ. ಸಿಂಗ್, ಸೇನೆಯ ನಿವೃತ್ತ ಮುಖ್ಯಸ್ಥ ಮತ್ತು ಕೇಂದ್ರ ಸಚಿವ

‘ಅಗ್ನಿಪಥ’ವು ಉದ್ಯಮಕ್ಕೆ ನುರಿತ, ಶಿಸ್ತುಬದ್ಧ, ಪ್ರತಿಭಾವಂತರ ಸೇರ್ಪಡೆಗೆ ಸುವರ್ಣಾವಕಾಶ. ಅಗ್ನಿವೀರರಿಗೆ ಕೆಲಸ ನೀಡಲು ಉದ್ಯಮ ಗುಂಪು ಬದ್ಧ

ಬಿ.ಕೆ. ಗೋಯೆಂಕಾ, ವೆಲ್‌ಸ್ಪನ್ ಅಧ್ಯಕ್ಷ

ಪ್ರತಿಭಟನೆ: ನಷ್ಟ ವಸೂಲಿಗೆ ಕ್ರಮ

ವಾರಾಣಸಿ (ಪಿಟಿಐ): ಅಗ್ನಿಪಥ ವಿರುದ್ಧದ ಪ್ರತಿಭಟನೆಯ ವೇಳೆ ಸಾರ್ವಜನಿಕ ಆಸ್ತಿಗೆ ಆಗಿರುವ ನಷ್ಟವನ್ನು ಪ್ರತಿಭಟನಕಾರರಿಂದಲೇ ವಸೂಲಿ ಮಾಡಲು ಸ್ಥಳೀಯ ಆಡಳಿತ ನಿರ್ಧರಿಸಿದೆ. ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗಿದ್ದವರನ್ನು ಗುರುತಿಸುವ ಪ್ರಕ್ರಿಯೆಯನ್ನು ಆರಂಭಿಸಿದೆ.

ಜಿಲ್ಲಾಧಿಕಾರಿ ಕೌಶಲ್ ರಾಜ್ ಶರ್ಮಾ ಅವರು, ‘ಜೂನ್ 17ರಂದು ನಡೆದಿದ್ದ ಪ್ರತಿಭಟನೆ ವೇಳೆ 36 ಬಸ್‌ಗಳಿಗೆ ಬೆಂಕಿ ಹಚ್ಚಲಾಗಿತ್ತು. ಒಟ್ಟು ₹ 12.97 ಲಕ್ಷ ನಷ್ಟವಾಗಿದೆ. ಪ್ರತಿಭಟನೆಗೆ ಸಂಬಂಧಿಸಿದಂತೆ ಈವರೆಗೆ 27 ಜನರನ್ನು ಬಂಧಿಸಲಾಗಿದೆ. ಉಳಿದವರನ್ನು ಗುರುತಿಸುವ ಕಾರ್ಯ ನಡೆದಿದೆ’ ಎಂದು ತಿಳಿಸಿದರು.

ಯುವಜನರು ಇಂತಹ ಯಾವುದೇ ಕೃತ್ಯಗಳಲ್ಲಿ ಭಾಗಿಯಾಗಿ ಸಿಕ್ಕಿಬಿದ್ದಲ್ಲಿ, ಭವಿಷ್ಯದಲ್ಲಿ ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ಅವಕಾಶ ಕಳೆದುಕೊಳ್ಳಲಿದ್ದಾರೆ. ಅಲ್ಲದೆ, ಆಗಿರುವ ನಷ್ಟವನ್ನು ಅವರೇ ಭರಿಸಬೇಕಾಗುತ್ತದೆ ಎಂದು ತಿಳಿಸಿದರು.

ಕೋವಿಡ್: ದೇಶದಲ್ಲಿ 9,923 ಹೊಸ ಪ್ರಕರಣ

ನವದೆಹಲಿ(ಪಿಟಿಐ): ದೇಶದಲ್ಲಿ ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ತಾಸುಗಳ ಅವಧಿಯಲ್ಲಿ ಕೋವಿಡ್ 9,923 ಹೊಸ ಪ್ರಕರಣಗಳು ದೃಢಪಟ್ಟಿವೆ. 17 ಜನ ಸೋಂಕಿತರು ಮೃತಪಟ್ಟಿದ್ದಾರೆ.

ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 4,33,19,396ಕ್ಕೆ ಏರಿಕೆಯಾಗಿದೆ. ಕಳೆದ 24 ತಾಸುಗಳಲ್ಲಿ ದೆಹಲಿಯಲ್ಲಿ ಆರು, ಕೇರಳದಲ್ಲಿ ಐದು, ಮಹಾರಾಷ್ಟ್ರದಲ್ಲಿ ಇಬ್ಬರು, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಒಟ್ಟು ಸಾವಿನ ಸಂಖ್ಯೆ 5,24,890ಕ್ಕೆ ತಲುಪಿದೆ. ದೈನಂದಿನ ಸೋಂಕು ದೃಢ ಪ್ರಮಾಣ ಶೇ 2.55 ಮತ್ತು ವಾರದ ದೃಢ ಪ್ರಮಾಣ 2.67 ಇದೆ.

ಸಕ್ರಿಯ ಪ್ರಕರಣಗಳ ಪ್ರಮಾಣ ಶೇ 0.18ರಷ್ಟಿದ್ದು, ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 79,313ಕ್ಕೆ ಏರಿದೆ. ಚೇತರಿಕೆ ಪ್ರಮಾಣ ಶೇ 98.61 ಇದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಮಹಾರಾಷ್ಟ್ರದಲ್ಲಿ ಹೊಸದಾಗಿ 3,659 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಮುಂಬೈನಲ್ಲಿ ವರದಿಯಾಗಿರುವ ಪ್ರಕರಣಗಳ ಸಂಖ್ಯೆ 1,781. ಇದರೊಂದಿಗೆ ಒಟ್ಟು ಪ್ರಕರಣಗಳ ಸಂಖ್ಯೆ 79,41,762ಕ್ಕೆ ಏರಿದಂತಾಗಿದೆ. ಇದೇ ಅವಧಿಯಲ್ಲಿ ಒಬ್ಬರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಆಜಾದ್‌ಗೆ ಕೋವಿಡ್: ಕಾಂಗ್ರೆಸ್‌ನ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಅವರಿಗೆ ಕೋವಿಡ್ ಸೋಂಕು ತಗುಲಿರುವುದು ಮಂಗಳವಾರ ದೃಢಪಟ್ಟಿದೆ.

5 ಸಾವಿರ ದಾಟಿದ ಸಕ್ರಿಯ ಪ್ರಕರಣ



ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ 738 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 5 ಸಾವಿರದ ಗಡಿ (5,020) ದಾಟಿದೆ.

ಒಂದು ದಿನದ ಅವಧಿಯಲ್ಲಿ 19,624 ಮಂದಿಗೆ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 3.76 ರಷ್ಟು ವರದಿಯಾಗಿದೆ. 9 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 698 ಮಂದಿ ಸೋಂಕಿತರಾಗಿದ್ದಾರೆ. ಮೈಸೂರು ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ 13 ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 4,819ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 39.62 ಲಕ್ಷ ದಾಟಿದೆ. 39.16 ಲಕ್ಷಕ್ಕೂ ಹೆಚ್ಚು ಮಂದಿ ಚೇತರಿಸಿಕೊಂಡಿದ್ದಾರೆ.

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದ)

ಇ-ಮೇಲ್: contactus@bmrc.co.in ವೆಬ್‌ಸೈಟ್: www.bmrc.co.in

ಸಂಖ್ಯೆ: ಬಿಎಂಆರ್‌ಸಿಎಲ್/ಎಲೆಕ್ಟ್ರಿಕಲ್/272/2022/ವಾಲ್ಯೂಮ್–II ದಿನಾಂಕ: 22.06.2022

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್, "ಹಂತ-2ರ ರೀಚ್-6 ರ ಸುರಂಗಮಾರ್ಗ ನಿಲ್ದಾಣಗಳಲ್ಲಿ ಎಸ್ಕಲೇಟರ್‌ಗಳ ವಿನ್ಯಾಸ, ತಯಾರಿಕೆ, ಸರಬರಾಜು, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವಿಕೆ" ಏಕ ಹಂತ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಸ್ಥಳೀಯ ಸ್ಪರ್ಧಾತ್ಮಕ ಬಿಡ್ಡಿಂಗ್ ಮೂಲಕ ಅರ್ಹ ಮತ್ತು ಅನುಭವವುಳ್ಳ ಟೆಂಡರ್‌ದಾರರಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜಿನ ಬೆಲೆ (ಮರುಪಾವತಿಯಾಗದ): ರೂ.59,000/- (ರೂ.50,000+ ರೂ.9,000 (ಜಿಎಸ್‌ಟಿ@18%)). ಆನ್‌ಲೈನ್ ಮೂಲಕ ಟೆಂಡರ್ ದಸ್ತಾವೇಜಿನ ಮಾರಾಟದ ಅವಧಿ: 24.06.2022 ರಿಂದ 25.07.2022ರವರೆಗೆ ಮಧ್ಯಾಹ್ನ 3.00 ವರೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 03.08.2022 ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆವರೆಗೆ. ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 03.08.2022 ಮಧ್ಯಾಹ್ನ 3.30 ಗಂಟೆಗೆ. ಹೆಚ್ಚಿನ ವಿವರಗಳಿಗೆ ದಿನಾಂಕ: 24.06.2022ರಿಂದ www.bmrc.co.in ವೆಬ್‌ಸೈಟ್ ಅನ್ನು ಸಂಪರ್ಕಿಸಿ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ – 587103

OFFICE OF THE DEPUTY COMMISSIONER, DISTRICT URBAN DEVELOPMENT CELL, BAGALKOTE DISTRICT, BAGALKOTE- 587103

Ph: 08354-235776 E-mail: dudc_bgk@yahoo.co.in, Itstaff dudc_bagalkote@yahoo.co.in

ಸಂಖ್ಯೆ:ಜಿನಕೋಬಾ: ನಗರೋತ್ಥಾನ ಹಂತ–4:2022–23 ದಿನಾಂಕ: 20.06.2022.

ಟೆಂಡರ್ ಪ್ರಕಟಣೆ

E-Proceurement portal ಮುಖಾಂತರ

ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಮಾನ್ಯ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ ಹಂತ–4 ಕಾಮಗಾರಿಗಳಿಗೆ e-protal: https://eproc.karnataka.gov.in ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದ್ದು,

ಇಂಡೆಂಟ ನಂ : (1)DMA/2022-23/OW/WORK_INDENT132658
(2) DMA/2022-23/OW/WORK_INDENT132620
(3) DMA/2022-23/OW/WORK_INDENT132575

ಸೂಚನೆಗಳು :

(1) Pre-bid Meeting : 05.07.2022 at 4.00 PM
(2) Last Date & Time for receipt of tenders : 15.07.2022. At 16.30 pm.
(3) Opening of Technical bid is on Dtd : 18.07.2022 at 11.30 am.
(4) Date & Time for Opening of Financial Bid Dtd : 21.07.2022 at 11.30 am.

ಸಹಿ/– ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿಕೋಶ, ಬಾಗಲಕೋಟೆ.

ವಾ.ಸಾ.ಇ/ಬಾಗಲಕೋಟ/168/2022–23/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
(ನಗರಾಭಿವೃದ್ಧಿ ಇಲಾಖೆ)

ವಿಜಯಪುರ ಮಹಾನಗರ ಪಾಲಿಕೆ, ವಿಜಯಪುರ

ಬಾಗಲಕೋಟ ರಸ್ತೆ, ಜಲನಗರ–586109
ದೂರವಾಣಿ : 08352–278536, ಸಹಾಯವಾಣಿ: 08352–222474
ಫ್ಯಾಕ್ಸ್:08352–278532,
Website: www.bijapurcity.mrc.gov.in

ನಂ:ಮನಪಾವಿ/ಡೇ–ನಲ್ಮ್/ಸಾ.ಪ್ರ/997/2022–23 ದಿನಾಂಕ:16.06.2022

ಸಾರ್ವಜನಿಕ ಪ್ರಕಟಣೆ

ವಿಜಯಪುರ ಮಹಾನಗರಪಾಲಿಕೆ ವತಿಯಿಂದ 2022–23ನೇ ಸಾಲಿನ ಕೇಂದ್ರ ಪುರಸ್ಕೃತ ಯೋಜನೆಯಾದ ದೀನ್ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿ ಈ ಕೆಳಗಿನ ಉಪಘಟಕವಾರು ವಿಜಯಪು ಮಹಾನಗರಪಾಲಿಕೆಗೆ ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗದಿಪಡಿಸಿದ್ದು, 1)ಸ್ವಯಂ ಉದ್ಯೋಗ ಯೋಜನೆ(ದ್ವಿ–ಪ್ರತಿ ಅರ್ಜಿ) 2) ಗುಂಪು(ಡ್ವಾಕಾ) ಉದ್ಯೋಗ ಯೋಜನೆ 3) ಸ್ವ–ಸಹಾಯ ಗುಂಪುಗಳ ರಚನೆ 4) ಸ್ವ–ಸಹಾಯ ಗುಂಪುಗಳ ಬ್ಯಾಂಕ ಲಿಂಕೇಜ್ 5) ಬೀದಿ ಬದಿ ವ್ಯಾಪಾರಿಗಳಿಗೆ ಕಿರು ಸಾಲ ಯೋಜನೆ

ಮೇಲಿನ ಎಲ್ಲ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ರೇಷನ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್ ಝೆರಾಕ್ಸ್ ಮತದಾರರ ಗುರುತಿನ ಚೀಟಿ, ವಿದ್ಯಾರ್ಹತೆ ಪ್ರಮಾಣ ಪತ್ರ, ಇತ್ತೀಚಿನ ಎರಡು ಭಾವ ಚಿತ್ರಗಳೊಂದಿಗೆ ಅರ್ಜಿ ಸಲ್ಲಿಸಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಿದ್ದು, ಅರ್ಜಿಯನ್ನು ದಿನಾಂಕ: 30.06.2022 ರ ಒಳಗಾಗಿ ಮಹಾನಗರಪಾಲಿಕೆ ಸಲ್ಲಿಸಬೇಕು ಹೆಚ್ಚಿನ ಮಾಹಿತಿಗಾಗಿ ಮಹಾನಗರಪಾಲಿಕೆಯ ಡೇ–ನಲ್ಮ್ ವಿಭಾಗದಲ್ಲಿ ಸಂಪರ್ಕಿಸಬೇಕು.

ಸಹಿ/– ಆಯುಕ್ತರು, ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/ಎಂಸಿಎ/155/2022–23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಕನೀನಿನಿ ಘಎದಂಕಾ ವಿಭಾಗ ನಂ.3, ಬೀಳಗಿ
Phone & Fax No: 08425–275228, e-mail: eeknnlglbcdn.3bilagi@gmail.com

ಸಂ:ಕನೀನಿನಿ:ಘಎದಂಕಾ:ವಿ3:ಡಿಬಿ:2022–23/407 ದಿನಾಂಕ:18.06.2022

ಅಲ್ಪಾವಧಿ ಶೇಕಡಾವಾರು ಟೆಂಡರ ಅಧಿಸೂಚನೆ : : (4701 ಕಾಮಗಾರಿ)
(ಇ–ಪ್ರಕ್ಯೂರ್ಮೆಂಟ್ ಮುಖಾಂತರ ಮಾತ್ರ)

ಮೆ:ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ ಬೆಂಗಳೂರು ಇವರ ಪರವಾಗಿ ಈ ವಿಭಾಗದ ಅಡಿಯಲ್ಲಿ ಬರುವ ರೋಡ ಬ್ರಿಡ್ಜ್ ಕಾಮಗಾರಿಗೆ ಅರ್ಹ (KPWD Class-I & above) ಗುತ್ತಿಗೆದಾರರಿಂದ ಮೊಹರಾದ ಶೇಕಡವಾರು ದರದ ಅಲ್ಪಾವಧಿ ಟೆಂಡರನ್ನು ನಿಗದಿಪಡಿಸಿ ಕರೆಯಲಾಗಿದೆ. ಸದರಿ ಕಾಮಗಾರಿಗಳು Two Cover System **ಇಂಡೆಂಟ್ ನಂ:KNNL/2021–22/BR/WORK_INDENT 32475/CALL–2,** ಗಳನ್ನು ಇ–ಪ್ರಕ್ಯೂರ್ಮೆಂಟ್ ಮೂಲಕ ಟೆಂಡರ ಕರೆಯಲಾಗಿದೆ. 1) ಈ ಕಾಮಗಾರಿಯ ಅಂದಾಜು ಮೊತ್ತ ರೂ.149.88 ಲಕ್ಷಗಳು ಇರುತ್ತದೆ. 2) ಪಾವತಿಸಬೇಕಾದ ಇಎಂಡಿ ಮೊತ್ತ ರೂ.1,50,000/– ಇರುತ್ತದೆ. 3) ಈ ಕಛೇರಿಯಲ್ಲಿ ಪೂರ್ವ ಬಿಡ್ ಸಭೆ ದಿನಾಂಕ:22.06.2022 ರ ಬೆಳಿಗ್ಗೆ 11.00 ಘಂಟೆಯ 4) ಟೆಂಡರ್ ಆಕ್ಷೇಪಣೇಗಳಿಗಾಗಿ ನಿಗದಿ ಪಡಿಸಿದ ದಿನಾಂಕ:23.06.2022 ಸಂಜೆ 5.00 ಘಂಟೆವರೆಗೆ. 5) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 27.06.2022 ಸಂಜೆ 4.00 ಘಂಟೆವರೆಗೆ. 6) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 29.06.2022 ರ ಬೆಳಿಗ್ಗೆ 11.00 ಘಂಟೆಯ ನಂತರ. 7) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ. ಗುತ್ತಿಗೆದಾರರ ಅರ್ಹತೆ/ ಟೆಂಡರ್ ನಿಯುಮಗಳು/ ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರಗಳನ್ನು ಸ್ವೀಕರಿಸುವ/ ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ: 08425–275228 ರಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

(ಶಿವಲಿಂಗಯ್ಯ ಎಂ)
ಕಾರ್ಯನಿರ್ವಾಹಕ ಇಂಜನೀಯರರು
ಕನೀನಿನಿ ಘಎದಂಕಾ ವಿಭಾಗ ನಂ3 ಬೀಳಗಿ

ವಾಸಾಸಂಇ/ಬಾಗಲಕೋಟೆ/ಶಿರಡಿ ಸಾಯಿ/172/2022–23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಧಾನ ಇಂಜಿನಿಯರ್ ರವರ ಕಚೇರಿ, ಪಿ.ಆರ್.ಎ.ಎಂ.ಸಿ.
4ನೇ ಮಹಡಿ, ಪಿ.ಡಬ್ಲ್ಯೂಡಿ ಅನೆಕ್ಸ್ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು – 560001

ಸಂ: ಲೋಇ/40/PRAMC/2022–23/247 ದಿನಾಂಕ : 16.06.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ತುಮಕೂರು ಜಿಲ್ಲೆಯ 03 ರಸ್ತೆ ಸುರಕ್ಷತಾ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ–ಪ್ರೊಕ್ ನಿಂದ **(www.eproc.karnataka.gov.in)** ದಿನಾಂಕ: 18.06.2022 ಅಪರಾಹ್ನ 04.00 ರಿಂದ ಪಡೆಯಬಹುದಾಗಿದೆ.

ವಾ.ಸಂ.ಇ./ಬೆಂ.ನ/ಶ್ರೇಷ್ಠ/1008/2022–23 ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಿಆರ್‌ಎಎಂಸಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ. 8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ,
ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು–560052.

ಸಂ.: ಕವಶಿಸಸ/ಸಕಾಅ/ಟೆಂಡರ್–04/2022–23 ದಿನಾಂಕ: 21.06.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಟೆಂಡರ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಹಾವೇರಿ ಜಿಲ್ಲೆ (28 ವಸತಿ ಶಾಲೆಗಳು) ಮತ್ತು ಉತ್ತರ ಕನ್ನಡ (24 ವಸತಿ ಶಾಲೆಗಳು) ಜಿಲ್ಲೆಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಿಕ್ಷಣ ಸಂಸ್ಥೆಗಳನ್ನು ಸಾರ್ವಜನಿಕರು ಸುಲಭವಾಗಿ ಗುರುತಿಸಲು ಅನುಕೂಲವಾಗುವಂತೆ, ಹೆಸರು ಮತ್ತು ಅಗತ್ಯ ವಿವರಗಳನ್ನು ಒಳಗೊಂಡಂತೆ ಒಂದೇ ಮಾದರಿಯ ನಾಮ ಫಲಕ (ಸೈನ್ ಬೋರ್ಡ್) ಅಳವಡಿಸುವ ಕಾಮಗಾರಿ ಮತ್ತು ಮಂಡ್ಯ ಜಿಲ್ಲೆ ಕೆ.ಆರ್. ಪೇಟೆಯಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗಳಿಗೆ (**ಟೆಂಡರ್ ಇಂಡೆಂಟ್ ಸಂಖ್ಯೆ: 2986 Call-2, 2987 Call-2, 2902 Call-3**) ಇ–ಪೋರ್ಟಲ್ ಮುಖಾಂತರ ದಿನಾಂಕ **22.06.2022**ರಂದು ಟೆಂಡರ್‌ಗಳನ್ನು ಕರೆಯಲಾಗಿದ್ದು. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **30.06.2022** ಮತ್ತು **06.07.2022**ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://eproc.karnataka.gov.in** ರಲ್ಲಿ ನೋಡಬಹುದಾಗಿದೆ.

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು,
ಕ.ವ.ಶಿ.ಸ.ಸಂ.

ವಾಸಾಸಂಇ/ವಾಪ್ರ/ಎಲ್‌ಸಿ/996/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ GOVERNMENT OF KARNATAKA

ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ

VIJAYANAGAR INSTITUTE OF MEDICAL SCIENCES, CANTONMENT BALLARI-583104
Telephones: Director No.8147796529, CAO No.8147796526 & PA No.8147796539
e-mail :directorvimsbelllary@gmail.com
website: www.vimsballari.org.in

No.VIMS/SUP/TEND/02/2022-23, DATE: 20/06/2022.

ಟೆಂಡರ್ ಅಧಿಸೂಚನೆ

ವಿಮ್ಸ್ ಸಂಸ್ಥೆ, ಬಳ್ಳಾರಿಗೆ ಮುದ್ರಿಸಿದ ಪುಸ್ತಕಗಳು & ನಮೂನೆಗಳನ್ನು ಒದಗಿಸಲು ಕೆ.ಟಿ.ಪಿ.ಪಿ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ದ್ವಿ–ಟೆಂಡರ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್:https://eproc.karnataka.gov.in ಮೂಲಕ ಅರ್ಹ ಬಿಡ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1).ಟೆಂಡರ್ ಡಾಕುಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ: 21.06.2022. 2).ಟೆಂಡರಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 28.06.2022ರ ಸಂಜೆ 5.00 ರ ವರೆಗೆ. 3).ಟೆಂಡರ್ ಪ್ರೀ–ಬಿಡ್ ಸಭೆ ದಿನಾಂಕ: 29.06.2022ರ ಬೆಳಿಗ್ಗೆ 11.30 ಕ್ಕೆ ಈ ಕೆಳಗೆ ಸಹಿಮಾಡಿದರ ಕೊಠಡಿಯಲ್ಲಿ. 4).ಟೆಂಡರ್ ಅನ್ನು ಸಲ್ಲಿಸುವ ಕೊನೆಯ ದಿನಾಂಕ: 12.07.2022ರ ಸಂಜೆ 5.00 ರ ವರೆಗೆ. 5).ಟೆಕ್ನೋ–ಕಮರ್ಷಿಯಲ್ ಬಿಡ್ ತೆರೆಯುವ ದಿನಾಂಕ: 13.07.2022ರ ಸಂಜೆ 05.15 ಕ್ಕೆ. 6).ಟೆಂಡರಿನ ಅಂದಾಜು ಮೊತ್ತ: ರೂ.149.00 ಲಕ್ಷಗಳು.

ಸಹಿ/– ನಿರ್ದೇಶಕರು, ವಿಮ್ಸ್, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/171/ಎಂಸಿಎ/2022–23

KARNATAKA NEERAVARI NIGAM LIMITED
(A Government of Karnataka Enterprises)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ ಕನೀನಿನಿ,ಘಬದಂಕಾನಿ ವಿಭಾಗ ಸಂ.3 ಗೋಕಾಕ ಫೋನ ನಂ. 08332–225213.

ಸಂ. 1)ಕನೀನಿನಿ/ಜಿಆರ್‌ಬಿಸಿಸಿ ವಿ–3/ಡಿಬಿ/ಗೊಡಚಿನಮಲ್ಕಿ ಎಲ್‌ಆಯ್‌ಎಸ್/ಟೆಂಡರ/2022–23/2 ದಿನಾಂಕ:20–06–2022, 2) ಕನೀನಿನಿ/ಜಿಆರ್‌ಬಿಸಿಸಿ ವಿ–3/ಡಿಬಿ/ ಮು ಏ.ನಿ.ಯೋ ಹೊಲಗಾಲುವೆ /ಟೆಂಡರ/2022–23/3 ದಿನಾಂಕ:– 20–06–2022

ಅಲ್ಪಾವಧಿ ಶೇಕಡಾವಾರ ಟೆಂಡರ್ ಅಧಿಸೂಚನೆ(ಎರಡನೇ ಕರೆ)
(ಇ–ಪ್ರೊಕ್ಯೂರಮೆಂಟ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದವರು, ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಬೆಳಗಾವಿ ಜಿಲ್ಲೆಯ ಕನೀನಿನಿ, ಘಟಕಾನಿ ವಿಭಾಗ ನಂ.3 ಗೋಕಾಕ ವ್ಯಾಪ್ತಿಯ ಗೊಡಚಿನಮಲ್ಕಿ ಸ್ಟೇಜ I & II 19 ಕಾಮಗಾರಿಗಳು ಮತ್ತು ಮುರಗೋಡ ಏತ ನೀರಾವರಿ ಯೋಜನೆಯ ಹೊಲಗಾಲುವೆ 01 ಕಾಮಗಾರಿಗಳ ಒಟ್ಟು 20 ಕಾಮಗಾರಿಗಳಿಗೆ ಇ–ಪ್ರೊಕ್ಯೂರಮೆಂಟ್ ಇ–ಪೋರ್ಟಲ್ ಮುಖಾಂತರ ಮಾತ್ರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

(1) (ಅ) ಗೊಡಚಿನಮಲ್ಕಿ ಏತ ನೀರಾವರಿ ಯೋಜನೆಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಿದ ಕಾಮಗಾರಿಗಳು ಒಟ್ಟು –03. ಇಂಡೆಂಟ್ ನಂಬರುಗಳು 31247, 31205 & 32564. ಸದರಿ ಕಾಮಗಾರಿಗಳಿಗೆ ಇಟ್ಟ ಅಂದಾಜು ಟೆಂಡರ ಮೊತ್ತವು ರೂ. 38.95 ಲಕ್ಷ ದಿಂದ ರೂ. 49.63 ಲಕ್ಷಗಳವರೆಗೆ ಇರುತ್ತವೆ. (ಆ) ಮೀಸಲಾತಿ ಇರದ / ಸಾರ್ವಜನಿಕ ಕಾಮಗಾರಿಗಳು ಒಟ್ಟು–16. ಕಾಮಗಾರಿ ಇಂಡೆಂಟ್ ನಂಬರುಗಳು:32563,32571,32550,32554,32555,32557,32559, 32560, 32562, 32565,32569,32570,32573,32574, 31235, 32568, ಸದರಿ ಕಾಮಗಾರಿಗಳಿಗೆ ಇಟ್ಟ ಅಂದಾಜು ಟೆಂಡರ ಮೊತ್ತವು ರೂ. 39.17 ಲಕ್ಷ ದಿಂದ ರೂ. 214.76 ಲಕ್ಷಗಳವರೆಗೆ ಇರುತ್ತವೆ

(2) ಮುರಗೋಡ ಏತ ನೀರಾವರಿ ಯೋಜನೆಯ ಹೊಲಗಾಲುವೆ ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಿದ 01 (ಒಂದು) ಕಾಮಗಾರಿಯ ಇಂಡೆಂಟ್ ನಂಬರು. 31474 ಸದರಿ ಕಾಮಗಾರಿಗಳಿಗೆ ಇಟ್ಟ ಅಂದಾಜು ಟೆಂಡರ ಮೊತ್ತವು ರೂ. 20.14 ಲಕ್ಷ ಇರುತ್ತದೆ.

ಖಾಲಿ ಟೆಂಡರ್ ಫಾರ್ಮಗಳಿಗಾಗಿ ಅರ್ಜಿ ಸಲ್ಲಿಸುವ ಹಾಗೂ ತುಂಬಿದ ಟೆಂಡರಗಳನ್ನು ಸ್ವೀಕರಿಸುವ ದಿ: 22–06–2022 ರಿಂದ 30–06–2022 ಸಾಯಂಕಾಲ 4.00 ಗಂಟೆಯವರೆಗೆ (ಕಚೇರಿ ವೇಳೆಯಲ್ಲಿ) ಕೆಲಸದ ಹೆಸರು /ಇಎಂಡಿ ಮೊತ್ತ / ಗುತ್ತಿಗೆದಾರರ ದರ್ಜೆ ಹಾಗೂ ಇತರೆ ಟೆಂಡರಿನ ನಿಯಮಗಳ ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕಚೇರಿಯಲ್ಲಿ, ಕಚೇರಿಯ ಸಮಯದಲ್ಲಿ ಅಥವಾ https:// eproc.karnataka.gov.in ವೆಬ್‌ಸೈಟನಲ್ಲಿ ಪಡೆಯಬಹುದು. ಇನ್ನು ಮುಂದೆ ಸದರಿ ಟೆಂಡರನಲ್ಲಿ ಯಾವುದೇ ಬದಲಾವಣೆಗಳು/ ಮಾರ್ಪಾಡುಗಳು/ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಇ–ಪ್ರೊಕ್ಯೂರಮೆಂಟ್,ಇ–ಪೋರ್ಟಲ್ ವೆಬ್‌ಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು
ಕನೀನಿನಿ ಜಿಆರಬಿಸಿಸಿ ವಿಭಾಗ ನಂ–3, ಗೋಕಾಕ.

DIPR/BGM/RO-NO-373/MCA/2022-23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಎಇ–2/ಐಎಫ್ಬಟಿ–12/2022–23
ದಿನಾಂಕ:18.06.2022

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಇ–ಪ್ರಕ್ಯೂರಮೆಂಟ್ ಪೋರ್ಟಲ್ (http://eproc. karnataka.gov.in) ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಪರಿಶಿಷ್ಟಜಾತಿಯ ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು:
(1) ಹೊಸನಗರ ತಾಲ್ಲೂಕು 1 ಕಾಮಗಾರಿ
ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು:
(2) ಹೊಸನಗರ ತಾಲ್ಲೂಕು 1 ಕಾಮಗಾರಿ.
ಎಲ್ಲಾ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳು:
(3) ಹೊಸನಗರ ತಾಲ್ಲೂಕು 3 ಕಾಮಗಾರಿ
(4) ಸೊರಬ ತಾಲ್ಲೂಕು 5 ಕಾಮಗಾರಿ

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ಎಲ್ಲಾ ಕಾಮಗಾರಿಗಳಿಗೆ ದಿನಾಂಕ:22.06.2022 ರಿಂದ 06.07.2022 ರವರೆಗೆ, ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ): **6 ತಿಂಗಳು.** ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182–274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–25501216/ 080–25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/– ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ, ಬ್ಯಾಡಗಿ ತಾಲೂಕ, ಹಾವೇರಿ ಜಿಲ್ಲೆ

ಸಂ:ಆಯುಕ್ತರು/ಕಾಅಪ್ರಾ/ಟೆಂಡರ್/2022–23/ ದಿನಾಂಕ:20–06–2022

ಟೆಂಡರ್ ಪ್ರಕಟಣೆ

(E-GOK ಇ–ಪ್ರಕ್ಯೂರಮೆಂಟ್ ಮುಖಾಂತರ ಮಾತ್ರ)

ಈ ಕಛೇರಿಯ ಟೆಂಡರ ಪ್ರಕಟಣೆ ಸಂಖ್ಯೆ ಸಂ:ಆಯುಕ್ತರು/ಕಾಅಪ್ರಾ/ಟೆಂಡರ್/2022–23 ದಿನಾಂಕ : 20–06–2022ರಲ್ಲಿ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಈ ಕೆಳಕಂಡಂತೆ ಟೆಂಡರ್ ಕರೆಯಲಾಗಿದೆ

ಟೆಂಡರ್ ಹೆಸರು : ಬ್ಯಾಡಗಿ ತಾಲ್ಲೂಕು ಕಾಗಿನೆಲೆ ಗ್ರಾಮದಲ್ಲಿರುವ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಪರಿಸರ ಸ್ನೇಹಿ ಉದ್ಯಾನವನದಲ್ಲಿನ ಪ್ರಕೃತಿ ಚಿಕಿತ್ಸಾ ಕೇಂದ್ರದ 3 ವರ್ಷಗಳಿಗೆ ಗುತ್ತಿಗೆ **(LEASE)** ನೀಡುವ ಕುರಿತು.

(1) ಖಾಲಿ ಟೆಂಡರ್ ಫಾರಂಗಳಿಗಾಗಿ ಅರ್ಜಿಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **04–07–2022** ರ 16.30 ಗಂಟೆವರೆಗೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **06–07–2022** ರ ಬೆಳಿಗ್ಗೆ 11.30 ಗಂಟೆಗೆ. (3) ಅರ್ಹ ಟೆಂಡರದಾರರ ಆರ್ಥಿಕ ಬಿಡ್ ತೆರೆಯುವ ದಿನಾಂಕ : **11–07–2022** ರ ಬೆಳಿಗ್ಗೆ 11.30 ಗಂಟೆಗೆ. (4) ಟೆಂಡರ್ ಪೂರ್ವಭಾವಿ ಸಭೆ : **30–06–2022** ರ ಸಂಜೆ 15.00 ಗಂಟೆಗೆ.

ಕಾಮಗಾರಿ ಹೆಸರು : **LEASING OF YOGA AND NATUROPATHY HOSPITAL BUILDINGAT ECO-PARK @ KAGINELE BYADGI TQ. HAVERI DIST (RD/2022-23/OS/Service_Indent2),** ಖಾಲಿ ಟೆಂಡರ್ ಫಾರಂ ಬೆಲೆ ರೂ. ವರೆಗೆ ಸೇರಿ : ಇ–ಪ್ರೋಕ್ಯೂರಮೇಂಟನಲ್ಲಿರುವಂತೆ. ಇ.ಎಮ್.ಡಿ ರೂ. 05.00 ಲಕ್ಷ, ಟೆಂಡರ್‌ದಾರರ ವರ್ಗ : ಸರ್ಕಾರಿ/ ಅರೆ ಸರ್ಕಾರಿ ಸಂಸ್ಥೆಗಳು, ಚಾರಿಟೇಬಲ್ ಟ್ರಸ್ಟ್, ಖಾಸಗಿ ಆಸ್ಪತ್ರೆಯನ್ನು ಯಶಸ್ವಿಯಾಗಿ ನಡೆಸಿದ ಅನುಭವ, ನಿಗದಿ ಪಡಿಸಿದ ಕಾಲಮಿತಿ : 3 ವರ್ಷ

ಟೆಂಡರನಲ್ಲಿಯ ನಿಬಂಧನೆಗಳು ಹಾಗೂ ಷರತ್ತುಗಳ ವಿವರಗಳನ್ನು **E-GOK** ಇ–ಪ್ರಕ್ಯೂರಮೆಂಟ್ ಪ್ಲಾಟ ಫಾರಂ **www.eproc.karnataka.gov.in** ರಲ್ಲಿ ಪಡೆಯಬಹುದು ಹಾಗೂ ಆಯುಕ್ತರ ಕಚೇರಿಯಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು.

(ದೂರವಾಣಿ : 08375–289388) ಸಹಿ/– ಆಯುಕ್ತರು,
ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ,
ತಾ: ಬ್ಯಾಡಗಿ, ಜಿ. ಹಾವೇರಿ

ವಾಸಾಸಂಇ/ಹಾವೇರಿ/ಎಂಸಿಎ/91/2022–23

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೆ, ಬೆಂಗಳೂರು–560 065.

ಟೆಂಡರ್ ಸಂಖ್ಯೆ:ಆಅ/ಟಿ.ಎನ್/471/2022–23 ದಿನಾಂಕ:17.06.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ನುರಿತ ಬೋಧನಾ/ ತರಬೇತಿ ಸಂಸ್ಥೆಯನ್ನು ಎಂಪಾನೆಲ್‌ಮೆಂಟ್ ಮಾಡಿಕೊಳ್ಳಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಸಿ.–5ರಂತೆ ನೋಂದಣಿ ಪಡೆದ ಏಜೆನ್ಸಿಗಳವರಿಂದ ಕ್ರಮ ಸಂಖ್ಯೆ.1 ಮತ್ತು 2ರ ಕೆಲಸಕ್ಕೆ ಟೆಂಡರನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್: www.eproc.karnataka.gov ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಏಜೆನ್ಸಿಗಳು ಟೆಂಡರ್‌ಗೆ ಅರ್ಹತೆ ಪಡೆಯಲು ಈ ಕೆಳಗಿನ ದಾಖಲೆಗಳನ್ನು ಅಪ್‌ಲೋಡ್ ಮಾಡುವುದು: 1) ಸಂಸ್ಥೆಯ ನೋಂದಣಿ ಪ್ರಮಾಣ ಪತ್ರ 2) ಜಿ.ಎಸ್.ಟಿ ಪ್ರಮಾಣ ಪತ್ರ ಮತ್ತು ಕಳೆದ 3 ವರ್ಷದಿಂದ ಜಿ.ಎಸ್.ಟಿ ಪಾವತಿ ಮಾಡಿರುವ ವಿವರ 3) ಸಂಸ್ಥೆಯ ವಿವರ 4) ಇದೇ ತರಹದ ಬೋಧನಾ/ ತರಬೇತಿ ನೀಡಿರುವ ಕೆಲಸದ ಪ್ರಮಾಣ ಪತ್ರ 5) ಕಳೆದ 3 ವರ್ಷಗಳ ಹಣಕಾಸಿನ ವಹಿವಾಟಿನ ವಿವರ. ಕೆಲಸದ ವಿವರ ಮತ್ತು ಮೌಲ್ಯಮಾಪನ ಮಾನದಂಡಗಳು ಕೆಸಿ–5ರಂತೆ ಅಪ್‌ಲೋಡ್ ಮಾಡಲಾಗಿದೆ.

ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು www.eproc.karnataka.gov.in ಇಂದ ಪಡೆಯಬಹುದು. ಪ್ರಿ–ಬಿಡ್ ಮೀಟಿಂಗ್‌ನ **ದಿನಾಂಕ: 27.06.2022ರಂದು ಬೆಳಗ್ಗೆ 10.30ಕ್ಕೆ** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಸಮಿತಿ ಕೊಠಡಿಯಲ್ಲಿ ನಡೆಸಲಾಗುವುದು. ಟೆಂಡರ್ ಸಲ್ಲಿಸುವ ಕೊನೆ **ದಿನಾಂಕ:29.06.2022ರಂದು ಅಪರಾಹ್ನ 4 ಗಂಟೆಯವರೆಗೆ** ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು **ದಿನಾಂಕ: 01.07.2022ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು. ಹಣಕಾಸಿನ ಬಿಡ್ಡನ್ನು **ದಿನಾಂಕ:05.07.2022ರಂದು ಬೆಳಗ್ಗೆ 10.30ಕ್ಕೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ **ದೂರವಾಣಿ. ಸಂಖ್ಯೆ080–23332765**ರಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ **ಸಹಾಯವಾಣಿ support@eprochelpdesk.com** ಅಥವಾ **8046010000** ಮತ್ತು **8068948777.**

ಸಹಿ/–
ಆಸ್ತಿ ಅಧಿಕಾರಿಗಳು

DIPR/CP/KAVITA/1003/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.
ದೂರವಾಣಿ:08426–281027.ಇಮೇಲ್:dam_division@rediffmail.com

ಸಂ:ಕೃಭಾಜನಿನಿ/ಡಿ.ಬಿ/ಟೆಂಡರ್/2022–23/830 ದಿನಾಂಕ:18.06.2022

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ, ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ (1) **“Outsourcing for Supplying, Operating and Maintenance of Battery Operated Vehicles/Buggies and existing Mini Train Inside Landscape Garden of Almatti Dam Site for tourists/visitors for the period of Three years” (Request For Proposal)** ಶೇಕಡಾವಾರು ದ್ವಿ–ಲಕೋಟೆಗಳಲ್ಲಿ ಕೆ.ಟಿ.ಪಿ.ಪಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್‌ದಾಗಿದ್ದು, ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1.1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್‌ದಾಗಿದ್ದು ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.

1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ **ದಿನಾಂಕ: 18.06.2022 ರಿಂದ 07.07.2022 ಸಾಯಂಕಾಲ 5.00 ಘಂಟೆಯವರೆಗೆ.** 2) ಪೂರ್ವಭಾವಿ ಸಭೆ (ಫ್ರೀ ಬಿಡ್ ಮೀಟಿಂಗ್) **ದಿನಾಂಕ: 27.06.2022 ರಂದು ಸಾಯಂಕಾಲ 3.30 ಗಂಟೆಗೆ ಕಾರ್ಯನಿರ್ವಾಹಕ ಅಭಿಯಂತರರು ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ ಕಚೇರಿಯಲ್ಲಿ.** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 11.07.2022 ರಂದು ಮುಂಜಾನೆ 11.00 ಘಂಟೆಗೆ.** 4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 18.07.2022 ರಂದು ಮುಂಜಾನೆ 11.00 ಗಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.

ವಾಸಾಸಂಇ/ವಿಜಯಪುರ/170/ಎಂಸಿಎ/2022–23



ಸುಭಾಷಿತ

ಗೆಲ್ಲಲು ಬಂದವನು ಸೋಲುವುದಕ್ಕೂ ಸಿದ್ಧನಾಗಿರಬೇಕು.
- ತ.ರಾ.ಸು.

ಚಿಂತನೆ, ಸಮಾಲೋಚನೆ ಇಲ್ಲದೆ ‘ಅಗ್ನಿಪಥ’ ಯೋಜನೆ ಘೋಷಣೆ

ರಕ್ಷಣಾ ಪಡೆಗಳಲ್ಲಿ ನೇಮಕಾತಿಗಾಗಿ ಹೊಸ ನೀತಿಯನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಈ ನೀತಿಯನ್ನು ವಿರೋಧಿಸಿ ದೇಶದ ವಿವಿಧ ಭಾಗಗಳಲ್ಲಿ ವ್ಯಕ್ತವಾಗಿರುವ ಆಕ್ರೋಶವು ಈ ನೀತಿಯ ಕುರಿತು ಯುವಜನರು ಹೊಂದಿರುವ ಆತಂಕ ಮತ್ತು ಕಳವಳಗಳನ್ನು ತೋರಿಸುತ್ತದೆ. ‘ಅಗ್ನಿಪಥ’ ಎಂಬ ಹೆಸರಿನ ಹೊಸ ನೇಮಕಾತಿ ಯೋಜನೆಯ ಬಗ್ಗೆ ಸರ್ಕಾರವು ಸ್ಪಷ್ಟೀಕರಣಗಳನ್ನು ನೀಡಿ, ಕೆಲವು ಬದಲಾವಣೆಗಳನ್ನು ಮಾಡಿದ ಬಳಿಕವೂ ಪ್ರತಿಭಟನೆ ನಿಂತಿಲ್ಲ. ಹಲವು ದಶಕಗಳ ಬಳಿಕ ಸೇನಾ ನೇಮಕಾತಿ ನೀತಿಯಲ್ಲಿ ಭಾರಿ ಬದಲಾವಣೆಯನ್ನು ಅಗ್ನಿಪಥ ತಂದಿದೆ. ಆದರೆ, ಅದರ ಪರಿಣಾಮಗಳೇನು ಎಂಬುದರ ಕುರಿತು ಅಗತ್ಯ ಇದ್ದಷ್ಟು ಚಿಂತನೆ ನಡೆದಿದೆಯೇ ಎಂಬ ಬಗ್ಗೆ ಅನುಮಾನಗಳು ಮೂಡಿವೆ. ಸೇನಾ ಪಡೆಗಳಲ್ಲಿ ಇರುವವರ ಸರಾಸರಿ ವಯಸ್ಸನ್ನು ಕಡಿಮೆ ಮಾಡುವ ಮೂಲಕ ಮೂರೂ ಸೇನೆಗಳಲ್ಲಿ ತಾರುಣ್ಯ ತುಂಬುವುದು ಹೊಸ ನೀತಿಯ ಮುಖ್ಯ ಗುರಿ. ಹದಿನೇಳೂವರೆ ವರ್ಷದಿಂದ 21 ವರ್ಷದ ಒಳಗಿನವರು (ಮೊದಲ ತಂಡದಲ್ಲಿ ನೇಮಕಾತಿಗೆ ಗರಿಷ್ಠ ವಯೋಮಿತಿಯಲ್ಲಿ ಎರಡು ವರ್ಷ ಸಡಿಲಿಕೆ ಘೋಷಿಸಲಾಗಿದೆ) ಅಗ್ನಿಪಥ ಯೋಜನೆ ಅಡಿಯಲ್ಲಿ ಸೇನೆಗೆ ಸೇರಲು ಅರ್ಹರು. ಹೀಗೆ ನೇಮಕಗೊಂಡವರನ್ನು ಅಗ್ನಿವೀರರು ಎಂದು ಕರೆಯಲಾಗುವುದು ಎಂದು ಸರ್ಕಾರ ಹೇಳಿದೆ. ಅಗ್ನಿವೀರರ ಕರ್ತವ್ಯದ ಅವಧಿಯು ನಾಲ್ಕು ವರ್ಷ ಮಾತ್ರ. ಇವರಲ್ಲಿ ಶೇ 25ರಷ್ಟು ಮಂದಿಯನ್ನು ಮಾತ್ರ ಆಯ್ದು ದೀರ್ಘಾವಧಿ ಕರ್ತವ್ಯಕ್ಕೆ ಮರುನೇಮಕ ಮಾಡಿಕೊಳ್ಳಲಾಗುವುದು. ಉಳಿದವರಿಗೆ ₹11.71 ಲಕ್ಷದ ನಿಧಿಯನ್ನು ಕೊಟ್ಟು ಅವರ ಸೇವೆಯನ್ನು ಅಂತ್ಯಗೊಳಿಸಲಾಗುವುದು. ಸೇನೆಯ ಯುದ್ಧ ಸಾಮರ್ಥ್ಯವನ್ನು ಈ ಯೋಜನೆಯು ಹೆಚ್ಚಿಸಲಿದೆ ಮತ್ತು ಸೈನ್ಯದಲ್ಲಿ ತಂತ್ರಜ್ಞಾನ ಬಳಕೆಯು ಹೆಚ್ಚಲಿದೆ ಎಂದು ಹೇಳಲಾಗಿದೆ. ಬ್ರಿಟಿಷ್ ಕಾಲದಲ್ಲಿ ಆರಂಭಿಸಲಾದ ನಿರ್ದಿಷ್ಟ ಜಾತಿ ಮತ್ತು ಸಮುದಾಯ ಆಧಾರಿತ ರೆಜಿಮೆಂಟ್ ವ್ಯವಸ್ಥೆಯನ್ನು ಹೊಸ ನೇಮಕಾತಿ ನೀತಿಯಲ್ಲಿ ಅನುಸರಿಸಲಾಗುವುದಿಲ್ಲ. ರೆಜಿಮೆಂಟ್‌ಗಳು ಅಖಿಲ ಭಾರತ ಸ್ವರೂಪ ಪಡೆದುಕೊಳ್ಳಲಿವೆ ಮತ್ತು ಎಲ್ಲ ವರ್ಗಗಳನ್ನೂ ಒಳಗೊಂಡಿರಲಿವೆ ಎಂದು ಮೊದಲಿಗೆ ಹೇಳಲಾಗಿತ್ತು. ಆದರೆ, ರೆಜಿಮೆಂಟ್ ವ್ಯವಸ್ಥೆ ಮುಂದುವರಿಯಲಿದೆ ಎಂದು ಸೇನೆಯು ಸ್ಪಷ್ಟಪಡಿಸಿದೆ.

ಈ ಯೋಜನೆಗೆ ಮಾಜಿ ಸೈನಿಕರು ಮತ್ತು ರಕ್ಷಣಾ ತಜ್ಞರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ

ಅಗ್ನಿಪಥ ಯೋಜನೆಗೆ ಮಾಜಿ ಸೈನಿಕರು ಮತ್ತು ರಕ್ಷಣಾ ತಜ್ಞರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ದೇಶದ ಯುವ ಜನರಿಗೆ ಈ ಯೋಜನೆಯು ಇಷ್ಟವಾಗಿಲ್ಲ ಎಂಬುದನ್ನು ಪ್ರತಿಭಟನೆಗಳೇ ಹೇಳುತ್ತಿವೆ. ಸರ್ಕಾರಕ್ಕೆ ಉಳಿತಾಯ ಆಗಲಿದೆ ಎಂಬುದು ಈ ಯೋಜನೆಯ ದೊಡ್ಡ ಪ್ರಯೋಜನ. ಸೈನಿಕರಿಗೆ ನೀಡುವ ಪಿಂಚಣಿ ಮತ್ತು ಇತರ ಸೌಲಭ್ಯಗಳಿಗೆ ಆಗುವ ವೆಚ್ಚ ತಗ್ಗುತ್ತದೆ. ಅಲ್ಪಾವಧಿ ಕರ್ತವ್ಯ ಆಧಾರಿತ ನೇಮಕ ಪದ್ಧತಿಯು ಇತರ ಕೆಲವು ದೇಶಗಳಲ್ಲಿ ಇದೆ. ಆದರೆ, ರಕ್ಷಣಾ ಪಡೆಗಳಲ್ಲಿ ಕಾಯಂ ಉದ್ಯೋಗಕ್ಕೆ ನೇಮಕಗೊಳ್ಳಲು ಜನರ ಕೊರತೆ ಇಲ್ಲದ ಭಾರತದಂತಹ ದೇಶಕ್ಕೆ ಇಂತಹ ನೀತಿ ಅಗತ್ಯವೇ ಎಂಬುದು ಚರ್ಚಾರ್ಹ.

ಅಗ್ನಿವೀರರನ್ನು ಸಮರ್ಥ ಸೈನಿಕರನ್ನಾಗಿ ರೂಪಿಸಲು ಈಗ ನಿಗದಿ ಮಾಡಿರುವ ತರಬೇತಿ ಅವಧಿಯು ಸಾಕೇ ಎಂಬ ಪ್ರಶ್ನೆ ಇದೆ. ಕಾಯಂ ಆಗಿ ಸೇನೆಗೆ ಸೇರಿದವರಷ್ಟೇ ಬದ್ಧತೆಯು ಅಗ್ನಿವೀರರಲ್ಲಿ ಇರುತ್ತದೆಯೇ ಎಂಬ ಪ್ರಶ್ನೆಯೂ ಇದೆ. ಅಲ್ಪಾವಧಿ ಕರ್ತವ್ಯದ ಬಳಿಕ ಸೇವೆ ಕಳೆದುಕೊಳ್ಳುವ ಮುಕ್ಕಾಲು(?) ಪಾಲು ಯುವಜನರು ನಿರಾಶೆ ಮತ್ತು ಹತಾಶೆಗೆ ಒಳಗಾಗುವ ಸಾಧ್ಯತೆ ಇದೆ ಎಂಬ ಆತಂಕ ವ್ಯಕ್ತವಾಗಿದೆ. ಪಿಂಚಣಿ ಸೌಲಭ್ಯ ಇಲ್ಲದ ಅಲ್ಪಾವಧಿ ಉದ್ಯೋಗಕ್ಕೆ ಅರ್ಹ ಯುವಜನರು ಆಕರ್ಷಿತರಾಗದೇ ಇರಬಹುದು. ಸೇನೆಯ ಉದ್ಯೋಗದ ಆಕಾಂಕ್ಷೆಯಲ್ಲಿದ್ದ ಯುವಜನರು ಈ ಕಾರಣಕ್ಕಾಗಿಯೇ ಹೆಚ್ಚು ನಿರಾಶರಾಗಿದ್ದಾರೆ. ದೇಶದಲ್ಲಿ ನಡೆಯುತ್ತಿರುವ ಪ್ರತಿಭಟನೆಗಳನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಕೇಂದ್ರ ಗೃಹ ಸಚಿವಾಲಯದ ಪೊಲೀಸ್ ಪಡೆಗಳು ಮತ್ತು ರಕ್ಷಣಾ ಸಚಿವಾಲಯದ ಅಧೀನ ಸೇನಾ ಪಡೆಗಳಲ್ಲಿ ಅಗ್ನಿವೀರರಿಗೆ ಶೇ 10ರಷ್ಟು ಮೀಸಲಾತಿ ಘೋಷಿಸುವ ಮೂಲಕ ಪ್ರತಿಭಟನೆಗಳನ್ನು ತಣ್ಣಗಾಗಿಸುವ ಯತ್ನವನ್ನು ಸರ್ಕಾರ ಮಾಡಿದೆ. ಈ ಘೋಷಣೆಯ ಬಳಿಕವೂ ಪ್ರತಿಭಟನೆ ಮುಂದುವರಿದಿದೆ. ಏಕೆಂದರೆ, ಈ ಪಡೆಗಳಲ್ಲಿ ವಾರ್ಷಿಕ ಲಭ್ಯವಿರುವ ಹುದ್ದೆಗಳ ಸಂಖ್ಯೆ ದೊಡ್ಡದೇನಲ್ಲ. ಹಾಗಾಗಿ ‘ಅಗ್ನಿವೀರ’ರಾಗಿ ಸೇನೆಯಿಂದ ಹೊರಬರುವವರಲ್ಲಿ ದೊಡ್ಡ ಪ್ರಮಾಣ ಬೇರೆಡೆಯೇ ಉದ್ಯೋಗ ಕಂಡುಕೊಳ್ಳಬೇಕಾಗುತ್ತದೆ. ನಮ್ಮ ದೇಶದಲ್ಲಿ ಉದ್ಯೋಗ ಪಡೆದುಕೊಳ್ಳುವುದು ಅಷ್ಟೇನೂ ಸುಲಭವಲ್ಲ. ಅಗ್ನಿಪಥ ಯೋಜನೆಯು ಸಮಾಜದ ಮೇಲೆಯೂ ಪ್ರತಿಕೂಲ ಪರಿಣಾಮ ಬೀರಬಹುದು ಎಂಬ ಕಳವಳದಲ್ಲಿ ಹುರುಳಿಲ್ಲ ಎಂದು ಹೇಳಲಾಗದು. ಸೇನಾ ತರಬೇತಿ ಹೊಂದಿರುವ ಈ ಯುವಕರಲ್ಲಿ ಹಲವರಿಗೆ ಸೂಕ್ತ ಉದ್ಯೋಗ ಸಿಗದೆ, ಅವರು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ದುರ್ಬಳಕೆ ಆಗಬಹುದು ಎಂಬ ಆತಂಕ ಕೆಲವರಲ್ಲಿದೆ. ಯೋಜನೆ ಘೋಷಣೆಗಿಂತ ಮೊದಲೇ ಸಂಬಂಧಪಟ್ಟ ಎಲ್ಲರ ಜೊತೆಗೆ ಸಮಾಲೋಚನೆಯನ್ನು ಸರ್ಕಾರ ನಡೆಸಬೇಕಿತ್ತು. ಹಾಗೆ ಸಮಾಲೋಚನೆ ನಡೆಸಿದ್ದರೆ, ಯೋಜನೆಯಲ್ಲಿ ಇದೆ ಎಂದು ಹೇಳಲಾಗುವ ಹಲವು ಲೋಪಗಳನ್ನು ಸರಿಪಡಿಸಬಹುದಾಗಿತ್ತು. ಯೋಜನೆ ಘೋಷಣೆಯ ಬಳಿಕ ಪದೇ ಪದೇ ಬದಲಾವಣೆಗಳನ್ನು ಮಾಡುವುದನ್ನು ತಪ್ಪಿಸಬಹುದಾಗಿತ್ತು.

ದಿನದ ಟ್ವೀಟ್

ಉತ್ತಮ ಕಾರ್ಯ

ಮೈಸೂರು ಅರಮನೆಯ ಆವರಣದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಸಮ್ಮುಖದಲ್ಲಿ ಸಾಮೂಹಿಕ ಯೋಗಾಸನವನ್ನು ನೋಡಿದ್ದು ಖುಷಿ ಕೊಟ್ಟಿತು. ಕೆಲವು ನಟಿಯರು ಮತ್ತು ಗುರುಗಳನ್ನು ಆಹ್ವಾನಿಸುವುದು ಮತ್ತು ಅವರಿಗೆ ತೆರಿಗೆದಾರರ ಕೋಟ್ಯಂತರ ರೂಪಾಯಿ ಪಾವತಿಸುವುದರ ಬದಲು, ಆಸನ ಪ್ರದರ್ಶನಕ್ಕಾಗಿ ಡಯಾಸ್‌ನಲ್ಲಿ ಯುವಜನರು ಇರುವಂತೆ ಯೋಜಿಸಿದ್ದು ಉತ್ತಮವಾದ ಕಾರ್ಯ.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಮಹಾರಾಷ್ಟ್ರ ಸರ್ಕಾರದ ಬಗ್ಗೆ ಅಲ್ಲಿನ ಜನರಷ್ಟೇ ಅಲ್ಲ, ಮೂರೂ ಪಕ್ಷಗಳ ಶಾಸಕರು ಭ್ರಮನಿರಸನರಾಗಿದ್ದಾರೆ. ಅವರೇ ಹತಾಶರಾಗಿ ಸರ್ಕಾರ ತೊಲಗಲಿ ಎಂದು ಬಯಸಿದ್ದಾರೆ. ಅದು, ಯಾವ ತಾಳಮೇಳವೂ ಇಲ್ಲದ ಅಪವಿತ್ರ ಮೈತ್ರಿ ಸರ್ಕಾರ. ಸೈದ್ಧಾಂತಿಕವಾಗಿಯೂ ಮಿಸ್ ಮ್ಯಾಚ್ ಡಿಎನ್‌ಇ ಸರ್ಕಾರ.

ಸಿ.ಟಿ. ರವಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ

25 ವರ್ಷಗಳ ಹಿಂದೆ

ಭಾನುವಾರ, 22-6-1997

• **ಮೇವು ಹಗರಣ: ಲಾಲು ಮನೆಯ ಮೇಲೆ ಸಿಬಿಐ ಹಠಾತ್ ದಾಳಿ**

ಪಟ್ನಾ, ಜೂನ್ 21 (ಪಿಟಿಐ) – ಮೇವು ಹಗರಣದ ಆರೋಪಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಹಾಗೂ ಅವರ ಬಂಧುಗಳ ಮನೆಗಳ ಮೇಲೆ ಇಂದು ಸಿಬಿಐ ಅಧಿಕಾರಿಗಳು ದಾಳಿ ನಡೆಸಿದರು.

ಗೋಪಾಲ್‌ಗಂಜ್ ಜಿಲ್ಲೆಯ ಪೂಲ್‌ವಾರಿ ಹಳ್ಳಿಯಲ್ಲಿರುವ ತಮ್ಮ ಮನೆಯ ಮೇಲೆ ದಾಳಿ ನಡೆದಿದೆ ಎಂಬುದನ್ನು ಸ್ವತಃ ಲಾಲೂ ಪ್ರಸಾದ್ ದೃಢಪಡಿಸಿದ್ದಾರೆ.

• **‘ಕೈ’ ಬಲಪಡಿಸುವ ಬದಲು ಕಿತ್ತಾಟವೇ ಹೆಚ್ಚು**

ಬೆಂಗಳೂರು, ಜೂನ್ 21 – ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರ ಚುನಾವಣೆಯು ನ್ಯಾಯಾಲಯದ ಮಧ್ಯ-ಪ್ರವೇಶದಿಂದಾಗಿ ಮುಂದೆ ಹೋದಂತೆಲ್ಲಾ ಪಕ್ಷದೊಳಗಿನ ಒಳಜಗಳ, ಗುಂಪುಗಾರಿಕೆ, ಅಧಿಕಾರಕ್ಕಾಗಿ ಕಿತ್ತಾಡುವ ಕಾಂಗ್ರೆಸ್ಸಿಗರ ಹಳೇ ಚಾಳಿ ಮತ್ತೆ ಮರುಕಳಿಸಿದೆ.

ರಾಜ್ಯದಲ್ಲಿ ಇತ್ತೀಚೆಗೆ ವಿಧಾನಸಭೆಯ ಕೆಲವು ಉಪಚುನಾವಣೆ ಹಾಗೂ ಎಪಿಎಂಸಿ ಚುನಾವಣೆಗಳಲ್ಲಿ ಪಕ್ಷ ಚಿಗುರಿರುವ ಸುಳಿವು ಅರಿತ ರಾಜ್ಯ ನಾಯಕರು ನೆಪ ಮಾತ್ರಕ್ಕೆ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಹೋರಾಟ ನಡೆಸುತ್ತಿದ್ದಾರೆ. ಇನ್ನು ಆರು ತಿಂಗಳಲ್ಲಿ ಲೋಕಸಭಾ ಚುನಾವಣೆ ಬರಲಿದೆ. ರಾಜ್ಯದಲ್ಲಂತೂ ತಮ್ಮ ಪಕ್ಷ ಹೆಚ್ಚು ಸ್ಥಾನ ಗಳಿಸುವುದು ನಿಶ್ಚಿತ. ನಂತರ ರಾಜ್ಯ ವಿಧಾನಸಭೆಗೂ ಚುನಾವಣೆ ನಡೆಯುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಆದ್ದರಿಂದ ಈಗಲೇ ಅಧ್ಯಕ್ಷರಾದರೆ ಮುಖ್ಯಮಂತ್ರಿ ಸ್ಥಾನ ತಮಗೆ ಕಟ್ಟಿಟ್ಟಬುತ್ತಿಯೆಂಬ ದೂರದೃಷ್ಟಿಯ ಲೆಕ್ಕಾಚಾರ ಇದ್ದಂತಿದೆ. ಭವಿಷ್ಯದ ಮುಖ್ಯಮಂತ್ರಿ ಸ್ಥಾನದ ಮೇಲೆ ಎಲ್ಲರ ಕಣ್ಣು.

50 ವರ್ಷಗಳ ಹಿಂದೆ

ಗುರುವಾರ, 22-6-1972

• **ಕಾಳಿ ಜಲ ವಿದ್ಯುತ್ ಯೋಜನೆ: ಪೂರ್ಣ ಖರ್ಚು ಕೊಡಲು ಕೇಂದ್ರದ ಸಮ್ಮತಿ**

ಬೆಂಗಳೂರು, ಜೂನ್ 21–164 ಕೋಟಿ ರೂ.ಗಳ ವೆಚ್ಚದ ಮೈಸೂರಿನ ಕಾಳಿ ಜಲ ವಿದ್ಯುತ್ ಯೋಜನೆಯ ಸಂಪೂರ್ಣ ಖರ್ಚನ್ನು ವಹಿಸಿಕೊಳ್ಳಲು ಕೇಂದ್ರ ಸರ್ಕಾರ ಒಪ್ಪಿದೆ ಎಂದು ಅರ್ಥಮಂತ್ರಿ ಶ್ರೀ ಎಂ.ವೈ. ಘೋರ್ಪಡೆ ಅವರು ಇಂದು ವಿಧಾನಸಭೆಯಲ್ಲಿ ಪ್ರಕಟಿಸಿದರು.

ಇತ್ತೀಚೆಗೆ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಮತ್ತು ಶ್ರೀ ಘೋರ್ಪಡೆ ಅವರು ಕೇಂದ್ರದ ಅರ್ಥಮಂತ್ರಿ ಮತ್ತು ಯೋಜನಾ ಮಂತ್ರಿಯವರೊಡನೆ ದೆಹಲಿಯಲ್ಲಿ ನಡೆಸಿದ ಮಾತುಕತೆಯ ಕಾಲದಲ್ಲಿ ಈ ತೀರ್ಮಾನಕ್ಕೆ ಬರಲಾಯಿತು ಎಂದು ಅವರು ಬಜೆಟ್ ಭಾಷಣದಲ್ಲಿ ತಿಳಿಸಿದರು.

ಮಕ್ಕಳಲ್ಲಿ ಪರಿಸರ ಪ್ರಜ್ಞೆ ರೂಢಿಸಬೇಕಾದ ಸವಾಲು ನಮ್ಮ ಮುಂದಿದೆ

ಕಲಿಕೆಯಲ್ಲಿ ಪರಿಸರ ಚಿಂತನೆ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ದಶಕಗಳಿಂದ ಪ್ರತಿವರ್ಷ ಗುರುವಾಯನಕೆರೆಯ ‘ನಾಗರಿಕ ಸೇವಾ ಟ್ರಸ್ಟ್’ನವರು ಶಾಲೆಗೆ ಬಂದು ಮಕ್ಕಳಿಗೆ ಪರಿಸರ ವಿಚಾರಗಳಿಗೆ ಸಂಬಂಧಿಸಿದಂತೆ ಸ್ಪರ್ಧೆ ಏರ್ಪಡಿಸುತ್ತಿದ್ದುದು ನನ್ನ ಶೈಕ್ಷಣಿಕ ಅನುಭವವಾಗಿತ್ತು. ಈ ರೀತಿಯ ಪರಿಸರ ಸಂಬಂಧಿ ಚಟುವಟಿಕೆಗಳು ಎಲ್ಲ ಕಡೆ ನಡೆಯುತ್ತಿದ್ದವು; ಈಗ ನಡೆಯುತ್ತಲೇ ಇಲ್ಲ ಎಂದೇನಲ್ಲ. ಆದರೆ ಅವು ಸುದ್ದಿಯಾಗುವುದು ಕಡಿಮೆ. ಸುದ್ದಿಯಾದಾಗಲೂ ಅವು ಸಾರ್ವಜನಿಕರು ಪರಿಗಣನೆಗೆ ತೆಗೆದುಕೊಳ್ಳಬೇಕಾದ ಸಂಗತಿಯಾಗಿ ಉಳಿದಿಲ್ಲ. ಎಡ-ಬಲ, ಕೋಮುವಾದ ಇವಿಷ್ಟರ ನಡುವಿನ ಒಂದಷ್ಟು ಸಂಗತಿಗಳನ್ನು ಬಿಟ್ಟರೆ, ಇಡೀ ದೇಶದಲ್ಲಿ ಬೇರೆ ಏನೂ ಇಲ್ಲವೇ ಇಲ್ಲವೇನೋ ಎನ್ನುವಷ್ಟು ಸಾರ್ವಜನಿಕ ಚರ್ಚೆಗಳು ಕೇಂದ್ರೀಕೃತವಾಗಿವೆ.

ಆದರೆ ಇರುವುದೊಂದೇ ಭೂಮಿ. ಭೂಮಿಯ ಸಂರಕ್ಷಣೆ ಎಲ್ಲರ ಹೊಣೆ. ಭೂಮಿಯನ್ನೇ ಉಳಿಸಿಕೊಳ್ಳುವ ಚಿಂತನೆ ಇಲ್ಲದಿದ್ದರೆ ಎಡ-ಬಲ, ಧರ್ಮ ಯಾವುದೂ ಇರುವುದಿಲ್ಲ. ಗಮನಾರ್ಹ ಸಂಗತಿಯೆಂದರೆ, ಧರ್ಮಗಳು ಪರಿಸರವನ್ನು ಗಂಭೀರವಾಗಿ ಪರಿಗಣಿಸಿವೆ. ಮಹಾಭಾರತದಲ್ಲಿ ಪಾಂಡವರು ವನವಾಸಿಗಳಾದಾಗ ನಕುಲ ಕಟ್ಟಿಗೆಯನ್ನು ಕಡಿದು ಕಡಿದು ರಾಶಿ ಹಾಕುವಲ್ಲಿಗೆ ಯುಧಿಷ್ಠಿರನು ಹೋಗಿ, ‘ಹಾಗೆ ಕಟ್ಟಿಗೆಯನ್ನು ಕಡಿಯಬೇಡ. ಅಗತ್ಯಕ್ಕಿಂತ ಜಾಸ್ತಿ ಒಂದು ತುಂಡು ಕಟ್ಟಿಗೆಯನ್ನು ಕಡಿಯುವುದೂ ಅಧರ್ಮ’ ಎಂದು ತಿಳಿಹೇಳುವ ಪ್ರಸಂಗವಿದೆ. ಇಸ್ಲಾಂನಲ್ಲಿ, ‘ನೀರನ್ನು ನಾವು ನಿಮಗಾಗಿ ಸೃಷ್ಟಿಸಿದ್ದೇವೆ. ಒಂದು ಹನಿಯನ್ನೂ ಪೋಲು ಮಾಡಬೇಡಿ’ ಎಂಬ ಬೋಧನೆಯೂ ಬರುತ್ತದೆ.

ಸಾರ್ವಜನಿಕ ಚರ್ಚೆಗಳು ಧರ್ಮಗಳ ಸುತ್ತಲೇ ಸುತ್ತುತ್ತಿದ್ದರೂ ಧರ್ಮಗಳು ಬೋಧಿಸುವ ಇಂತಹ ವಿಷಯಗಳ ಬಗ್ಗೆ ಚರ್ಚೆಯೇ ಇಲ್ಲ. ನಾನಾ ರೀತಿಯ ಅಭಿವೃದ್ಧಿ ಕಾರ್ಯಗಳಿಗಾಗಿ ಮರಗಳನ್ನು ಕಡಿಯುವ, ಕೆರೆಯನ್ನು ಮುಚ್ಚಿಸುವ, ಬಂಡೆಗಳನ್ನು ಒಡೆಯುವ ಮತ್ತಿತರೆ ಕ್ರಿಯೆಗಳಲ್ಲಿ ಪರಿಸರವನ್ನು ಸಂರಕ್ಷಿಸಿಕೊಂಡೇ ಹೇಗೆ ಅಭಿವೃದ್ಧಿ ಕಾರ್ಯಗಳನ್ನು ಸಾಧಿಸಬಹುದು ಎಂಬ ಎಚ್ಚರ ಕಾಣಿಸುತ್ತಿಲ್ಲ. ಎಡ-ಬಲ-ಕೋಮುವಾದಗಳಿಗೇ ಸಾರ್ವಜನಿಕ ಚರ್ಚೆ ಕೇಂದ್ರಿತವಾಗಿರುವಾಗ, ಪ್ರಕೃತಿಯ ಸಂಪನ್ಮೂಲಗಳನ್ನು ಎಗ್ಗಿಲ್ಲದೇ ದೋಚಲು ಅನುಕೂಲವಾಗಿದೆ ಎಂಬ ಮಾತೂ ಇದೆ. ಏಕೆಂದರೆ ಇಂತಹ ವಿಚಾರಗಳ ಬಗ್ಗೆ ಜನರ ಗಮನವೇ ಇಲ್ಲ.

ಪ್ರಜಾಪ್ರಭುತ್ವದ ಯಶಸ್ಸು ಸಾರ್ವಜನಿಕರ ನಿರಂತರ ಎಚ್ಚರವನ್ನು ಅವಲಂಬಿಸಿದೆ. ಆ ಎಚ್ಚರ ಇಲ್ಲವಾದಾಗ ಸಂಪನ್ಮೂಲಗಳು ಲೂಟಿಯಾಗುತ್ತವೆ. ಹೀಗೆ ಆಗುವ ಲೂಟಿಯು ‘ಯಾರೋ ಹಣ ಮಾಡಿಕೊಂಡರು, ಭ್ರಷ್ಟಾಚಾರ ನಡೆಯಿತು’ ಎನ್ನುವಷ್ಟಕ್ಕೇ ಸೀಮಿತವಾದ ಸಂಗತಿಯಾಗಿಲ್ಲ. ಬದಲು ಅದು ಇಡೀ ಪೃಥ್ವಿಯ ಅಸ್ತಿತ್ವದ ಪ್ರಶ್ನೆಯೂ ಆಗಿದೆ. ಭೂಮಿ ಕೇವಲ ತನಗೆ ಮಾತ್ರ ಸೇರಿದ್ದಲ್ಲ, ಎಲ್ಲ ಜೀವಿಗಳಿಗೂ ಸೇರಿದ್ದು ಎನ್ನುವುದು, ಭೂಮಿಯನ್ನು ಮುಂದಿನ ಪೀಳಿಗೆಗೂ ಉಳಿಸಿಕೊಡಬೇಕಾದುದು ನಮ್ಮ ಜವಾಬ್ದಾರಿ ಎನ್ನುವುದು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇರಬೇಕಾದ ಸಾಮಾನ್ಯ ಪ್ರಜ್ಞೆ. ಈ ಪ್ರಜ್ಞೆ ಇದ್ದಮಾತ್ರಕ್ಕೆ ಪರಿಸರ ನಾಶದ ಎಲ್ಲ ಪ್ರಕ್ರಿಯೆಗಳನ್ನೂ ತಡೆಯಲು ಸಾಧ್ಯವಿಲ್ಲ. ಆದರೆ ಪರಿಸರದ ಕುರಿತ ಸಾರ್ವಜನಿಕ ಎಚ್ಚರ ಇರುತ್ತದೆ. ಒಂದಷ್ಟು ಮಟ್ಟಿಗೆ ಅದು ನಾಶವನ್ನು ತಡೆಯುತ್ತದೆ. ಈ ಎಚ್ಚರವನ್ನು ಉಳಿಸಿಕೊಳ್ಳುವುದು ಬಹಳ ಅಗತ್ಯ.

ಪರಿಸರ ಸಂರಕ್ಷಣೆ ಕುರಿತ ಎಚ್ಚರವನ್ನು ಉಳಿಸಿಕೊಳ್ಳುವ ಆಶಯವನ್ನು ಎಲ್ಲ ಶಿಕ್ಷಣ ನೀತಿಗಳೂ ಹೊಂದಿವೆ. ಆದರೆ ಆ ಆಶಯವನ್ನು ಸಾಧಿಸುವ ಕಾರ್ಯಗಳು ಸಾಂಕೇತಿಕವಾಗಿಬಿಟ್ಟಿವೆ. ವಾಸ್ತವಿಕವಾಗಿ ಜಾತಿ ಪ್ರತಿನಿಧಿತ್ವದ ಆಧಾರದಲ್ಲಿ ನಡೆಸಲಾಗುವ ಜನ್ಮ-ದಿನಾಚರಣೆಗಳು ಮತ್ತು ಇದುವರೆಗೆ ಹೆಚ್ಚು ಚರ್ಚೆಗೆ ಬಾರದ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರರಿಗೆ ನ್ಯಾಯ ಸಲ್ಲಿಸುವ ಆಚರಣೆಗಳ ಅಬ್ಬರದಲ್ಲಿ ವನ ಮಹೋತ್ಸವದಂತಹ ಹಳೆಯ ಮೌಲಿಕ ಆಚರಣೆಗಳು ಕಳಾಹೀನವಾಗಿವೆ. ಇಷ್ಟಿದ್ದರೂ ವನಮಹೋತ್ಸವ, ಪರಿಸರ ದಿನ ಎಂಬ ಹೆಸರಿನಲ್ಲಿ ಚಟುವಟಿಕೆಗಳು ಸಾಂಕೇತಿಕವಾಗಿ ನಡೆಯುತ್ತಿವೆ. ಆದರೆ ಅಂತಹ ಚಟುವಟಿಕೆಗಳು ಪರಿಸರದ ಪ್ರಜ್ಞೆಯನ್ನು ಬೆಳೆಸಲು ಸೋಲುತ್ತಿವೆ. ಅಂದರೆ ಪರಿಸರದ ತಿಳಿವಳಿಕೆಗಳು ನಿಷ್ಕ್ರಿಯ ತಿಳಿವಳಿಕೆಗಳಾಗಿವೆ. ಜನರು ಸಾಮಾನ್ಯವಾಗಿ ಅವರವರ ಮತಧರ್ಮಗಳ ಆಚರಣೆಗಳಲ್ಲಿ ಕೆಲವನ್ನಾದರೂ ಮಕ್ಕಳಿಗೆ ಕಲಿಸುತ್ತಾರೆ. ಆದರೆ ದೇವರಿಗೆ ಕೈ ಮುಗಿಯಬೇಕು, ನಮಾಜ್ ಮಾಡಬೇಕು ಎನ್ನುವುದನ್ನು ಮಕ್ಕಳಲ್ಲಿ ರೂಢಿ ಮಾಡಿದ ಹಾಗೆ ನಲ್ಲಿಯಲ್ಲಿ ನೀರು ಹರಿದು ಪೋಲಾಗುತ್ತಿದ್ದರೆ ಅದನ್ನು ತಡೆಯಬೇಕು ಎನ್ನುವುದನ್ನು ರೂಢಿ ಮಾಡುವುದಿಲ್ಲ.

ಇದರ ಹಿಂದೆ ಧರ್ಮವನ್ನು ಸಾಂಸ್ಥಿಕ ರೂಪದಲ್ಲಿ ಮರು ನಿರೂಪಿಸಿಕೊಂಡು ಸ್ಥಿರೀಕರಿಸಿಕೊಳ್ಳುವ ಹಿಂದೂಗಳ ವಿಶೇಷ ಆಸಕ್ತಿಯ ಪಾತ್ರವಿದೆ. ಅದು ಸಂಸ್ಕೃತಿಯ ಮಹತ್ವವನ್ನು ಕಡೆಗಣಿಸುವಂತೆ ಮಾಡುತ್ತದೆ. ಉದಾಹರಣೆಗೆ ಹೇಳುವುದಾದರೆ, ಕೃಷಿ ಭೂಮಿಯ ಒಂದು ಭಾಗವನ್ನು ನಾಗಬನವಾಗಿ ಬಿಡುವ ಪದ್ಧತಿ ಒಂದು ಕಾಲದಲ್ಲಿ ಇತ್ತು. ನಾಗಬನದಲ್ಲಿ ನಾಗಾರಾಧನೆ ಧಾರ್ಮಿಕ ಆಚರಣೆ. ಅಲ್ಲಿ ಯಾವ ಮರವನ್ನೂ ಕಡಿಯುತ್ತಿರಲಿಲ್ಲ. ಆದ್ದರಿಂದ ದೊಡ್ಡ ಕಾಡಿನ ರೀತಿಯಲ್ಲಿ ಆ ಭಾಗ ಬೆಳೆಯುತ್ತಿತ್ತು. ಬೇಸಿಗೆಯಲ್ಲಿ ಜಾಗವನ್ನು ತಂಪಾಗಿ ಇಡುತ್ತಿತ್ತು. ಏಪ್ರಿಲ್ ತಿಂಗಳಿನಲ್ಲಿಯೂ ನಾಗಬನದಿಂದ ನೀರು ಹರಿದುಬರುತ್ತಿತ್ತು. ನಾಗಾರಾಧನೆಯ ಒಂದು ಸಾಂಸ್ಥಿಕ ಆಲೋಚನೆಯು ಪರಿಸರವನ್ನು ಪೋಷಿಸುವ ಒಂದು ಸಂಸ್ಕೃತಿಯನ್ನು ರೂಪಿಸಿತ್ತು. ಹಿಂದೂಗಳಲ್ಲಿ ಸಂಸ್ಕೃತಿಯ ಆಸಕ್ತಿ ಕಡಿಮೆಯಾಗಿ ತಮ್ಮ ಧರ್ಮವನ್ನೂ ಸಂಸ್ಥಾರೂಪಿಯಾಗಿಸುವ ಚಿಂತನೆ ಪ್ರಬಲವಾಗುತ್ತಿದ್ದ ಹಾಗೆ ಪರಿಸರ ಕಾಳಜಿಗಳನ್ನು ಮಕ್ಕಳಲ್ಲಿ ರೂಢಿಸುವ ಪದ್ಧತಿ ಕಡಿಮೆಯಾಗಿದೆ. ನಗರೀಕರಣ ಕೂಡ ಈ ಪರಿಸರ ಪ್ರಜ್ಞೆಯನ್ನು ತೊಡೆದುಹಾಕುವುದರಲ್ಲಿ ಬಹಳ ಪರಿಣಾಮವನ್ನು ಉಂಟುಮಾಡಿದೆ.

ಪರಿಸರಕ್ಕೆ ಪೂರಕವಾಗಿದ್ದ ಒಂದು ಸಂಸ್ಕೃತಿ ಹೊರಟುಹೋಗಿರುವ ಕಾಲಘಟ್ಟದಲ್ಲಿ ಪರಿಸರ ಪ್ರಜ್ಞೆಯನ್ನು ರೂಢಿಸಿಕೊಳ್ಳುವುದು ಹೇಗೆ ಎನ್ನುವುದು ದೊಡ್ಡ ಸವಾಲಾಗಿದೆ. ತಾಂತ್ರಿಕ ತಿಳಿವಳಿಕೆಗಳನ್ನು ನೀಡುವುದರಿಂದ ಉಪಯೋಗವಾಗುವುದಿಲ್ಲ. ಮೊದಲು ಈ ವಿಷಯದಲ್ಲಿ ಮಕ್ಕಳ ಪೋಷಕರು ಮತ್ತು ಶಿಕ್ಷಕರನ್ನು ಸುಶಿಕ್ಷಿತರನ್ನಾಗಿಸಬೇಕು. ಸಣ್ಣ ಮಕ್ಕಳಲ್ಲಿ ಕಲಿಕೆಯು ಬೋಧನೆಗಿಂತ ಹೆಚ್ಚಾಗಿ ಅನುಕರಣೆಯಿಂದ ರೂಢಿಯಾಗುತ್ತದೆ. ಮಕ್ಕಳು ಸ್ವಾಭಾವಿಕವಾಗಿ ಕುಟುಂಬದ ಹಿರಿಯರನ್ನು, ನಂತರ ಶಿಕ್ಷಕರನ್ನು ಅನುಕರಿಸುತ್ತಾರೆ. ತಾಯಿಯು ದೀಪ ಹಚ್ಚುವಾಗ ಮಗು ಜೊತೆಯಲ್ಲಿರುವುದರಿಂದ ದೇವರಿಗೆ ದೀಪ ಹಚ್ಚುವುದನ್ನು ಒಂದು ಕಲಿಕೆಯಾಗಿ ರೂಢಿಸಿಕೊಳ್ಳುತ್ತದೆ. ಗ್ರಾಮ ಜೀವನ ವ್ಯವಸ್ಥೆಯಲ್ಲಿ ಕುಟುಂಬದ ಹಿರಿಯರ ಜೊತೆಯಲ್ಲಿದ್ದೇ ಮರಗಿಡಗಳ ಹೆಸರುಗಳನ್ನು, ಅವುಗಳ ಪೋಷಣೆಯ ಮಹತ್ವವನ್ನು, ನೀರನ್ನು ಹೇಗೆ ಬಳಸಬೇಕು ಎಂಬುದನ್ನೆಲ್ಲ ಕಲಿಯುತ್ತಿತ್ತು. ಪ್ರಕೃತಿಯನ್ನು ತನ್ನ ಜೀವನದ ಒಡನಾಡಿಯಾಗಿ ಮಾಡಿಕೊಳ್ಳುತ್ತಿತ್ತು. ಇವತ್ತು ಗ್ರಾಮ ಜೀವನವೂ ನಗರ ಸಂಸ್ಕೃತಿಯಾಗಿ ಪರಿವರ್ತನೆಯಾಗಿದೆ. ಹಾಗಿರುವಾಗ, ಸಹಜವಾಗಿ ಪರಿಸರ ಕಲಿಕೆಯು ಮಗುವಿಗೆ ಅನುಕರಣೆಯಿಂದ ಬರುವುದಿಲ್ಲ. ಶಿಕ್ಷಕರೂ ನಗರ ಸಂಸ್ಕೃತಿಯವರೇ. ಆದ್ದರಿಂದ ಮಗುವಿಗೆ ಪರಿಸರ ಕಲಿಕೆ ಅನುಕರಣೆಯಾಗಿ ಅಲ್ಲಿಯೂ ಬರುವುದಿಲ್ಲ.

ಈ ಹಿನ್ನೆಲೆಯಲ್ಲಿ ಬಹುಶಃ ವಾರ್ಷಿಕ ಶಾಲಾ ಕಲಿಕೆಯಲ್ಲಿ ಪ್ರಕೃತಿಯೊಂದಿಗೆ ಮಕ್ಕಳ ಒಡನಾಟವನ್ನು ಎನ್‌ಎಸ್‌ಎಸ್ ಶಿಬಿರದ ರೀತಿಯಲ್ಲಿ ಹತ್ತು ದಿನಗಳ ಅವಶ್ಯಕ ತರಬೇತಿಯಾಗಿ ಮಾಡುವುದು ಅಗತ್ಯವೆಂದು ಅನಿಸುತ್ತದೆ. ಹೀಗೆ ತರಬೇತಿಯನ್ನು ಆಯೋಜಿಸುವಾಗ, ಸ್ವಚ್ಛತೆ- ಪರಿಸರ- ಆರೋಗ್ಯ ಈ ಮೂರು ಅಂಶಗಳನ್ನು ಪರಸ್ಪರ ಸಂಯೋಜನೆ ಮಾಡಿಕೊಳ್ಳಬೇಕು. ತನ್ನ ಆರೋಗ್ಯದ ಕಾಳಜಿ ಎಲ್ಲ ಮನುಷ್ಯರಿಗೂ ಇರುತ್ತದೆ. ಆಗ ತನ್ನ ಅಸ್ತಿತ್ವವು ಪರಿಸರದೊಂದಿಗೆ ಇದೆ ಎನ್ನುವ ಅರಿವು ಹುಟ್ಟಿದರೆ ಅದು ಮಗುವಿನ ರೂಢಿಯ ನಡವಳಿಕೆಯಲ್ಲಿ ಕಂಡುಬರಲು ಅವಕಾಶವಿದೆ. ಉದಾಹರಣೆಗೆ, ಸಸ್ಯಗಳು ಬದುಕಲು ಪ್ರಾಣಿಗಳು ವಿಸರ್ಜಿಸುವ ಇಂಗಾಲದ ಡೈ ಆಕ್ಸೈಡ್ ಬೇಕು. ಸಸ್ಯಗಳು ವಿಸರ್ಜಿಸುವ ಆಮ್ಲಜನಕವು ಪ್ರಾಣಿಗಳು ಬದುಕಲು ಬೇಕು. ಈ ಅರಿವು ಮಗುವಿನಲ್ಲಿ ಬೆಳೆಯಬೇಕು. ಆಗ ಭೂಮಿಯನ್ನು ಉಳಿಸಿಕೊಳ್ಳುವ ಪ್ರಜ್ಞೆ ಜಾಗೃತವಾಗಬಹುದು.

ಚುರುಮುರಿ

ನೋಟು ನಾಪತ್ತೆ

• ಸಿ.ಎನ್.ರಾಜು

‘ದೊಡ್ಡ ಮನೆಯಿದ್ದರೂ ದುಡ್ಡು ಇಡಲು ಸೇಫ್ಟಿ ಜಾಗ ಸಿಗ್ತಿಲ್ಲ, ಟಾಯ್ಲೆಟ್ಟು, ಡಸ್ಟ್‌ಬಿನ್, ರೈನ್‌ವಾಟರ್ ಪೈಪ್‌ಗಳಲ್ಲಿ ಇಟ್ಟು ಕಾಪಾಡಿಕೊಳ್ಳೋ ದುರ್ಗತಿ ಬಂದಿದೆಯಲ್ರೀ ಮನಿಮಂದಿಗೆ...’ ನ್ಯೂಸ್ ಪೇಪರ್ ಓದುತ್ತಾ ಅನು ಹೇಳಿದಳು.

‘ಅಕ್ರಮ ಹಣವನ್ನು ಸಕ್ರಮ ಮಾಡಿಕೊಳ್ಳಲು ಅವಕಾಶ ಇದ್ದಿದ್ದರೆ ಬಾತ್‌ರೂಂ, ಬೆಡ್‌ರೂಂನಂತೆ ದುಡ್‌ರೂಂ ಕಟ್ಟಿಸಿಕೊಳ್ತಿದ್ರು. ಅವಕಾಶವಿಲ್ಲದೆ ಇಡಬಾರದ ಜಾಗದಲ್ಲಿ ದುಡ್ಡು ಇಟ್ಟು ನಿದ್ರೆ, ನೆಮ್ಮದಿಯಿಲ್ಲದೆ ಪರದಾಡ್ತಾರೆ’ ಅಂದ ಗಿರಿ.

‘ಕಳ್ಳರು ನುಗ್ಗಿ ದುಡ್ಡು ದೋಚಿಕೊಂಡು ಹೋಗ್ತಾರೆ ಅನ್ನೋ ಭಯನಾ? ಕಾವಲುಗಾರರು, ಕಾಂಪೌಂಡ್, ದಪ್ಪ ಬೀಗ, ಬೊಗಳೋ ನಾಯಿಗಳ ಕಾವಲಿದ್ದಾಗ ಭಯ ಯಾಕೆ?’

‘ಅದಲ್ಲಾ, ಎಸಿಬಿ, ಆದಾಯ ತೆರಿಗೆಯವರು ಎಲ್ಲಾ ಸೆಕ್ಯೂರಿಟಿ ಭೇದಿಸಿ ನುಗ್ತಾರೆ. ಲೆಕ್ಕಕ್ಕೆ ಸಿಗದ ಹಣವನ್ನು ಲೆಕ್ಕ ಹಾಕಿಕೊಂಡು ತಗೊಂಡು ಹೋಗ್ತಾರೆ ಅನ್ನೋ ಭಯ...’

‘ಹೌದುರೀ, ದಾಳಿ ಅಧಿಕಾರಿಗಳು ಮನೆಗೆ ನುಗ್ಗಿದ್ದಾರೆ ಕಾಪಾಡಿ ಅಂತ ಬಾಯಿ ಬಡಕೊಂಡರೂ ನೆರೆಹೊರೆಯವರು ಸಹಾಯಕ್ಕೆ ಬರೊಲ್ಲ, ಪೊಲೀಸರು ಬಂದರೂ ದಾಳಿಗೆ ಬಂದವರ ಪರವಾಗೇ ಬರ್ತಾರೆ... ಏನೇ ಆದರೂ ದುಡ್ಡನ್ನು ಬಚ್ಚಿಡಬಾರದೂರಿ, ಗಾಳಿಬೆಳಕು ಇಲ್ಲದ ಕಡೆ ಇಟ್ಟರೆ ದುಡ್ಡಿನ ಮಾನ, ಮೌಲ್ಯ ಹಾಳಾಗುತ್ತೆ’.

‘ಹೌದು, ನೋಟಾಗಲಿ, ವ್ಯಕ್ತಿಯಾಗಲಿ ಚಲಾವಣೆಯಲ್ಲಿರಬೇಕು. ಇಲ್ಲದಿದ್ದರೆ ಬೆಲೆ, ಬಣ್ಣ ಕಳೆದುಕೊಂಡು ಮಂಕಾಗಬೇಕಾಗುತ್ತೆ’.

‘ಎರಡು ವರ್ಷದಿಂದ ಎರಡು ಸಾವಿರ ರೂಪಾಯಿ ನೋಟುಗಳ ಚಲಾವಣೆ ಕಮ್ಮಿಯಾಗಿದೆ ಅಂತ ಅಂಕಿಅಂಶಗಳು ಹೇಳ್ತಿವೆ ಕಣ್ರೀ. ದೊಡ್ಡ ನೋಟುಗಳು ದೊಡ್ಡವರ ಖಜಾನೆ ಸೇರಿಬಿಟ್ಟವೆಯಾ ಅಂತ ಅನುಮಾನ’.

‘ಇರಬಹುದು, ನಾಪತ್ತೆಯಾದ ನೋಟುಗಳನ್ನು ಸರ್ಕಾರ ಪತ್ತೆ ಮಾಡಿ ಬೆಳಕಿಗೆ ತರಬೇಕು. ಇಲ್ಲಾಂದ್ರೆ ಚಲಾವಣೆಗೆ ಬಾರದೆ ಕನಕಾಂಬರ ಕಲರ್ ನೋಟುಗಳು ಬಣ್ಣ ಕಳೆದುಕೊಂಡು ಕಪ್ಪುಹಣವಾಗುವ ಅಪಾಯವಿದೆ...’ ಅಂದ ಗಿರಿ.

ಸಂಗತ

ಸಂಬಳದ ಕೆಲಸವಲ್ಲ, ‘ಕಾಯಕ’ದ ಶ್ರದ್ಧೆ

ವಿವಿಧ ಪರಿಸರದಿಂದ ಬಂದಿರುವ ವಿದ್ಯಾರ್ಥಿಗಳ ಮನಸ್ಸನ್ನು ಮುದಗೊಳಿಸಿ ಪಾಠ ಆರಂಭ ಮಾಡುವುದು ಒಂದು ಉತ್ತಮ ವಿಧಾನ

• ಮಲ್ಲಿಕಾರ್ಜುನ ಹೆಗ್ಗಳಗಿ

ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ನಾನು ವಿದ್ಯಾರ್ಥಿಯಾಗಿದ್ದಾಗ ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ) ಅವರು ಇಂಗ್ಲಿಷ್ ವ್ಯಾಕರಣದ ಪಾಠ ಮಾಡುತ್ತಿದ್ದರು. ಅವರ ಹಾವಭಾವ ಮತ್ತು ವಿಶಿಷ್ಟ ಧ್ವನಿ ಕೇಳುವುದೇ ಒಂದು ಸಂಭ್ರಮ.

ಪ್ರಾಥಮಿಕದಿಂದ ಪದವಿವರೆಗೆ ಅನೇಕ ಅಧ್ಯಾಪಕರಿಂದ ಪಾಠ ಕೇಳಿದ್ದೇನಾದರೂ ಆ ಪಾಠಗಳಾವುವೂ ನನ್ನ ನೆನಪಿನಲ್ಲಿ ಉಳಿದಿಲ್ಲ. ಆದರೆ ಚಂಪಾ ಕಲಿಸಿದ ಪಾಠ ಹಾಗೂ ಪಾಠಕ್ಕೆ ಸಂಬಂಧಿಸಿದ ಜೋಕುಗಳು ಇಷ್ಟು ವರ್ಷಗಳ ನಂತರವೂ ಚೆನ್ನಾಗಿ ನೆನಪಿನಲ್ಲಿವೆ.

‘ಮೈ ಲವ್ ಈಸ್ ಲೈಕ್ ರೆಡ್ ರೆಡ್ ರೋಜ್’. ಇದು, ಅವರು ಇಂಗ್ಲಿಷ್ ವ್ಯಾಕರಣದ ಉಪಮೆ, ರೂಪಕಗಳನ್ನು ಕಲಿಸಲು ಬಳಸುತ್ತಿದ್ದ ಒಂದು ಉದಾಹರಣೆಯಾಗಿತ್ತು. ‘ಇಲ್ಲಿ ಕವಿ ರೆಡ್ ರೆಡ್ ಶಬ್ದ ಎರಡು ಬಾರಿ ಏಕೆ ಬಳಸಿದ್ದಾನೆ’ ಎಂದು ಅವರು ವಿದ್ಯಾರ್ಥಿಗಳನ್ನು ಪ್ರಶ್ನಿಸಿದರು.

‘ಗೊತ್ತು ಸರ್, ಲವ್ ಈಸ್ ವೆರೀ ಡೆಂಜರಸ್. ಆದ್ದರಿಂದ ಕವಿ ರೆಡ್ ರೆಡ್ ಶಬ್ದ ಎರಡು ಬಾರಿ ಬಳಸಿದ್ದಾನೆ’ ಎಂದು ಒಬ್ಬ ವಿದ್ಯಾರ್ಥಿ ಥಟ್ಟನೆ ಎದ್ದುನಿಂತು ಉತ್ತರಿಸಿದ. ಕ್ಲಾಸಿನಲ್ಲಿನ ವಿದ್ಯಾರ್ಥಿಗಳು ಖೊಳ್ ಎಂದು ನಕ್ಕುಬಿಟ್ಟರು. ಒಂದು ರಸಮಯ ವಾತಾವರಣ ಸೃಷ್ಟಿಯಾಯಿತು. ಇಂತಹ ಲವಲವಿಕೆಯ ಸನ್ನಿವೇಶದೊಂದಿಗೆ ಅವರ ಪಾಠ ಆರಂಭವಾಗುತ್ತಿತ್ತು.

ವಿದ್ಯಾರ್ಥಿಗಳು ವಿವಿಧ ಪರಿಸರದಿಂದ ವಿವಿಧ ಮನಃಸ್ಥಿತಿಯಲ್ಲಿ ತರಗತಿಗೆ ಬಂದಿರುತ್ತಾರೆ. ನಗು ಅವರನ್ನು ಒಂದುಗೂಡಿಸುತ್ತದೆ. ವಿದ್ಯಾರ್ಥಿಗಳ ಸಾಮೂಹಿಕ ನಗೆಯಿಂದ ತರಗತಿಯಲ್ಲಿ ಆರೋಗ್ಯಕರ ವಾತಾವರಣ ರೂಪುಗೊಳ್ಳುತ್ತದೆ.

ವಿದ್ಯಾರ್ಥಿಗಳ ಮನಸ್ಸನ್ನು ಮುದಗೊಳಿಸಿ ಪಾಠ ಆರಂಭ ಮಾಡುವುದು ಒಂದು ಉತ್ತಮ ವಿಧಾನ. ಬೋಧನೆ ಒಂದು ಕಲೆ. ಅದು ಸೃಜನಾತ್ಮಕ ಸ್ವರೂಪದ್ದು. ನಟರು ನಾಟಕದ ಪಠ್ಯವನ್ನು ರಮ್ಯವಾಗಿ ಪುನರ್‌ಸೃಷ್ಟಿ ಮಾಡುವಂತೆ ಬೋಧಕರು ಪಠ್ಯವನ್ನು ವಿದ್ಯಾರ್ಥಿಗಳ ಮನದ ಕಣ್ಣಿಗೆ ಕಾಣುವಂತೆ ಪುನರ್‌ಸೃಷ್ಟಿ ಮಾಡಬೇಕು. ಆಗ ವಿದ್ಯಾರ್ಥಿಗಳ ಮನಸ್ಸು ಏಕಾಗ್ರತೆಗೊಂಡು ಪಾಠ ಆಲಿಸಲು ಸಿದ್ಧವಾಗುತ್ತದೆ. ಮಕ್ಕಳಲ್ಲಿ ಪಾಠ ಕೇಳಬೇಕು ಎಂಬ ಹಂಬಲ ಮೂಡಿಸುವುದು ಶಿಕ್ಷಕರ ಆದ್ಯತೆಯಾಗಬೇಕು.

‘ಸಭಾ ನೋಡಿ ರಾಗಾ ಮಾಡಬೇಕು, ಕ್ಲಾಸ್ ನೋಡಿ ಪಾಠ ಮಾಡಬೇಕು’ ಎಂಬ ಮಾತೊಂದಿದೆ. ತಾವು ಯಾವ ಕ್ಲಾಸಿಗೆ ಪಾಠ ಮಾಡುತ್ತಿದ್ದೇವೆ ಎಂಬ ಅರಿವು ಶಿಕ್ಷಕರಿಗೆ ಇರಬೇಕು. ಎದುರಿಗೆ ಕುಳಿತ ವಿದ್ಯಾರ್ಥಿಗಳ ಗ್ರಹಿಕೆ ಸಾಮರ್ಥ್ಯ ಅರಿತುಕೊಂಡು ಬೋಧನಾ ವಿಧಾನಗಳನ್ನು ವಿನ್ಯಾಸಗೊಳಿಸಿಕೊಳ್ಳಬೇಕು. ಪರಿಣಾಮಕಾರಿ ಸಂವಹನವೇ ಉತ್ತಮ ಬೋಧನೆಯ ವಿಧಾನವಾಗಿದೆ.

ಪಠ್ಯಪುಸ್ತಕ ಒಂದು ಮಾರ್ಗಸೂಚಿ ಮಾತ್ರ. ಶಿಕ್ಷಕ ನಿಜವಾದ ಮಾರ್ಗದರ್ಶಕ ಮತ್ತು ಬೆಳಕು. ಪಠ್ಯದ ಮಿತಿಯ ಆಚೆಗೂ ಮಹತ್ವದ್ದನ್ನು ರಮ್ಯವಾಗಿ ಹೇಳಿ ಕುತೂಹಲ ಕೆರಳಿಸಬೇಕು.

ಪಾಠ ಬೋಧಿಸುವಾಗ ಬಹಳಷ್ಟು ವಿವರಗಳನ್ನು ಹೇಳಲು ಶಿಕ್ಷಕರಿಗೆ ಅವಕಾಶ ಇರುತ್ತದೆ. ಇದಕ್ಕೆ ಸಿದ್ಧತೆ ಮತ್ತು ಅಧ್ಯಯನ ಬೇಕು. ಬೋಧನೆ ಪ್ರವೃತ್ತಿಯಾದಾಗ ಮಾತ್ರ ಇದು ಸಾಧ್ಯ.

ಮಕ್ಕಳ ಮುಂದೆ ನಿಂತು ಪಾಠ ಮಾಡುವುದು ಬರೀ ಸಂಬಳದ ಕೆಲಸ ಆಗದೆ, ಅದು ‘ಕಾಯಕ’ವಾದಾಗ ಬೋಧನೆಯಾಗುತ್ತದೆ. ಎಲ್ಲ ವಿದ್ಯಾರ್ಥಿಗಳೂ ಒಂದೇ ರೀತಿಯಾಗಿ ಇರುವುದಿಲ್ಲ. ಕಡಿಮೆ ಗ್ರಹಿಕೆ ಸಾಮರ್ಥ್ಯದ ವಿದ್ಯಾರ್ಥಿಯನ್ನು ‘ನೀನು ಸಮರ್ಥ’ ಎಂದು ಪ್ರೋತ್ಸಾಹಿಸಿ ಅವನಲ್ಲಿ ಆತ್ಮವಿಶ್ವಾಸ ಮೂಡಿಸಬೇಕು.

ಮಹಾಲಿಂಗಪುರದ ಕನ್ನಡ ಅಧ್ಯಾಪಕ ಡಾ. ಅಶೋಕ ನರೋಡೆ ಅವರು ವಿದ್ಯಾರ್ಥಿಗಳಿಗೆ ಹಳೆಗನ್ನಡ ಕಾವ್ಯ ಬೋಧಿಸುವಾಗ ‘ಚಂಪು’ ಕಾವ್ಯ ಕಬ್ಬು ಇದ್ದಂತೆ, ಅದನ್ನು ಓದುವುದೆಂದರೆ ಕಬ್ಬನ್ನು ಹಲ್ಲಿನಿಂದ ಜಗಿದು ತಿಂದ ಅನುಭವವಾಗುತ್ತದೆ. ಕಬ್ಬು ತಿನ್ನುವುದರಲ್ಲಿ ಇರುವ ಮಜಾ ಕಬ್ಬಿನ ಹಾಲು ಕುಡಿಯುವುದರಲ್ಲಿ ಇಲ್ಲ’ ಎಂದು ಹೇಳುತ್ತಾರೆ. ಇದು ವಿದ್ಯಾರ್ಥಿಗಳಲ್ಲಿ ಹಳೆಗನ್ನಡ ಓದುವ ಪ್ರೀತಿ ಹೆಚ್ಚಿಸಿದೆ.

ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ಉತ್ತಮ ಬಾಂಧವ್ಯ ಬೆಳೆಯಬೇಕು. ಇದು, ಮಾತು ಮತ್ತು ನಗೆಯಿಂದ ಸಾಧ್ಯವಾಗುತ್ತದೆ. ಪರಿಣಾಮಕಾರಿಯಾಗಿ ಬೋಧನೆ ಮಾಡುವವರನ್ನು ವಿದ್ಯಾರ್ಥಿಗಳು ಸಹಜವಾಗಿ ಮೆಚ್ಚಿಕೊಳ್ಳುತ್ತಾರೆ. ಅವರ ಬಗ್ಗೆ ಗೌರವ, ಅಭಿಮಾನ ಮೂಡುತ್ತದೆ. ವಿದ್ಯಾರ್ಥಿಗಳ ಪ್ರೀತಿ, ವಿಶ್ವಾಸ ಗಳಿಸಿದ ಶಿಕ್ಷಕನನ್ನು ವಿದ್ಯಾರ್ಥಿಗಳು ಬದುಕಿನುದ್ದಕ್ಕೂ ಸ್ಮರಿಸುತ್ತಾರೆ.

‘ನನ್ನ ಸುತ್ತಲೂ ಹುಡುಗರಿದ್ದರು. ಅವರಿಗೆ ನಾನು ಕಲಿಸತೊಡಗಿದೆ ಮತ್ತು ಅವರನ್ನು ಸಂತೋಷವಾಗಿ ಇಡಲು ಪ್ರಾರಂಭಿಸಿದೆ. ನಾನು ಸಹ ಆಟಗಾರನಾಗಿದ್ದೆ, ಸ್ನೇಹಿತನಾಗಿದ್ದೆ. ಅವರ ಜೀವನದ ಅನುಭವಗಳನ್ನು ನಾನು ಆಲಿಸಿದೆ ಮತ್ತು ಅವರ ಗುಂಪಿನಲ್ಲಿರುವ ದೊಡ್ಡ ಮಗು ನಾನೆಂದು ಭಾವಿಸಿದೆ. ನಾವೆಲ್ಲರೂ ಒಂದಾಗಿ ಸ್ವಚ್ಛಂದದ ವಾತಾವರಣದಲ್ಲಿ ಬೆಳೆಯತೊಡಗಿದೆವು. ಇದಕ್ಕಿಂತ ಹೆಚ್ಚಿನ ಸಂತೋಷ ನನಗೆ ಬೇರೆಲ್ಲೂ ಸಿಕ್ಕಿಲ್ಲ’ ಎಂದು ಕವಿ ರವೀಂದ್ರನಾಥ ಟ್ಯಾಗೋರ್ ಅವರು ತಾವು ಶಿಕ್ಷಕರಾಗಿದ್ದಾಗಿನ ದಿನಗಳನ್ನು ‘ಗೀತಾಂಜಲಿ’ಯಲ್ಲಿ ದಾಖಲಿಸಿದ್ದಾರೆ. ಶಾಲಾ ಕಾಲೇಜುಗಳು ಆರಂಭವಾಗಿರುವ ಈ ಹೊತ್ತಿನಲ್ಲಿ ಬೋಧಕರಿಗೆಲ್ಲ ಈ ಮಾತು ಮನನೀಯ.

ವಾಚಕರ ವಾಣಿ

ನಾಗರಿಕ ಜಗತ್ತು ತಲೆ ತಗ್ಗಿಸುವ ನಡೆ

ರಷ್ಯಾ- ಉಕ್ರೇನ್ ಯುದ್ಧ ಆರಂಭವಾದಾಗಿನಿಂದಲೂ ದಿನಪತ್ರಿಕೆಯಲ್ಲಿ ಯುದ್ಧದ ವರದಿಯನ್ನು ಓದುವಾಗ ನಾಗರಿಕರ ಮನಸ್ಸು ತಲ್ಲಣಿಸುತ್ತದೆ. ಆದರೆ ಈ ಯುದ್ಧದಲ್ಲಿ ಅತ್ಯಾಚಾರ ಸಹ ಒಂದು ಅಸ್ತ್ರವಾಗಿದೆ ಎಂಬುದನ್ನು ತಿಳಿದು (ಪ್ರ.ವಾ., ಜೂನ್ 20) ಆಘಾತವಾಯಿತು. ಬಹಳಷ್ಟು ಉನ್ನತಿಯನ್ನು ಸಾಧಿಸಿರುವ ರಷ್ಯಾದಂತಹ ದೇಶವೊಂದರ ಸೈನಿಕರು ಇಂತಹ ಹೀನ ಕೃತ್ಯ ಎಸಗಿದ್ದಾರೆಂದರೆ ಏನು ಹೇಳಬೇಕು?

ಯುದ್ಧ, ಆಕ್ರಮಣದಂತಹ ನಾನಾ ಕಾರಣಗಳಿಗಾಗಿ ಸ್ತ್ರೀ ಸಮುದಾಯದ ಮೇಲೆ ಅತ್ಯಾಚಾರದ ಆಯುಧವನ್ನು ಬಳಸಿರುವ ಇತಿಹಾಸ ಇದೆ. ಆದರೆ ಇತಿಹಾಸದಿಂದ ಪಾಠ ಕಲಿತ ಜಗತ್ತು, ಶಿಕ್ಷಣ, ತಂತ್ರಜ್ಞಾನ, ಅಭಿವೃದ್ಧಿ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಮಾನವೀಯ ಮೌಲ್ಯಗಳನ್ನು ಆಶಿಸುತ್ತಾ ಬದುಕುತ್ತಿದೆ. ಅದರಂತೆ, ರಾಷ್ಟ್ರಗಳು ಸೌಹಾರ್ದಯುತ ಅಂತರರಾಷ್ಟ್ರೀಯ ಸಂಬಂಧಕ್ಕೆ ಒತ್ತು ನೀಡುತ್ತಾ ಬಂದಿವೆ. ಆದರೆ ರಷ್ಯಾದ ಸೈನಿಕರ ಈಗಿನ ವರ್ತನೆಯು ನಾಗರಿಕ ಜಗತ್ತು ತಲೆ ತಗ್ಗಿಸುವಂತಿದೆ.

ಸುವರ್ಣ ಸಿ.ಡಿ., ತರೀಕೆರೆ

ಸಭ್ಯ ನಡವಳಿಕೆಯಲ್ಲ

ಕೋರ್ಟ್ ಕಲಾಪ ನಡೆಯುವ ವೇಳೆ ಹಾಲ್‌ನಲ್ಲಿ ಕಾಲಿನ ಮೇಲೆ ಕಾಲು ಹಾಕಿ ಕುಳಿತುಕೊಳ್ಳುವುದನ್ನು ನಿರ್ಬಂಧಿಸುವ ಯಾವುದೇ ಆದೇಶಗಳಿಲ್ಲ ಎಂದು, ಮಾಹಿತಿ ಹಕ್ಕಿನ ಅಡಿ ಕೇಳಲಾದ ಪ್ರಶ್ನೆಗೆ ಹೈಕೋರ್ಟ್ ಜಂಟಿ ರಿಜಿಸ್ಟ್ರಾರ್ ಉತ್ತರಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಜೂನ್ 21). ಈ ವಿಷಯ ತಿಳಿದಮೇಲೂ ಬಹುಶಃ ಯಾರೂ ಕೋರ್ಟ್ ಹಾಲ್‌ನಲ್ಲಿ ಹೀಗೆ ಕುಳಿತುಕೊಳ್ಳುವುದಿಲ್ಲ, ಹಾಗೆ ಕುಳಿತುಕೊಳ್ಳುವುದು ಸಭ್ಯತೆಯ ಲಕ್ಷಣವೂ ಅಲ್ಲ.

ಕಚೇರಿಗಳಲ್ಲಿ ಕಿರಿಯ ಅಧಿಕಾರಿಗಳು ಮೇಲಿನ ಅಧಿಕಾರಿಗಳ ಸಮ್ಮುಖದಲ್ಲಿ, ಮನೆಯಲ್ಲಿ ಕಿರಿಯರು ಹಿರಿಯರ ಎದುರು, ಶಾಲೆಯಲ್ಲಿ ಗುರುಗಳು ಇರುವೆಡೆಯಲ್ಲಿ ವಿದ್ಯಾರ್ಥಿಗಳು, ಮಠ-ಮಂದಿರಗಳಲ್ಲಿ ಭಕ್ತರು ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಕಾಲಿನ ಮೇಲೆ ಕಾಲು ಹಾಕಿಕೊಂಡು ಕುಳಿತುಕೊಳ್ಳುವುದಿಲ್ಲ. ಇಂಥ ವರ್ತನೆಗಳು ಸಂಸ್ಕೃತಿಯ ಭಾಗವಾಗಿ ಜನರಲ್ಲಿ ರೂಢಿಗತವಾಗಿ ಪಾಲನೆಯಾಗಿ ಬಂದಿರುತ್ತವೆ ವಿನಾ ಈ ಕುರಿತು ಸರ್ಕಾರದ ಕಾನೂನುಗಳು, ಆದೇಶಗಳು ಇರುವುದಿಲ್ಲ. ಹಿರಿಯರನ್ನು ಕಂಡಾಗ ಕಿರಿಯರು ಎದ್ದುನಿಲ್ಲುವುದು, ಅವರಿಗೆ ನಮಸ್ಕರಿಸುವುದು, ಅವರ ಬಳಿ ವಿನಯಪೂರ್ವಕವಾಗಿ ಮೆಲುದನಿಯಲ್ಲಿ ಮಾತನಾಡುವುದು, ಸ್ನೇಹಿತರು ಭೇಟಿಯಾದಾಗ ಪರಸ್ಪರ ಶುಭ ಹಾರೈಸುವುದು, ಹಬ್ಬ-ಹರಿದಿನಗಳಲ್ಲಿ ಬಂಧು ಬಳಗದವರು ಶುಭ ಕೋರುವುದು, ಹುಟ್ಟುಹಬ್ಬಕ್ಕೆ ಶುಭಕಾಮನೆಗಳನ್ನು ಹೇಳುವುದು– ಇವೆಲ್ಲ ಸುಸಂಸ್ಕೃತ ನಡವಳಿಕೆಗಳೇ ವಿನಾ ಇವುಗಳಿಗೆ ಕಾನೂನು ಕಟ್ಟಲೆಗಳ ಚೌಕಟ್ಟು ಇರುವುದಿಲ್ಲ. ಹಾಗೆಂದು ಸ್ವೇಚ್ಛಾಚಾರಿಯಾಗಿ ನಡೆದುಕೊಂಡರೆ ಅದು ದುರ್ವರ್ತನೆ ಎನಿಸಿಕೊಳ್ಳುತ್ತದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಮಾರುವೇಷದ ಭೇಟಿಯಾದರೆ...!

ಒಂದಾನೊಂದು ಕಾಲದಲ್ಲಿ ದೊರೆಗಳು ಮಾರುವೇಷದಲ್ಲಿ ನಾಡಿನಲ್ಲೆಡೆ ಸುತ್ತಾಡಿ ಜನರ ಕಷ್ಟ-ಸುಖವನ್ನು ತಿಳಿದುಕೊಂಡು ಜನರ ಬದುಕಿಗೆ ಅನುಕೂಲವಾಗುವಂತೆ ಅಗತ್ಯ ಕ್ರಮ ಕೈಗೊಳ್ಳುತ್ತಿದ್ದರಂತೆ ಎಂದು ಕತೆಗಳಲ್ಲಿ ಕೇಳುತ್ತಿದ್ದೆವು. ಈಗ ದೊರೆಗಳು ಇಲ್ಲ, ‘ಜನತಂತ್ರ’ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳಿದ್ದಾರೆ. ಇವರು ದೆಹಲಿಯಿಂದ ರಾಜ್ಯಕ್ಕೆ ಬಂದಾಗ ಮಾತ್ರ ಅವರು ಸಾಗುವ ರಸ್ತೆಗಳು ಗುಂಡಿಮುಕ್ತವಾಗಿರಬೇಕು, ಚೆಲ್ಲಾಡಿದ ತ್ಯಾಜ್ಯ ಅವರ ಕಣ್ಣಿಗೆ ಬೀಳದಂತೆ ನೋಡಿಕೊಳ್ಳಬೇಕು ಎನ್ನುವುದು ರಾಜ್ಯದ ಆಡಳಿತಯಂತ್ರದ ಕರ್ತವ್ಯ ಎಂಬಂತಾಗಿದೆ.

ಪ್ರಧಾನಿಯವರ ರಾಜ್ಯ ಭೇಟಿಯಿಂದ ಬೆಂಗಳೂರು ಮತ್ತು ಮೈಸೂರಿನಲ್ಲಿ ಕೆಲವು ರಸ್ತೆಗಳಿಗೆ ಡಾಂಬರು ಹಾಕಿ, ಸ್ವಚ್ಛಗೊಳಿಸಿ ಮಿಂಚಿನಂತೆ ಹೊಳೆಯುವ ಹಾಗೆ ಮಾಡಿದ್ದನ್ನು ನೋಡಿದ ಕೆಲವರಿಗೆ ಖುಷಿಯೋ- ಖುಷಿ. ಏಕೆಂದರೆ, ಪ್ರಧಾನಿಯವರು ಆಗಾಗ್ಗೆ ರಾಜ್ಯಕ್ಕೆ ಬಂದರೆ ರಸ್ತೆಗಳು ಗುಂಡಿಮುಕ್ತವಾಗಿರುತ್ತವೆ ಎಂದು. ನಿಜವೆಂದರೆ, ಪ್ರಧಾನಿಯವರೂ ಒಮ್ಮೆ ರಾಜ್ಯವೊಂದರಲ್ಲಿ ಶಾಸಕ, ಮುಖ್ಯಮಂತ್ರಿ ಸ್ಥಾನದಲ್ಲಿದ್ದವರೇ ಅಲ್ಲವೆ? ತಾತ್ಕಾಲಿಕವಾಗಿ ಚುರುಕಾಗುವ ಆಡಳಿತಯಂತ್ರದ ವರ್ತನೆಗಳು ಅವರಿಗೆ ತಿಳಿಯದ ವಿಚಾರವೇನಲ್ಲ? ಪ್ರಧಾನಿಯವರು ಆಗಾಗ್ಗೆ ರಾಜ್ಯಕ್ಕೆ ಬರಲಿ. ಆದರೆ, ಅವರು ಬರುವಾಗ ‘ಟ್ವೀಟ್ ಮಾಡದೇ’ ಮಾರುವೇಷದಲ್ಲಿ (ಭದ್ರತೆಯನ್ನು ಕಡೆಗಣಿಸದಂತೆ) ರಾಜ್ಯಕ್ಕೆ ಆಗಾಗ್ಗೆ ಬಂದು ಹೋದರೆ ಅವರಿಗೆ ಇಲ್ಲಿನ ರಸ್ತೆಗಳ ನಿಜ ಸ್ಥಿತಿ ತಿಳಿಯುತ್ತದೆ. ಆಗ ರಾಜ್ಯದ ಆಡಳಿತ ಸದಾ ಚುರುಕಾಗಿರುತ್ತದೆ ಅಲ್ಲವೇ?

ಡಾ. ಜಿ.ಬೈರೇಗೌಡ, ಬೆಂಗಳೂರು

ಸ್ಫೂರ್ತಿದಾಯಕ ಸಂವಾದ

ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಪ್ರಯೋಜನ ಪಡೆದ ಫಲಾನುಭವಿಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರಿನಲ್ಲಿ ನಡೆಸಿದ ಸಂವಾದವು ಅತ್ಯಂತ ಸ್ಫೂರ್ತಿದಾಯಕವಾಗಿತ್ತು. ಇಲ್ಲಿ ಮೈಸೂರು ವಿಭಾಗದ ಅರ್ಹ ಫಲಾನುಭವಿಗಳು, ಮೇಲಾಗಿ ನೈಜ ಫಲಾನುಭವಿಗಳು ತಮಗೆ ಯೋಜನೆಗಳಿಂದಾದ ಅನುಕೂಲಗಳನ್ನು ಸವಿವರವಾಗಿ ಕನ್ನಡದಲ್ಲಿಯೇ ವಿವರಿಸಿದ್ದು ಹೆಮ್ಮೆ ತರುವ ಸಂಗತಿ. ಮೇಲಾಗಿ ಪ್ರಧಾನಿ ಅವರು ಸಂವಾದದಲ್ಲಿ ಪಾಲ್ಗೊಂಡ ಪ್ರತೀ ಫಲಾನುಭವಿಯಿಂದ ಅವರಿಗೆ ಯೋಜನೆಗಳಿಂದ ಆದ ಅನುಕೂಲಗಳನ್ನು ಸ್ವತಃ ಕೇಳಿ ತಿಳಿದುಕೊಂಡದ್ದು, ಅವರ ಕನ್ನಡದ ಮಾತುಗಳನ್ನು ತದೇಕಚಿತ್ತದಿಂದ ಆಲಿಸಿದ್ದು ಮತ್ತು ಆ ಮಾತುಗಳು ತಮಗೆ ಅರ್ಥವಾಗುತ್ತಿವೆ ಎಂಬಂತೆ ಗೋಣು ಅಲ್ಲಾಡಿಸಿದ್ದು, ಅದಕ್ಕೆ ಸಂಬಂಧಪಟ್ಟಂತೆ ಕೆಲವೊಂದು ಪ್ರಶ್ನೆಗಳನ್ನು ಕೇಳಿ, ನಗೆ ಚಟಾಕಿ ಹಾರಿಸಿ, ಸಾಮಾನ್ಯರಲ್ಲಿ ಸಾಮಾನ್ಯರಾಗಿ ಬೆರೆತ ಸಂದರ್ಭವು ಮನಸೂರೆಗೊಂಡಿತು.

ಯೋಜನೆಗಳ ಪ್ರಯೋಜನ ಪಡೆದ ನೈಜ ಫಲಾನುಭವಿಗಳನ್ನೇ ಆಯಾ ಪ್ರದೇಶಗಳ ಜಿಲ್ಲಾಡಳಿತಗಳು ಆಯ್ಕೆ ಮಾಡಿದ್ದು ಸಮಂಜಸವಾಗಿತ್ತು. ಯಾರನ್ನೋ ತಂದು ಕೂರಿಸಿ ಪ್ರಧಾನಿ ಅವರನ್ನು ಮೆಚ್ಚಿಸುವ ಕಾರ್ಯಕ್ಕೆ ಮುಂದಾಗದೇ ಇದ್ದುದು ಶ್ಲಾಘನೀಯ.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಹಿಳಾ ಉದ್ಯೋಗಿಗಳ ಪ್ರಮಾಣ ಇಳಿಕೆ

ದೇಶದ ನಗರ ಪ್ರದೇಶಗಳಲ್ಲಿ ನಿಶ್ಚಿತ ವೇತನ ದೊರೆಯುವ ಉದ್ಯೋಗದಲ್ಲಿರುವ ಮಹಿಳೆಯರ ಪ್ರಮಾಣದಲ್ಲಿ ಶೇ 7.6ರಷ್ಟು ಇಳಿಕೆಯಾಗಿದೆ ಎನ್ನುತ್ತದೆ ರಾಷ್ಟ್ರೀಯ ಸಾಂಖ್ಯಿಕ ಸಂಸ್ಥೆಯ(ಎನ್ಎಸ್ಒ) ವಾರ್ಷಿಕ ವರದಿ. ಗ್ರಾಮೀಣ ಪ್ರದೇಶದಲ್ಲೂ ಇಂತಹ ಉದ್ಯೋಗದಲ್ಲಿದ್ದ ಮಹಿಳೆಯರ ಪ್ರಮಾಣ ಇಳಿಕೆಯಾಗಿದೆ. 2019-20ರಲ್ಲಿ ದೇಶದ ನಗರ ಪ್ರದೇಶದ ದುಡಿಯುವ ಮಹಿಳೆಯರಲ್ಲಿ ನಿಶ್ಚಿತ ವೇತನ ಪಡೆಯುತ್ತಿದ್ದ ಮಹಿಳೆಯರ ಪ್ರಮಾಣ ಶೇ 54.2ರಷ್ಟು ಇತ್ತು. 2020-21ರಲ್ಲಿ ಇಂತಹ ಮಹಿಳೆಯರ ಪ್ರಮಾಣ ಶೇ 50.1ಕ್ಕೆ ಇಳಿಕೆಯಾಗಿದೆ. ಬೇರೆಲ್ಲಾ ಸ್ವರೂಪದ ಉದ್ಯೋಗಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣದಲ್ಲಿ ಆಗಿರುವ ಇಳಿಕೆಗಿಂತ ಗರಿಷ್ಠ ಪ್ರಮಾಣದ ಇಳಿಕೆ ಇದಾಗಿದೆ. ಈ ವರದಿಗಳಲ್ಲಿನ ದತ್ತಾಂಶಗಳನ್ನು ವಿಶ್ಲೇಷಿಸಿದರೆ, ನಿಯಮಿತವಾಗಿ ವೇತನ ನೀಡುವ ಉದ್ಯೋಗ ನಷ್ಟವಾದ ನಂತರ ಮಹಿಳೆಯರು ಸ್ವಯಂ ಉದ್ಯೋಗ ಮತ್ತು ದಿನಗೂಲಿಯತ್ತ ಹೊರಳಿರುವುದು ಗೊತ್ತಾಗುತ್ತದೆ

ನಿಶ್ಚಿತ ವೇತನ ಪಡೆಯುತ್ತಿದ್ದ ಮಹಿಳೆಯರ ಪ್ರಮಾಣ (ನಗರ)
2019-20 → 54.2%
2020-21 → 50.1%

- ನಗರ ಪ್ರದೇಶದಲ್ಲಿ ನಿಶ್ಚಿತ ವೇತನ ಪಡೆಯುವ ಮಹಿಳೆಯರ ಪ್ರಮಾಣದಲ್ಲಿ 4.1 ಅಂಶಗಳಷ್ಟು ಇಳಿಕೆಯಾಗಿದೆ. ಶೇಕಡಾವಾರು ಪ್ರಮಾಣದಲ್ಲಿ ಇಳಿಕೆಯನ್ನು ಲೆಕ್ಕ ಹಾಕಿದರೆ ಇಳಿಕೆಯ ಪ್ರಮಾಣವು ಶೇ 7.6ರಷ್ಟು ಆಗುತ್ತದೆ

ನಿಶ್ಚಿತ ವೇತನ ಪಡೆಯುತ್ತಿದ್ದ ಮಹಿಳೆಯರ ಪ್ರಮಾಣ (ಗ್ರಾಮೀಣ)
2019-20 → 9.5%
2020-21 → 9.1%

- ಇದೇ ಅವಧಿಯಲ್ಲಿ ದೇಶದ ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ನಿಶ್ಚಿತ ವೇತನ ಪಡೆಯುವ ಉದ್ಯೋಗಿಗಳ ಪ್ರಮಾಣವು ಶೇ 9.5ರಿಂದ ಶೇ 9.1ಕ್ಕೆ ಇಳಿಕೆಯಾಗಿದೆ. ಇಳಿಕೆಯಾಗಿರುವುದು 0.4 ಅಂಶಗಳಾದರೂ, ಶೇಕಡಾವಾರು ಲೆಕ್ಕದಲ್ಲಿ ಇಳಿಕೆಯ ಪ್ರಮಾಣವು ಶೇ 4.1ರಷ್ಟಾಗಿದೆ
- ಕೋವಿಡ್ ಅವಧಿಯಲ್ಲಿ ದೇಶದ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಭಾರಿ ಪ್ರಮಾಣದಲ್ಲಿ ಉದ್ಯೋಗ ಕಳೆದುಕೊಂಡಿರುವುದನ್ನು ಇದು ತೋರಿಸುತ್ತದೆ

ದಿನಗೂಲಿ ಮಹಿಳೆಯರ ಪ್ರಮಾಣ (ನಗರ)
2019-20 → 11.1%
2020-21 → 11.5%

ದಿನಗೂಲಿ ಮಹಿಳೆಯರ ಪ್ರಮಾಣ (ಗ್ರಾಮೀಣ)
2019-20 → 27.5%
2020-21 → 26.2%

- ಇದೇ ಅವಧಿಯಲ್ಲಿ ದೇಶದ ನಗರ ಪ್ರದೇಶಗಳಲ್ಲಿ ದಿನಗೂಲಿಗೆ ಹೋಗುತ್ತಿದ್ದ ಮಹಿಳೆಯರ ಪ್ರಮಾಣವು ಶೇ 11.1ರಿಂದ ಶೇ 11.5ಕ್ಕೆ ಏರಿಕೆಯಾಗಿದೆ. ನಿಶ್ಚಿತ ವೇತನದ ಉದ್ಯೋಗ ನಷ್ಟವಾದ ನಂತರ ಸ್ವಲ್ಪ ಪ್ರಮಾಣದ ಮಹಿಳೆಯರು ದಿನಗೂಲಿಯತ್ತ ಹೊರಳಿರುವುದನ್ನು ಇದು ಸೂಚಿಸುತ್ತದೆ

ಸ್ವಯಂ ಉದ್ಯೋಗಿ ಮಹಿಳೆಯರ ಪ್ರಮಾಣ (ನಗರ)
2019-20 → 34.6%
2020-21 → 38.4%

- ಇದೇ ಅವಧಿಯಲ್ಲಿ ನಗರ ಪ್ರದೇಶದಲ್ಲಿ ಮಹಿಳಾ ಸ್ವಯಂಉದ್ಯೋಗಿಗಳ ಪ್ರಮಾಣವು ಶೇ 34.6ರಿಂದ ಶೇ 38.4ಕ್ಕೆ ಏರಿಕೆಯಾಗಿದೆ. ನಿಶ್ಚಿತ ವೇತನ ನೀಡುವ ಉದ್ಯೋಗ ಕಳೆದುಕೊಂಡ ನಂತರ, ಅಷ್ಟೇ ಪ್ರಮಾಣದ ಮಹಿಳೆಯರು ಸ್ವಯಂ ಉದ್ಯೋಗವನ್ನು ಆಶ್ರಯಿಸಿರುವುದನ್ನು ಇದು ಸೂಚಿಸುತ್ತದೆ

ಸ್ವಯಂ ಉದ್ಯೋಗಿ ಮಹಿಳೆಯರ ಪ್ರಮಾಣ (ಗ್ರಾಮೀಣ)
2019-20 → 63%
2020-21 → 64.8%

- ಈ ಅವಧಿಯಲ್ಲಿ ದೇಶದ ಗ್ರಾಮೀಣ ಪ್ರದೇಶದಲ್ಲೂ ಸ್ವಯಂ ಉದ್ಯೋಗಿ ಮಹಿಳೆಯರ ಪ್ರಮಾಣವು ಶೇ 63ರಿಂದ ಶೇ 64.8ಕ್ಕೆ ಏರಿಕೆಯಾಗಿದೆ. ಗ್ರಾಮೀಣ ಪ್ರದೇಶದಲ್ಲೂ ನಿಶ್ಚಿತ ವೇತನ ನೀಡುವ ಉದ್ಯೋಗ ನಷ್ಟವಾದ ನಂತರ ಮಹಿಳೆಯರು, ಸ್ವಯಂ ಉದ್ಯೋಗದತ್ತ ಹೊರಳಿರುವುದನ್ನು ಇದು ಸೂಚಿಸುತ್ತದೆ

ಕೃಷಿಯೇ ಆಸರೆ

ದೇಶದ ಕಾರ್ಮಿಕ ವರ್ಗ ಅತಿಹೆಚ್ಚು ಅವಲಂಬಿತವಾಗಿರುವುದು ಕೃಷಿ ಕ್ಷೇತ್ರದ ಮೇಲೆ. ಆದರೆ, ಜಾಗತೀಕರಣ, ನಗರೀಕರಣದಿಂದ ಕೃಷಿಯ ಮೇಲಿದ್ದ ಅವಲಂಬನೆ ಕಡಿಮೆಯಾಗುತ್ತಿದೆ ಎಂಬ ಭಾವನೆಯಿತ್ತು. ವಾಸ್ತವ ಏನೆಂದರೆ, ಕಳೆದ 4 ವರ್ಷಗಳ ದತ್ತಾಂಶಗಳನ್ನು ಗಮನಿಸಿದರೆ, ಕೃಷಿ ಮೇಲೆ ಅವಲಂಬನೆ ನಿಧಾನವಾಗಿ ಏರಿಕೆಯಾಗಿದೆ. 2017-18ರ ಅವಧಿಯಲ್ಲಿ ಶೇ 44.1ರಷ್ಟು ಜನರು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಇವರ ಪ್ರಮಾಣವು 2020-21ರ ವೇಳೆಗೆ ಶೇ 46.5ಕ್ಕೆ ಜಿಗಿದಿದೆ. ಅಂದರೆ, ಈ ಅವಧಿಯಲ್ಲಿ ಆವರಿಸಿದ್ದ ಕೋವಿಡ್, ನಗರದಲ್ಲಿ ಬೀಡುಬಿಟ್ಟಿದ್ದ ಜನರ ಉದ್ಯೋಗವನ್ನು ಕಸಿದುಕೊಂಡು, ಅವರನ್ನು ಮರಳಿ ತಮ್ಮ ಹಳ್ಳಿಗಳಿಗೆ ವಾಪಸಾಗುವಂತೆ ಮಾಡಿದೆ ಎಂದು ವಿಶ್ಲೇಷಿಸಬಹುದು.

ತಯಾರಿಕೆ ವಲಯದಲ್ಲೂ ಗಮನಾರ್ಹ ಬದಲಾವಣೆಗಳಾಗಿವೆ. ನಾಲ್ಕು ವರ್ಷಗಳ ಹಿಂದೆ ಶೇ 12ರಷ್ಟು ಜನರು ಈ ವಲಯವನ್ನು ನಂಬಿಕೊಂಡಿದ್ದರು. ಅವರ ಪ್ರಮಾಣವು 2021-22ರಲ್ಲಿ ಶೇ 10.9ಕ್ಕೆ ಕುಸಿದಿದೆ. ಸಾರಿಗೆ ಹಾಗೂ ಸಂಬಂಧಿತ ವಲಯಗಳಲ್ಲೂ ಉದ್ಯೋಗ ಕಡಿತಗೊಂಡಿವೆ. ಅಸಂಘಟಿತ ವಲಯದ (ಇತರೆ ಸೇವೆಗಳು) ಬಹುತೇಕ ಉದ್ಯೋಗಗಳು ನಷ್ಟಗೊಂಡಿವೆ. ತಯಾರಿಕೆ, ಸಾರಿಗೆ ಹಾಗೂ ಅಸಂಘಟಿತ ವಲಯದ ಎಲ್ಲ ಉದ್ಯೋಗಿಗಳು ಕೃಷಿ ಕ್ಷೇತ್ರಕ್ಕೆ ಹೊರಳಿಕೊಂಡಿದ್ದಾರೆ ಎಂದು ವರದಿಯ ದತ್ತಾಂಶಗಳು ತಿಳಿಸುತ್ತವೆ.



ನಿರುದ್ಯೋಗ ಪ್ರಮಾಣವೆಷ್ಟು?

ರಾಷ್ಟ್ರೀಯ ಸಾಂಖ್ಯಿಕ ಸಂಸ್ಥೆ (ಎನ್ಎಸ್ಒ) ಬಿಡುಗಡೆ ಮಾಡಿರುವ ಕಾರ್ಮಿಕ ಭಾಗವಹಿಸುವಿಕೆ ತ್ರೈಮಾಸಿಕ ವರದಿಗಳ ಪ್ರಕಾರ 2020-21ರಲ್ಲಿ ದೇಶದ ನಗರ ಪ್ರದೇಶದಲ್ಲಿ ನಿರುದ್ಯೋಗದ ಪ್ರಮಾಣ ಶೇ 13.9ರಷ್ಟು ಇತ್ತು. ಆದರೆ ಇದೇ ವರದಿಗಳನ್ನು ಆಧರಿಸಿ ಸಿದ್ಧಪಡಿಸಲಾದ ವಾರ್ಷಿಕ ವರದಿಯಲ್ಲಿ, ದೇಶದ ನಗರ ಪ್ರದೇಶದ ನಿರುದ್ಯೋಗದ ಪ್ರಮಾಣ ಶೇ 6.7ರಷ್ಟು ಎಂದು ನಮೂದಿಸಲಾಗಿದೆ. 2018-19ನೇ ಸಾಲಿನಿಂದ ಪ್ರತಿ ಆರ್ಥಿಕ ವರ್ಷಕ್ಕೆ ಸಂಬಂಧಿಸಿದ ಪೀರಿಯಾಡಿಕ್ ಲೇಬರ್ ಫೋರ್ಸ್ ಸರ್ವೆ ವರದಿಯನ್ನು ಬಿಡುಗಡೆ ಮಾಡುತ್ತಿದೆ. ಜತೆಗೆ ಪ್ರತಿ ಒಂದು ತ್ರೈಮಾಸಿಕದಲ್ಲಿ ಒಂದೊಂದು ವರದಿ ಬಿಡುಗಡೆ ಮಾಡುತ್ತದೆ. ಆದರೆ ಈ ಎರಡೂ ರೀತಿಯ ವರದಿಗಳಲ್ಲಿ ನಿರುದ್ಯೋಗಕ್ಕೆ ಸಂಬಂಧಿಸಿದಂತೆ ನೀಡಲಾಗುವ ದತ್ತಾಂಶದಲ್ಲಿ ಭಾರಿ ವ್ಯತ್ಯಾಸವಿದೆ. ತ್ರೈಮಾಸಿಕ ವರದಿಗಳಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚು ಇರುತ್ತದೆ. ವಾರ್ಷಿಕ ವರದಿಗಳಲ್ಲಿ ನಿರುದ್ಯೋಗದ ಪ್ರಮಾಣ ಕಡಿಮೆ ಇರುತ್ತದೆ.





- ಎನ್ಎಸ್ಒ ತ್ರೈಮಾಸಿಕ ವರದಿಗಳ ಪ್ರಕಾರ 2020-21ರಲ್ಲಿ, ದೇಶದ ನಗರ ಪ್ರದೇಶದಲ್ಲಿ ನಿರುದ್ಯೋಗದ ಪ್ರಮಾಣ ಶೇ 13.9ರಷ್ಟು ಇತ್ತು. ಸಮೀಕ್ಷೆ ನಡೆಸಿದ ಅವಧಿಗೆ ಒಂದು ವಾರದ ಮುಂಚಿನ ಅವಧಿಯಲ್ಲಿನ ಉದ್ಯೋಗ ಸ್ಥಿತಿಯನ್ನು ಲೆಕ್ಕಹಾಕಿ ಈ ವರದಿಯನ್ನು ನೀಡಲಾಗಿದೆ
- ಇದೇ ವರದಿಗಳನ್ನು ಆಧರಿಸಿ ಸಿದ್ಧಪಡಿಸಿರುವ 2020-21ರ ವಾರ್ಷಿಕ ವರದಿಯಲ್ಲಿ, ದೇಶದ ನಗರ ಪ್ರದೇಶದಲ್ಲಿ ನಿರುದ್ಯೋಗದ ಪ್ರಮಾಣ ಶೇ 6.7 ಎಂದು ನಮೂದಿಸಲಾಗಿದೆ. ಇಡೀ ಆರ್ಥಿಕ ವರ್ಷದಲ್ಲಿ ಉದ್ಯೋಗ ಲಭ್ಯತೆಯ ಸ್ಥಿತಿಯನ್ನು ಆಧರಿಸಿ, ಈ ನಿರುದ್ಯೋಗದ ಪ್ರಮಾಣವನ್ನು ಲೆಕ್ಕಹಾಕಲಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ
- ಈ ಎರಡೂ ವರದಿಗಳಲ್ಲಿ ನಿರುದ್ಯೋಗದ ಪ್ರಮಾಣವನ್ನು ಭಿನ್ನ ರೀತಿಯಲ್ಲಿ ಲೆಕ್ಕಹಾಕಿರುವ ಕಾರಣ, ದೇಶದ ನಗರ ಪ್ರದೇಶದಲ್ಲಿನ ನಿರುದ್ಯೋಗದ ಪ್ರಮಾಣ ಎಷ್ಟು ಎಂಬುದರ ಸ್ಪಷ್ಟ ಚಿತ್ರಣ ಇಲ್ಲ
- 2021-22ನೇ ಸಾಲಿನ ಎಲ್ಲಾ ತ್ರೈಮಾಸಿಕ ವರದಿಗಳನ್ನು ಎನ್ಎಸ್ಒ ಬಿಡುಗಡೆ ಮಾಡಿದೆ. ಈ ಪ್ರಕಾರ ದೇಶದ ನಗರ ಪ್ರದೇಶದಲ್ಲಿ ನಿರುದ್ಯೋಗದ ಪ್ರಮಾಣ ಶೇ 9.81ರಷ್ಟಿದೆ. ಆದರೆ, ಎನ್ಎಸ್ಒ ವಾರ್ಷಿಕ ವರದಿಯನ್ನು ಇನ್ನೂ ಬಿಡುಗಡೆ ಮಾಡಿಲ್ಲ

ಆಧಾರ: ರಾಷ್ಟ್ರೀಯ ಸಾಂಖ್ಯಿಕ ಸಂಸ್ಥೆಯ ಪೀರಿಯಾಡಿಕ್ ಲೇಬರ್ ಫೋರ್ಸ್ ಸರ್ವೆ 2019-20 ಮತ್ತು 2020-21, ತ್ರೈಮಾಸಿಕ ವರದಿಗಳು

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 153

ಸತಿಯನ್ನು ಹಂಬಲಿಸಿ ಸಂಭ್ರಮಿಸಿದ ಶಿವ

ಶಿವ-ಸತೀಕಲ್ಯಾಣಕ್ಕೆ ತಾನು ನಡೆಸಿದ ಸಂಧಾನ ಯಶಸ್ವಿಯಾದ ಕುರಿತು ಬ್ರಹ್ಮ ನಾರದನಿಗೆ ಹೇಳುತ್ತಾನೆ. ಕುತೂಹಲಿತನಾದ ನಾರದ 'ಓ ಬ್ರಹ್ಮಪಿತನೇ, ನೀನು ಪರಮೇಶ್ವರನ ಬಳಿಗೆ ಹೋದ ನಂತರ ಏನಾಯಿತು? ಶಂಕರನೇನು ಮಾಡಿದ ಎಂಬುದನ್ನು ವಿವರವಾಗಿ ಹೇಳು' ಎಂದು ಒತ್ತಾಯಿಸುತ್ತಾನೆ.

'ಎಲೈ ನಾರದ! ನಾನು ದಕ್ಷದಂಪತಿಯೊಂದಿಗೆ ಸತೀದೇವಿಯನ್ನು ಶಿವನಿಗೆ ಕೊಟ್ಟು ವಿವಾಹ ಮಾಡಿಕೊಡುವ ವಿಚಾರ ಮಾತನಾಡಿ, ಅವರ ಒಪ್ಪಿಗೆ ಪಡೆದುಕೊಂಡ ನಂತರ, ಶಿವನನ್ನು ದಕ್ಷನ ಮನೆಗೆ ಕರೆತರಲು ಹಿಮವತ್ಪರ್ವತದಲ್ಲಿರುವ ಮಹಾದೇವನ ಬಳಿಗೆ ತೆರಳಿದೆ. ಅತ್ತ ಶಿವ ನನ್ನ ಮಾತುಕತೆ ಯಶಸ್ವಿಯಾಯಿತೋ ಇಲ್ಲವೋ ಎಂಬ ಸಂಶಯದಿಂದ ತವಕ ಪಡುತ್ತಿದ್ದ. ಸತೀದೇವಿಯಲ್ಲಿ ಅನುರಕ್ತನಾಗಿದ್ದ ಈಶ್ವರ, ನಾನು ಬರುವುದನ್ನು ದೂರದಿಂದಲೇ ನೋಡಿದ ತಕ್ಷಣವೇ ಸತಿಯೊಂದಿಗೆ ನನ್ನ ಮದುವೆ ವಿಷಯದಲ್ಲಿ ಏನಾಯಿತು? ನಿನ್ನ ಪುತ್ರ ದಕ್ಷ ಏನು ಹೇಳಿದ ಬೇಗನೆ ಹೇಳು – ಎಂದು ಒತ್ತಾಯ ಮಾಡಿದ.

'ಶಿವನ ವರ್ತನೆ ಕಂಡು ನನಗೆ ಆಶ್ಚರ್ಯವಾಯಿತು. ಅವನು ಹೇಗೆ ಚಡಪಡಿಸುತ್ತಾ ಹೇಳಿದ ಅನ್ನೋದನ್ನ ನಿನಗೆ ತಿಳಿಸುತ್ತೇನೆ ಕೇಳು' ಎಂದ ಬ್ರಹ್ಮ ಶಿವನಾಡಿದ ಮಾತುಗಳನ್ನು ವಿವರಿಸುತ್ತಾನೆ.

ಪರಮಶಿವ ಬಹಳ ಕಾತುರದಿಂದ 'ಸತೀದೇವಿಯನ್ನು ಮದುವೆಯಾಗುವ ಬಯಕೆ ನನ್ನಲ್ಲಿ ಕ್ಷಣಕ್ಷಣಕ್ಕೂ ಹೆಚ್ಚಾಗುತ್ತಿದೆ. ವಿರಹದ ಬೇಗೆ ನನ್ನ ತುಂಬಾ ಘಾಸಿಪಡಿಸುತ್ತಿದೆ. ಪ್ರತಿಕ್ಷಣವೂ ನನ್ನ ಮನದ ತುಂಬಾ ಸತೀದೇವಿಯೇ ಆವರಿಸುತ್ತಿದ್ದಾಳೆ. ನನ್ನ ಧ್ಯಾನಾಸಕ್ತಿ ಸಂಪೂರ್ಣ ಕ್ಷೀಣಿಸಿದೆ. ನಿತ್ಯವೂ ನಾನು ಸತೀದೇವಿಯನ್ನೇ ಚಿಂತಿಸುತ್ತಲಿರುವೆ. ಆದುದರಿಂದ ಅವಳು ನನ್ನೊಡನೆ ಸೇರುವಂತೆ ಜಾಗ್ರತೆ ಪ್ರಯತ್ನ ಮಾಡಿ ಬಂದೆಯಾ' ಎಂದು ಬ್ರಹ್ಮನನ್ನು ಪ್ರಶ್ನಿಸುತ್ತಾನೆ.

ಸಾಮಾನ್ಯರಂತೆ ಶಿವನು ಆಡುತ್ತಿರುವ ಮಾತುಗಳನ್ನು ಕೇಳಿದ ಬ್ರಹ್ಮನಿಗೆ, ಮನ್ಮಥನ ಬಾಣಕ್ಕೆ ಸಿಲುಕಿದವರು ಹೇಗೆಲ್ಲಾ ಕಾಮವಿಕಾರದಿಂದ ಬಳಲುತ್ತಾರೆಂಬುದಕ್ಕೆ ಜಗದೊಡೆಯನಾದ ಶಿವನ ಈ ವರ್ತನೆಯೇ ಸಾಕ್ಷೀಕರಿಸುತ್ತದೆ ಅಂತ ಅಂದುಕೊಳ್ಳುತ್ತಾನೆ. ಚಡಪಡಿಸುತ್ತಿದ್ದ ಶಿವನನ್ನು ಸಮಾಧಾನಗೊಳಿಸುತ್ತಾ, 'ಸತಿಯೊಂದಿಗೆ ನಿನ್ನ ಮದುವೆ ಮಾಡಿಕೊಡುವ ವಿಷಯದಲ್ಲಿ ದಕ್ಷನು ಏನು ಹೇಳಿದನೆಂಬುದನ್ನು ಹೇಳುತ್ತೇನೆ. ಸಾವಧಾನದಿಂದ ಕೇಳು. ನಿನ್ನ ಇಷ್ಟಾರ್ಥದಂತೆ ದಕ್ಷದಂಪತಿ ತಮ್ಮ ಪುತ್ರಿಯನ್ನು ನಿನಗೆ ಧಾರೆ ಎರೆದುಕೊಡಲು ಒಪ್ಪಿದ್ದಾರೆ. ನಾನು ಹೋದ ಕಾರ್ಯ ಸಿದ್ಧಿಸಿರುವುದೆಂದು ತಿಳಿ' ಎನ್ನುತ್ತಾನೆ. ಬ್ರಹ್ಮನ ಮಾತಿನಿಂದ ಸಂತುಷ್ಟನಾದ ಶಿವ ಅಲ್ಲಿ ನಡೆದ ಸಂಪೂರ್ಣ ವಿಚಾರ ತಿಳಿಸುವಂತೆ ಕೋರುತ್ತಾನೆ. ಆಗ ಬ್ರಹ್ಮ ಅಲ್ಲಿ ನಡೆದ ಘಟನೆಯ ವಿವರವನ್ನೆಲ್ಲಾ ಒಂದೂ ಬಿಡದಂತೆ ಹೇಳುತ್ತಾನೆ.

'ಶಿವನಿಗೆ ತನ್ನ ಪುತ್ರಿಯನ್ನು ಮದುವೆ ಮಾಡಿಕೊಡಲು ದಕ್ಷನೂ ಉತ್ಸುಕನಾಗಿದ್ದ. ನೀನು ಮದುವೆಯಾಗುವುದಾಗಿ ಹೇಳಿದ್ದನ್ನು ಸತೀದೇವಿ ಅವನಿಗೆ ಹೇಳಿದಾಗಿನಿಂದ ಹರ್ಷಚಿತ್ತನಾಗಿದ್ದಾನೆ. ಆ ಸಂತೋಷಾರ್ಥವಾಗಿ ಬಂಧು-ಮಿತ್ರರಿಗೆಲ್ಲಾ ಕಾಣಿಕೆ ನೀಡಿ, ಬಡವರಿಗೆಲ್ಲ ಧನಕನಕ ದಾನ ಮಾಡಿದ್ದಾನೆ. ನಾನು ದಕ್ಷನ ಬಳಿಗೆ ಹೋಗುವ ಮೊದಲೇ ನಿನ್ನ ಬಳಿಗೆ ಮದುವೆ ಮಾತುಕತೆಗೆ ಯಾರನ್ನು ಕಳುಹಿಸುವುದು? ಹೇಗೆ ವಿಚಾರ ಮಾಡುವುದು? – ಅಂತ ಚಿಂತಿತನಾಗಿದ್ದ. ನಾನು ವಿಷಯ ಪ್ರಸ್ತಾಪಿಸುತ್ತಿದ್ದಂತೆಯೇ ಆನಂದೋತ್ಸಾಹದಿಂದ ಸಂಭ್ರಮಿಸಿದ. ತನ್ನ ಮಗಳು ಸತೀದೇವಿ ಶಿವನಿಗೆ ನಿಶ್ಚಯಿಸಲ್ಪಟ್ಟಿರುವವಳು. ಅವರಿಬ್ಬರ ವಿವಾಹಕಾರ್ಯ ತಮಗೆಲ್ಲಾ ಇಷ್ಟವಾದುದು. ಸತಿಯೂ ಶಿವನೇ ತನ್ನ ಪತಿಯಾಗಬೇಕೆಂದು ಆರಾಧಿಸಿ, ಒಲಿಸಿಕೊಂಡಿದ್ದಾಳೆ. ಆ ಶಿವನೂ ಈ ವಿಷಯಕ್ಕಾಗಿಯೇ ನನ್ನ ಅನುಮತಿಯನ್ನು ಕೇಳುವನೆಂದ ಮೇಲೆ ನಾನು ಸತೀದೇವಿಯನ್ನು ಶಿವನಿಗೆ ಅವಶ್ಯವಾಗಿ ಮದುವೆ ಮಾಡಿಕೊಡುವೆ. ಶುಭಲಗ್ನವುಳ್ಳ ಸುಮುಹೂರ್ತದಲ್ಲಿ ಶಂಕರನು ನಮ್ಮ ಮನೆಗೆ ಪಾಣಿಗ್ರಹಣಕ್ಕಾಗಿ ಬರಲಿ. ಆಗ ನಾನು ನನ್ನ ಪುತ್ರಿಯನ್ನು ವಿಧಿವತ್ತಾಗಿ ಮದುವೆ ಮಾಡಿಕೊಡುವೆ ಎಂದಿದ್ದಾನೆ. ಆದುದರಿಂದ ನೀನು ಶುಭಮಹೂರ್ತದಲ್ಲಿ ಅವನ ಮನೆಗೆ ಹೋಗಲು ಸಿದ್ಧನಾಗು' ಎಂದ ಬ್ರಹ್ಮ. ಇದನ್ನು ಕೇಳಿದ ಶಿವ ಸಂತೋಷದಿಂದ ಸಂಭ್ರಮಿಸಿದ. ●

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಹಮ್ಮದ್ ಎಂಬ ಚಿತ್ರದ್ದು ಎನ್ನಲಾದ ಪೋಸ್ಟರ್ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಮಗುವೊಂದರ ಮೇಲೆ ವೃದ್ಧನೊಬ್ಬ ಮಲಗಿರುವಂತೆ ಭಾಸವಾಗುವ ಚಿತ್ರವು ಪೋಸ್ಟರ್‌ನಲ್ಲಿದೆ. 'ಈ ಚಿತ್ರದ ಪೋಸ್ಟರ್ ಈ ರೀತಿ ಇದ್ದರೆ, ಇನ್ನು ಇಡೀ ಚಿತ್ರ ಹೇಗಿರಬಹುದು' ಎಂದು ಪೋಸ್ಟರ್ ಹಂಚಿಕೊಳ್ಳುವಾಗ ಲೇವಡಿ ಮಾಡಲಾಗಿದೆ. 'ಭಾರತದಲ್ಲಿ ಈ ಚಿತ್ರ ಪ್ರದರ್ಶನಕ್ಕೆ ಒವೈಸಿ ಅವರು ವಿರೋಧಿಸುತ್ತಿರುವುದು ಏಕೆ' ಎಂದು ಹಲವರು ಪ್ರಶ್ನಿಸಿದ್ದಾರೆ.

'ಇದು ತಿರುಚಲಾದ ಚಿತ್ರ. 2015ರಲ್ಲಿ ಬಿಡುಗಡೆಯಾಗಿದ್ದ ಮಹಮ್ಮದ್ ಚಿತ್ರದ ಪೋಸ್ಟರ್‌ಗೆ ತಂದೆ–ಮಗಳ ಕಲಾತ್ಮಕ ಛಾಯಾಗ್ರಹಣದ ಚಿತ್ರವನ್ನು ತಿರುಚಿ, ಸೇರಿಸಲಾಗಿದೆ. ವೃದ್ಧನೊಬ್ಬ ಮಗುವಿನ ಮೇಲೆ ಅತ್ಯಾಚಾರ ಎಸಗುತ್ತಿರುವಂತೆ ಭಾಸವಾಗುವಂತೆ ಪೋಸ್ಟರ್ ಅನ್ನು ತಿರುಚಲಾಗಿದೆ' ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಜೂನ್ 22, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ನವಮಿ ಗಂ. 20-46 ನಕ್ಷತ್ರ: ರೇವತಿ ಅಹೋರಾತ್ರ ಯೋಗ: ಸೌಭಾಗ್ಯ ಗಂ. 05-31, ಶೋಭನ ಗಂ. 28-56 ಕರಣ: ತೈತಿಲ ಗಂ 08-33, ಮಿಥುನ ಮಾಸದ 07 ನೇ ದಿನ.
ರಾಹುಕಾಲ : ಮಧ್ಯಾಹ್ನ 12:00 - 01:30
ಸೂರ್ಯೋದಯ : 06-09 ಸೂರ್ಯಾಸ್ತ : 06-56
ಮುಸ್ಲಿಂ ದಿನಾಂಕ : 22 ಜುಲ್ಕಾಯದ್
ಅದೃಷ್ಟ ಸಂಖ್ಯೆ : 4, 7

ಮೇಷ: ಆದಾಯಕ್ಕೇನೂ ಕೊರತೆಯಿರದು ಆದರೂ ಖರ್ಚು-ವೆಚ್ಚದಲ್ಲಿ ಮಿತವ್ಯಯ ಸಾಧಿಸಲು ಪ್ರಯತ್ನಿಸಿ. ಬಹಳ ದಿನಗಳಿಂದ ಖಾಯಿಲೆಯಲ್ಲಿ ಬಳಲುತ್ತಿರುವವರಿಗೆ ಔಷಧಿಯು ಪ್ರತಿಕ್ರಿಯಿಸಿ ಚೇತರಿಕೆಯ ಹಂತಕ್ಕೆ ಹೋಗುವಿರಿ.

ವೃಷಭ: ಆರ್ಥಿಕವಾಗಿ ಸಾಕಷ್ಟು ಸಂಪಾದನೆಯಾಗುವುದರಿಂದ ಅನಿವಾರ್ಯದ ಖರ್ಚಿಗೇನೂ ಯೋಚನೆ ಇರುವುದಿಲ್ಲ. ಸರ್ಕಾರಿ ನೌಕರರಿಗೆ ನಾನಾ ರೀತಿಯಲ್ಲಿ ಅಡ್ಡಿ-ಆತಂಕಗಳು ಕಾಡಬಹುದು. ಬಣ್ಣ ಮಾರಾಟಗಾರರಿಗೆ ಹೆಚ್ಚಿನ ಲಾಭ.

ಮಿಥುನ: ಮನೆಯ ಕೆಲಸಗಳಿಗಾಗಿ ಸರ್ಕಾರಿ ಕಛೇರಿಗಳಿಗೆ ಓಡಾಡಿ ಕೆಲಸಗಳನ್ನು ಸಂಪೂರ್ಣಗೊಳಿಸಿಕೊಳ್ಳುವಿರಿ. ನೆರೆಯವರೊಂದಿಗಿನ ಸಂಬಂಧ ಉತ್ತಮಗೊಳ್ಳುವುದು. ಪತ್ರಿಕೆಯವರ ಸಹಕಾರದಿಂದ ಹೆಚ್ಚಿನ ಪ್ರಚಾರ.

ಕರ್ಕಾಟಕ: ವಿಮಾ ಯೋಜನೆಗಳಿಂದ ಹೆಚ್ಚಿನ ಲಾಭ ಪಡೆದುಕೊಳ್ಳುವಿರಿ. ದಿನದ ಪ್ರಾರಂಭದಲ್ಲಿ ಕೆಲಸಗಳು ಕುಂಠಿತವಾಗಿ ಸಾಗಿದರೂ ಉತ್ತರಾರ್ಧದ ವೇಳೆಗೆ ಸಮರ್ಪಕವಾಗಿ ಮಾಡಿ ಮುಗಿಸಿದ ತೃಪ್ತಿ ನಿಮ್ಮಲ್ಲಿ ಉಂಟಾಗಲಿದೆ.

ಸಿಂಹ: ಬಂಧು ಮಿತ್ರರ ಸಹಾಯ ಬಯಸದೆ ಸ್ವತಂತ್ರವಾಗಿ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಲು ಅಭ್ಯಾಸ ಮಾಡಿ. ಬಾಕಿ ಉಳಿಸಿಕೊಂಡ ಕೆಲಸಗಳನ್ನು ಬೇಗ ಮುಗಿಸಿಕೊಳ್ಳುವಂತಹ ಪ್ರಯತ್ನಗಳು ನಿಮ್ಮಿಂದ ನಡೆಯಬೇಕಾಗುತ್ತದೆ.

ಕನ್ಯಾ: ಅನಿರೀಕ್ಷಿತವಾಗಿ ರಾಜಕೀಯದಲ್ಲಿ ಸ್ಥಾನ ದೊರೆತು ರಾಜಕೀಯ ರಂಗದ ಉದ್ದ ಅಗಲದ ಅರಿವಾಗುತ್ತದೆ. ದಿನಸಿ ವ್ಯಾಪಾರ ವಹಿವಾಟುಗಳು ಹೆಚ್ಚಿನ ಲಾಭ ತರಲಿದೆ. ಕೌಟುಂಬಿಕ ಜೀವನ ಸುಖಮಯವಾಗಿರುವುದು.

ತುಲಾ: ಪ್ರಭಾವಿ ವ್ಯಕ್ತಿಗಳಿಂದ ಸಿಕ್ಕ ಸಹಕಾರ ನಿಮಗೆ ಈ ಸಮಯದಲ್ಲಿ ಸಹಾಯಕ್ಕೆ ಬರಲಿದೆ. ವಿದೇಶಿ ವ್ಯವಹಾರಗಳು ಕೈಗೂಡಲಿದೆ. ಕಲಾವಿದರಿಗೆ ಹಾಗೂ ನಟ ನಟಿಯರಿಗೆ ಉತ್ತಮ ಅವಕಾಶಗಳು ಒದಗಿ ಬರುವುದು.

ವೃಶ್ಚಿಕ: ಅಡುಗೆ ಕೆಲಸ ಮಾಡುವವರಿಗೆ ಈ ದಿನ ಹೆಚ್ಚಿನ ಕೆಲಸ ಹಾಗೂ ಲಾಭವಿರುವುದು. ನಿಮ್ಮ ವಿರೋಧಿಗಳು ಇಂದು ರಾಜಿಯಾಗಲು ಬರುವಂತಹ ಸನ್ನಿವೇಶಗಳು ನಡೆಯಬಹುದು. ಹೊಸ ಉದ್ಯೋಗದ ಬಗ್ಗೆ ಯೋಚನೆ ಬೇಡ.

ಧನು: ಉನ್ನತ ಶಿಕ್ಷಣ ಮುಂದುವರೆಸಲು ಬಂಧುಗಳ ಸಹಾಯ ಹಸ್ತ ಅಥವಾ ವಾಸ್ತವ್ಯ ವ್ಯವಸ್ಥೆಯ ಅಪೇಕ್ಷಿಸಬಹುದು. ಯಾವುದೇ ರೀತಿಯ ವಸ್ತುಗಳನ್ನು ಖರೀದಿ ಮಾಡಿದರೂ ಎಚ್ಚರವಿರಲಿ, ಮೋಸ ಹೋಗುವ ಸಂಭವ ಇರಲಿದೆ.

ಮಕರ: ಮೇಲಧಿಕಾರಿಗಳಿಂದ ನಿಮ್ಮ ಅಪೇಕ್ಷೆಯ ಸಹಕಾರಗಳು ದೊರೆಯಲಿದೆ. ಸಂಸಾರದಲ್ಲಿ ಹೆಚ್ಚಿನ ನೆಮ್ಮದಿ, ಶಾಂತಚಿತ್ತ ವಾತಾವರಣ. ವ್ಯಾಪಾರದಲ್ಲಿ ಪ್ರವಾಸಿಗರಿಂದ ಹೆಚ್ಚಿನ ಸಂಪಾದನೆ ಉಂಟಾಗುವುದು.

ಕುಂಭ: ಪತ್ನಿಯ ಆರೋಗ್ಯವು ಸುಧಾರಿಸುವುದು. ಉದ್ಯೋಗಾಕಾಂಕ್ಷಿಗಳಿಗೆ ವಿದ್ಯಾರ್ಹತೆಗೆ ಸರಿಯಾದ ಕೆಲಸಗಳು ದೊರಕುವಲ್ಲಿ ವ್ಯತ್ಯಾಸಗಳಾಗಬಹುದು. ಟ್ರಾವೆಲ್ ಏಜೆನ್ಸಿಯನ್ನು ನಡೆಸುವವರಿಗೆ ಈ ದಿನವು ಉತ್ತಮವಾಗಿ ಇರಲಿದೆ.

ಮೀನ: ನಿಮ್ಮ ಯೋಜನೆಗಳು ಹಾಗೂ ಅವುಗಳ ಬೆಳವಣಿಗೆಗಳ ಬಗ್ಗೆ ಸಂಬಂಧಪಟ್ಟವರಲ್ಲಿ ದಿನವಿಡೀ ಚರ್ಚಿಸಿದರೂ ತೀರ್ಮಾನಕ್ಕೆ ಬರುವುದು ಕಷ್ಟ. ದಿನಸಿ ವರ್ತಕರಿಗೆ ಲಾಭ. ಎಲ್ಲಾ ಕೆಲಸಗಳೂ ನಿಧಾನ ಗತಿಯಲ್ಲಿ ಸಾಗುವವು.

ಬೆರಗಿನ ಬೆಳಕು

ಗುರುರಾಜ ಕರಜಗಿ

ನೆನಪಿಲ್ಲದ ಆದಿಬಂಧುಗಳು

ನೆನಪಿಲ್ಲದ ಆದಿಬಂಧುಗಳು
ಅಕ್ಕಿಯೊಳಗನ್ನವನು ಮೊದಲಾರು ಕಂಡವರು? |
ಅಕ್ಕರದ ಬರಹಕ್ಕೆ ಮೊದಲಿಗನದಾರು? ||
ಲೆಕ್ಕವಿರಿಸಿಲ್ಲ ಜಗ ತನ್ನಾದಿ ಬಂಧುಗಳ |
ದಕ್ಕುವುದೆ ನಿನಗೆ ಜಸ? – ಮಂಕುತಿಮ್ಮ || 655 ||

ಪದ-ಅರ್ಥ: ಅಕ್ಕಿಯೊಳಗನ್ನವನು = ಅಕ್ಕಿಯೊಳಗೆ + ಅನ್ನವನು, ಅಕ್ಕರದ = ಒಲವಿನ, ಮೊದಲಿಗನದಾರು = ಮೊದಲಿಗನು + ಅದಾರು, ತನ್ನಾದಿ = ತನ್ನ + ಆದಿ, ದಕ್ಕುವುದೆ = ದೊರೆಯುವದೆ, ಜಸ = ಯಶ

ವಾಚ್ಯಾರ್ಥ: ಅಕ್ಕಿಯೊಳಗೆ ಅನ್ನವನ್ನು, ಬರಹಕ್ಕೆ ಅಕ್ಷರವನ್ನು ಮೊದಲು ಕಂಡುಹಿಡಿದವರಾರು? ಇವರು ನಮ್ಮ ಆದಿ ಬಂಧುಗಳು. ಅವರ ಕಾಣಿಕೆಯನ್ನೇ ಪ್ರಪಂಚ ಲೆಕ್ಕಕ್ಕಿಟ್ಟಿಲ್ಲ. ಅಂಥದ್ದರಲ್ಲಿ ನಿನಗೆ ಯಶ ದೊರಕುವುದೇ?

ವಿವರಣೆ: ಒಬ್ಬ ವ್ಯಕ್ತಿಯ ಉಳಿವು ಮತ್ತು ಬೆಳವಿಗೆಗೆ ಎರಡು ಅತ್ಯವಶ್ಯ. ಒಂದು ಹಸಿವು ಮತ್ತೊಂದು ಅರಿವು. ಹಸಿವಿನ ಬೆಲೆ ತಿಳಿದವನಿಗೇ ಅನ್ನದ ಬೆಲೆ ಅರ್ಥವಾಗುವುದು. ಭಗವದ್ಗೀತೆ 'ಅನ್ನಾತ್ ಭವಂತಿ ಭೂತಾನಿ'z ಎನ್ನುತ್ತದೆ. ಹಾಗೆಂದರೆ ಎಲ್ಲ ಜೀವಿಗಳು ವಿಕಾಸವಾಗುವುದು ಅನ್ನದಿಂದಲೇ. ತೈತ್ತಿರೀಯ ಉಪನಿಷತ್ತು,

ಅನ್ನಂ ನ ನಿಂದ್ಯಾತ್ | ತದ್ ವ್ರತಮ್ |
ಪ್ರಾಣೋವಾ ಅನ್ನಂ | ಶರೀರ ಮನ್ನಾದಮ್ |
ಪ್ರಾಣೇ ಶರೀರಂ ಪ್ರತಿಷ್ಠಿತಂ | ಶರೀರೇ ಪ್ರಾಣಃ |
ಪ್ರತಿಷ್ಠಿತಃ | ತದೇದನ್ನ ಮನ್ನೇ ಪ್ರತಿಷ್ಠಿತಂ |

'ಅನ್ನವನ್ನು ದೂಷಿಸಬಾರದು, ಅದು ವ್ರತ. ಶರೀರ, ಪ್ರಾಣಗಳು ಅನ್ನದಿಂದ ಮಾಡಲ್ಪಟ್ಟಿವೆ. ಶರೀರ ಪ್ರಾಣಗಳು ಒಟ್ಟಾಗಿವೆ. ಎಲ್ಲವೂ ಅನ್ನದಲ್ಲಿ ಅಡಗಿದೆ'.

ಅನ್ನವಿಲ್ಲದೆ ಜೀವಿ ಬದುಕಲಾರದು. ಜೀವಿ ಬೆಳೆದಂತೆ ಕೇವಲ ಅನ್ನ ಸಾಕಾಗಲಾರದು. ಅದಕ್ಕೆ ಅರಿವು ಬೇಕು. ಅಕ್ಷರ ಅರಿವಿಗೆ ಬಾಗಿಲು. ಅಕ್ಷರ ನಮಗೆ ಭಾಷೆಯ, ಸಾಹಿತ್ಯದ, ಸಂಗೀತದ, ಒಟ್ಟು ಸಂವಹನದ ಪ್ರಪಂಚವನ್ನು ತೆರೆದಿಡುತ್ತದೆ. ಅದು ಜ್ಞಾನಕ್ಕೆ ರಹದಾರಿ.

ಹೀಗೆ ಅನ್ನ, ಅಕ್ಷರ ಎರಡೂ ಬದುಕಿಗೆ ಅತ್ಯವಶ್ಯ ಸಾಮಗ್ರಿಗಳು. ಆದರೆ ಅಕ್ಕಿಯನ್ನು ನೀರಲ್ಲಿ ಬೇಯಿಸಿದರೆ ಅನ್ನವಾಗುತ್ತದೆ, ಅದು ಜೀವಪೋಷಕವಾಗುತ್ತದೆ ಎಂದು ಕಂಡು ಹಿಡಿದವರು ಯಾರು? ನಮಗೆ ಗೊತ್ತಿಲ್ಲ. ಸಣ್ಣ, ದೊಡ್ಡ ಅವಿಷ್ಕಾರಗಳನ್ನು ಮಾಡಿದ ವಿಜ್ಞಾನಿಗಳ ಹೆಸರು ಪ್ರಪಂಚಕ್ಕೆ ಪರಿಚಿತ. ಆದರೆ ಬದುಕಿಗೆ ಆಧಾರವಾದ ಅನ್ನವನ್ನು ಕಂಡುಹಿಡಿದವರ ಹೆಸರು ತಿಳಿದಿಲ್ಲ. ಅದರಂತೆ ಅಕ್ಷರಗಳನ್ನು ಕಂಡು ಹಿಡಿದವರು ಯಾರು? ಅದೂ ನಮಗೆ ತಿಳಿದಿಲ್ಲ.

ಅನ್ನ, ಅಕ್ಷರಗಳನ್ನು ನಮಗೆ ನೀಡಿದವರು ಆದಿ ಬಂಧುಗಳು ಎನ್ನುತ್ತದೆ ಕಗ್ಗ. ಆದರೆ ಆದಿಬಂಧುಗಳು ಯಾರು ಎನ್ನುವುದೇ ಗೊತ್ತಿಲ್ಲ. ನಮಗೆ ಅವರ ವಿಷಯ ತಿಳಿದಿಲ್ಲ ಎನ್ನುವುದು ಒಂದು ಭಾಗವಾದರೆ, ಇನ್ನೊಂದು ಅಂಥ ಮಹನೀಯರ ಹೆಸರುಗಳನ್ನೇ ಪ್ರಪಂಚ ನೆನಪಿನಲ್ಲಿ ಇಟ್ಟಿಲ್ಲ ಎನ್ನುವುದು. ನಾವು ಚಿಕ್ಕ ಚಿಕ್ಕ ಸಾಧನೆಗಳನ್ನು ಮಾಡಿ, ನನ್ನ ಹೆಸರು ಎಲ್ಲರಿಗೂ ಗೊತ್ತಿರಬೇಕು, ಶಾಶ್ವತವಾಗಬೇಕು ಎಂದು ಬಯಸುತ್ತೇವೆ. ಅದಕ್ಕೆ ಕಗ್ಗ ನಮಗೆ ಎಚ್ಚರಿಕೆ ಕೊಡುತ್ತದೆ. ಪ್ರಪಂಚ ಯಾರನ್ನೂ, ಯಾವ ಬಹುದೊಡ್ಡ ಸಾಧನೆಯನ್ನೂ ಶಾಶ್ವತವಾಗಿಸುವುದಿಲ್ಲ. ಮರೆವು ಅದರ ಸ್ವಭಾವ. ಪ್ರಪಂಚದ ಆದಿಬಂಧುಗಳನ್ನೇ ಲೆಕ್ಕಕ್ಕೆ ಇಡದ ಜಗತ್ತು ನಿನಗೆ ಆ ಯಶಸ್ಸನ್ನು ಕೊಟ್ಟೀತೇ? ಶಾಶ್ವತಯ, ಮನ್ನಣೆಯ ಅತಿಯಾಸೆಯನ್ನು ಬಿಡುವುದು ಕ್ಷೇಮ. ❖

ಪದಬಂಧ 4996

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಹಾರವನ್ನು ಸೇವಿಸದಿರುವುದು (4)
3.ಬಿಸಿಲುಗುದುರೆ ಇಲ್ಲಿದೆ (4)
5.ಇದೊಂದು ದ್ವಿದಳ ಧಾನ್ಯ (3)
6.ಪುರಿಯಲ್ಲಿ ಅಡಗಿರುವ ಶತ್ರು (2)
7.ಕೆಲಸಕ್ಕೆ ಬಾರದ ಮಾತಿದು (5)
10.ನೀರಿನಿಂದ ಸುತ್ತುವರೆದ ಭೂಭಾಗ (2)
12.ಒನಪು ತೋರುವಾಗಿನ ಸ್ಮರಣೆ (3)
14.ಈತ ಅದೃಷ್ಟವಿಲ್ಲದವನು (4)
15.ವನದಲ್ಲಿನ ಬೆಳವಣಿಗೆ (4)

ಮೇಲಿಂದ ಕೆಳಕ್ಕೆ
1.ಉರಿಯೊಳಗಿರುವ ಗೊಡವೆ ಗೊತ್ತಾಯಿತೇ? (4)
2.ಎರಡು ರಾಶಿಗಳು ಸಮವೆಂದು ದೃಢೀಕರಿಸುವುದು (5)
3.ಮರಣ ಅಥವಾ ಸಾವು (2)
4.ಜಂಬೂಕದ ಲಾಂಗೂಲವಿಲ್ಲಿ ಉಲ್ಟಾ ಕಾಣುತ್ತಿದೆ (4)
5.ಹಣ್ಣು ಕಾಯಿ ಇತ್ಯಾದಿಗಳ ಮೇಲುಹೊದಿಕೆ (3)
7.ಬಿನ್ನಾಣವನ್ನು ಹೀಗೆ ತೋರಿ! (3)
8.ಬೆಳ್ಳಿ ಹಬ್ಬವಿದು (5)
9.ಮನದೊಳಗಿರುವ ಕುಲ (4)
11.ಸಂಪೂರ್ಣ ಅರಿವಿದು (4)
13.ಇಷ್ಟರಲ್ಲೇ ಕಾಣಿಸಿಕೊಂಡಿರುವ ಅಪೇಕ್ಷೆ! (2)

1			2	■	3			4
	■	■		■		■	■	
	■	■		■	■	5		
6		■		■	■		■	
■	■	7			8		■	■
9	■		■	■		■	10	11
12			■	■		■	■	
	■	■	13	■		■	■	
14				■	15			

4995ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಸ್ವಾರ 3.ವಿಕೋಪ
4.ಕಂಠೀರವ 6.ರಂಪ
7.ನಾಮಧೇಯ 8.ಜರಡಿ
9.ಪ್ರತಿಫಲ 12.ಶಾಪ
13.ಶಯ್ಯಾಗೃಹ 15.ಮಾಪಕ
16.ಗೆಳೆತನ

ಮೇಲಿಂದ ಕೆಳಕ್ಕೆ:
1.ಅಪರಂಜಿ 2.ರಕಂ
3.ವಿಚಿತ್ರ 5.ವಲಯ
7.ನಾಡಿ 8.ಜಲ
9.ಪ್ರವೇಶ 10.ಉಪಮಾನ
11.ಶತಕ 14.ಹಗೆ

ಸುಡೊಕು 5382

7				1			8	
		6	8		9	5	1	7
4		8	7				9	
	7							
		4	9	3	8		7	
8		1						
	8			9			4	
1		2		8		7		
	4		1		7		2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5381ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಷೇರುಪೇಟೆ ವಹಿವಾಟು



ವಿನಿಮಯ ದರ

$ ಡಾಲರ್	78.13
£ ಪೌಂಡ್	95.69
€ ಯುರೊ	82.12
¥ ಯೆನ್ (100¥)	57.32

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹525

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1565 (1575)
ಸೋಯಾ (ರಿಫೈನ್ಡ್)	₹1357 (1380)
ಸೂರ್ಯಕಾಂತಿ (ರಿಫೈನ್ಡ್)	₹1700 (1720)
ಪಾಮೋಲಿನ್	₹1300 (1335)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹173
ಆರ್‌ಎಸ್‌ಎಸ್-5	₹165
ಗುಡ್ ಲಾಟ್	₹157

(ಪ್ರತಿ ಕೆ.ಜಿಗೆ)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1300-1500
ಮಧ್ಯಮ	₹1000-1300
ಸಣ್ಣ	₹500-1000

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,350
ಇಂದಿನ ಅಂತ್ಯ	15,638
▼	288
ದಿನದ ಕನಿಷ್ಠ	15707

ಕೊಬ್ಬರಿ ಧಾರಣೆ

ಪುತ್ತೂರು	₹4000-9000
ತುರುವೇಕೆರೆ	₹14200-14200

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹300-600
ದ್ವಿತಳಿ (ಬಿ.ವಿ)	₹256-801

ಸೆನ್ಸೆಕ್ಸ್, ನಿಫ್ಟಿ ಚೇತರಿಕೆ

ಮುಂಬೈ (ಪಿಟಿಐ): ಜಾಗತಿಕ ಮಾರುಕಟ್ಟೆಗಳಲ್ಲಿ ನಡೆದ ತೇಜಿ ವಹಿವಾಟಿನ ಪರಿಣಾಮವಾಗಿ ಭಾರತದ ಷೇರುಪೇಟೆಗಳಲ್ಲಿಯೂ ಹೂಡಿಕೆದಾರರು ಮಂಗಳವಾರ ಷೇರುಗಳ ಖರೀದಿಯಲ್ಲಿ ಉತ್ಸಾಹದಿಂದ ತೊಡಗಿದ್ದರು. ಇದರಿಂದಾಗಿ ಮುಂಬೈ ಷೇರುಪೇಟೆ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕಗಳು ಏರಿಕೆ ದಾಖಲಿಸಿದವು.

ಹೂಡಿಕೆದಾರರು ಎಲ್ಲ ವಲಯಗಳ ಷೇರುಗಳನ್ನು ಖರೀದಿಸಿದರು. ಮುಖ್ಯವಾಗಿ ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿ ಹಾಗೂ ಐ.ಟಿ. ವಲಯದ ಷೇರುಗಳ ಖರೀದಿ ಜೋರಾಗಿತ್ತು ಎಂದು ವರ್ತಕರು ತಿಳಿಸಿದ್ದಾರೆ. ಮಂಗಳವಾರದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹ 5.77 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ.

ಮಂಗಳವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 934 ಅಂಶ, ನಿಫ್ಟಿ 288 ಅಂಶ ಏರಿಕೆ ಕಂಡಿವೆ. 'ಹಣದುಬ್ಬರ ಏರಿಕೆ ಹಾಗೂ ಹಣಕಾಸು ನೀತಿಯನ್ನು ಕೇಂದ್ರೀಯ ಬ್ಯಾಂಕ್‌ಗಳು ಬಿಗಿಗೊಳಿಸುತ್ತಿರುವುದನ್ನು ಪರಿಗಣನೆಯಲ್ಲಿ ಇರಿಸಿಕೊಂಡೇ ಮಾರುಕಟ್ಟೆಗಳು ಚೇತರಿಕೆ ಕಂಡುಕೊಂಡಿವೆ. ಹೀಗಿದ್ದರೂ, ಈಗ ಷೇರು ಮಾರುಕಟ್ಟೆಗಳು ತೀರಾ ಸೂಕ್ಷ್ಮವಾಗಿವೆ. ತುಸು ತೊಂದರೆ ಎದುರಾದರೂ ಅಸ್ಥಿರತೆ ಮನೆಮಾಡುತ್ತದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಮುಂಗಾರು ಮಳೆ ಹೇಗೆ ಆಗುತ್ತದೆ ಎಂಬುದರ ಮೇಲೆಯೂ ಹೂಡಿಕೆದಾರರು ಗಮನ ಇರಿಸಿದ್ದಾರೆ' ಎಂದು ರೆಲಿಗೇರ್ ಬ್ರೋಕಿಂಗ್‌ನ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಹಾಂಗ್‌ಕಾಂಗ್, ಟೋಕಿಯೊ, ಸೋಲ್ ಷೇರುಪೇಟೆಗಳು ಏರಿದ್ದು, ಶಾಂಘೈ ಷೇರುಪೇಟೆ ಕುಸಿದಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆ ಶೇಕಡ 1.57ರಷ್ಟು ಹೆಚ್ಚಳವಾಗಿದ್ದು, ಪ್ರತಿ ಬ್ಯಾರೆಲ್‌ಗೆ 115.9 ಡಾಲರ್‌ಗೆ ತಲುಪಿದೆ.

ಯೆಸ್ ಬ್ಯಾಂಕ್: ರೆಪೊ ಆಧಾರಿತ ನಿಶ್ಚಿತ ಠೇವಣಿ

ಮುಂಬೈ (ಪಿಟಿಐ): ಸಾಲಗಳ ಮೇಲಿನ ಬಡ್ಡಿ ದರ ಹೆಚ್ಚಾಗುತ್ತಿದ್ದರೂ ಬ್ಯಾಂಕ್‌ಗಳು ಠೇವಣಿ ಮೇಲಿನ ಬಡ್ಡಿ ದರವನ್ನು ಹೆಚ್ಚಿಸುತ್ತಿಲ್ಲ ಎಂಬ ಆಕ್ಷೇಪಗಳು ವ್ಯಕ್ತವಾಗುತ್ತಿರುವ ಹೊತ್ತಿನಲ್ಲಿ, ರೆಪೊ ದರಕ್ಕೆ ಅನುಗುಣವಾಗಿ ಬಡ್ಡಿ ದರ ಏರಿಳಿತ ಆಗುವ ಅವಧಿ ಠೇವಣಿ ಯೋಜನೆಯನ್ನು ಯೆಸ್ ಬ್ಯಾಂಕ್ ರೂಪಿಸಿದೆ.

ಆರ್‌ಬಿಐ ಹಣದುಬ್ಬರ ನಿಯಂತ್ರಿಸಲು ರೆಪೊ ದರವನ್ನು 2 ಹಂತಗಳಲ್ಲಿ ಒಟ್ಟು ಶೇ 0.90ರಷ್ಟು ಹೆಚ್ಚಿಸಿದೆ. ರೆಪೊ ದರ ಇನ್ನೂ ಹೆಚ್ಚಾಗುವ ನಿರೀಕ್ಷೆ ಇದೆ.

ಸಾಲದ ಮೇಲಿನ ಬಡ್ಡಿ ದರವನ್ನು ರೆಪೊ ದರ ಹೆಚ್ಚಳವಾದ ತಕ್ಷಣ ಏರಿಕೆ ಮಾಡುವ ಬ್ಯಾಂಕ್‌ಗಳು ಠೇವಣಿಗಳ ಮೇಲಿನ ಬಡ್ಡಿ ದರವನ್ನು ಅಷ್ಟು ತುರ್ತಾಗಿ ಜಾಸ್ತಿ ಮಾಡುವುದಿಲ್ಲ ಎಂಬ ಆರೋಪಗಳು ಇವೆ.

ಚಾಲ್ತಿಯಲ್ಲಿರುವ ರೆಪೊ ದರಕ್ಕೆ ಅನುಗುಣವಾಗಿ ಬಡ್ಡಿ ನಿಗದಿ ಆಗುವ ನಿಶ್ಚಿತ ಠೇವಣಿಗಳು ಗ್ರಾಹಕರಿಗೆ ಲಭ್ಯವಾಗುತ್ತವೆ ಎಂದು ಯೆಸ್ ಬ್ಯಾಂಕ್ ಪ್ರಕಟಣೆ ತಿಳಿಸಿದೆ. ಈ ಸೌಲಭ್ಯ ಹೊಂದಿರುವ ಠೇವಣಿಗಳನ್ನು ಒಂದು ವರ್ಷದಿಂದ ಮೂರು ವರ್ಷದವರೆಗಿನ ಅವಧಿಗೆ ಇರಿಸಬಹುದು. 'ರೆಪೊ ದರ ಬದಲಾವಣೆ ಆದಂತೆಲ್ಲ ಠೇವಣಿಗೆ ನೀಡುವ ಬಡ್ಡಿ ದರ ತಾನಾಗಿಯೇ ಬದಲಾಗುತ್ತದೆ' ಎಂದು ಯೆಸ್ ಬ್ಯಾಂಕ್ ಸಿಇಒ ಪ್ರಶಾಂತ್ ಕುಮಾರ್ ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560

Jerry : 9731810277 | Tanveer : 9886213331

Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

5th YEAR REMEMBRANCE

Dr. Mrs. M.P. SHREE

DOB: 16.02.1954 • DOD: 22.06.2017

Retd. Prof. (Plant Pathology), Dept. of Sericulture & Life Sciences, Bangalore University, Bangalore - 54.

Remembering an amazing woman whose life was a blessing & memory is a treasure. You will always be loved beyond words & missed beyond measure.

H.A. Hareesha & H.Pramodini: 97403 34325

ಎಂಎಫ್: ವಿದೇಶಿ ಕಂಪನಿಗಳಲ್ಲಿ ಹೂಡಿಕೆಗೆ ಅವಕಾಶ

ಮುಖ್ಯಾಂಶಗಳು

- ವಿದೇಶಿ ಕಂಪನಿಗಳಲ್ಲಿ ಸ್ಥಗಿತವಾಗಿದ್ದ ಹೂಡಿಕೆ
- ಮತ್ತೆ ಹೂಡಿಕೆಗೆ ಅವಕಾಶ ಕಲ್ಪಿಸಿದ ಎಡೆಲ್ವೈಸ್
- ಹೂಡಿಕೆಗೆ 7 ಬಿಲಿಯನ್ ಡಾಲರ್ ಮಿತಿ

ನವದೆಹಲಿ (ಪಿಟಿಐ): ಮ್ಯೂಚುವಲ್ ಫಂಡ್ ಕಂಪನಿಗಳಿಗೆ ವಿದೇಶಿ ಷೇರುಗಳಲ್ಲಿ ಮತ್ತೆ ಹೂಡಿಕೆ ಮಾಡಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಅನುಮತಿ ನೀಡಿದೆ. ಆದರೆ, ಮ್ಯೂಚುವಲ್ ಫಂಡ್ ಕಂಪನಿಗಳು ಮಾಡುವ ಒಟ್ಟು ಹೂಡಿಕೆ ಮೊತ್ತವು 7 ಬಿಲಿಯನ್ ಅಮೆರಿಕನ್ ಡಾಲರ್ (ಅಂದಾಜು ₹ 54 ಸಾವಿರ ಕೋಟಿ) ಮೀರುವಂತಿಲ್ಲ.

ಜಾಗತಿಕ ಷೇರು ಮಾರುಕಟ್ಟೆಗಳಲ್ಲಿ ಈಚಿನ ದಿನಗಳಲ್ಲಿ ದೊಡ್ಡ ಪ್ರಮಾಣದ ಕುಸಿತ ಕಂಡುಬಂದು, ಅಂತರರಾಷ್ಟ್ರೀಯ ಮಟ್ಟದ ಕಂಪನಿಗಳ ಷೇರು ಮೌಲ್ಯ ಕಡಿಮೆ ಆದ ನಂತರದಲ್ಲಿ ಸೆಬಿ ಈ ನಿರ್ಧಾರ ಕೈಗೊಂಡಿದೆ.

ವಿದೇಶಿ ಷೇರುಗಳಲ್ಲಿ ಹೂಡಿಕೆ ಮಾಡುವ ಯೋಜನೆಗಳಿಗೆ ಹೊಸ ಹೂಡಿಕೆ ತೆಗೆದುಕೊಳ್ಳಬಾರದು ಎಂದು ಸೆಬಿ ಜನವರಿ ತಿಂಗಳಿನಲ್ಲಿ ಮ್ಯೂಚುವಲ್ ಫಂಡ್ ಕಂಪನಿಗಳಿಗೆ ಹೇಳಿತ್ತು. ಮ್ಯೂಚುಸವಲ್ ಫಂಡ್ ಉದ್ಯಮವು ವಿದೇಶಿ ಷೇರುಗಳಲ್ಲಿ ಹೂಡಿಕೆ ಮಾಡುವ ಮೊತ್ತವು 7 ಬಿಲಿಯನ್ ಅಮೆರಿಕನ್ ಡಾಲರ್‌ಗಿಂತ ಹೆಚ್ಚಾದ ಕಾರಣದಿಂದಾಗಿ ಸೆಬಿ ಈ ಸೂಚನೆ ನೀಡಿತ್ತು.

ಆದರೆ, ವಿದೇಶಿ ಷೇರುಪೇಟೆಗಳಲ್ಲಿ ಈಚೆಗೆ ಕಂಡುಬಂದ ಕುಸಿತದ ಪರಿಣಾಮವಾಗಿ ಮ್ಯೂಚುವಲ್ ಫಂಡ್ ಉದ್ಯಮದ ಎಲ್ಲ ಕಂಪನಿಗಳು ಮಾಡಿರುವ ಹೂಡಿಕೆಯ ಒಟ್ಟು ಮೌಲ್ಯವು 7 ಬಿಲಿಯನ್ ಅಮೆರಿಕನ್ ಡಾಲರ್‌ಗಿಂತ ಕಡಿಮೆ ಆಗಿದೆ.

ಅಂತರರಾಷ್ಟ್ರೀಯ ಷೇರುಪೇಟೆಗಳಲ್ಲಿ ಹೂಡಿಕೆ ಮಾಡುವ ಯೋಜನೆಗಳಲ್ಲಿ ಹೊಸ ಹೂಡಿಕೆಗೆ ಮಂಗಳವಾರದಿಂದ ಮತ್ತೆ ಅವಕಾಶ ಕಲ್ಪಿಸಲಾಗುವುದು ಎಂದು ಎಡೆಲ್ವೈಸ್ ಮ್ಯೂಚುವಲ್ ಫಂಡ್ ತಿಳಿಸಿದೆ. ಸೆಬಿ ಸೂಚನೆ ಬಂದ ನಂತರದಲ್ಲಿ ಪಿಪಿಎಫ್‌ಎಎಸ್ ಮ್ಯೂಚುವಲ್ ಫಂಡ್, ಡಿಎಸ್‌ಪಿ ಮ್ಯೂಚುವಲ್ ಫಂಡ್ ಹಾಗೂ ಎಡೆಲ್ವೈಸ್ ಮ್ಯೂಚುವಲ್ ಫಂಡ್ ಸೇರಿದಂತೆ ಹಲವು ಮ್ಯೂಚುವಲ್ ಫಂಡ್ ಕಂಪನಿಗಳು ವಿದೇಶಿ ಕಂಪನಿಗಳಲ್ಲಿ ಹೂಡಿಕೆ ಮಾಡುವ ಫಂಡ್‌ಗಳಿಗೆ ಹಣದ ಹರಿವು ಸ್ಥಗಿತಗೊಳಿಸಿದ್ದವು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400- 420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು -	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಭದ್ರಾವತಿ	
ರಾಶಿ	47799-49409
ಚಿತ್ರದುರ್ಗ	
ಆಪಿ	49239-49669
ಬೆಟ್ಟೆ	38219-38689
ಕೆಂಪುಗೋಟು	27600-28000
ರಾಶಿ	48729-49179
ಕಾರ್ಕಳ	
ಹೊಸತು	40000-45000
ಹಳತು	46000-54500
ಕುಂದಾಪುರ	
ಹೊಸಚಾಲಿ	39000-41500
ಪುತ್ತೂರು	
ಕೋಕ	11000-26000
ಹೊಸತು	30500-43000
ಸಾಗರ	
ಬಿಳಿಗೋಟು	25029-28599
ಚಾಲಿ	37149-37629
ಕೋಕ	28989-28989
ಕೆಂಪುಗೋಟು	27681-31219
ರಾಶಿ	45509-48559
ಸಿಪ್ಪೆಗೋಟು	19850-20699
ಶಿವಮೊಗ್ಗ	
ಬೆಟ್ಟೆ	49789-53293
ಗೊರಬಲು	17559-37669
ರಾಶಿ	44000-49500
ಸಿದ್ದಾಪುರ	
ಬಿಳಿಗೋಟು	25599-33399
ಚಾಲಿ	35399-39599
ಕೋಕ	21299-33012
ಕೆಂಪುಗೋಟು	31209-32499
ರಾಶಿ	43599-48799
ತಟ್ಟಿಬೆಟ್ಟೆ	41509-44699
ಶಿರಸಿ	
ಬೆಟ್ಟೆ	23719-43219
ಬಿಳಿಗೋಟು	23011-33299
ಚಾಲಿ	35399-40013
ರಾಶಿ	43699-48899
ತುಮಕೂರು	
ರಾಶಿ	48100-49800
ಬಿಳಿಗೋಟು	26899-33099
ಚಾಲಿ	35010-39964
ಕೋಕ	17899-28212
ಕೆಂಪುಗೋಟು	30599-33799
ರಾಶಿ	45040-51665
ತಟ್ಟಿಬೆಟ್ಟೆ	37619-43729

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	15900	16100	--
ಎಸಿ	8960	8600	8900	
ಆರ್‌ಪಿ	9750	9800	9975	ಲಂಡನ್
ಆರ್‌ಸಿ	4800	4500	4600	2064 ಡಾಲರ್ಸ್

ಸಂಕ್ಷಿಪ್ತ ಸುದ್ದಿ

ರಷ್ಯಾ ಪತ್ರಕರ್ತನ ನೊಬೆಲ್ ದಾಖಲೆ ₹808 ಕೋಟಿಗೆ ಮಾರಾಟ

ನ್ಯೂಯಾರ್ಕ್(ಎಪಿ): ರಷ್ಯಾ-ಉಕ್ರೇನ್ ನಡುವಿನ ಯುದ್ಧದಿಂದ ನಿರಾಶ್ರಿತರಾದ ಉಕ್ರೇನ್ ಮಕ್ಕಳ ನೆರವಿಗಾಗಿ ರಷ್ಯಾದ ಪತ್ರಕರ್ತ ಡಿಮಿಟ್ರಿ ಮುರಾಟೊವ್ ಅವರು ಹರಾಜಿಗೆ ಇಟ್ಟಿದ್ದ ತಮ್ಮ ಶಾಂತಿ ನೊಬೆಲ್ ಪ್ರಶಸ್ತಿಯು ಭರ್ಜರಿ ₹808 ಕೋಟಿ (103.5 ಮಿಲಿಯನ್ ಡಾಲರ್) ಮೊತ್ತಕ್ಕೆ ಬಿಕರಿಯಾಗಿದೆ. ಈ ಮೂಲಕ ಹಿಂದಿನ ದಾಖಲೆಗಳನ್ನು ಮುರಿದಿದೆ.

ಪ್ರಶಸ್ತಿ ಮಾರಾಟವನ್ನು ನಿರ್ವಹಿಸುವ ಪಾರಂಪರಿಕ ಹರಾಜಿನ ವಕ್ತಾರ ಈ ಮಾಹಿತಿ ನೀಡಿದ್ದಾರೆ.

ಇದಕ್ಕೂ ಮುಂಚೆ ಜೇಮ್ಸ್ ವಾಟ್ಸನ್ ಅವರು 1962ರಲ್ಲಿ ನೊಬೆಲ್ ಪುರಸ್ಕಾರಕ್ಕೆ ಪಾತ್ರರಾಗಿದ್ದರು. ಅವರು 2014ರಲ್ಲಿ ತಮ್ಮ ಪ್ರಶಸ್ತಿಯನ್ನು ಹರಾಜಿಗೆ ಇಟ್ಟಿದ್ದರು. ಅದು ₹36 ಕೋಟಿ (4.76 ಮಿಲಿಯನ್ ಡಾಲರ್)ಗೆ ಮಾರಾಟವಾಗಿತ್ತು. 3 ವರ್ಷಗಳ ಬಳಿಕ ಫ್ರಾನ್ಸಿಸ್ ಕ್ರಿಕ್ ಅವರ ನೊಬೆಲ್ ಪ್ರಶಸ್ತಿಯು ₹17 ಕೋಟಿಗೆ(2.27 ಮಿಲಿಯನ್ ಡಾಲರ್) ಮಾರಾಟವಾಗಿತ್ತು.

ವಿಶ್ವಸಂಸ್ಥೆ: ಭಾರತದ ಕಾಯಂ ಪ್ರತಿನಿಧಿಯಾಗಿ ರುಚಿರಾ ಕಾಂಬೋಜ್

ರುಚಿರಾ ಕಾಂಬೋಜ್/ ಟ್ವಿಟರ್ ಚಿತ್ರ

ನವದೆಹಲಿ: ಹಿರಿಯ ರಾಜತಾಂತ್ರಿಕ ಅಧಿಕಾರಿ ರುಚಿರಾ ಕಾಂಬೋಜ್ ಅವರನ್ನು ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿಯಾಗಿ ಮಂಗಳವಾರ ನೇಮಕ ಮಾಡಲಾಗಿದೆ.

ಭಾರತೀಯ ವಿದೇಶಾಂಗ ಸೇವೆಯ (ಐಎಫ್‌ಎಸ್) 1987ರ ಬ್ಯಾಚ್‌ನ ಅಧಿಕಾರಿಯಾಗಿರುವ ರುಚಿರಾ ಅವರು ಪ್ರಸ್ತುತ ಭೂತಾನ್‌ನಲ್ಲಿ ಭಾರತೀಯ ರಾಯಭಾರಿಯಾಗಿದ್ದಾರೆ.

ಚಿನ್ನದ ಪುನರ್ಬಳಕೆ: ಭಾರತಕ್ಕೆ 4ನೇ ಸ್ಥಾನ

ಬೆಂಗಳೂರು: ಚಿನ್ನವನ್ನು ಸಂಸ್ಕರಿಸಿ, ಪುನರ್ಬಳಕೆ ಮಾಡುವಲ್ಲಿ ಭಾರತವು ಜಗತ್ತಿನಲ್ಲಿ ನಾಲ್ಕನೆಯ ಸ್ಥಾನದಲ್ಲಿದೆ ಎಂದು ವಿಶ್ವ ಚಿನ್ನ ಸಮಿತಿಯು (ಡಬ್ಲ್ಯುಜಿಸಿ) ಹೇಳಿದೆ.

2013ರಿಂದ 2021ರ ನಡುವಿನ ಅವಧಿಯಲ್ಲಿ ದೇಶದ ಚಿನ್ನ ಸಂಸ್ಕರಣೆ ಸಾಮರ್ಥ್ಯವು ಶೇಕಡ 500ರಷ್ಟು ಹೆಚ್ಚಳ ಕಂಡಿದೆ ಎಂದು ಡಬ್ಲ್ಯುಜಿಸಿ ಬಿಡುಗಡೆ ಮಾಡಿರುವ 'ಚಿನ್ನದ ಸಂಸ್ಕರಣೆ ಹಾಗೂ ಪುನರ್ಬಳಕೆ' ವರದಿಯು ಹೇಳಿದೆ.

ಕಳೆದ ಐದು ವರ್ಷಗಳಲ್ಲಿ ದೇಶಕ್ಕೆ ಪೂರೈಕೆಯಾದ ಒಟ್ಟು ಚಿನ್ನದಲ್ಲಿ ಶೇಕಡ 11ರಷ್ಟು, 'ಹಳೆಯ ಚಿನ್ನ'ದ ಪುನರ್ಬಳಕೆಯಿಂದ ಸಿಕ್ಕಿದ್ದು ಎಂದು ವರದಿಯು ಹೇಳಿದೆ. 'ಚಿನ್ನದ ಸಂಸ್ಕರಣೆಯ ಕ್ಷೇತ್ರದಲ್ಲಿ ಸ್ಪರ್ಧಾತ್ಮಕ ಕೇಂದ್ರವಾಗಿ ಬೆಳವಣಿಗೆ ಕಾಣುವ ಸಾಮರ್ಥ್ಯವು ಭಾರತಕ್ಕೆ ಇದೆ' ಎಂದು ಡಬ್ಲ್ಯುಜಿಸಿ ಪ್ರಾದೇಶಿಕ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಪಿ.ಆರ್. ಸೋಮಸುಂದರಂ ಹೇಳಿದ್ದಾರೆ.

ಪಿಟಿಐ ವರದಿ (ಮುಂಬೈ): ಭಾರತವು 2021ರಲ್ಲಿ ಒಟ್ಟು 75 ಟನ್ ಚಿನ್ನವನ್ನು ಪುನರ್ಬಳಕೆ ಮಾಡಿಕೊಂಡಿದೆ. ಚಿನ್ನದ ಪುನರ್ಬಳಕೆಯಲ್ಲಿ ಚೀನಾ ಮೊದಲ ಸ್ಥಾನದಲ್ಲಿದೆ. ಇಟಲಿ ಮತ್ತು ಅಮೆರಿಕ ಕ್ರಮವಾಗಿ ಎರಡು ಹಾಗೂ ಮೂರನೆಯ ಸ್ಥಾನಗಳಲ್ಲಿ ಇವೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಂಗಸ್ವಾಮಿ ಸಿ.ಜೆ.

- **ಪ್ರಶ್ನೆ: ನಾನೊಬ್ಬ ನಿವೃತ್ತ ಅಧಿಕಾರಿ, 5 ಎಕರೆ ಕೃಷಿ ಜಮೀನು ಹೊಂದಿದ್ದೇನೆ. ಅದರಲ್ಲಿ ತೆಂಗು, ಅಡಿಕೆ ಮತ್ತು ಬಾಳೆ ಇದೆ. ಪ್ರತೀ ತಿಂಗಳು ಅಥವಾ ಎರಡು ತಿಂಗಳಿಗೊಮ್ಮೆ ಎಳನೀರು, ತೆಂಗಿನಕಾಯಿ, ಬಾಳೆ ಇತ್ಯಾದಿ ಮಾರುತ್ತೇನೆ. ಗರಿಷ್ಠ ₹ 10,000ತನಕ ಗಳಿಸುತ್ತೇನೆ. ಖರೀದಿಸುವವರು ಹಣವನ್ನು ಬ್ಯಾಂಕ್ ಖಾತೆಗೆ ಹಾಕುತ್ತಾರೆ ಅಥವಾ ಕೆಲವು ಸಲ ನಾನೇ ಅದನ್ನು ಜಮಾ ಮಾಡುತ್ತೇನೆ. ತೆರಿಗೆ ವಿವರ ಸಲ್ಲಿಸುವಾಗ ಈ ಮೊತ್ತವನ್ನು ಸಾಲವೆಂದು ತೋರಿಸಬಹುದು ಎಂದು ನನ್ನ ಸ್ನೇಹಿತರೊಬ್ಬರು ಹೇಳುತ್ತಿದ್ದಾರೆ. ಏನು ಮಾಡಲಿ?**

ಉತ್ತರ: ನೀವು ನಿವೃತ್ತ ಅಧಿಕಾರಿಯಾಗಿರುವುದರಿಂದ, ನಿಮಗೆ ಕೃಷಿ ಆದಾಯದೊಡನೆ ಪಿಂಚಣಿ ಆದಾಯವೂ ಬರುತ್ತಿರಬಹುದು. ಕೃಷಿ ಆದಾಯಕ್ಕೆ ಸಂಪೂರ್ಣ ತೆರಿಗೆ ವಿನಾಯಿತಿ ಇದೆ. ನಿಮ್ಮ ಒಟ್ಟು ಕೃಷಿ ಆದಾಯ ನಿಖರವಾಗಿ ಇಲ್ಲದಿದ್ದರೂ, ಇದಕ್ಕೆ ಸಂಪೂರ್ಣ ತೆರಿಗೆ ವಿನಾಯಿತಿ ಸಿಗುತ್ತದೆ.

ನೀವು ಕೃಷಿ ಉತ್ಪನ್ನಗಳ ಮಾರಾಟದ ಹಣವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡುವ ಬಗ್ಗೆ ಒಂದಿಷ್ಟು ಮಾಹಿತಿ. ನೀವು ಜಮಾ ಮಾಡುವ ಆದಾಯ, ನಿಮ್ಮದೇ ಕೃಷಿ ಉತ್ಪನ್ನದಿಂದ ನಿಮಗೆ ಬರುವ ನ್ಯಾಯಸಮ್ಮತ ಆದಾಯ. ಹೇಗಿದ್ದರೂ ಕೃಷಿ ಆದಾಯ ಯಾವುದೇ ಮಿತಿ ಇಲ್ಲದೆ ತೆರಿಗೆ ವಿನಾಯಿತಿ ಹೊಂದಿದೆ. ಹೀಗಾಗಿ ಮೇಲೆ ಉಲ್ಲೇಖಿಸಿದ ಮೊತ್ತದೊಳಗಿನ ಮಿತಿಯಲ್ಲಿ ನಗದು ಜಮಾ ಮಾಡುವುದರಲ್ಲಿ ತೊಂದರೆ ಇಲ್ಲ. ನೀವು ಯಾವುದೇ ಕಾರಣಕ್ಕೆ ವಿವರ ಸಲ್ಲಿಸುವುದೇ ಆಗಿದ್ದಲ್ಲಿ, ನಿಜವಾದ ಆದಾಯವನ್ನು, ಪಡೆದ ಸಾಲವೆಂದು ಘೋಷಿಸುವುದಕ್ಕಿಂತ ಆದಾಯದ ಸೂಕ್ತ ವಿವರಗಳನ್ನು ನಿಮ್ಮ ಮಾಹಿತಿಗೆ ಇರಿಸಿಕೊಂಡು, ವಿನಾಯಿತಿ ಇರುವ ಕೃಷಿ ಆದಾಯ ಎಂದೇ ಘೋಷಿಸುವುದು ಒಳ್ಳೆಯದು. ಇದು ನಿಮಗೆ ಮುಂದೆ ಯಾವುದೇ ಹೂಡಿಕೆಯ ಸಂದರ್ಭದಲ್ಲೂ ಆದಾಯವೆಂದೇ ಪರಿಗಣಿಸಲ್ಪಡುತ್ತದೆ.

ತೆರಿಗೆಗೊಳಪಡುವ ಕೃಷಿಯೇತರ ಆದಾಯವಿದ್ದಾಗ ನಿಖರವಾಗಿ ತೆರಿಗೆ ಲೆಕ್ಕ ಹಾಕಲು, ನಿಮ್ಮ ಎಲ್ಲಾ ಆದಾಯಗಳ ಮಾಹಿತಿಯೊಂದಿಗೆ ಸಮೀಪದ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ಚಂದ್ರಮೌಳಿ, ಮಧುಗಿರಿ

- **ಪ್ರಶ್ನೆ: ನಾನು ಹಿರಿಯ ನಾಗರಿಕ. ನಮ್ಮ ಜಿಲ್ಲೆಯ ಆರೇಳು ಬ್ಯಾಂಕ್‌ಗಳಲ್ಲಿ ಠೇವಣಿ ಹೊಂದಿದ್ದೇನೆ. ಇವು ಸಹಕಾರಿ ಬ್ಯಾಂಕ್‌ಗಳು. ಅಲ್ಲಿನ ಅಧಿಕಾರಿಗಳ ಪರಿಚಯ ಹಾಗೂ ಅವರು ಕೊಡುವ ತುಸು ಹೆಚ್ಚಿನ ಬಡ್ಡಿಯ ಕಾರಣದಿಂದಾಗಿ ಅಲ್ಲಿ ಠೇವಣಿ ಹೊಂದಿದ್ದೇನೆ. ಕೆಲವು ಬ್ಯಾಂಕ್‌ಗಳಲ್ಲಿ ₹ 5 ಲಕ್ಷಕ್ಕಿಂತ ಅಧಿಕ ಠೇವಣಿ ಇದೆ. ಇತ್ತೀಚಿನ ಒಂದೆರಡು ವರ್ಷಗಳಲ್ಲಿ ಕೆಲವು ಸಹಕಾರಿ ಬ್ಯಾಂಕ್‌ಗಳು ಭಾರೀ ತೊಂದರೆಗೆ ಒಳಗಾಗಿರುವುದರಿಂದ ಇಂತಹ ಸಂಸ್ಥೆಗಳಲ್ಲಿ ಹಣ ಇಡುವುದು ಅಪಾಯ ಎಂದು ತೋರುತ್ತದೆ. ಈ ಬಗ್ಗೆ ಸಲಹೆ ನೀಡಿ.**

ಉತ್ತರ: ಬ್ಯಾಂಕ್ ಠೇವಣಿದಾರರ ಹಣಕಾಸಿನ ಸುರಕ್ಷತೆಯ ಭಾಗವಾಗಿ ಸರ್ಕಾರ ಕಾನೂನು ರೂಪಿಸಿದೆ. ಹೀಗಾಗಿ ಬ್ಯಾಂಕ್ ಆರ್ಥಿಕ ಸಂಕಷ್ಟಕ್ಕೀಡಾಗಿ ಠೇವಣಿದಾರರ ಹಣ ಮರಳಿಸಲು ವಿಫಲವಾದರೆ 'ಠೇವಣಿ ವಿಮೆ ಮತ್ತು ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್' ಬ್ಯಾಂಕ್‌ಗಳಿಗೆ ನೆರವಾಗುತ್ತದೆ. ಗ್ರಾಹಕರು ₹ 5 ಲಕ್ಷದವರೆಗಿನ ಠೇವಣಿ ನಷ್ಟಕ್ಕೆ ಪರಿಹಾರ ಪಡೆಯಲು ವಿಮೆಯ ನೆರವು ಇರುತ್ತದೆ. ಈ ಸೌಲಭ್ಯಕ್ಕೆ ಅಗತ್ಯ ಪ್ರೀಮಿಯಂ ಮೊತ್ತವನ್ನು ಬ್ಯಾಂಕ್ ತನ್ನ ಕಡೆಯಿಂದ ಪಾವತಿ ಮಾಡುತ್ತದೆ. ಒಂದು ವೇಳೆ ₹ 5 ಲಕ್ಷಕ್ಕಿಂತ ಅಧಿಕ ಮೊತ್ತದ ಠೇವಣಿ ಇಟ್ಟಿದ್ದು ಆರ್ಥಿಕ ಬಿಕ್ಕಟ್ಟಿನಿಂದಾಗಿ ಬ್ಯಾಂಕಿಗೆ ಹಣ ಮರಳಿಸಲಾಗದ ಸಂದರ್ಭ ಬಂದಾಗ ಪರಿಹಾರ ಮೊತ್ತವನ್ನು ₹ 5 ಲಕ್ಷಕ್ಕೆ ಮೊಟಕು ಮಾಡಲಾಗುತ್ತದೆ. ಇದಕ್ಕಿಂತ ಹೆಚ್ಚುವರಿ ಠೇವಣಿ ಮೊತ್ತ ವಿಮಾ ವ್ಯಾಪ್ತಿಗೆ ಬರದ ಕಾರಣ, ವಿರಳ ಸಂದರ್ಭಗಳಲ್ಲಿ ಗ್ರಾಹಕನಿಗೆ ನಷ್ಟವಾಗುವ ಸಾಧ್ಯತೆಯೂ ಇದೆ.

ಬ್ಯಾಂಕಿನ ಸುರಕ್ಷತೆಯ ಬಗ್ಗೆ ಹೇಳುವುದಾದರೆ, ಪ್ರತಿ ಸಹಕಾರಿ ಬ್ಯಾಂಕಿನ ಗ್ರಾಹಕನೂ ಅದರ ಸದಸ್ಯನಾಗಿರುತ್ತಾನೆ. ಪ್ರತಿ ಸದಸ್ಯರಿಗೂ ಕೆಲವು ಕರ್ತವ್ಯಗಳು ಹಾಗೂ ಅಧಿಕಾರಗಳಿರುತ್ತವೆ. ಇವನ್ನು ಬ್ಯಾಂಕಿನ ಉಪನಿಯಮಗಳಲ್ಲಿ ಉಲ್ಲೇಖಿಸಿರುತ್ತಾರೆ. ಸರ್ವ ಸದಸ್ಯರ ಸಭೆಗೆ ಹಾಜರಾಗುವುದು, ಆರ್ಥಿಕ ವಿಚಾರದಲ್ಲಿನ ಸಂದೇಹಗಳನ್ನು ಅಧಿಕಾರಿಗಳಲ್ಲಿ ಅಥವಾ ಆಡಳಿತ ಮಂಡಳಿಯ ಪದಾಧಿಕಾರಿಗಳ ಮುಂದಿಟ್ಟು ಪರಿಹರಿಸಿಕೊಳ್ಳುವ ಜಾಣತನ ಎಲ್ಲ ಸದಸ್ಯರು, ಠೇವಣಿದಾರರಲ್ಲಿ ಇರಬೇಕು. ಪ್ರತಿ ವರ್ಷದ ಆರ್ಥಿಕ ವ್ಯವಹಾರ ತಖ್ತೆ ಹಾಗೂ ಲಾಭ-ನಷ್ಟ ವ್ಯವಹಾರ ಖಾತೆಯನ್ನು ಅರ್ಥೈಸುವುದು, ಅದರಲ್ಲಿ ನೀಡಲಾಗುವ ನಗದು ಮೀಸಲು ಅನುಪಾತದ ವಿವರ, ಶಾಸನಬದ್ಧ ದ್ರವ್ಯತೆ ಅನುಪಾತದ ವಿವರ ಇವನ್ನೆಲ್ಲ ತಿಳಿದುಕೊಳ್ಳುವ ಯತ್ನ ಮಾಡಿ. ಎನ್‌ಪಿಎ, ಆಡಳಿತ ಮಂಡಳಿಯ ನಿಷ್ಕ್ರಿಯತೆ ಇತ್ಯಾದಿಗಳೂ ಬ್ಯಾಂಕುಗಳನ್ನು ನಿಧಾನವಾಗಿ ಆರ್ಥಿಕ ಸಂಕಷ್ಟದತ್ತ ತಳ್ಳುತ್ತವೆ. ಹೀಗಾಗಿ ಗ್ರಾಹಕರು ಹಾಗೂ ಗ್ರಾಹಕರಾಗುವವರು ಈ ಬಗ್ಗೆ ಕನಿಷ್ಠ ಪರಿಶೀಲನೆಯನ್ನಾದರೂ ನಡೆಸಿ ವ್ಯವಹರಿಸುವುದು ಒಳಿತು.

ನೀವು ₹ 5 ಲಕ್ಷಕ್ಕಿಂತ ಅಧಿಕ ಠೇವಣಿಯನ್ನು ಯಾವುದಾದರೂ ಸಹಕಾರ ಬ್ಯಾಂಕ್‌ನಲ್ಲಿ ಈಗಾಗಲೇ ಹೊಂದಿದ್ದರೆ, ಮೇಲಿನ ಮಾಹಿತಿಯೊಂದಿಗೆ ಪುನಃ ಯೋಚನೆ ಮಾಡಬಹುದು. ಈ ಮೊತ್ತ ಪ್ರತಿ ಬ್ಯಾಂಕಿಗೆ ಸಂಬಂಧಿಸಿದ ಒಟ್ಟು ಮೊತ್ತವೇ ಹೊರತು ಪ್ರತಿ ಶಾಖೆಗೆ ಸಂಬಂಧಿಸಿದ ವಿಮಾ ಪರಿಹಾರ ಮೊತ್ತವಲ್ಲ. ಹೀಗಾಗಿ ಒಂದೇ ಬ್ಯಾಂಕಿನ ಅನೇಕ ಶಾಖೆಗಳಲ್ಲಿನ ಒಟ್ಟು ಮೊತ್ತ ₹ 5 ಲಕ್ಷದೊಳಗಿರುವಂತೆ ಕ್ರಮೇಣ ನೋಡಿಕೊಳ್ಳುವ ಬಗ್ಗೆ ಆಲೋಚಿಸಬಹುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.

ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.

ಇ-ಮೇಲ್: businessdesk@prajavani.co.in

ಮುಂಬೈ ಧಾರಣೆ

ಶೇಂಗಾ

21-6-2022

ಜಾವಾ 70/80(ಹೊಸ)	10750-10800
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1575 (1585)
ಒಂದು ವಾರದ ಡೆಲಿವರಿ	1570 (1580)
ಸೋಯಾ ಕಚ್ಚಾ	1380 (1320)
ಪಾಮ್ ವಾರದ ಡೆಲಿವರಿ	1298 (1333)
ಸೂರ್ಯಕಾಂತಿ ಎಣ್ಣೆ ಕಚ್ಚಾ	1680 (1700)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

50,700 (50,850)

ಬೆಳ್ಳಿ ಕೆ.ಜಿ 61,050 (60,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business Offers

Machinery & Tools

STONE CRUSHER Good Condition (12/10 Size) along with Conveyor Belts, Vibrator Jali. Contact: 9133361013

ವಾಹನ

Four Wheelers Selling

TATA

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

Wanted

ಬೇಕಾಗಿದ್ದಾರೆ. ಇಸ್ತ್ರೀ ಮಾಡುವ ಸಿಬ್ಬಂದಿ (ಅನುಭವದೊಂದಿಗೆ) ದಿನಕ್ಕೆ ರೂ. 800 ಸಂಬಳ ಮತ್ತು ಶಾಪ್ ಸಹಾಯಕರು ತಿಂಗಳಿಗೆ ರೂ. 13,000. ಜಯನಗರ ಮತ್ತು ಕೋರಮಂಗಲದಲ್ಲಿ ಡ್ರೈ ಕ್ಲೀನಿಂಗ್ ಶೋ ರೂಂಗಾಗಿ, ವಯಸ್ಸು 18 ವರ್ಷದಿಂದ 40 ವರ್ಷಗಳು ಮಾತ್ರ. ಬೆಂಗಳೂರಿನ ಜಯನಗರ ಮತ್ತು ಸುತ್ತಮುತ್ತಲಿನ ಜನರು ಮಾತ್ರ ಸಂಪರ್ಕಿಸಿ: 9880266007

STAFF WITH Basic Computer Knowledge Required for Reputed Rice Shop APMC Yeshwanthpur Bengaluru. Contact: 09972375009

ಸಾರ್ವಜನಿಕ ಪ್ರಕಟಣೆ

PUBLIC NOTICE

PENSHIBAO WANG PRIVATE LTD

Door No.3, 1st floor,PDS Towers Sanjeevini Nagar, Kodigehalli, Bangalore-560092
E:penshibao@dammanagro.com,
Ph: 080-23636907
Godown address : Door No.8, 247/2-2, Singanayakanahalli, Yelahanka, Bangalore-560064

In pursuance to the order no. 2900 (E) dated 24th October 2015 of Agriculture Govt. of India, Penshibao Wang Private Ltd hereby notifies that it intends to introduce 100% water soluble mixture of fertilizers like (1) 100% water soluble mixture N.P.K (19:19:19)(Damman Nano 19:19:19) (2) 100% water soluble complex Potassium Nitrate N.P.K (13:00:45) (Damman Nano 13:00:45), (3) 100% water soluble mixture Potassium Sulphate N.P.K (00:00:50) (Damman Nano 00:00:50) (4) 100% water soluble complex Mono Potassium Phosphate N.P.K (00:52:34) (Damman Nano N.P.K 00:52:34) (5) 100% water soluble complex Mono Ammonium Phosphate N.P.K (12:61:00) (Damman Nano N.P.K 12:61:00) (6) 100% water soluble mixture N.P.K (20:20:20) (Damman Nano N.P.K 20:20:20) (7) 100% water soluble complex Urea Phosphate N.P.K (17:44:00) (Damman Nano N.P.K 17:44:00) (8) 100% water soluble mixture N.P.K (13:40:13) (Damman Nano N.P.K 13:40:13) We will comply with terms and conditions as per the above notification of Government of India.

ಪ್ರವಾಸ

Travel

ವಿಜಯವಾಡ ಭದ್ರಾಚಲಂ ಪಂಚರಾಮ ಮಂದಿರಗಳು ಸಿಂಹಾಚಲಂ,ಅನ್ನಾವರಂ 07.08.2022 ರಿಂದ 10 ದಿನಗಳು. ರಾಮೇಶ್ವರಂ ಕನ್ಯಾಕುಮಾರಿ ಕುಟ್ರಾಲಂ ಫಾಲ್ಸ್ ಈಶಾಫೌಂಡೇಶನ್ 08.08.2022 ರಿಂದ 7 ದಿನಗಳು. ಶ್ರೀಶೈಲಂ,ಮಹಾನಂದಿ,ಅಹೋಬಲ ನವನರಸಿಂಹ 11.08.2022 ರಿಂದ 5 ದಿನಗಳು. ನೈಮೀಶಾರಣ್ಯ ಚಿತ್ರಕೂಟ,ಕಾಶಿ,ಗಯಾ 07.08.2022 ರಿಂದ 8 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

14.07.2022 ವಿಮಾನ/ ಬಸ್ಸಿನಲ್ಲಿ ಅಮರನಾಥ್ ವೈಷ್ಣೊದೇವಿ ಕಾಶ್ಮಿರ 43750/- 15.08.2022 22.08.2022 15.09.2022 8/11/35 ದಿನಗಳ ಕಾಶಿ,ಗಯಾ ಅಲಹಾಬಾದ್ ನೇಪಾಳ,ಮುಕ್ತಿನಾಥ್,ಅಯೋಧ್ಯ, ದೆಹಲಿ ರೂ.34750, 52750, 95000 05.09.2022 ಚಾರ್ ಧಾಮ್ ಯಾತ್ರೆ 09.11.2022 ದ್ವಾರಕಾ,ಸೋಮನಾಥ್ ಓಂಕಾರೇಶ್ವರ್ ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು.4 080-26574131 26573421 8317446683

26.06.2022 07.07.2022 ರಿಂದ 10/13/24 ದಿನಗಳ ಪುರಿಜಗನ್ನಾಥ್ ಕಾಶಿ.,ಗಯಾ, ಅಯೋಧ್ಯ,ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ, ವೈಷ್ಣೋದೇವಿ ಅಮೃತ್‌ಸರ್ ದೆಹಲಿ/ 07.08.2022 07.09.2022 ರಿಂದ 11/13 ದಿನಗಳ ಮುಕ್ತಿನಾಥ್, ಜನಕಪುರಿ,ನೇಪಾಳ ನೈಮೀಶಾರಣ್ಯ, ಗೋರಕ್‌ಪುರ್ ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289, 9448119290 9019301300

30.09.2022ರಿಂದ 34ದಿನಗಳು ವಿಮಾನ.AC ಬಸ್ಸಿನಲ್ಲಿ ಮತ್ತು ರೂಂ ಸೌಲಭ್ಯದೊಂದಿಗೆ ಚಾರಧಾಮ್ ಸಮೇತ ವೈಷ್ಣೋದೇವಿ,ಕಾಶ್ಮೀರ,ಶ್ರೀನಗರ, ಅಮೃತ್ಸರ,ಕಾಶಿ,ಗಯಾ,ನೇಪಾಳ, ಜೈಪುರ,ಹರಿದ್ವಾರ,ನವದೆಹಲಿ ಇತ್ಯಾದಿ.,ಯಾತ್ರೆಗಳಿಗೆ ಏಷ್ಯನ್ ಟ್ರಾವಲ್ ಲೈನ್ಸ್.#164/3 ಆರ್.ವಿ.ರಸ್ತೆ,ಬಸ್‌ಸ್ಟಾಪ್. ಎದುರು,ಬೆಂಗಳೂರು.04. 8105657052, 9480182865.

22.07.2022ರಿಂದ 12ದಿನಗಳು ವಿಮಾನ ಮತ್ತು AC.ಬಸ್ಸಿನಲ್ಲಿ ಅಮರನಾಥ್,ಕಾಶ್ಮೀರ, ವೈಷ್ಣೋದೇವಿ,ಇತ್ಯಾದಿ. 8ದಿನಗಳು ಕಾಶಿ,ಗಯಾ,ನೈಮಿಶಾರಣ್ಯ ಹಾಗೂ ದಕ್ಷಿಣಭಾರತ ಯಾತ್ರೆಗಳಿಗೆ ಕೂಡಲೇ ವಿಚಾರಿಸಿ: ಏಷ್ಯನ್ ಟ್ರಾವಲ್ ಲೈನ್ಸ್. #164/3.ಆರ್.ವಿ.ರಸ್ತೆ, ಬೆಂಗಳೂರು.04. 8105657052, 9480182865.

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 13/07/22 ಪೂರಿ ಜಗನ್ನಾಥ್, ಕೋನಾರ್ಕ್, ಚಂದ್ರಭಾಗ ಬೀಚ್, ಭುವನೇಶ್ವರ್. 12/07/22 ಮಧ್ಯಪ್ರದೇಶ 2 ಜ್ಯೋತಿರ್ಲಿಂಗ ದರ್ಶನ. 9964527782

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

WANTED EXPERIENCED Drivers for Cylinder Truck at Mangalore. Good Salary. Contact: 7829840605, 9591997012

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Manager

ಜೀವಾಂಶ್ ಫೈನಾನ್ಸ್ ಕಂಪನಿಗೆ ಕರ್ನಾಟಕದ ಜಿಲ್ಲೆ/ಗ್ರಾಮ/ಪಟ್ಟಣ ಹಂತಗಳಾದ್ಯಂತ ಏರಿಯಾ ಸೇಲ್ಸ್ ಮ್ಯಾನೇಜರ್ ಬೇಕಾಗಿದ್ದಾರೆ. 9997233486, 7060786090.

✓ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17800/- - 68000/-. 9538811104, 9538811223

General

✓ ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

✓ ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD

ಪ್ರಜಾವಾಣಿ

Classifieds EDUCATION SPECIAL

SPECIAL RATES FOR

- Admission Notice,
- Education Success
- Congratulation Ads

For More Details Contact:

Jerry Louis : 9731810277
Ravichandra : 9901641752
Vishal GM : 9845114560
Tanveer : 9886213331

Email : dhclassifieds@deccanherald.co.in

ಭವಿಷ್ಯ

Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಶ್ರೀರಾಘವೇಂದ್ರ ಕುಲಕರ್ಣಿ: ಜನ ವಶೀಕರಣ, ಲಕ್ಷ್ಮಿ ವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣ, ಇನ್ನಿತರ ಸಮಸ್ಯೆಗಳಿಗೆ ಕೆಲವೇ ಗಂಟೆಗಳಲ್ಲಿ ಫೋನಿನ ಮೂಲಕ ಪರಿಹಾರ: 9535759222

"ಶ್ರೀಭಗವತಿ ಜ್ಯೋತಿಷ್ಯಾಲಯ" ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಉದ್ಯೋಗ, ಪ್ರೇಮವಿಚಾರ, ಇನ್ನಿತರ ಸಮಸ್ಯೆಗಳಿಗೆ 100% ಪರಿಹಾರ. ಪಂಡಿತ್ ಪರಶುರಾಮಶಾಸ್ತ್ರೀ. 8618839027

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಇತರೆ

Dance/ Music Classes

KEYBOARD SINGING Film Acting Direction classes Online/Offline started at Nelamangala Bangalore Contact 9945874176

ರಣಜಿ ಫೈನಲ್ ಇಂದಿನಿಂದ •ಮಧ್ಯಪ್ರದೇಶ ಎದುರಾಳಿ •ಬೆಂಗಳೂರಿನಲ್ಲಿ 100ನೇ ಪಂದ್ಯ

42ನೇ ಪ್ರಶಸ್ತಿಯತ್ತ ಮುಂಬೈ ಚಿತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಖಲೆಯ 42ನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಮುಂಬೈ ತಂಡ, ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮಧ್ಯಪ್ರದೇಶದ ಸವಾಲನ್ನು ಎದುರಿಸಲಿದೆ.

ಈ ಋತುವಿನಲ್ಲಿ ದೇಸಿ ಕ್ರಿಕೆಟ್‌ನ 'ರಾಜ' ಯಾರಾಗುವರು ಎಂಬ ಪ್ರಶ್ನೆಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾಗುವ ಪಂದ್ಯ ಉತ್ತರ ನೀಡಲಿದೆ. ಬೆಂಗಳೂರಿನಲ್ಲಿ ನಡೆಯಲಿರುವ 100ನೇ ರಣಜಿ ಪಂದ್ಯ ಇದಾಗಿದ್ದು, ಕ್ರಿಕೆಟ್ ಪ್ರೇಮಿಗಳ ಕುತೂಹಲ ಗರಿಗೆದರಿದೆ.

ಈ ಋತುವಿನ ಟೂರ್ನಿಯಲ್ಲಿ ಆಟಗಾರರ ಪ್ರದರ್ಶನವನ್ನು ಗಮನಿಸಿದಾಗ, ಮುಂಬೈ ತಂಡವೇ ಗೆಲ್ಲುವ 'ಫೇವರಿಟ್' ಎನಿಸಿಕೊಂಡಿದೆ. ಆದರೆ ಪ್ರಬಲ ತಂಡಗಳನ್ನು ಮಣಿಸಿ ಫೈನಲ್ ಪ್ರವೇಶಿಸಿರುವ ಮಧ್ಯಪ್ರದೇಶ ಅಚ್ಚರಿಯ ಫಲಿತಾಂಶ ನೀಡುವ ತವಕದಲ್ಲಿದೆ.

ಪೃಥ್ವಿ ಶಾ ನೇತೃತ್ವದ ಮುಂಬೈ, ಸೆಮಿಫೈನಲ್‌ನಲ್ಲಿ ಉತ್ತರ ಪ್ರದೇಶ ವಿರುದ್ಧ ಮೊದಲ ಇನಿಂಗ್ಸ್ ಮುನ್ನಡೆ ಪಡೆದು ಫೈನಲ್‌ಗೆ ಲಗ್ಗೆಯಿಟ್ಟಿತ್ತು. ಮತ್ತೊಂದೆಡೆ ಆದಿತ್ಯ ಶ್ರೀವಾಸ್ತವ ನಾಯಕತ್ವದ ಮಧ್ಯಪ್ರದೇಶ, ಬಂಗಾಳ ಎದುರು 174 ರನ್‌ಗಳ ಜಯ ಸಾಧಿಸಿತ್ತು.

ರಾಷ್ಟ್ರೀಯ ತಂಡದ ಕದ ತಟ್ಟುತ್ತಿರುವ ಯುವ ಬ್ಯಾಟರ್‌ಗಳೇ ಮುಂಬೈ ತಂಡದ ಶಕ್ತಿ. ಪೃಥ್ವಿ ಶಾ, ಯಶಸ್ವಿ ಜೈಸ್ವಾಲ್, ಅರ್ಮಾನ್ ಜಾಫರ್, ಸರ್ಫರಾಜ್ ಖಾನ್ ಮತ್ತು ಸುವೇದ್ ಪಾರ್ಕರ್ ಅವರು ಮಧ್ಯಪ್ರದೇಶದ ಬೌಲರ್‌ಗಳ ಮೇಲೆ ಸವಾರಿ ಮಾಡಲು ಸಜ್ಜಾಗಿದ್ದಾರೆ.

ಕ್ವಾರ್ಟರ್ ಫೈನಲ್ ಮತ್ತು ಸೆಮಿಫೈನಲ್‌ನಲ್ಲಿ ತಾವು ಆಡಿದ ನಾಲ್ಕು ಇನಿಂಗ್ಸ್‌ಗಳಲ್ಲಿ ಮೂರು ಶತಕ ಗಳಿಸಿರುವ ಜೈಸ್ವಾಲ್ ಅದ್ಭುತ ಫಾರ್ಮ್‌ನಲ್ಲಿದ್ದಾರೆ. ಸರ್ಫರಾಜ್ ಮತ್ತು ಅರ್ಮಾನ್ ಕೂಡಾ ದೊಡ್ಡ ಇನಿಂಗ್ಸ್ ಕಟ್ಟುವ ತಾಕತ್ತು ಹೊಂದಿದ್ದಾರೆ.

ಎಡಗೈ ಸ್ಪಿನ್ನರ್ ಕುಮಾರ ಕಾರ್ತಿಕೇಯ ಅವರನ್ನು ಹೊರತುಪಡಿಸಿದರೆ, ಮಧ್ಯಪ್ರದೇಶ ತಂಡದಲ್ಲಿ ಪ್ರಭಾವಿ ಎನಿಸಬಲ್ಲ ಇನ್ನೊಬ್ಬ ಬೌಲರ್ ಇಲ್ಲ. ಕಾರ್ತಿಕೇಯ ಈ ಟೂರ್ನಿಯಲ್ಲಿ 27 ವಿಕೆಟ್‌ಗಳನ್ನು ಪಡೆದಿದ್ದಾರೆ. ಮುಂಬೈ ಬ್ಯಾಟರ್‌ಗಳನ್ನು ನಿಯಂತ್ರಿಸುವ ಬಲುದೊಡ್ಡ ಸವಾಲು ಇವರ ಮುಂದಿದೆ.

ಮಧ್ಯಪ್ರದೇಶ ತಂಡ ಬ್ಯಾಟಿಂಗ್‌ನಲ್ಲಿ ರಜತ್ ಪಾಟೀದಾರ್, ಹಿಮಾಂಶು ಮಂತ್ರಿ ಮತ್ತು ಅಕ್ಷತ್ ರಘುವಂಶಿ ಅವರನ್ನು ನೆಚ್ಚಿಕೊಂಡಿದೆ.

ಮುಂಬೈ 2016 ರಲ್ಲಿ ಕೊನೆಯ ಬಾರಿ ಚಾಂಪಿಯನ್ ಆಗಿತ್ತು. ಇದೀಗ ಆರು ವರ್ಷಗಳ ಬಿಡುವಿನ ಬಳಿಕ ಮತ್ತೆ ಟ್ರೋಫಿ ಎತ್ತಿಹಿಡಿಯುವ ಉತ್ಸಾಹದಲ್ಲಿದೆ. ಮಧ್ಯಪ್ರದೇಶ ತಂಡ ಒಮ್ಮೆ ಮಾತ್ರ (1998-99 ರಲ್ಲಿ) ಫೈನಲ್ ಪ್ರವೇಶಿಸಿತ್ತು. ಅಂದು ಕರ್ನಾಟಕದ ಎದುರು ಸೋತು 'ರನ್ನರ್ ಅಪ್' ಆಗಿತ್ತು.

ಕೋಚ್‌ಗಳ 'ಕಾದಾಟ': ಈ ಪಂದ್ಯ ಮುಂಬೈ ತಂಡದ ಕೋಚ್ ಅಮೋಲ್ ಮಜುಂದಾರ್ ಮತ್ತು ಮಧ್ಯಪ್ರದೇಶ ತಂಡದ ಕೋಚ್ ಚಂದ್ರಕಾಂತ್ ಪಂಡಿತ್ ನಡುವಿನ 'ಪೈಪೋಟಿ'ಯಿಂದಲೂ ಗಮನ ಸೆಳೆದಿದೆ.

ಮಜುಂದಾರ್ ಮತ್ತು ಚಂದ್ರಕಾಂತ್ ಇಬ್ಬರೂ ರಮಾಕಾಂತ ಅಚ್ರೇಕರ್ ಅವರ ಮಾರ್ಗದರ್ಶನದಲ್ಲಿ ಪಳಗಿದವರು. ಚಂದ್ರಕಾಂತ್ ಮುಂಬೈ ಪರ ಆಡಿದ್ದರಲ್ಲದೆ, ಆ ತಂಡಕ್ಕೆ ಕೋಚಿಂಗ್ ಮಾಡಿದ್ದರು. ಅವರ ಮಾರ್ಗದರ್ಶನದಲ್ಲಿ ಮುಂಬೈ ತಂಡ ರಣಜಿ ಟ್ರೋಫಿ ಕೂಡಾ ಜಯಿಸಿತ್ತು.

ಉಚಿತ ಪ್ರವೇಶ: ಈ ಪಂದ್ಯಕ್ಕೆ ಕ್ರಿಕೆಟ್ ಪ್ರೇಮಿಗಳಿಗೆ ಕ್ರೀಡಾಂಗಣಕ್ಕೆ ಉಚಿತ ಪ್ರವೇಶ ಕಲ್ಪಿಸಲಾಗಿದೆ. ಪ್ರೇಕ್ಷಕರು 'ಪಿ3' ಸ್ಟ್ಯಾಂಡ್‌ನಲ್ಲಿ ಕುಳಿತು ಪಂದ್ಯ ವೀಕ್ಷಿಸಬಹುದು.

ಬೆಂಗಳೂರಿನಲ್ಲಿ ನಾಲ್ಕನೇ ಫೈನಲ್

ರಣಜಿ ಟ್ರೋಫಿ ಟೂರ್ನಿಯ ಫೈನಲ್ ಪಂದ್ಯಕ್ಕೆ ಬೆಂಗಳೂರು ನಾಲ್ಕನೇ ಬಾರಿ ಆತಿಥ್ಯ ವಹಿಸಿದೆ. ಈ ಹಿಂದೆ 1979, 1998 ಮತ್ತು 1999ರ ಟೂರ್ನಿಯ ಫೈನಲ್ ಪಂದ್ಯಗಳು ಇಲ್ಲಿ ನಡೆದಿದ್ದವು. ಈ ಮೂರು ಫೈನಲ್‌ನಲ್ಲಿ ಕರ್ನಾಟಕ ತಂಡ ಕ್ರಮವಾಗಿ ದೆಹಲಿ, ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶ ಜತೆ ಪೈಪೋಟಿ ನಡೆಸಿತ್ತು. ಕರ್ನಾಟಕವನ್ನು ಹೊರತುಪಡಿಸಿ ಎರಡು ತಂಡಗಳು ಬೆಂಗಳೂರಿನಲ್ಲಿ ಫೈನಲ್ ಆಡುತ್ತಿರುವುದು ಇದೇ ಮೊದಲು

ರಣಜಿಯಲ್ಲಿ ಸಾಧನೆ

ತಂಡ	ಚಾಂಪಿಯನ್	ರನ್ನರ್
ಮುಂಬೈ	41	5
ಮಧ್ಯಪ್ರದೇಶ	0	1

ಬಲಾಬಲ

ಪಂದ್ಯ	14
ಮುಂಬೈಗೆಲುವು	6
ಡ್ರಾ	8

ಈ ಋತುವಿನಲ್ಲಿ ಆಟಗಾರರ ಸಾಧನೆ

ಮುಂಬೈ	
ಸರ್ಫರಾಜ್ ಖಾನ್	803 ರನ್
ಶ್ರೇಷ್ಠ	275 ರನ್
ಶಮ್ಸ್ ಮುಲಾನಿ	37 ವಿಕೆಟ್
ಮಧ್ಯಪ್ರದೇಶ	
ರಜತ್ ಪಾಟೀದಾರ್	506 ರನ್
ಶ್ರೇಷ್ಠ	142 ರನ್
ಕುಮಾರ್ ಕಾರ್ತಿಕೇಯ	27 ವಿಕೆಟ್

ಮುಂಬೈ ತಂಡದ ನಾಯಕ ಪೃಥ್ವಿ ಶಾ ಹಾಗೂ ಮಧ್ಯಪ್ರದೇಶ ತಂಡದ ನಾಯಕ ಆದಿತ್ಯ ಶ್ರೀವಾಸ್ತವ

ಸ್ಥಳ: ಚಿನ್ನಸ್ವಾಮಿ ಕ್ರೀಡಾಂಗಣ
ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಸ್ಟಾರ್ ನೆಟ್‌ವರ್ಕ್

* ಅಂಕಿ–ಸಂಖ್ಯೆ: ಚನ್ನಗಿರಿ ಕೇಶವಮೂರ್ತಿ

ಸೈಕ್ಲಿಂಗ್: ರೊನಾಲ್ಡೊ ದಾಖಲೆ

ನವದೆಹಲಿ (ಪಿಟಿಐ): ವಿಶ್ವ ಜೂನಿಯರ್ ಚಾಂಪಿಯನ್ ಮತ್ತು ಏಷ್ಯನ್ ದಾಖಲೆ ಹೊಂದಿರುವ ರೊನಾಲ್ಡೊ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ರಾಷ್ಟ್ರೀಯ ದಾಖಲೆ ಮಾಡಿದರು.

ಬುಧವಾರ ನಡೆದ ಪುರುಷರ ಫ್ಲೈಯಿಂಗ್ 200 ಮೀ. ಟೈಮ್ ಟ್ರಯಲ್‌ನಲ್ಲಿ ಅವರು 10 ಸೆಕೆಂಡುಗಳಿಗಿಂತಲೂ ಕಡಿಮೆ ಸಮಯ ದಾಖಲಿಸಿದರು. 9.946 ಸೆ. ಸಮಯ ಕಂಡುಕೊಂಡು ತಮ್ಮದೇ ಹೆಸರಿನಲ್ಲಿದ್ದ ದಾಖಲೆ (10.168 ಸೆ.) ಉತ್ತಮಪಡಿಸಿಕೊಂಡರಲ್ಲದೆ, ಸ್ಪ್ರಿಂಟ್ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

ನಾಲ್ಕನೇ ದಿನ ಆರು ವಿಭಾಗಗಳಲ್ಲಿ ಫೈನಲ್ ನಡೆದರೂ ಭಾರತಕ್ಕೆ ಯಾವುದೇ ಪದಕ ದಕ್ಕಲಿಲ್ಲ. ಜೂನಿಯರ್ ವಿಭಾಗದ 7.5 ಕಿ.ಮೀ. ಸ್ಕ್ರ್ಯಾಚ್ ರೇಸ್‌ನಲ್ಲಿ ಹಿಮಾಂಶಿ ಸಿಂಗ್ 2ನೇ ಸ್ಥಾನ ಗಳಿಸಿದರಾದರೂ, ಅಪಾಯಕಾರಿ ರೀತಿಯಲ್ಲಿ ಸೈಕ್ಲಿಂಗ್ ಮಾಡಿದ್ದಕ್ಕೆ ಅವರನ್ನು ಅನರ್ಹಗೊಳಿಸಲಾಯಿತು. 2 ಚಿನ್ನ, 5 ಬೆಳ್ಳಿ ಮತ್ತು 13 ಕಂಚಿನ ಪದಕ ಗೆದ್ದು ಭಾರತ 5ನೇ ಸ್ಥಾನದಲ್ಲಿದೆ.

ಈಜು: ಮಿಲಾಕ್‌ಗೆ ದಾಖಲೆ ಚಿನ್ನ

ಬುಡಾಪೆಸ್ಟ್ (ರಾಯಿಟರ್ಸ್): ಹಂಗರಿಯ ಕ್ರಿಸ್ಟಾಫ್ ಮಿಲಾಕ್ ಇಲ್ಲಿ ನಡೆಯುತ್ತಿರುವ ವಿಶ್ವ ಈಜು ಚಾಂಪಿಯನ್‌ಷಿಪ್‌ನ 200 ಮೀಟರ್ಸ್ ಬಟರ್‌ಫ್ಲೈನಲ್ಲಿ ವಿಶ್ವದಾಖಲೆಯೊಂದಿಗೆ ಚಿನ್ನ ಗೆದ್ದರು.

ಮಂಗಳವಾರ ಸ್ಪರ್ಧೆಯಲ್ಲಿ ಅವರು 1 ನಿ. 50.34 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಇದರೊಂದಿಗೆ 2019ರಲ್ಲಿ ಗ್ವಾಂಗ್‌ಜುನಲ್ಲಿ ತಾವೇ ನಿರ್ಮಿಸಿದ್ದ ದಾಖಲೆಯನ್ನು 0.39 ಸೆಕೆಂಡುಗಳಿಂದ ಉತ್ತಮಪಡಿಸಿಕೊಂಡರು.

ಬೆನ್ ಸ್ಟೋಕ್ಸ್ ಗೈರು

ಲಂಡನ್ (ಎಎಫ್‌ಪಿ): ಭಾರತ ವಿರುದ್ಧದ ಟೆಸ್ಟ್ ಪಂದ್ಯಕ್ಕೆ ಸಜ್ಜಾಗುತ್ತಿರುವ ಇಂಗ್ಲೆಂಡ್ ತಂಡದ ಆಟಗಾರರು ಮಂಗಳವಾರ ಮೊದಲ ಅಭ್ಯಾಸದ ಅವಧಿಯಲ್ಲಿ ಪಾಲ್ಗೊಂಡರು. ನಾಯಕ ಬೆನ್ ಸ್ಟೋಕ್ಸ್ ಅನಾರೋಗ್ಯದ ಕಾರಣ ಅಭ್ಯಾಸ ನಡೆಸಲಿಲ್ಲ.

'ಸ್ಟೋಕ್ಸ್ ತಾಲೀಮು ನಡೆಸಲಿಲ್ಲ. ಸ್ಟೋಕ್ಸ್ ಕೋವಿಡ್ ಪರೀಕ್ಷೆ ನೆಗೆಟಿವ್ ಬಂದಿದೆ. ಆದರೂ ಮುನ್ನೆಚ್ಚರಿಕೆ ಕ್ರಮವಾಗಿ ಪ್ರತ್ಯೇಕವಾಗಿ ಇರುವಂತೆ ಅವರಿಗೆ ಸೂಚಿಸಲಾಗಿದೆ' ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಸಂಸ್ಥೆಯ ವಕ್ತಾರರೊಬ್ಬರು ತಿಳಿಸಿದರು.

ಫುಟ್‌ಬಾಲ್: ಜ್ಯೋತಿಷಿ ನೇಮಕ?

ಕೋಲ್ಕತ್ತ (ಪಿಟಿಐ): ಇತ್ತೀಚೆಗೆ ನಡೆದ ಎಎಫ್‌ಸಿ ಏಷ್ಯನ್ ಕಪ್ ಫುಟ್‌ಬಾಲ್ ಅರ್ಹತಾ ಟೂರ್ನಿಯಲ್ಲಿ ಭಾರತ ತಂಡದ ಅದೃಷ್ಟ ಖುಲಾಯಿಸಲು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಜ್ಯೋತಿಷಿಯೊಬ್ಬನನ್ನು ನೇಮಕ ಮಾಡಿತ್ತೇ?

ತಂಡದ ಒಳಗಿನ ಮೂಲಗಳು 'ಹೌದು' ಎಂದು ಹೇಳುತ್ತಿದೆ. ಆಟಗಾರರಿಗೆ 'ಪ್ರೇರಣೆ' ನೀಡಲು ಜ್ಯೋತಿಷಿಯನ್ನು ನೇಮಕ ಮಾಡಲಾಗಿತ್ತು. ಇದಕ್ಕಾಗಿ ಏಜೆನ್ಸಿಯೊಂದಕ್ಕೆ ಎಐಎಫ್‌ಎಫ್ ₹ 16 ಲಕ್ಷ ಪಾವತಿಸಿದೆ ಎಂದು ಮೂಲಗಳು ತಿಳಿಸಿವೆ.

ಫೆಡರೇಷನ್‌ನ ಈ ನಡೆಯನ್ನು ಭಾರತ ತಂಡದ ಮಾಜಿ ಗೋಲ್‌ಕೀಪರ್ ತನ್ಮಯ್ ಬೋಸ್ ಅವರು ಟೀಕಿಸಿದ್ದು, 'ಇದು ಹಾಸ್ಯಾಸ್ಪದ. ಈ ವಿಷಯದಲ್ಲಿ ಎಐಎಫ್‌ಎಫ್ ಎಲ್ಲರೆದುರು ನಗೆಪಾಟಲಿಗೆ ಈಡಾಗಿದೆ' ಎಂದಿದ್ದಾರೆ.

ಸುನಿಲ್ ಚೆಟ್ರಿ ನೇತೃತ್ವದ ತಂಡ ಅರ್ಹತಾ ಟೂರ್ನಿಯಲ್ಲಿ ತನ್ನ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಏಷ್ಯನ್ ಕಪ್‌ಗೆ ಅರ್ಹತೆ ಪಡೆದಿತ್ತು.

100 ಮೀ. ಓಟ ಗೆದ್ದ ಶತಾಯುಷಿ ರಾಮ್‌ಬಾಯಿ!

ನವದೆಹಲಿ (ಪಿಟಿಐ): 105 ವರ್ಷದ ರಾಮ್‌ಬಾಯಿ ಅವರು ವಡೋದರದಲ್ಲಿ ನಡೆದ ರಾಷ್ಟ್ರೀಯ ಮುಕ್ತ ಮಾಸ್ಟರ್ಸ್ ಅಥ್ಲೆಟಿಕ್ಸ್‌ನಲ್ಲಿ 100 ಮೀ. ಓಟದಲ್ಲಿ ಚಿನ್ನ ಗೆದ್ದು ಹೊಸ ದಾಖಲೆ ಮಾಡಿದರು.

ಹರಿಯಾಣದ ಚರ್ಕಿ ದಾದ್ರಿ ಜಿಲ್ಲೆಯ ಕದ್ಮಾ ಗ್ರಾಮದ ಅವರು ಮಹಿಳೆಯರ ವಿಭಾಗದ ಸ್ಪರ್ಧೆಯಲ್ಲಿ 45.40 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಮಾನ್ ಕೌರ್ ಅವರು 2017 ರಲ್ಲಿ ನಡೆದಿದ್ದ ಕೂಟದಲ್ಲಿ 100 ಮೀ. ಓಟವನ್ನು 74 ಸೆಕೆಂಡುಗಳಲ್ಲಿ ಕ್ರಮಿಸಿ, ಈ ಸಾಧನೆ ಮಾಡಿದ ಅತ್ಯಂತ ಹಿರಿಯ ಸ್ಪರ್ಧಿ ಎನಿಸಿಕೊಂಡಿದ್ದರು. ಆ ದಾಖಲೆಯನ್ನು ರಾಮ್‌ಬಾಯಿ ಮುರಿದರು.

200 ಮೀ. ಓಟದಲ್ಲೂ ಸ್ಪರ್ಧಿಸಿದ ಅವರು 1 ನಿ. 52.17 ಸೆಕೆಂಡುಗಳಲ್ಲಿ ಕ್ರಮಿಸಿ 'ಗೋಲ್ಡನ್ ಡಬಲ್' ಸಾಧನೆ ಮಾಡಿದರು. 'ಈ ಅಪೂರ್ವ ಸಾಧನೆ ವಿಶೇಷ ಅನುಭವ ನೀಡಿದೆ. ತುಂಬಾ ಸಂತಸವಾಗುತ್ತಿದೆ' ಎಂದು ರಾಮ್‌ಬಾಯಿ ಪ್ರತಿಕ್ರಿಯಿಸಿದ್ದಾರೆ.

ಪವರ್‌ಲಿಫ್ಟಿಂಗ್: ಏಷ್ಯನ್ ಪ್ಯಾರಾ ಗೇಮ್ಸ್‌ಗೆ ಅಶೋಕ್, ಸುಧೀರ್

ನವದೆಹಲಿ (ಪಿಟಿಐ): ಭಾರತದ ಪ್ಯಾರಾ ಪವರ್‌ಲಿಫ್ಟರ್‌ಗಳಾದ ಅಶೋಕ್ ಮತ್ತು ಸುಧೀರ್ ಅವರು ಹಾಂಗ್‌ಜೌನಲ್ಲಿ ನಡೆಯಲಿರುವ ಏಷ್ಯನ್ ಪ್ಯಾರಾ ಕೂಟಕ್ಕೆ ಅರ್ಹತೆ ಪಡೆದುಕೊಂಡರು.

ದಕ್ಷಿಣ ಕೊರಿಯಾದಲ್ಲಿ ಮಂಗಳವಾರ ಕೊನೆಗೊಂಡ ಏಷ್ಯಾ-ಒಸೀನಿಯಾ ಓಪನ್ ಪವರ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಅವರು ಪದಕ ಗೆದ್ದು ಈ ಸಾಧನೆ ಮಾಡಿದರು.

ಅಶೋಕ್, ಪುರುಷರ 65 ಕೆ.ಜಿ ವಿಭಾಗದಲ್ಲಿ ಚಿನ್ನ ಗೆದ್ದರೆ, ಸುಧೀರ್ 88 ಕೆ.ಜಿ ವಿಭಾಗದಲ್ಲಿ ಕಂಚು ಜಯಿಸಿದರು. ಭಾರತದ ಪರಮ್‌ಜೀತ್ ಕುಮಾರ್ (ಪುರುಷರ 49 ಕೆ.ಜಿ) ಮತ್ತು ಸಕೀನಾ ಖಾತೂನ್ (ಮಹಿಳೆಯರ 45 ಕೆ.ಜಿ) ಅವರು ಈ ಮೊದಲೇ ಏಷ್ಯನ್ ಪ್ಯಾರಾ ಕೂಟಕ್ಕೆ ಅರ್ಹತೆ ಪಡೆದುಕೊಂಡಿದ್ದರು.

ಏಷ್ಯಾ-ಒಸೀನಿಯಾ ಓಪನ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಆರು ಚಿನ್ನ ಸೇರಿದಂತೆ ಒಟ್ಟು 22 ಪದಕಗಳನ್ನು ಗೆದ್ದುಕೊಂಡಿದೆ.

'ಅಂತರರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ನಮ್ಮ ಪವರ್‌ಲಿಫ್ಟರ್‌ಗಳ ಅತ್ಯುತ್ತಮ ಸಾಧನೆ ಇದಾಗಿದೆ' ಎಂದು ಭಾರತ ತಂಡದ ಕೋಚ್ ಜೆ.ಪಿ.ಸಿಂಗ್ ಪ್ರತಿಕ್ರಿಯಿಸಿದ್ದಾರೆ.

ಸ್ಕ್ವಾಷ್: ಬೀಜಿಂಗ್ ಬೈಟ್ಸ್‌ಗೆ ಜಯ

ಬೆಂಗಳೂರು: ಬೀಜಿಂಗ್ ಬೈಟ್ಸ್ ಮತ್ತು ಟೀಮ್ ಟೆರಸ್ಟ್ರಿಯಲ್ಸ್ ತಂಡಗಳು ಬೆಂಗಳೂರು ಸ್ಕ್ವಾಷ್ ಲೀಗ್‌ನ ಎರಡನೇ ದಿನ ಗೆಲುವು ಸಾಧಿಸಿದವು.

ಇಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮಂಗಳವಾರ ಬೀಜಿಂಗ್ ಬೈಟ್ಸ್ 5-2ರಿಂದ ಟೀಮ್ ಫಿಯರ್‌ಲೆಸ್ ಎದುರು, ಟೀಮ್ ಟೆರಸ್ಟ್ರಿಯಲ್ಸ್ ಇಷ್ಟೇ ಅಂತರದಲ್ಲಿ ಕೋರ್ಟ್ ರೈಡರ್ಸ್ ವಿರುದ್ಧ ಗೆದ್ದವು.

ಫುಟ್‌ಬಾಲ್: ಸಲಹಾ ಸಮಿತಿ ನೇಮಕ

ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ನಿನ (ಎಐಎಫ್‌ಎಫ್) ಆಡಳಿತ ನೋಡಿಕೊಳ್ಳಲು 12 ಸದಸ್ಯರ ಸಲಹಾ ಸಮಿತಿಯನ್ನು ನೇಮಿಸಲಾಗಿದೆ.

ರಾಷ್ಟ್ರೀಯ ಕ್ರೀಡಾ ನೀತಿಯನ್ನು ಜಾರಿಗೊಳಿಸದೇ ಇದ್ದುದ್ದಕ್ಕೆ ಪ್ರಫುಲ್ ಪಟೇಲ್ ಅವರನ್ನು ಎಐಎಫ್‌ಎಫ್ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿ, ಆಡಳಿತ ಸಮಿತಿಯನ್ನು (ಸಿಒಎ) ಸುಪ್ರೀಂ ಕೋರ್ಟ್ ಇತ್ತೀಚೆಗೆ ನೇಮಕ ಮಾಡಿತ್ತು.

ಇದೀಗ ಸಿಒಎ, ಸಂಸ್ಥೆಯ ದೈನಂದಿನ ವ್ಯವಹಾರ ನೋಡಿಕೊಳ್ಳಲು ಅನುಕೂಲವಾಗುವಂತೆ ಸಲಹಾ ಸಮಿತಿಯನ್ನು ನೇಮಕ ಮಾಡಿದೆ. ಈ ಹಿಂದೆ ಐ–ಲೀಗ್ ತಂಡದ ಮಾಲೀಕರು ಆಗಿದ್ದ, ಉದ್ಯಮಿ ರಂಜಿತ್ ಬಜಾಜ್ ಅವರನ್ನು ಸಮಿತಿಯ ಮುಖ್ಯಸ್ಥರನ್ನಾಗಿ ಮಾಡಲಾಗಿದೆ.

ಸವಿತಾ ಪೂನಿಯಾ ನೇತೃತ್ವ

ವಿಶ್ವಕಪ್ ಹಾಕಿ: ಭಾರತ ತಂಡದಲ್ಲಿ ರಾಣಿಗೆ ಇಲ್ಲ ಸ್ಥಾನ

ನವದೆಹಲಿ (ಪಿಟಿಐ): ಗೋಲ್‌ಕೀಪರ್ ಸವಿತಾ ಪೂನಿಯಾ ಅವರು ಮುಂದಿನ ತಿಂಗಳು ನಡೆಯಲಿರುವ ಎಫ್‌ಐಎಚ್ ಮಹಿಳಾ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಪಾಲ್ಗೊಳ್ಳುವ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ರಾಣಿ ರಾಂಪಾಲ್

ನೆದರ್ಲೆಂಡ್ಸ್ ಮತ್ತು ಸ್ಪೇನ್ ಜಂಟಿ ಆತಿಥ್ಯದಲ್ಲಿ ಜುಲೈ 1 ರಿಂದ 17ರ ವರೆಗೆ ನಡೆಯುವ ಟೂರ್ನಿಗೆ 18 ಸದಸ್ಯರ ಭಾರತ ತಂಡವನ್ನು ಹಾಕಿ ಇಂಡಿಯಾ (ಎಚ್‌ಐ) ಮಂಗಳವಾರ ಪ್ರಕಟಿಸಿತು. ಸ್ಟ್ರೈಕರ್ ಹಾಗೂ ಮಾಜಿ ನಾಯಕಿ ರಾಣಿ ರಾಂಪಾಲ್ ಅವರನ್ನು ಕೈಬಿಡಲಾಗಿದೆ.

ರಾಣಿ ಅವರ ನೇತೃತ್ವದಲ್ಲಿ ಭಾರತ ತಂಡ 2020ರ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದು ಐತಿಹಾಸಿಕ ಸಾಧನೆ ಮಾಡಿತ್ತು. ಒಲಿಂಪಿಕ್ಸ್ ಬಳಿಕ ಗಾಯದ ಕಾರಣ ಕೆಲವು ಸಮಯ ತಂಡದಿಂದ ದೂರವುಳಿದಿದ್ದ ಅವರನ್ನು ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್ ವಿರುದ್ಧದ ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಗೆ ತಂಡಕ್ಕೆ ಸೇರಿಸಿಕೊಳ್ಳಲಾಗಿತ್ತು.

ತಂಡದಲ್ಲಿದ್ದರೂ ಪ್ರೊ ಲೀಗ್‌ನ ಮೊದಲ ನಾಲ್ಕು ಪಂದ್ಯದಲ್ಲಿ ಕಣಕ್ಕಿಳಿದಿರಲಿಲ್ಲ. ಇದರಿಂದ ಅವರ ಫಿಟ್‌ನೆಸ್ ಬಗ್ಗೆ ಅನುಮಾನಗಳು ಮೂಡಿದ್ದವು. ಇನ್ನೂ ಪೂರ್ಣ ಫಿಟ್‌ನೆಸ್ ಪಡೆಯದಿರುವುದರಿಂದ ಅವರಿಗೆ ವಿಶ್ವಕಪ್ ತಂಡದಲ್ಲಿ ಅವಕಾಶ ತಪ್ಪಿದೆ.

ಭಾರತ ತಂಡವು ಇಂಗ್ಲೆಂಡ್, ನ್ಯೂಜಿಲೆಂಡ್ ಮತ್ತು ಚೀನಾ ಜೊತೆ 'ಬಿ' ಗುಂಪಿನಲ್ಲಿ ಸ್ಥಾನ ಪಡೆದುಕೊಂಡಿದೆ. ಜುಲೈ 3 ರಂದು ಇಂಗ್ಲೆಂಡ್ ವಿರುದ್ಧ ಮೊದಲ ಪಂದ್ಯ ಆಡಲಿದೆ.

ತಂಡ ಹೀಗಿದೆ: ಗೋಲ್‌ಕೀಪರ್ಸ್: ಸವಿತಾ ಪೂನಿಯಾ, ಬಿಚು ದೇವಿ. **ಡಿಫೆಂಡರ್ಸ್:** ದೀಪ್ ಗ್ರೇಸ್ ಎಕ್ಕಾ, ಗುರ್ಜಿತ್ ಕೌರ್, ನಿಕ್ಕಿ ಪ್ರಧಾನ್, ಉದಿತಾ. **ಮಿಡ್‌ಫೀಲ್ಡರ್ಸ್:** ನಿಶಾ, ಸುಶೀಲಾ ಚಾನು, ಮೋನಿಕಾ, ನೇಹಾ, ಜ್ಯೋತಿ, ನವ್‌ಜೋತ್ ಕೌರ್, ಸೋನಿಕಾ, ಸಲೀಮಾ ತೇತೆ. **ಫಾರ್ವರ್ಡ್ಸ್:** ವಂದನಾ ಕಟಾರಿಯಾ, ಲಾಲ್‌ರೆಮ್ಸಿಯಾಮಿ, ನವನೀತ್ ಕೌರ್, ಶರ್ಮಿಳಾ ದೇವಿ. **ಕಾಯ್ದಿರಿಸಿದ ಆಟಗಾರ್ತಿಯರು:** ಅಕ್ಷತಾ ದೇಖಲಾ, ಸಂಗೀತಾ ಕುಮಾರಿ.

ಸವಿತಾ ಪೂನಿಯಾ –ಟ್ವಿಟರ್ ಚಿತ್ರ

ಪ್ರೊ ಲೀಗ್: ಭಾರತಕ್ಕೆ ಜಯ

ರಾಟರ್‌ಡ್ಯಾಮ್ (ಪಿಟಿಐ): ಒಂದು ಗೋಲು ಹಿನ್ನಡೆಯಿಂದ ಪುಟಿದೆದ್ದ ಭಾರತ ಮಹಿಳಾ ತಂಡವು ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯಲ್ಲಿ ಅಮೆರಿಕ ತಂಡವನ್ನು 4–2ರಿಂದ ಸೋಲಿಸಿತು.

ಭಾರತ ತಂಡದ ಪರ ದೀಪ್ ಗ್ರೇಸ್ ಎಕ್ಕಾ (31ನೇ ನಿಮಿಷ), ನವನೀತ್ ಕೌರ್ (32ನೇ ನಿ.), ಸೋನಿಕಾ (40ನೇ ನಿ.) ಮತ್ತು ವಂದನಾ ಕಟಾರಿಯಾ (50ನೇ ನಿ.) ಗೋಲು ದಾಖಲಿಸಿದರು.

ಅಮೆರಿಕ ತಂಡಕ್ಕಾಗಿ ಡ್ಯಾನಿಲ್ಲೆ ಗ್ರೆಗಾ (28ನೇ ನಿ.) ಮತ್ತು ನತಾಲಿ ಕೊನೆರ್ತ್ (45ನೇ ನಿ.) ಗೋಲು ಹೊಡೆದರು.

ಪಂದ್ಯ ಡ್ರಾ: ಡಬ್ಲಿನ್‌ನಲ್ಲಿ ನಡೆದ ಐದು ರಾಷ್ಟ್ರಗಳ ಹಾಕಿ ಟೂರ್ನಿಯ ಪಂದ್ಯದಲ್ಲಿ ಭಾರತ ಜೂನಿಯರ್ (23 ವರ್ಷದೊಳಗಿನವರು) ಮಹಿಳಾ ತಂಡದವರು ನೆದರ್ಲೆಂಡ್ಸ್ ಜತೆ 2–2 ಗೋಲುಗಳ ಡ್ರಾ ಸಾಧಿಸಿದರು.

ಅಸ್ಸಾಂನ ಪ್ರವಾಹಪೀಡಿತ ಕಾಮರೂಪ್ ಜಿಲ್ಲೆಯ ಕಲಿಟಾದಲ್ಲಿ ಜಲಾವೃತ ರಸ್ತೆ ದಾಟುತ್ತಿರುವ ನಾಗರಿಕರು –ಪಿಟಿಐ ಚಿತ್ರ

ಉದ್ಧವ್ ಸರ್ಕಾರಕ್ಕೆ ಕುತ್ತು?

ಒಂದನೇ ಪುಟದಿಂದ

ಶಿಂಧೆ ಅವರ ಜತೆಗೆ 14–15 ಶಾಸಕರು ಇದ್ದಾರೆ ಎಂದು ಸೇನಾ ಸಂಸದ ಸಂಜಯ ರಾವುತ್ ಹೇಳಿದ್ದಾರೆ. ವಿಧಾನಸಭೆಯಲ್ಲಿ ಶಿವಸೇನಾದ ನಾಯಕ ಹುದ್ದೆಯಿಂದ ಶಿಂಧೆ ಅವರನ್ನು ವಜಾ ಮಾಡಲಾಗಿದೆ. ಅಜಯ್ ಚೌಧರಿ ಅವರನ್ನು ಈ ಸ್ಥಾನಕ್ಕೆ ನೇಮಿಸಲಾಗಿದೆ ಎಂದು ರಾವುತ್ ತಿಳಿಸಿದ್ದಾರೆ.

ಬಂಡಾಯ ಶಮನದಲ್ಲಿಯೂ ಎಂವಿಎ ತೊಡಗಿದೆ. ಮುಖಂಡರಾದ ಮಿಲಿಂದ್ ನಾರ್ವೇಕರ್ ಮತ್ತು ರವೀಂದ್ರ ಪಾಠಕ್ ಅವರನ್ನು ಸೂರತ್‌ಗೆ ಕಳುಹಿಸಿದ್ದು, ಶಿಂಧೆ ಮನವೊಲಿಸುವ ಹೊಣೆಯನ್ನು ಅವರಿಗೆ ವಹಿಸಲಾಗಿದೆ. ತಮ್ಮ ಯೋಜನೆಗಳೇನು ಎಂಬುದನ್ನು ಶಿಂಧೆ ಅವರು ಬಹಿರಂಗಪಡಿಸಿಲ್ಲ.

ಶಿವಸೇನಾದಲ್ಲಿನ ಬೆಳವಣಿಗೆಯೊಂದಿಗೆ ಬಿಜೆಪಿಗೆ ಯಾವುದೇ ನಂಟು ಇಲ್ಲ ಎಂದು ಮಹಾರಾಷ್ಟ್ರ ಬಿಜೆಪಿ ಘಟಕದ ಅಧ್ಯಕ್ಷ ಚಂದ್ರಕಾಂತ ಪಾಟೀಲ್ ಹೇಳಿದ್ದಾರೆ. ಪರ್ಯಾಯ ಸರ್ಕಾರ ರಚಿಸುವುದಕ್ಕಾಗಿ ಶಿಂಧೆ ಅವರು ತಮ್ಮನ್ನು ಸಂಪರ್ಕಿಸಿದರೆ, ಖಂಡಿತವಾಗಿಯೂ ಅದನ್ನು ಪರಿಶೀಲಿಸಲಾಗುವುದು ಎಂದು ಅವರು ಹೇಳಿದ್ದಾರೆ.

'ಹಿಂದುತ್ವದ ಪಾಠ ಹೇಳಿಕೊಟ್ಟ ಬಾಳಾಸಾಹೇಬ್ ಅವರ ನಿಷ್ಠಾವಂತ ಶಿವ ಸೈನಿಕರು ನಾವು. ಅಧಿಕಾರಕ್ಕಾಗಿ ನಾವು ವಂಚಿಸುವುದಿಲ್ಲ. ಬಾಳಾಸಾಹೇಬ್ ಮತ್ತು ಆನಂದ್ ದಿಘೆ ಅವರ ಸಿದ್ಧಾಂತಗಳನ್ನು ಅಧಿಕಾರಕ್ಕಾಗಿ ಕೈಬಿಡುವುದಿಲ್ಲ' ಎಂದು ಶಿಂಧೆ ಟ್ವೀಟ್ ಮಾಡಿದ್ದಾರೆ. ಬಾಳಾಸಾಹೇಬ್ ಅವರು ಸೇನಾ ಸಂಸ್ಥಾಪಕ. ದಿಘೆ ಅವರು ಠಾಣೆ ಪ್ರದೇಶದಲ್ಲಿ ಸೇನಾದ ಪ್ರಭಾವಿ ಮುಖಂಡರಾಗಿದ್ದರು. ದಿಘೆ ಮಾರ್ಗದರ್ಶನದಲ್ಲಿಯೇ ಶಿಂಧೆ ಅವರು ಬೆಳೆದುಬಂದಿದ್ದಾರೆ.

ಮಹಾರಾಷ್ಟ್ರದ ಸರ್ಕಾರವನ್ನು ಉರುಳಿಸುವ ಮೂರನೇ ಪ್ರಯತ್ನ ನಡೆದಿದೆ ಎಂದು ಎಂವಿಎಯ ಎರಡನೇ ಅತೀ ದೊಡ್ಡ ಪಕ್ಷ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಹೇಳಿದ್ದಾರೆ. ಇದು ಸೇನಾದ ಆಂತರಿಕ ವಿಚಾರವಾಗಿದ್ದು, ಉದ್ಧವ್ ಅವರು ಅದನ್ನು ನಿಭಾಯಿಸಲಿದ್ದಾರೆ ಎಂದಿದ್ದಾರೆ.

ಸೇನಾವು ದೀರ್ಘ ಕಾಲ ಬಿಜೆಪಿಯ ಮಿತ್ರಪಕ್ಷವಾಗಿತ್ತು. 2019ರಲ್ಲಿ ಎನ್‌ಸಿಪಿ ಮತ್ತು ಕಾಂಗ್ರೆಸ್ ಜತೆಗೂಡಿ ಎಂವಿಎ ರೂಪಿಸಿತ್ತು.

ಬಿಗಿ ಭದ್ರತೆ

ಸೇನಾ ಶಾಸಕರು ತಂಗಿರುವ ಸೂರತ್‌ನ ಲಿ ಮೆರಿಡಿಯನ್ ಹೋಟೆಲ್‌ಗೆ ಭಾರಿ ಭದ್ರತೆ ಒದಗಿಸಲಾಗಿದೆ. 300-400 ಪೊಲೀಸರು ಕಾವಲು ಕಾಯುತ್ತಿದ್ದಾರೆ. ಪ್ರವೇಶ ಮತ್ತು ನಿರ್ಗಮನ ದ್ವಾರಗಳಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿದೆ. ಪರಿಶೀಲನೆಯ ಬಳಿಕವೇ ಜನರನ್ನು ಒಳಕ್ಕೆ ಕಳುಹಿಸಲಾಗುತ್ತಿದೆ. ಹೋಟೆಲ್‌ನ ಒಳಗಡೆಯೂ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

ಎಚ್ಚರಿಕೆ ಕಡೆಗಣಿಸಿದ್ದೇ ಬಿಕ್ಕಟ್ಟಿಗೆ ಕಾರಣವೇ?

• ಮೃತ್ಯುಂಜಯ ಬೋಸ್

ಮುಂಬೈ: ಮಹಾರಾಷ್ಟ್ರದ 'ಮಹಾ ವಿಕಾಸ ಅಘಾಡಿ' ಸರ್ಕಾರವು ಬಿಕ್ಕಟ್ಟಿಗೆ ಸಿಲುಕಿದ್ದು, ಶಿವಸೇನಾ ಮುಖ್ಯಸ್ಥ ಹಾಗೂ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಹಲವು ಎಚ್ಚರಿಕೆಗಳನ್ನು ನಿರ್ಲಕ್ಷಿಸಿದ್ದೇ ಇದಕ್ಕೆ ಕಾರಣ ಎನ್ನುವುದು ಸ್ಪಷ್ಟ. ತಮ್ಮ ಪಕ್ಷ ಹಾಗೂ ಸೈದ್ಧಾಂತಿಕವಾಗಿ ವಿರುದ್ಧ ದಿಕ್ಕಿನಲ್ಲಿರುವ ಕಾಂಗ್ರೆಸ್ ಹಾಗೂ ಎನ್‌ಸಿಪಿ ಒಳಗೊಂಡ ಮೈತ್ರಿಕೂಟ ಸರ್ಕಾರವನ್ನು ಉಳಿಸಿಕೊಳ್ಳುವ ಒತ್ತಡಕ್ಕೆ ಉದ್ಧವ್ ಸಿಲುಕಿದ್ದಾರೆ.

2019ರ ವಿಧಾನಸಭಾ ಚುನಾವಣೆಯ ಬಳಿಕ ಸ್ವಂತ ಬಲದ ಮೇಲೆ ಸರ್ಕಾರ ರಚಿಸುವ ಸಾಮರ್ಥ್ಯ ಬಿಜೆಪಿಗೆ ಇರಲಿಲ್ಲ. ಹೀಗಾಗಿ ಎನ್‌ಸಿಪಿ ಹಾಗೂ ಕಾಂಗ್ರೆಸ್ ಜೊತೆ ಶಿವಸೇನಾ ಮಾತುಕತೆಗೆ ಮುಂದಾಯಿತು. ಶಿಂಧೆ ಸೇರಿದಂತೆ ಹಲವರು ಈ ನಡೆಯನ್ನು ವಿರೋಧಿಸಿದ್ದರು. ಆದರೆ, ಹೊಸ ಯತ್ನಕ್ಕೆ ಸಂಜಯ ರಾವುತ್, ಅನಿಲ್ ಪರಬ್ ಹಾಗೂ ಮಿಲಿಂದ್ ನರ್ವೇಕರ್ ಬೆಂಬಲ ಸೂಚಿಸಿದ್ದರು.

ಬಿಜೆಪಿ ಸಖ್ಯ ತೊರೆದ ಶಿವಸೇನಾ, 'ಮಹಾ ವಿಕಾಸ ಅಘಾಡಿ'ಯನ್ನು ಕಟ್ಟಿತು. ಬಹಳಷ್ಟು ಶಾಸಕರಿಗೆ ಈ ಮೈತ್ರಿಕೂಟ ಇಷ್ಟವಿರಲಿಲ್ಲ. ಹಿಂದುತ್ವದ ನೆಲೆಯ ಶಿವಸೇನಾವನ್ನು ಇಷ್ಟು ಕಾಲ ವಿರೋಧಿಸಿಕೊಂಡು ಬಂದಿದ್ದ ಕಾಂಗ್ರೆಸ್, ಎನ್‌ಸಿಪಿ ಕಾರ್ಯಕರ್ತರು ಮೈತ್ರಿಯಿಂದ ಇರಿಸುಮುರಿಸು ಅನುಭವಿಸಿದರು. ಕೋವಿಡ್ ಇದ್ದ ಎರಡು ವರ್ಷಗಳ ಕಾಲ ಉದ್ಧವ್ ಅವರು ಮನೆಯಿಂದಲೇ ಕೆಲಸ ಮಾಡಿದರು. ಈ ಅವಧಿಯಲ್ಲಿ ಸರ್ಕಾರ ಹಾಗೂ ರಾಜ್ಯಪಾಲರ ನಡುವೆ ಗುದ್ದಾಟ ನಡೆಯುತ್ತಲೇ ಇತ್ತು. ಉದ್ಧವ್ ಅವರು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಸುಲಭವಾಗಿ ಲಭ್ಯವಾಗುತ್ತಿಲ್ಲ ಎಂಬ ಆರೋಪವೂ ಇದೆ.

ಶಿವಸೇನಾ ನಾಯಕರಾದ ರಾವುತ್, ಭಾವನಾ ಗೌಳಿ, ಆನಂದ್ ಅಡಸುಲ್, ಅನಿಲ್ ಪರಬ್, ಪ್ರತಾಪ್ ಸರ್ನಾಯಕ್ ಮೊದಲಾದವರು ಇ.ಡಿ ವಿಚಾರಣೆ ಎದುರಿಸಿದರು. ಸಚಿವರಾದ ಅನಿಲ್ ದೇಶ್‌ಮುಖ್, ನವಾಬ್ ಮಲಿಕ್ ಅವರು ಬಂಧನಕ್ಕೆ ಒಳಗಾದರು. ಇನ್ನಷ್ಟು ತಡ ಮಾಡದೇ, ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಸರ್ನಾಯಕ್ ಅವರು ಉದ್ಧವ್ ಅವರಿಗೆ ಸಲಹೆ ನೀಡಿದ್ದರು.

ಇತ್ತೀಚೆಗೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿ ಮೂರು ಸ್ಥಾನ ಗೆದ್ದರೆ, ಸೇನಾ ಹಾಗೂ ಕಾಂಗ್ರೆಸ್‌ನ ಒಬ್ಬೊಬ್ಬ ಅಭ್ಯರ್ಥಿ ಸೋಲಿನ ನಿರಾಸೆ ಅನುಭವಿಸಿದರು. ಈ ಘಟನೆಗಳು ಚಿಕ್ಕದಾಗಿ ಕಾಣಿಸಿದರೂ, ಇವೆಲ್ಲವೂ ದೊಡ್ಡ ಬಿಕ್ಕಟ್ಟು ಸೃಷ್ಟಿಸಿರುವುದು ನಿಜ ಎನ್ನುತ್ತಾರೆ ಮೈತ್ರಿಕೂಟದ ಹಿರಿಯ ನಾಯಕರೊಬ್ಬರು.

ಏಕನಾಥ ಶಿಂಧೆ ಯಾರು?

ಠಾಣೆಯಲ್ಲಿ ಆರಂಭದ ದಿನಗಳಲ್ಲಿ ಆಟೋ ರಿಕ್ಷಾ ಚಾಲಕರಾಗಿ ಕೆಲಸ ಮಾಡುತ್ತಿದ್ದ ಏಕನಾಥ ಶಿಂಧೆ, ಶಿವಸೇನಾ ಸೇರಿ, ತಮ್ಮ ಸಂಘಟನಾ ಕೌಶಲದಿಂದ ಪಕ್ಷದಲ್ಲಿ ಹಂತಹಂತವಾಗಿ ಮೇಲೇರಿದರು. ಸಾತಾರಾ ಜಿಲ್ಲೆಯ ಮರಾಠ ಮನೆತನಕ್ಕೆ ಸೇರಿದ ಶಿಂಧೆ ಅವರು ಈಗಿನ ಸರ್ಕಾರದಲ್ಲಿ ನಗರಾಭಿವೃದ್ಧಿ ಸಚಿವರಾಗಿದ್ದಾರೆ.

ಪಕ್ಷ ನಿಷ್ಠ ಹಾಗೂ ಸಂಘಟನಾ ಚತುರ ಎಂಬ ವಿಶೇಷಣಗಳಿಗೆ ಏಕನಾಥ ಶಿಂಧೆ ಸರಿ ಹೊಂದುತ್ತಾರೆ. ಸಮಸ್ಯೆಗಳು ಎದುರಾದಾಗ ಅಥವಾ ಪ್ರಮುಖ ಕೆಲಸಗಳಿದ್ದಾಗ ಉದ್ಧವ್ ಠಾಕ್ರೆ ಅವರು ಮಾಡುವ ಕೆಲವು ಕರೆಗಳಲ್ಲಿ ಒಂದು ಕರೆಯಂತೂ ಶಿಂಧೆ ಅವರಿಗೆ ಹೋಗಿರುತ್ತದೆ.

ಬಾಳಾ ಠಾಕ್ರೆ ಅವರು ಹಿಂದುತ್ವದ ನೆಲೆಗಟ್ಟಿನಲ್ಲಿ ಕಟ್ಟಿದ ಶಿವಸೇನಾವನ್ನು ಇಷ್ಟಪಟ್ಟು ಸೇರಿದ್ದ ಶಿಂಧೆ, ಮತ್ತೊಬ್ಬ ಮುಖಂಡ ಠಾಣೆಯ ಆನಂದ್ ದಿಘೆ ಅವರ ನೆರಳಿನಲ್ಲಿ ಬೆಳೆದರು. 2001ರಲ್ಲಿ ದಿಘೆ ಸಾವಿನ ಬಳಿಕ ಆ ಭಾಗದಲ್ಲಿ ಪಕ್ಷದ ಸಂಘಟನೆ ಜವಾಬ್ದಾರಿ ವಹಿಸಿಕೊಂಡರು. 1997ರಲ್ಲಿ ಪುರಸಭೆಯ ಚುನಾವಣೆಯಲ್ಲಿ ಗೆದ್ದ ಅವರು 2004ರಲ್ಲಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. ಈಗ ನಾಲ್ಕನೇ ಬಾರಿ ಶಾಸಕರಾಗಿದ್ದಾರೆ. ವಿಧಾನಸಭೆಯ ಪ್ರತಿಪಕ್ಷದ ನಾಯಕರಾಗಿ ಕೆಲ ಸಮಯ ಕೆಲಸ ಮಾಡಿದ್ದಾರೆ. ಇವರ ಪುತ್ರ ಡಾ. ಶ್ರೀಕಾಂತ್ ಶಿಂಧೆ ಅವರು ಲೋಕಸಭಾ ಸದಸ್ಯರಾಗಿದ್ದಾರೆ.

ಜಂಟಿ ಔಷಧ ನಿಯಂತ್ರಕ ಸೇರಿ ಐವರ ಸೆರೆ

ನವದೆಹಲಿ (ಪಿಟಿಐ): ಟೈಪ್ 1 ಮತ್ತು ಟೈಪ್ 2 ಮಧುಮೇಹಿಗಳಿಗಾಗಿ 'ಬಯೋಕಾನ್ ಬಯೋಲಾಜಿಕ್ಸ್' ಅಭಿವೃದ್ಧಿಪಡಿಸಿರುವ 'ಇನ್ಸುಲಿನ್ ಆಸ್ಪರ್ಟ್' ಚುಚ್ಚುಮದ್ದಿನ 3ನೇ ಹಂತದ ಕ್ಲಿನಿಕಲ್ ಪ್ರಯೋಗ ಕೈಬಿಡಲು, ಲಂಚ ಪಡೆದ ಪ್ರಕರಣದಲ್ಲಿ ಜಂಟಿ ಔಷಧ ನಿಯಂತ್ರಕ ಎಸ್. ಈಶ್ವರ ರೆಡ್ಡಿ, ಬಯೋಕಾನ್ ಬಯೋಲಾಜಿಕ್ಸ್‌ನ ಸಹ ಉಪಾಧ್ಯಕ್ಷ ಎಲ್. ಪ್ರವೀಣ್ ಕುಮಾರ್ ಮತ್ತು ಇತರ ಮೂವರನ್ನು ಸಿಬಿಐ ಮಂಗಳವಾರ ಬಂಧಿಸಿದೆ.

ಕಿರಣ್ ಮಜುಂದಾರ್ ಷಾ ಅವರ ನೇತೃತ್ವದ ಬಯೋಕಾನ್‌ನ ಅಂಗ ಸಂಸ್ಥೆ ಬಯೋಕಾನ್ ಬಯೋಲಾಜಿಕ್ಸ್, ಲಂಚದ ಆರೋಪಗಳನ್ನು ನಿರಾಕರಿಸಿದೆ.

ಸಿನರ್ಜಿ ನೆಟ್‌ವರ್ಕ್ ಇಂಡಿಯಾ ಲಿಮಿಟೆಡ್‌ನ ನಿರ್ದೇಶಕ ದಿನೇಶ್ ದುವಾ, ಬಯೋಕಾನ್ ಬಯೋಲಾಜಿಕ್ಸ್‌ನ ಮಧ್ಯವರ್ತಿ ಎನ್ನಲಾದ ಗುಲ್ಜಿತ್ ಸೇಥಿ, ಮತ್ತು ಸಹಾಯಕ ಔಷಧ ನಿಯಂತ್ರಕ ಅನಿಮೇಶ್ ಕುಮಾರ್ ಬಂಧಿತರು.

ದಿನೇಶ್ ದುವಾ ಅವರು ರೆಡ್ಡಿಗೆ ₹4 ಲಕ್ಷ ಲಂಚ ನೀಡಿದ ಆರೋಪ ಎದುರಿಸುತ್ತಿದ್ದಾರೆ. ಉಳಿದಿಬ್ಬರು ಲಂಚ ಪ್ರಕರಣದಲ್ಲಿ ನೆರವಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತ ಐವರ ವಿರುದ್ಧ ಸಿಬಿಐ ಐಪಿಸಿಯ ವಿವಿಧ ಕಲಂಗಳಡಿ ಕ್ರಿಮಿನಲ್ ಪಿತೂರಿ, ವಂಚನೆ, ನಕಲಿ ಮತ್ತು ಭ್ರಷ್ಟಾಚಾರದ ಪ್ರಕರಣಗಳನ್ನು ದಾಖಲಿಸಿದೆ. ಬಯೋಕಾನ್ ಬಯೋಲಾಜಿಕ್ಸ್‌ನ ವಕ್ತಾರರು ಈ ಆರೋಪಗಳನ್ನು ನಿರಾಕರಿಸಿದ್ದು, ತನಿಖಾ ಸಂಸ್ಥೆಯೊಂದಿಗೆ ಸಹಕರಿಸುವುದಾಗಿ ತಿಳಿಸಿದ್ದಾರೆ.

'ಕೆಲವು ಮಾಧ್ಯಮಗಳು ಮಾಡಿರುವ ಲಂಚದ ಆರೋಪಗಳನ್ನು ನಾವು ನಿರಾಕರಿಸುತ್ತೇವೆ. ನಮ್ಮ ಎಲ್ಲಾ ಉತ್ಪನ್ನ ಅನುಮೋದನೆಗಳು ಕಾನೂನುಬದ್ಧವಾಗಿವೆ ಮತ್ತು ವಿಜ್ಞಾನ ಮತ್ತು ಕ್ಲಿನಿಕಲ್ ದತ್ತಾಂಶಗಳಿಂದ ಬೆಂಬಲಿತವಾಗಿವೆ. ನಮ್ಮ ಬಿಆಸ್ಪಾರ್ಟ್ ಯುರೋಪ್ ಮತ್ತು ಇತರ ಹಲವು ದೇಶಗಳಲ್ಲಿ ಅನುಮೋದನೆ ಪಡೆದಿದೆ' ಎಂದು ವಕ್ತಾರರು ಹೇಳಿದ್ದಾರೆ.

ಪ್ರತ್ಯೇಕ ಎನ್‌ಕೌಂಟರ್: ನಾಲ್ವರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಹಾಗೂ ಬಾರಾಮುಲ್ಲಾ ಜಿಲ್ಲೆಗಳಲ್ಲಿ ಎರಡು ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ ಜೈಷ್–ಎ–ಮಹಮ್ಮದ್‌ನ ಒಬ್ಬ ಉಗ್ರ ಸೇರಿ ನಾಲ್ವರು ಉಗ್ರರ ಹತ್ಯೆಮಾಡಲಾಗಿದೆ ಎಂದು ಕಾಶ್ಮೀರದ ಐಜಿಪಿ ವಿಜಯ್ ಕುಮಾರ್ ಮಂಗಳವಾರ ತಿಳಿಸಿದ್ದಾರೆ.

'ಬಾರಾಮುಲ್ಲಾ ಜಿಲ್ಲೆಯ ಟುಲಿಬಲ್ ಗ್ರಾಮದಲ್ಲಿ ಖಚಿತ ಮಾಹಿತಿ ಮೇರೆಗೆ ಭದ್ರತಾ ಪಡೆಗಳು, ಶೋಧ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಉಗ್ರರು ಗುಂಡಿನ ದಾಳಿ ನಡೆಸಿದ್ದಾರೆ. ಆಗ ಯೋಧರು ಪ್ರತಿದಾಳಿಯಲ್ಲಿ ಇಬ್ಬರು ಉಗ್ರರನ್ನು ಹತ್ಯೆಗೈದಿದ್ದಾರೆ' ಎಂದಿದ್ದಾರೆ.

'ಪುಲ್ವಾಮಾದ ತುಜ್ಜಾನ್‌ನಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಮತ್ತಿಬ್ಬರು ಉಗ್ರರು ಸತ್ತಿದ್ದಾರೆ' ಎಂದು ತಿಳಿಸಿದ್ದಾರೆ.

'ಸತ್ತವರಲ್ಲಿ ಒಬ್ಬ ಜೈಷ್–ಎ–ಮಹಮ್ಮದ್ ಉಗ್ರ ಸಂಘಟನೆಯ ಮಜೀದ್ ನಜೀರ್ ಎಂದು ಗುರುತಿಸಲಾಗಿದೆ. ಸಬ್‌ಇನ್‌ಸ್ಪೆಕ್ಟರ್ ಫಾರೂಕ್ ಅಹಮ್ಮದ್ ಮೀರ್ ಹತ್ಯೆ ಪ್ರಕರಣದಲ್ಲೂ ಈತ ಭಾಗಿಯಾಗಿದ್ದ' ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ನಾಳೆ ಬ್ರಿಕ್ಸ್ ಶೃಂಗ: ಮೋದಿ ಭಾಗಿ

ನವದೆಹಲಿ: 'ಬ್ರಿಕ್ಸ್' ಸಂಘಟನೆಯ ವಾರ್ಷಿಕ ಶೃಂಗಸಭೆ ಜೂನ್ 23 ಹಾಗೂ 24ರಂದು ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಮಂಗಳವಾರ ತಿಳಿಸಿದೆ.

ಈ ಬಾರಿ 'ಬ್ರಿಕ್ಸ್'ನ ಅಧ್ಯಕ್ಷ ಸ್ಥಾನದಲ್ಲಿಯೂ ಇರುವ ಚೀನಾ ಶೃಂಗಸಭೆಯ ಆತಿಥ್ಯ ವಹಿಸಿದೆ. ಜೂನ್ 24ರಂದು ಜಾಗತಿಕ ಅಭಿವೃದ್ಧಿ ಕುರಿತು ಉನ್ನತ ಮಟ್ಟದ ಚರ್ಚೆಯೂ ನಡೆಯಲಿದೆ. ಜೂನ್ 22ರಂದು ಬ್ರಿಕ್ಸ್ ವ್ಯಾಪಾರ ವೇದಿಕೆಯ ಉದ್ಘಾಟನೆ ನಡೆಯಲಿದ್ದು, ಮೋದಿ ಅವರ ಧ್ವನಿ ಮುದ್ರಿತ ದಿಕ್ಸೂಚಿ ಭಾಷಣವನ್ನು ಪ್ರಸ್ತುತಪಡಿಸಲಾಗುತ್ತದೆ ಎಂದು ಸಚಿವಾಲಯ ಹೇಳಿದೆ.

'ಇಮ್ರಾನ್ ಖಾನ್ ಹತ್ಯೆಗೆ ಸಂಚು'

ಪೆಶಾವರ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಹತ್ಯೆಗೆ ಭಯೋತ್ಪಾದಕರು ಸಂಚು ರೂಪಿಸುತ್ತಿದ್ದು, ಅಫ್ಗಾನಿಸ್ತಾನದ ಹಂತಕರಿಂದ ಹತ್ಯೆಗೆ ನೆರವು ಕೇಳುತ್ತಿರುವುದಾಗಿ ಭಯೋತ್ಪಾದನಾ ನಿಗ್ರಹ ಇಲಾಖೆಯ (ಸಿಟಿಡಿ) ಖೈಬರ್ ಪಖ್ತುಂಖ್ವಾ ಘಟಕ ಎಚ್ಚರಿಸಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಪಾಕ್: ಶಿಶು ತಲೆ ಕತ್ತರಿಸಿದ ವೈದ್ಯರು !

ಇಸ್ಲಾಮಾಬಾದ್ (ಪಿಟಿಐ): ಹೆರಿಗೆ ಶಸ್ತ್ರಚಿಕಿತ್ಸೆ ವೇಳೆ ಶಿಶುವಿನ ತಲೆ ಕತ್ತರಿಸಿ ತಾಯಿಯ ಗರ್ಭದೊಳಗೆ ಬಿಟ್ಟಿರುವ ಘಟನೆ ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಗ್ರಾಮೀಣ ಆರೋಗ್ಯ ಕೇಂದ್ರದಲ್ಲಿ ನಡೆದಿದೆ. ಮಹಿಳೆಯನ್ನು ಜಮ್ಶೊರೊದಲ್ಲಿರುವ ಲಿಯಾಕತ್ ವೈದ್ಯಕೀಯ ಹಾಗೂ ಆರೋಗ್ಯ ಸೇವೆಗಳ ವಿಶ್ವವಿದ್ಯಾಲಯದ (ಎಲ್‌ಯುಎಂಎಚ್‌ಎಸ್) ಆಸ್ಪತ್ರೆಗೆ ದಾಖಲಿಸಿದ್ದು, ಮಹಿಳೆ ಪ್ರಾಣಾಪಾಯದಿಂದ ಪಾರಾಗಿದ್ದಾಳೆ.

ಮಾಲ್ಡೀವ್ಸ್: ಯೋಗಪಟುಗಳ ಮೇಲೆ ದಾಳಿ, 6 ಮಂದಿ ಬಂಧನ

ಮಾಲೆ, ಮಾಲ್ಡೀವ್ಸ್ (ರಾಯಿಟರ್ಸ್): ಭಾರತದ ಹೈಕಮಿಷನ್ ವತಿಯಿಂದ ಮಾಲ್ಡೀವ್ಸ್ ರಾಜಧಾನಿ ಮಾಲೆಯಲ್ಲಿ ಮಂಗಳವಾರ ಇಲ್ಲಿನ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದ ಮೇಲೆ ಪ್ರತಿಭಟನಕಾರರ ಗುಂಪೊಂದು ದಾಳಿ ನಡೆಸಿದೆ.

ಪ್ರತಿಭಟನಕಾರರನ್ನು ನಿಯಂತ್ರಿಸಲು ಪೊಲೀಸರು ಅಶ್ರುವಾಯು ಪ್ರಯೋಗಿಸಿ, ಮೆಣಸಿನಪುಡಿ ಎರಚಿದ್ದಾರೆ. ಘಟನೆ ಸಂಬಂಧ 6 ಮಂದಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ರಾಯಭಾರಿ ಕಚೇರಿ ಅಧಿಕಾರಿಗಳು, ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ಸೇರಿ 150ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು. ಆದರೆ, ಪ್ರತಿಭಟನಕಾರರ ಗುಂಪು ಯೋಗ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದವರ ಮೇಲೆ ದಾಳಿ ನಡೆಸಿದ್ದು, ಸರ್ಕಾರಿ ಆಸ್ತಿಗಳನ್ನು ಧ್ವಂಸ ಮಾಡಿದ್ದಾರೆ ಎಂದು ಹೆಸರು ಹೇಳಲು ಇಚ್ಛಿಸದ ಯೋಗ ಕಾರ್ಯಕ್ರಮದ ಆಯೋಜಕರೊಬ್ಬರು ಹೇಳಿದ್ದಾರೆ.

ಇದಕ್ಕೂ ಮೊದಲು ಪ್ರತಿಭಟನಕಾರರು, ಯೋಗವು ಇಸ್ಲಾಂ ನಂಬಿಕೆಯ ವಿರುದ್ಧವಾಗಿದೆ ಎಂಬ ಘೋಷಣಾ ಫಲಕಗಳನ್ನು ಪ್ರದರ್ಶಿಸಿದ್ದರು.

ಸಂಕ್ಷಿಪ್ತ ಸುದ್ದಿ

ಎಫ್‌ಐಸಿಎ: ಲಿಸಾ ಮೊದಲ ಅಧ್ಯಕ್ಷೆ

ಲಂಡನ್ (ಪಿಟಿಐ): ಆಸ್ಟ್ರೇಲಿಯಾದ ಲಿಸಾ ಸ್ಥಳೇಕರ್ ಅವರು ಅಂತರರಾಷ್ಟ್ರೀಯ ಕ್ರಿಕೆಟರ್ಸ್ ಸಂಸ್ಥೆಗಳ ಫೆಡರೇಷನ್‌ಗೆ (ಎಫ್‌ಐಸಿಎ) ಮೊದಲ ಅಧ್ಯಕ್ಷೆಯಾಗಿ ನೇಮಕಗೊಂಡಿದ್ದಾರೆ.

ಲಿಸಾ ಸ್ಥಳೇಕರ್

ಸ್ವಿಟ್ಜರ್ಲೆಂಡ್‌ನ ನಿಯೊನ್‌ನಲ್ಲಿ ನಡೆದ ಎಫ್‌ಐಸಿಎನ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಲಿಸಾ ಅವರ ನೇಮಕವನ್ನು ದೃಢಪಡಿಸಲಾಗಿದೆ.

ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ನಾಯಕಿ 42 ವರ್ಷದ ಲಿಸಾ, ಈ ಹಿಂದೆ ದಕ್ಷಿಣ ಆಫ್ರಿಕಾದ ಬ್ಯಾರಿ ರಿಚರ್ಡ್ಸ್, ವೆಸ್ಟ್ ಇಂಡೀಸ್‌ನ ಜಿಮ್ಮಿ ಆ್ಯಡಮ್ಸ್ ಮತ್ತು ಇಂಗ್ಲೆಂಡ್‌ನ ವಿಕ್ರಂ ಸೋಲಂಕಿ ನಿರ್ವಹಿಸಿದ್ದ ಹುದ್ದೆಯನ್ನು ವಹಿಸಿಕೊಳ್ಳಲಿದ್ದಾರೆ.

ಆಸ್ಟ್ರೇಲಿಯಾ ಪರ ಮೂರೂ ಮಾದರಿಗಳಲ್ಲಿ 187 ಅಂತರರಾಷ್ಟ್ರೀಯ ಪಂದ್ಯಗಳನ್ನು ಲಿಸಾ ಆಡಿದ್ದಾರೆ. 2005, 2013ರಲ್ಲಿ ಏಕದಿನ ವಿಶ್ವಕಪ್ ಮತ್ತು 2010, 2012ರಲ್ಲಿ ಟಿ20 ವಿಶ್ವಕಪ್ ಟೂರ್ನಿಯ ಜಯಿಸಿದ ತಂಡದ ಭಾಗವಾಗಿದ್ದರು.

2021ರಲ್ಲಿ ಲಿಸಾ ಅವರು ಆಸ್ಟ್ರೇಲಿಯಾದ 'ಕ್ರಿಕೆಟ್ ಹಾಲ್ ಆಫ್ ಫೇಮ್' ಗೌರವಕ್ಕೆ ಭಾಜನರಾಗಿದ್ದರು. ಈ ಶ್ರೇಯ ಗಳಿಸಿದ ಆಸ್ಟ್ರೇಲಿಯಾದ ನಾಲ್ಕನೇ ಮಹಿಳೆ ಎನಿಸಿಕೊಂಡಿದ್ದರು.

ಏಕದಿನ ಕ್ರಿಕೆಟ್: ಶ್ರೀಲಂಕಾಗೆ ಸರಣಿ

ಕೊಲಂಬೊ (ರಾಯಿಟರ್ಸ್): ಶ್ರೀಲಂಕಾ ತಂಡವು ನಾಲ್ಕನೇ ಏಕದಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ನಾಲ್ಕು ರನ್‌ಗಳಿಂದ ಮಣಿಸಿತು. ಇದರೊಂದಿಗೆ ಐದು ಪಂದ್ಯಗಳ ಸರಣಿಯಲ್ಲಿ 3–1ರಿಂದ ಮುನ್ನಡೆ ಸಾಧಿಸಿತು. ಶ್ರೀಲಂಕಾ ಪರ ಚರಿತ ಅಸಲಂಕ ಶತಕ (110) ಸಿಡಿಸಿದರು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 49 ಓವರ್‌ಗಳಲ್ಲಿ 258 (ಧನಂಜಯ ಡಿಸಿಲ್ವಾ 60, ಚರಿತ ಅಸಲಂಕ 110; ಮಿಚೆಲ್ ಮಾರ್ಷ್ 29ಕ್ಕೆ 2, ಪ್ಯಾಟ್ ಕಮಿನ್ಸ್ 37ಕ್ಕೆ 2, ಮ್ಯಾಥ್ಯು ಕುನೆಮನ್ 56ಕ್ಕೆ 2). ಆಸ್ಟ್ರೇಲಿಯಾ: 50 ಓವರ್‌ಗಳಲ್ಲಿ 254 (ಡೇವಿಡ್ ವಾರ್ನರ್ 99, ಮಿಚೆಲ್ ಮಾರ್ಷ್ 26, ಟ್ರಾವಿಸ್ ಹೆಡ್ 27, ಪ್ಯಾಟ್ ಕಮಿನ್ಸ್ 35; ಚಮಿಕ ಕರುಣರತ್ನೆ 19ಕ್ಕೆ 2, ಧನಂಜಯ ಡಿಸಿಲ್ವಾ 39ಕ್ಕೆ 2, ಜೆಫರಿ ವಂಡರ್ಸೆ 40ಕ್ಕೆ 2). ಫಲಿತಾಂಶ: ಶ್ರೀಲಂಕಾ ತಂಡಕ್ಕೆ 4 ರನ್‌ಗಳ ಜಯ. ಐದನೇ ಪಂದ್ಯ ಶುಕ್ರವಾರ ಕೊಲಂಬೊದಲ್ಲಿ ನಡೆಯಲಿದೆ.

ಫುಟ್‌ಬಾಲ್: ವಿಬ್‌ಗಯಾರ್, ಬಾಲ್ಡ್‌ವಿನ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ವಿಬ್‌ಗಯಾರ್ ಮತ್ತು ಬಾಲ್ಡ್‌ವಿನ್ ಶಾಲಾ ತಂಡಗಳು ಸುಬ್ರತೊ ಕಪ್ ಫುಟ್‌ಬಾಲ್ ವಲಯ ಮಟ್ಟದ ಅರ್ಹತಾ ಟೂರ್ನಿಯಲ್ಲಿ ಜಯ ಗಳಿಸಿದವು.

ಕೆಎಸ್‌ಎಫ್‌ಎ ಸಹಯೋಗದಲ್ಲಿ ಸೇಂಟ್ ಜೋಸೆಫ್ ಪ್ರೌಢಶಾಲೆಯು ಆಯೋಜಿಸಿರುವ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ವಿಬ್‌ಗಯಾರ್ 10–0ಯಿಂದ ಸೇಂಟ್ ಡಾಮ್ನಿಕ್ ತಂಡವನ್ನು ಪರಾಭವಗೊಳಿಸಿತು.

ಬಿ ಗುಂಪಿನ ಹಣಾಹಣಿಯಲ್ಲಿ ಬಾಲ್ಡ್‌ವಿನ್, ರೋಹಿತ್ ಗಳಿಸಿದ ಐದು ಗೋಲುಗಳ ನೆರವಿನಿಂದ 8–0ಯಿಂದ ಅಪೊಲೊ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಎದುರು ಗೆದ್ದಿತು.

ಬಿ ಗುಂಪಿನ ಇನ್ನೊಂದು ಪಂದ್ಯದಲ್ಲಿ ಗ್ರೀನ್‌ವುಡ್ 7–0ಯಿಂದ ಎನ್‌ಎಎಫ್‌ಎಲ್ ಎದುರು, ಸಿ ಗುಂಪಿನ ಸೆಣಸಾಟದಲ್ಲಿ ಬಿಷಪ್ ಕಾಟನ್ ಬಾಯ್ಸ್ 4–0ಯಿಂದ ಅಂಬರ್ ವ್ಯಾಲಿ ಎದುರು ಜಯ ಸಾಧಿಸಿದವು.

ಆ. 12ರಿಂದ ಗ್ರ್ಯಾನ್ ಪ್ರಿ ಬ್ಯಾಡ್ಮಿಂಟನ್ ಲೀಗ್

ಬೆಂಗಳೂರು: ಕರ್ನಾಟಕದಲ್ಲಿ ಮೊದಲ ಬಾರಿ ನಡೆಯಲಿರುವ ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್‌ನ (ಜಿಪಿಬಿಎಲ್) ವೇಳಾಪಟ್ಟಿಯನ್ನು ಮರುನಿಗದಿ ಮಾಡಲಾಗಿದೆ. ಲೀಗ್‌ಅನ್ನು ಆಗಸ್ಟ್ 12ರಿಂದ 21ರವರೆಗೆ ನಡೆಸಲು ನಿರ್ಧರಿಸಲಾಗಿದೆ.

ಈ ಮೊದಲು ಲೀಗ್‌ಅನ್ನು ಜುಲೈ 1ರಿಂದ 10ರವರೆಗೆ ಆಯೋಜಿಸಲು ನಿರ್ಧರಿಸಲಾಗಿತ್ತು. ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಗಳ ಬದಲಾವಣೆ ಮತ್ತು ಪಂಚಕುಲಾದಲ್ಲಿ ರಾಷ್ಟ್ರೀಯ ಜೂನಿಯರ್ ರ್‍ಯಾಂಕಿಂಗ್ ಟೂರ್ನಿ ಅದೇ ವೇಳೆಯಲ್ಲಿ ನಡೆಯಬೇಕಿರುವುದರಿಂದ ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್‌ಅನ್ನು ಮುಂದೂಡಲಾಗಿದೆ.

'ಆಟಗಾರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಅವರು ರ್‍ಯಾಂಕಿಂಗ್ ಪಾಯಿಂಟ್ಸ್ ಗಳಿಸಲು ಅನುಕೂಲವಾಗಲು ಲೀಗ್‌ಅನ್ನು ಮುಂದೂಡಲಾಗಿದೆ' ಎಂದು ಜಿಪಿಬಿಎಲ್ ಕಮಿಷನರ್ ಪ್ರಶಾಂತ್ ರೆಡ್ಡಿ ಹೇಳಿದ್ದಾರೆ.

ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಷಿಪ್ ಅರ್ಹತಾ ಸುತ್ತು

ರಾಮಕುಮಾರ್, ಯೂಕಿಗೆ ನಿರಾಸೆ

ಲಂಡನ್ (ಪಿಟಿಐ, ರಾಯಿಟರ್ಸ್): ಭಾರತದ ಯೂಕಿ ಭಾಂಬ್ರಿ ಮತ್ತು ರಾಮಕುಮಾರ್ ರಾಮನಾಥನ್ ಅವರು ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಷಿಪ್‌ನ ಅರ್ಹತಾ ಸುತ್ತಿನ ತಡೆ ದಾಟುವಲ್ಲಿ ವಿಫಲರಾದರು.

ಸೋಮವಾರ ರಾತ್ರಿ ನಡೆದ ಸಿಂಗಲ್ಸ್ ವಿಭಾಗದ ಅರ್ಹತಾ ಹಂತದ ಮೊದಲ ಸುತ್ತಿನ ಪಂದ್ಯಗಳಲ್ಲೇ ಇಬ್ಬರೂ ಆಟಗಾರರು ನಿರಾಸೆ ಅನುಭವಿಸಿದರು.

ಯೂಕಿ 5–7, 1–6ರಿಂದ ಅಗ್ರಶ್ರೇಯಾಂಕದ, ಸ್ಪೇನ್ ಆಟಗಾರ ಬೆರ್ನಾಬೆ ಜಾಪ್ಟಾ ಮಿರಾಲಸ್ ಎದುರು ಸೋತರೆ, ರಾಮ್‌ಕುಮಾರ್ 5-7, 4-6ರಿಂದ ಜೆಕ್ ಗಣರಾಜ್ಯದ ವಿಟ್ ಕೊಪ್ರಿವಾ ಅವರಿಗೆ ಮಣಿದರು.

ಯೂಕಿ ಮತ್ತು ರಾಮನಾಥನ್ ಸೋಲಿನೊಂದಿಗೆ ಸಾನಿಯಾ ಮಿರ್ಜಾ ಮಾತ್ರ ಟೂರ್ನಿಯಲ್ಲಿ ಆಡಲಿರುವ ಭಾರತದ ಏಕೈಕ ಆಟಗಾರ್ತಿಯಾಗಿದ್ದಾರೆ. ಮಹಿಳಾ ಡಬಲ್ಸ್‌ನಲ್ಲಿ ವಿಶ್ವ ಮಾಜಿ ಅಗ್ರಕ್ರಮಾಂಕದ ಆಟಗಾರ್ತಿಯಾಗಿರುವ

ರಾಮಕುಮಾರ್ ರಾಮನಾಥನ್

ಸಾನಿಯಾ, ಜೆಕ್ ಗಣರಾಜ್ಯದ ಲೂಸಿ ಹ್ರದೆಕಾ ಜೊತೆಗೂಡಿ ಕಣಕ್ಕಿಳಿಯಲಿದ್ದಾರೆ.

ಉಕ್ರೇನ್ ಮೇಲಿನ ದಾಳಿಯ ಹಿನ್ನೆಲೆಯಲ್ಲಿ ರಷ್ಯಾ ಮತ್ತು ಬೆಲಾರೂಸ್ ಆಟಗಾರರಿಗೆ ಈ ವರ್ಷದ ಟೂರ್ನಿಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿಲ್ಲ. ಹೀಗಾಗಿ ಎಟಿಪಿ ಪಾಯಿಂಟ್ಸ್ ನೀಡುತ್ತಿಲ್ಲ. ಈ ಕಾರಣದಿಂದಾಗಿ ಭಾರತದ ರೋಹನ್ ಬೋಪಣ್ಣ ಈ ಬಾರಿ ಕಣಕ್ಕಿಳಿಯದಿರಲು ನಿರ್ಧರಿಸಿದ್ದಾರೆ.

ಟೂರ್ನಿಯ ಮುಖ್ಯ ಸುತ್ತಿನ ಪಂದ್ಯಗಳು ಇದೇ 27ರಿಂದ ನಡೆಯಲಿವೆ.

ಜೊಕೊವಿಚ್‌ಗೆ ಅಗ್ರಶ್ರೇಯಾಂಕ

ಈ ಬಾರಿಯ ವಿಂಬಲ್ಡನ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರಿಗೆ ಅಗ್ರಶ್ರೇಯಾಂಕ ನೀಡಲಾಗಿದೆ.

ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿರುವ ಡೇನಿಯಲ್ ಮೆಡ್ವೆಡೆವ್ ಅವರಿಗೆ ಈ ಟೂರ್ನಿಯಲ್ಲಿ ಆಡುವ ಅವಕಾಶ ನಿರಾಕರಿಸಲಾಗಿದೆ. ಎರಡನೇ ರ್‍ಯಾಂಕಿನ, ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಗಾಯದ ಕಾರಣ ಆಡುತ್ತಿಲ್ಲ. ಸ್ಪೇನ್‌ನ ರಫೆಲ್ ನಡಾಲ್ ಅವರಿಗೆ ಎರಡನೇ ಶ್ರೇಯಾಂಕ ನೀಡಲಾಗುತ್ತದೆ.